ಬುಧವಾರ, ಆಗಸ್ಟ್ 2, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 213 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ ಎಚ್ಚರ! ಡೀಪ್‌ಫೇಕ್ ಎಂಬ ವಂಚನೆಯ ಹೊಸ ಕುತಂತ್ರವೊಂದು ಹುಟ್ಟಿಕೊಂಡಿದೆ

ಆಳ-ಅಗಲ ಹುಲಿ ಸಂಖ್ಯೆ ಏರಿಕೆ-ಇಳಿಕೆಯ ಸುತ್ತ
ಗ್ಯಾರಂಟಿಗೆ ಪರಿಶಿಷ್ಟರ ಅನುದಾನ 5
ಅತ್ಯಾಚಾರ: ನೃತ್ಯ ಶಿಕ್ಷಕ ಸೇರಿ ಮೂವರ ಬಂಧನ 3

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
66,459 ▼	19,733 ▼	₹61,550 (ಬೆಂಗಳೂರು) ▼	₹76,900 (ಬೆಂಗಳೂರು) ▲	82.22 ▲

ತುಕ್ಕು ಹಿಡಿದ ಆಡಳಿತ ಯಂತ್ರ– ತನಿಖೆ ನಡೆಸಲು ಪೊಲೀಸರು ಅಸಮರ್ಥ: 'ಸುಪ್ರೀಂ' ಚಾಟಿ

ಜಡತ್ವದಲ್ಲಿ ಮಣಿಪುರ ಸರ್ಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೈತೇಯಿ ಮತ್ತು ಕುಕಿ ಬುಡಕಟ್ಟು ಸಮುದಾಯದ ನಡುವಣ ಹಿಂಸಾಚಾರದಿಂದ ನಲುಗಿರುವ ಮಣಿಪುರದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯು ಸಂಪೂರ್ಣವಾಗಿ ಹಳಿ ತಪ್ಪಿದೆ. ಜೊತೆಗೆ, ಆಡಳಿತ ಯಂತ್ರಕ್ಕೂ ತುಕ್ಕು ಹಿಡಿದಿದೆ ಎಂದು ಕೆಂಡಾಮಂಡಲವಾಗಿರುವ ಸುಪ್ರೀಂ ಕೋರ್ಟ್, ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ನೇತೃತ್ವದ ಬಿಜೆಪಿ ಸರ್ಕಾರವನ್ನು ತೀವ್ರ ತರಾಟೆಗೆ ತೆಗೆದುಕೊಂಡಿದೆ.

ಬಿರೇನ್ ಸಿಂಗ್ ಸರ್ಕಾರವನ್ನು ವಜಾಗೊಳಿಸಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸುವಂತೆ 'ಇಂಡಿಯಾ' ಸದಸ್ಯರು ಸಂಸತ್‌ನಲ್ಲಿ ಹೋರಾಟ ನಡೆಸುತ್ತಿರುವ ಬೆನ್ನಲ್ಲೇ ಸುಪ್ರೀಂ ಕೋರ್ಟ್, ಕಣಿವೆ ರಾಜ್ಯದ ಆಡಳಿತ ಯಂತ್ರ ಕುಸಿದು ಬಿದ್ದಿರುವುದ ರತ್ತ ಬೊಟ್ಟು ಮಾಡಿದೆ. ಇದರಿಂದ, ಬಿಜೆಪಿ ವಿರುದ್ಧ ಸರಣಿ ಹೋರಾಟ ಆರಂಭಿಸಿರುವ ವಿರೋಧ ಪಕ್ಷಗಳ ಕೈಗೆ ಮತ್ತೊಂದು ಹೊಸ ಅಸ್ತ್ರ ಸಿಕ್ಕಂತಾಗಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರಿದ್ದ ತ್ರಿಸದಸ್ಯ ನ್ಯಾಯಪೀಠವು, ಹಿಂಸಾಚಾರಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಅರ್ಜಿಗಳ ವಿಚಾರಣೆಯನ್ನು ಮಂಗಳವಾರ ಮಧ್ಯಾಹ್ನ ಮುಂದುವರಿಸಿತು.

'ಮಹಿಳಾ ದೌರ್ಜನ್ಯ ಪ್ರಕರಣಗಳ ಬಗ್ಗೆ ಸಮರ್ಪಕವಾಗಿ ತನಿಖೆ ನಡೆಸಲು ಅಲ್ಲಿನ ಪೊಲೀಸರು ಅಸಮರ್ಥರಾಗಿದ್ದಾರೆ. ಇಡೀ ಪೊಲೀಸ್ ವ್ಯವಸ್ಥೆಗೆ ಜಡತ್ವ ಆವರಿಸಿದೆ' ಎಂದು ಕಿಡಿಕಾರಿದ ಪೀಠವು, 'ಆಗಸ್ಟ್ 7ರಂದು ನಡೆಯುವ ವಿಚಾರಣೆಗೆ ಮಣಿಪುರದ ಡಿಜಿಪಿ ಅವರು ಪ್ರಕರಣಗಳ ಸಮಗ್ರ ಮಾಹಿತಿಯೊಂದಿಗೆ ಖುದ್ದು ಹಾಜರಾಗಬೇಕು' ಎಂದು ತಾಕೀತು ಮಾಡಿತು.

ತನಿಖೆ ವಿಳಂಬಕ್ಕೆ ಆಕ್ರೋಶ: ಕುಕಿ ಸಮುದಾಯಕ್ಕೆ ಸೇರಿದ ಇಬ್ಬರು ಮಹಿಳೆಯರ ಬೆತ್ತಲೆ ಮೆರವಣಿಗೆ ಕೃತ್ಯದ ತನಿಖೆಯು ತೀವ್ರ ವಿಳಂಬವಾಗಿದೆ. ಇದರಲ್ಲಿ ಪೊಲೀಸರ ನಿರಾಸಕ್ತಿ ಎದ್ದು ಕಾಣುತ್ತದೆ. ಸಂಘರ್ಷ ಇನ್ನೂ ನಿಯಂತ್ರಣಕ್ಕೆ ಬಂದಿಲ್ಲ. ಸಂಘರ್ಷ ಶುರುವಾದ ದಿನದಿಂದ ಹಿಡಿದು ಇಲ್ಲಿಯವರೆಗೂ ಕಾನೂನು ಮತ್ತು ಸುವ್ಯವಸ್ಥೆ ಮೇಲೆ ಪೊಲೀಸರು ಹಿಡಿತ ಕಳೆದುಕೊಂಡಿರುವುದಕ್ಕೆ ಇದು ಸ್ಪಷ್ಟ ನಿದರ್ಶನವಾಗಿದೆ ಎಂದು ಪೀಠವು ಆಕ್ರೋಶ ವ್ಯಕ್ತಪಡಿಸಿತು.

9ನೇ ಪುಟ ನೋಡಿ

ಯುವತಿಯರ ಹತ್ಯೆ: ವಿವರ ಕೇಳಿದ ಸಿಜೆಐ

ಬೆತ್ತಲೆ ಮೆರವಣಿಗೆ ಕೃತ್ಯ ನಡೆದ ದಿನದಂದೇ ಇಂಫಾಲ್ ಪೂರ್ವ ಜಿಲ್ಲೆಯ ಕೊನುಂಗ್ ಮಾಮಾಂಗ್ ಪ್ರದೇಶದ ಕಾರ್ ವಾಷಿಂಗ್ ಸ್ಟೇಷನ್‌ನಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ಯುವತಿಯರ ಮೇಲೆ ಗುಂಪೊಂದು ಸಾಮೂಹಿಕ ಅತ್ಯಾಚಾರ ಎಸಗಿ ಹತ್ಯೆಗೈದಿರುವ ಪ್ರಕರಣದ ವಿವರವನ್ನೂ ಚಂದ್ರಚೂಡ್ ಅವರು ಕೇಳಿದರು.

ಮೆಹ್ತಾ ಅವರು, 'ಈ ಪ್ರಕರಣ ಸಂಬಂಧ ಮೇ 15ರಂದು ಜೀರೊ ಎಫ್‌ಐಆರ್ ದಾಖಲಾಗಿದೆ. ಜೂನ್ 16ರಂದು ಇದನ್ನು ಅಧಿಕೃತ ಎಫ್‌ಐಆರ್ ಆಗಿ ಪರಿವರ್ತಿಸಲಾಗಿದೆ' ಎಂದು ಪೀಠಕ್ಕೆ ತಿಳಿಸಿದರು.

ಆಗ ಚಂದ್ರಚೂಡ್, 'ಈ ಪ್ರಕರಣದಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆಯೇ' ಎಂದು ಮರು ಪ್ರಶ್ನಿಸಿದರು. 'ಈ ಬಗ್ಗೆ ನನ್ನ ಬಳಿ ಸದ್ಯಕ್ಕೆ ಮಾಹಿತಿ ಲಭ್ಯವಿಲ್ಲ' ಎಂದು ಮೆಹ್ತಾ ಉತ್ತರಿಸಿದರು. ಸರ್ಕಾರ ಸಲ್ಲಿಸಿದ್ದ ವರದಿ ನೋಡಿದ ಸಿಜೆಐ, 'ಮೇ 4ರಂದು ನಡೆದ ಈ ಹೇಯಕೃತ್ಯದ ಬಗ್ಗೆ ಜುಲೈ 26ರಂದು ಎಫ್‌ಐಆರ್ ದಾಖಲಾಗಿದೆಯಲ್ಲ' ಎಂದು ಖಾರವಾಗಿ ಪ್ರಶ್ನಿಸಿದರು.

'ಒಂದು ಅಥವಾ ಎರಡು ಪ್ರಕರಣಗಳಲ್ಲಿ ಇಂತಹ ವ್ಯತ್ಯಾಸವಾಗಿಲ್ಲ. ಹಲವು ಪ್ರಕರಣಗಳಲ್ಲಿ ಇದೇ ಸ್ಥಿತಿ ಇದೆ. ಉಳಿದ ಪ್ರಕರಣಗಳಲ್ಲಿನ ಆರೋಪಿಗಳನ್ನು ಬಂಧಿಸಿಲ್ಲವೇ?' ಎಂದು ಸಿಟ್ಟಾದರು.

ಬೆತ್ತಲೆ ಮೆರವಣಿಗೆ ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸಲು ಪೊಲೀಸರು ಸಾಕಷ್ಟು ವಿಳಂಬ ಹಾಗೂ ನಿರ್ಲಕ್ಷ್ಯ ಎಸಗಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ

ಡಿ.ವೈ. ಚಂದ್ರಚೂಡ್, ಸಿಜೆಐ, ಸುಪ್ರೀಂ ಕೋರ್ಟ್

ಹೇಳಿಕೆ ದಾಖಲಿಸದಂತೆ ಸೂಚನೆ

ಸಂತ್ರಸ್ತೆಯರ ಪರ ಬೆಳಿಗ್ಗೆ ಪೀಠದ ಮುಂದೆ ಹಾಜರಾಗಿ ಅರ್ಜಿ ಸಲ್ಲಿಸಿದ ವಕೀಲ ನಿಜಾಂ ಪಾಷಾ ಅವರು, 'ಹೇಳಿಕೆ ನೀಡಲು ಖುದ್ದು ಹಾಜರಾಗುವಂತೆ ಸಂತ್ರಸ್ತೆಯರಿಗೆ ಸಿಬಿಐ ಅಧಿಕಾರಿಗಳು ಬಲವಂತಪಡಿಸುತ್ತಿದ್ದಾರೆ' ಎಂದು ಹೇಳಿದರು.

'ಹಿಂಸಾಚಾರ ಸಂಬಂಧ ಸಲ್ಲಿಸಿರುವ ಅರ್ಜಿಗಳ ವಿಚಾರಣೆ ನಡೆಯುತ್ತಿದೆ. ಹಾಗಾಗಿ, ಸಂತ್ರಸ್ತೆಯರ ಹೇಳಿಕೆ ದಾಖಲಿಸುವ ಪ್ರಕ್ರಿಯೆಯನ್ನು ಮುಂದುವರಿಸಬಾರದು' ಎಂದು ಪೀಠವು, ಸಿಬಿಐಗೆ ಸೂಚಿಸಿತು.

ತನಿಖೆಯ ಮೇಲ್ವಿಚಾರಣೆಗೆ ಸಮಿತಿ? : ಎಫ್‌ಐಆರ್ ದಾಖಲಿಸುವಲ್ಲಿ ಪೊಲೀಸರು ತಳೆದಿರುವ ನಿರ್ಲಕ್ಷ್ಯ ಧೋರಣೆಯ ಬಗೆಗಿನ ಸತ್ಯಾಸತ್ಯತೆ ಪರಿಶೀಲನೆ ಮತ್ತು ತನಿಖೆಯ ಮೇಲ್ವಿಚಾರಣೆ ಸಂಬಂಧ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಡಿ ಸಮಿತಿ ರಚಿಸುವ ಬಗ್ಗೆ ಸುಪ್ರೀಂ ಕೋರ್ಟ್ ಸುಳಿವು ನೀಡಿದೆ.

'ಎಲ್ಲಾ ಪ್ರಕರಣಗಳನ್ನು ಸಿಬಿಐಗೆ ಒಪ್ಪಿಸಲು ಸಾಧ್ಯವಿಲ್ಲ. ಆದರೆ, ತನಿಖೆಯು ನ್ಯಾಯಯೋಚಿತವಾಗಿ ನಡೆಯಬೇಕಿದೆ. ಸಂತ್ರಸ್ತರಿಗೆ ಸೂಕ್ತ ಪರಿಹಾರವೂ ಸಿಗಬೇಕಿದೆ. ಇದರ ಮೇಲ್ವಿಚಾರಣೆಯೂ ಮುಖ್ಯವಾಗಿದೆ' ಎಂದು ಪೀಠ ಪ್ರತಿಪಾದಿಸಿತು.

'ನಾವು ಮೇಲ್ವಿಚಾರಣೆ ಸಮಿತಿ ರಚಿಸಲು ಚಿಂತಿಸಿದ್ದೇವೆ. ಅದನ್ನು ರಚಿಸಿದರೂ ಅಚ್ಚರಿಪಡಬೇಕಿಲ್ಲ' ಎಂದು ಸಿಜೆಐ ಹೇಳಿದರು.

ಹರಿಯಾಣದ ನೂಹ್‌ನಲ್ಲಿ ಗುಂಪು ಘರ್ಷಣೆಯ ವೇಳೆ ಬೆಂಕಿಗಾಹುತಿಯಾಗಿದ್ದ ವಾಹನಗಳು –ಎಎಫ್‌ಪಿ ಚಿತ್ರ

ನೂಹ್ ಗಲಭೆಗೆ 5 ಬಲಿ

ಚಂಡೀಗಢ/ಗುರುಗ್ರಾಮ (ಪಿಟಿಐ): ವಿಶ್ವ ಹಿಂದೂ ಪರಿಷತ್ತಿನ ಮೆರವಣಿಗೆ ವೇಳೆ ಸೋಮವಾರ ನೂಹ್‌ನಲ್ಲಿ ಭುಗಿಲೆದ್ದಿದ್ದ ಗುಂಪು ಘರ್ಷಣೆಯಲ್ಲಿ ಸತ್ತವರ ಸಂಖ್ಯೆ ನಾಲ್ಕಕ್ಕೇರಿದೆ. ಇದರ ಬೆನ್ನಲ್ಲೇ ಗುರುಗ್ರಾಮದ ಸೆಕ್ಟರ್ 57 ಪ್ರದೇಶದ ಅಂಜುಮನ್ ಮಸೀದಿಯೊಳಗೆ ಸೋಮವಾರ ಮಧ್ಯರಾತ್ರಿ ಬಳಿಕ ಗುಂಪು ದಾಳಿ ನಡೆದಿದ್ದು, ಮಸೀದಿಯ ಇಮಾಮ್ ಮೃತಪಟ್ಟಿದ್ದಾರೆ. ಹೀಗಾಗಿ ಗಲಭೆಗೆ ಇಲ್ಲಿಯವರೆಗೆ ಒಟ್ಟು ಐವರು ಬಲಿಯಾದಂತಾಗಿದೆ.

ಅಂಜುಮನ್ ಮಸೀದಿಯೊಳಗೆ ನುಗ್ಗಿದ ಗುಂಪು, ಜನರ ಮೇಲೆ ಗುಂಡು ಹಾರಿಸಿತು. ಈ ಘಟನೆಯಲ್ಲಿ ಇಬ್ಬರಿಗೆ ಗುಂಡು ತಗುಲಿದ್ದು, ಬಿಹಾರ ಮೂಲದ 26 ವರ್ಷದ ಇಮಾಮ್ ಆಸ್ಪತ್ರೆಯಲ್ಲಿ ಮೃತಪಟ್ಟರು ಎಂದು ಪೊಲೀಸರು ಹೇಳಿದ್ದಾರೆ.

ಈ ಹಿಂಸಾಚಾರದಲ್ಲಿ ಗೃಹ ರಕ್ಷಕ ದಳದ ನೀರಜ್, ಗುರುಸೇವಕ್ ಹಾಗೂ ಭದಾಸ್ ಗ್ರಾಮದ ಶಕ್ತಿ ಎಂಬುವರು ಮೃತಪಟ್ಟಿದ್ದಾರೆ. ಹತ್ತು ಪೊಲೀಸರು ಸೇರಿ 23 ಮಂದಿ ಗಾಯಗೊಂಡಿದ್ದಾರೆ. ಗಾಯಗೊಂಡವರನ್ನು ನಿಲ್ಹಾರ್‌ನ ವೈದ್ಯಕೀಯ ಕಾಲೇಜಿನಲ್ಲಿ ದಾಖಲಿಸಲಾಗಿದ್ದು, ಅವರಲ್ಲಿ ಒಬ್ಬರು ಮೃತಪಟ್ಟಿದ್ದಾರೆ. ಅವರ ಗುರುತು ಇನ್ನೂ ಪತ್ತೆಯಾಗಿಲ್ಲ.

ವಿಎಚ್‌ಪಿ ಮೆರವಣಿಗೆ ಮತ್ತು ಪೊಲೀಸರ ಮೇಲೆ ನಡೆದಿರುವ ದಾಳಿಯು ದೊಡ್ಡ ಷಡ್ಯಂತ್ರದ ಭಾಗದಂತೆ ಕಾಣುತ್ತಿದೆ. ಇದಕ್ಕೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು

ಮನೋಹರ್ ಲಾಲ್ ಖಟ್ಟರ್, ಮುಖ್ಯಮಂತ್ರಿ, ಹರಿಯಾಣ

ಅಲ್ಲದೆ ಮೂವರು ಪೊಲೀಸ್ ಅಧಿಕಾರಿಗಳಿಗೆ ಗುಂಡಿನಿಂದ ಗಾಯಗಳಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಗೃಹ ಸಚಿವ ಅನಿಲ್ ವಿಜ್ ಹೇಳಿದ್ದಾರೆ.

ನೂಹ್ ಮತ್ತು ಅದರ ಸುತ್ತಮುತ್ತಲ ಪ್ರದೇಶಗಳಲ್ಲಿ ಭದ್ರತೆಯನ್ನು ಬಿಗಿಗೊಳಿಸಲಾಗಿದ್ದು, ಜಿಲ್ಲೆಯಾದ್ಯಂತ ಕರ್ಫ್ಯೂ ವಿಧಿಸಲಾಗಿದೆ. ಜಿಲ್ಲೆಯಲ್ಲಿ ಮಂಗಳವಾರ ಯಾವುದೇ ಹೊಸ ಹಿಂಸಾಚಾರ ನಡೆದ ವರದಿಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆದರೆ, ಗುಂಪೊಂದು ಮಂಗಳವಾರ ಮಧ್ಯಾಹ್ನ ಗುರುಗ್ರಾಮ ಜಿಲ್ಲೆಯ ಬಾದ್‌ಶಾಹ್‌ಪುರದಲ್ಲಿ ಉಪಾಹಾರ ಗೃಹಕ್ಕೆ ಬೆಂಕಿ ಹಚ್ಚಿದ್ದು, ಪಕ್ಕದ ಅಂಗಡಿಗಳನ್ನು ಧ್ವಂಸಗೊಳಿಸಿದೆ.

9ನೇ ಪುಟ ನೋಡಿ

ಚಿತ್ರದುರ್ಗ: ವಾಂತಿ–ಭೇದಿಗೆ 35 ಜನ ಅಸ್ವಸ್ಥ; 7 ಜನರ ಸ್ಥಿತಿ ಗಂಭೀರ

ಕಲುಷಿತ ನೀರು ಕುಡಿದು ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಇಲ್ಲಿನ ಕವಾಡಿಗರ ಹಟ್ಟಿಯಲ್ಲಿ ಕಲುಷಿತ ನೀರು ಕುಡಿದು ಮಹಿಳೆಯೊಬ್ಬರು ಮೃತಪಟ್ಟು, 35 ಜನ ಅಸ್ವಸ್ಥರಾಗಿದ್ದಾರೆ. ಅಸ್ವಸ್ಥರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಈ ಪೈಕಿ ಏಳು ಜನರ ಸ್ಥಿತಿ ಗಂಭೀರವಾಗಿದೆ.

ಮಂಜುಳಾ

ಕವಾಡಿಗರ ಹಟ್ಟಿಯ ಆಂಜನೇಯ ಅವರ ಪತ್ನಿ ಮಂಜುಳಾ (23) ಮೃತಪಟ್ಟಿದ್ದಾರೆ. ಸೋಮವಾರ ತಡರಾತ್ರಿ ವಾಂತಿ–ಭೇದಿ ಕಾಣಿಸಿಕೊಂಡಿದ್ದರಿಂದ ತಕ್ಷಣ ಅವರನ್ನು ಸಮೀಪದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆರೋಗ್ಯ ಸ್ಥಿತಿ ಹದಗೆಟ್ಟಿದ್ದರಿಂದ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು.

ಚಿತ್ರದುರ್ಗದ ಜಿಲ್ಲಾ ಆಸ್ಪತ್ರೆಯಲ್ಲಿ ಅಸ್ವಸ್ಥಗೊಂಡ ಮಕ್ಕಳಿಗೆ ಹಾಸಿಗೆ ಸೌಲಭ್ಯ ಸಿಗದೇ ಮಂಗಳವಾರ ಬೆಳಿಗ್ಗೆ ನೆಲದ ಮೇಲೆಯೇ ಚಿಕಿತ್ಸೆ ನೀಡಲಾಯಿತು

ಅಸ್ವಸ್ಥರಾದ ಕೆಲವರನ್ನು ಸ್ಥಳೀಯ ಬಸವೇಶ್ವರ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿದೆ. ಆರೋಗ್ಯ ಸ್ಥಿತಿ ಗಂಭೀರವಾಗಿರುವ ಇನ್ನಿತರರನ್ನು ದಾವಣಗೆರೆಯ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ನೀರು ಕುಡಿದು ಅಸ್ವಸ್ಥರಾದವರಲ್ಲಿ ಚಿಕ್ಕ ವಯಸ್ಸಿನ 9 ಮಕ್ಕಳಿದ್ದು, ಎಲ್ಲರ ಆರೋಗ್ಯ ಸ್ಥಿರವಾಗಿದೆ.

ಚನ್ನಗಿರಿ ತಾಲ್ಲೂಕಿನ ಶಾಂತಿಸಾಗರ (ಸೂಳೆಕೆರೆ)ದಿಂದ ಕವಾಡಿಗರ ಹಟ್ಟಿಗೆ ನಗರಸಭೆಯು ಕುಡಿಯುವ ನೀರು ಪೂರೈಸುತ್ತದೆ. ಈ ಪ್ರದೇಶಕ್ಕೆ ಓವರ್ ಹೆಡ್ ಟ್ಯಾಂಕ್‌ನಿಂದ ಎರಡು ದಿನಕ್ಕೊಮ್ಮೆ ನೀರು ಪೂರೈಸಲಾಗುತ್ತದೆ. ಸೋಮವಾರ ಎಸ್‌.ಸಿ. (ಪರಿಶಿಷ್ಟ ಜಾತಿ) ಕಾಲೋನಿಗೆ ನೀರು ಪೂರೈಸಲಾಗಿತ್ತು.

ಮಂಗಳವಾರ ನಸುಕಿನ ವೇಳೆಗೆ ಈ ಕಾಲೊನಿಯ ಮೂರು ಬೀದಿಗಳ ಹಲವು ನಿವಾಸಿಗಳು ವಾಂತಿ–ಭೇದಿಯಿಂದ ಬಳಲಿ ಜಿಲ್ಲಾ ಆಸ್ಪತ್ರೆಗೆ ಚಿಕಿತ್ಸೆಗೆ ಧಾವಿಸಿದ್ದರು.

8ನೇ ಪುಟ ನೋಡಿ

ರಾಜ್ಯದಲ್ಲಿ ₹11,505 ಕೋಟಿ ಸಂಗ್ರಹ

ನವದೆಹಲಿ: ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ಜುಲೈ ತಿಂಗಳಲ್ಲಿ ಕರ್ನಾಟಕದಲ್ಲಿ ₹11,505 ಕೋಟಿ ವರಮಾನ ಸಂಗ್ರಹವಾಗಿದೆ. ಕಳೆದ ವರ್ಷ ಜುಲೈ ತಿಂಗಳಲ್ಲಿ ₹9,795 ಕೋಟಿ ವರಮಾನ ಸಂಗ್ರಹವಾಗಿತ್ತು. ಈ ವರ್ಷ ಶೇ 17ರಷ್ಟು ಹೆಚ್ಚಳ ಆಗಿದೆ.

8

ವಿಐಎಸ್‌ಎಲ್: 10ರಿಂದ ಪುನರಾರಂಭ

ಪ್ರಜಾವಾಣಿ ವಾರ್ತೆ

ನವದೆಹಲಿ/ ಶಿವಮೊಗ್ಗ: ಭದ್ರಾವತಿಯಲ್ಲಿರುವ ವಿಶ್ವೇಶ್ವರಾಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ (ವಿಐಎಸ್‌ಎಲ್) ಬಾರ್ ಮಿಲ್ ಕಾರ್ಯಾಚರಣೆ ಶುರು ಮಾಡಲು ಭಾರತೀಯ ಉಕ್ಕು ಪ್ರಾಧಿಕಾರ ಮಂಗಳವಾರ ಒಪ್ಪಿಗೆ ಸೂಚಿಸಿದೆ. ಆಗಸ್ಟ್ 10ರಿಂದ ಮತ್ತೆ ಉಕ್ಕು ಉತ್ಪಾದನೆ ಆರಂಭಿಸಲಿದೆ.

ನವದೆಹಲಿಯಲ್ಲಿ ನಡೆದ ಪ್ರಾಧಿಕಾರದ ಸಭೆಯಲ್ಲಿ ಕಾರ್ಯಾಚರಣೆ ಪುನರಾರಂಭಿಸಲು ಒಪ್ಪಿಗೆ ನೀಡಲಾಗಿದ್ದು, ಈ ವರ್ಷಕ್ಕೆ ₹ 75 ಕೋಟಿ ಅನುದಾನ ನೀಡಲು ತಾತ್ವಿಕ ಅನುಮೋದನೆ ನೀಡಲಾಗಿದೆ. ಭಾರತೀಯ ಉಕ್ಕು ಪ್ರಾಧಿಕಾರದ (ಸೇಲ್) ನಿರ್ಧಾರದಿಂದಾಗಿ ಕಳೆದ ಜನವರಿ 16ರಿಂದ ಕಾರ್ಖಾನೆ ಸ್ಥಗಿತಗೊಂಡಿತ್ತು.

'ಕಾರ್ಖಾನೆಯಲ್ಲಿ 1,800 ಗುತ್ತಿಗೆ ಕಾರ್ಮಿಕರು ಇದ್ದಾರೆ. ಈಗ ಅವರು ತಿಂಗಳಲ್ಲಿ 11 ದಿನ ಕೆಲಸ ಮಾಡುತ್ತಿದ್ದಾರೆ. ತಯಾರಿಕಾ ಚಟುವಟಿಕೆ ಆರಂಭವಾದರೆ ಅವರಿಗೆ 23 ದಿನಗಳು ಕೆಲಸ ಸಿಗಲಿವೆ. ಇದೇ 10ರಿಂದ ತಯಾರಿಕಾ ಚಟುವಟಿಕೆ ಶುರುವಾಗಲಿದೆ. ಮುಂದಿನ ದಿನಗಳಲ್ಲಿ ಪ್ರಾಥಮಿಕ ಗಿರಣಿ ಆರಂಭವಾಗಲಿದೆ' ಎಂದು ಶಿವಮೊಗ್ಗ ಸಂಸದ ಬಿ.ವೈ.ರಾಘವೇಂದ್ರ 'ಪ್ರಜಾವಾಣಿ'ಗೆ ತಿಳಿಸಿದರು.

'ಉತ್ಪಾದನೆ ಆರಂಭಿಸಲು ಸಿದ್ಧತೆ ಮಾಡಿಕೊಳ್ಳುವಂತೆ ಸೇಲ್ ಆಡಳಿತ ಮಂಡಳಿಯು ವಿಐಎಸ್‌ಎಲ್‌ಗೆ ಸೂಚಿಸಿದೆ. ಈ ಬಗ್ಗೆ ಕಾರ್ಖಾನೆಯ ಸೂಚನಾ ಫಲಕದಲ್ಲಿ ಪತ್ರ ಲಗತ್ತಿಸಲಾಗಿದೆ' ಎಂದು ವಿಐಎಸ್‌ಎಲ್ ಗುತ್ತಿಗೆ ಕಾರ್ಮಿಕರ ಸಂಘದ ಅಧ್ಯಕ್ಷ ಸುರೇಶ್ ತಿಳಿಸಿದರು.

4B ಪುಟ ನೋಡಿ

'ಕಾಡು' ಯೋಜನೆ ಹುಲಿಗೆ ಅಪಾಯ!

• ಮಂಜುನಾಥ ಹೆಬ್ಬಾರ್

ನವದೆಹಲಿ: ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನ ಮಾಡಲು ಉದ್ದೇಶಿಸಿರುವ ಮೇಕೆದಾಟು ಸಮತೋಲನ ಜಲಾಶಯ ನಿರ್ಮಾಣ, ಶಿರಾಡಿ ಘಾಟ್ ಸುರಂಗ ನಿರ್ಮಾಣ ಹಾಗೂ ಹುಬ್ಬಳ್ಳಿ–ಅಂಕೋಲಾ ರೈಲು ಮಾರ್ಗ ಅಳವಡಿಕೆ ಯೋಜನೆಗಳಿಂದ ಕಾಡು ಹಾಗೂ ಕಾಡು ಪ್ರಾಣಿಗಳಿಗೆ ದೊಡ್ಡ ಅಪಾಯ ಉಂಟಾಗಲಿದೆ ಎಂದು ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯ ಎಚ್ಚರಿಸಿದೆ.

ಸಚಿವಾಲಯವು 'ಹುಲಿ ಗಣತಿ–2022' ವಿಸ್ತೃತ ವರದಿಯನ್ನು ಶನಿವಾರ ಬಿಡುಗಡೆ ಮಾಡಿದ್ದು, ಪಶ್ಚಿಮ ಘಟ್ಟಗಳ ವ್ಯಾಪ್ತಿಯಲ್ಲಿ ಹುಲಿಗಳ ಸಂರಕ್ಷಣೆಗೆ ಹೆಚ್ಚಿನ ಒತ್ತು ನೀಡಬೇಕು ಎಂದು ಕಿವಿಮಾತು ಹೇಳಿದೆ.

ಕಾವೇರಿ ವನ್ಯಜೀವಿ ಧಾಮವು ಕಾಡುಪ್ರಾಣಿಗಳಿಗೆ ಪ್ರಮುಖ ಆವಾಸ ಸ್ಥಾನವಾಗಿದ್ದು, ಗಣತಿಯ ವೇಳೆ ಒಂದು ಹುಲಿ ಕಾಣಸಿಕ್ಕಿದೆ. ಪ್ರಸ್ತಾವಿತ ಮೇಕೆದಾಟು ಅಣೆಕಟ್ಟೆ ಯೋಜನೆಯಿಂದ 50 ಚದರ ಕಿ.ಮೀ. ಯಷ್ಟು ಅರಣ್ಯ ಮುಳುಗಡೆಯಾಗಲಿದೆ. ಈ ಯೋಜನೆಯು ಅಭಯಾರಣ್ಯಕ್ಕೆ ದೊಡ್ಡ ಅಪಾಯ ತಂದೊಡ್ಡಲಿದೆ. ಬಿಳಿಗಿರಿ ರಂಗನಾಥಸ್ವಾಮಿ ದೇವಾಲಯ ಹುಲಿ ಸಂರಕ್ಷಿತ ಪ್ರದೇಶ ಮತ್ತು ಮಲೆ ಮಹದೇಶ್ವರ ಬೆಟ್ಟ ವನ್ಯಜೀವಿ ವಿಭಾಗವನ್ನು ಮೇಕೆದಾಟು ಸಂಪರ್ಕಿಸುತ್ತದೆ. ಈ ಪ್ರದೇಶದಲ್ಲಿ ಯಾವುದೇ ದೊಡ್ಡ ಪ್ರಮಾಣದ ಅಣೆಕಟ್ಟೆಯು ಕಾವೇರಿ ನದಿಯ ಜಲಚರಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

5ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ವಾಣಿಜ್ಯ ಬಳಕೆ ಎಲ್‌ಪಿಜಿ ಬೆಲೆ ಇಳಿಕೆ

ನವದೆಹಲಿ (ಪಿಟಿಐ): ವಾಣಿಜ್ಯ ಬಳಕೆಯ, 19 ಕೆ.ಜಿ. ತೂಕದ ಅಡುಗೆ ಅನಿಲ ಸಿಲಿಂಡರ್ ಬೆಲೆಯನ್ನು ₹100ರಷ್ಟು ಕಡಿಮೆ ಮಾಡಲಾಗಿದೆ.

ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆಯು ಈಗ ಬೆಂಗಳೂರಿನಲ್ಲಿ ₹1,767 ಆಗಿದೆ. ಇದಕ್ಕೂ ಮೊದಲು ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ಮೂರು ಬಾರಿ ತಗ್ಗಿಸಲಾಗಿದೆ.

ಮನೆಗಳಲ್ಲಿ ಬಳಸುವ 14.2 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿ ವ್ಯತ್ಯಾಸ ಆಗಿಲ್ಲ.

ಸುಧಾ, ಮಯೂರ ಓದಿರಿ

ಬಿಬಿಎಂಪಿ: ಅಕ್ರಮ ಕಟ್ಟಡಗಳಿಗೆ ಅಂಕುಶ • ಪ್ರತಿ ತಿಂಗಳೂ ವರದಿ • ಜವಾಬ್ದಾರಿ ಮರೆತರೆ ಅಮಾನತು

ನಕ್ಷೆ ಉಲ್ಲಂಘನೆ: ತೆರವಿಗೆ ಕಾರ್ಯಪಡೆ

• ಆರ್. ಮಂಜುನಾಥ್

ಬೆಂಗಳೂರು: ನಗರ ವ್ಯಾಪ್ತಿಯಲ್ಲಿ ನಕ್ಷೆ ಉಲ್ಲಂಘಿಸಿ ನಿರ್ಮಾಣವಾಗುವ ಕಟ್ಟಡಗಳ ತೆರವು ಕಾರ್ಯಾಚರಣೆ ನಡೆಸಲು ಬಿಬಿಎಂಪಿ ಎಂಟೂ ವಲಯಗಳಲ್ಲಿ ಪ್ರತ್ಯೇಕ ಅಧಿಕಾರಿಗಳ ಕಾರ್ಯಪಡೆಯನ್ನು ರಚಿಸಲಾಗಿದೆ.

ವಲಯ ಆಯುಕ್ತರ ಅಧ್ಯಕ್ಷತೆ ಕಾರ್ಯಪಡೆಯನ್ನು ರಚಿಸಲಾಗಿದ್ದು, ಪ್ರತಿ ತಿಂಗಳು ಸಭೆ ನಡೆಸಲಿರುವ ಸದಸ್ಯರು, ತೆರವು ಕಾರ್ಯಾಚರಣೆ ನಡೆಸಲಿದ್ದಾರೆ. ಪ್ರತಿ ತಿಂಗಳ ಈ ಕಾರ್ಯಾಚರಣೆಯ ವರದಿಯನ್ನು ನೀಡಲಿದ್ದಾರೆ. ಅಕ್ರಮದ ವಿರುದ್ಧ ಕ್ರಮ ಕೈಗೊಳ್ಳದ ಅಧಿಕಾರಿಗಳನ್ನು ಅಮಾನತುಗೊಳಿಸಿ, ಶಿಸ್ತು ಕ್ರಮಕೈಗೊಳ್ಳಲೂ ಮುಖ್ಯ ಆಯುಕ್ತರು ಆದೇಶಿಸಿದ್ದಾರೆ.

'ಕಟ್ಟಡ ಮಂಜೂರಾತಿ ನಕ್ಷೆಗಳ ಉಲ್ಲಂಘನೆ, ಅನಧಿಕೃತ ಕಟ್ಟಡಗಳ ನಿರ್ಮಾಣ ತಡೆಯಲು, ಉಲ್ಲಂಘಿಸಿ ನಿರ್ಮಿಸಲಾದ ಕಟ್ಟಡ ಅಥವಾ ಅದರ ಭಾಗಗಳನ್ನು ತೆರವುಗೊಳಿಸಲು ಕಾರ್ಯಪಡೆ ರಚನೆ' ಎಂಬ ಆದೇಶವನ್ನು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಜುಲೈ 31ರಂದು ಹೊರಡಿಸಿದ್ದಾರೆ.

ನಕ್ಷೆ ಉಲ್ಲಂಘಿಸಿ ನಿರ್ಮಿಸಲಾಗಿರುವ ಕಟ್ಟಡಗಳ ಮೇಲೆ ಅಕ್ರಮದ ಮಾಹಿತಿಯನ್ನು ಕೆಂಪು ಬಣ್ಣದಿಂದ ಬರೆಯಲಾಗಿದೆ.

ಪ್ರಜಾವಾಣಿ ವಿಶೇಷ

ಕೆಎಂಸಿ ಕಾಯ್ದೆ ಕಲಂ 321 ಹಾಗೂ ಬಿಬಿಎಂಪಿ ಕಾಯ್ದೆ 2020ರ ಕಲಂ 248 ಮತ್ತು 356ರ ಕಾನೂನು ಜರುಗಿಸಲು ಅಧಿಕಾರಿಗಳಿಗೆ ಜವಾಬ್ದಾರಿಯನ್ನು ನೀಡಲಾಗಿದೆ. ಇದರ ನಿರ್ವಹಣೆಯಲ್ಲಿ ವಿಫಲವಾಗುವ ಅಧಿಕಾರಗಳ ವಿರುದ್ಧ ಶಿಸ್ತುಕ್ರಮದ ಮಾರ್ಗಸೂಚಿಗಳನ್ನು ಆದೇಶದಲ್ಲಿ ವಿವರಿಸಲಾಗಿದೆ.

ಕಟ್ಟಡ ನಿರ್ಮಾಣಕ್ಕೆ ನಕ್ಷೆ ಮಂಜೂರಾತಿಯಾದ ಮೇಲೆ, ಕಟ್ಟಡದ 'ಪ್ಲಿಂತ್ ಲೈನ್ ಮಾರ್ಕಿಂಗ್' ಅನ್ನು ಕಡ್ಡಾಯವಾಗಿ ಸಂಬಂಧಿಸಿದ ಅಧಿಕಾರಿ ಪಡೆಯಬೇಕು. ನಂತರ, ನಕ್ಷೆಯಂತೆಯೇ ನಿರ್ಮಾಣವಾಗುತ್ತಿರುವ ಬಗ್ಗೆ ಕಾಲಕಾಲಕ್ಕೆ ಪರಿಶೀಲನೆ ಮಾಡುವ ಜವಾಬ್ದಾರಿಯನ್ನೂ ನಿಗದಿ ಮಾಡಲಾಗಿದೆ.

ಕಾಲಮಿತಿ: ನಕ್ಷೆ ಉಲ್ಲಂಘಿಸಿದ ಕಟ್ಟಡ ತೆರವು ಕಾರ್ಯಾಚರಣೆಗೆ ಕ್ರಮ ಕೈಗೊಳ್ಳುವ ಪ್ರಕ್ರಿಯೆ ಅಥವಾ ಜವಾಬ್ದಾರಿಯನ್ನು ಯಾರು ನಿರ್ವಹಿಸಬೇಕು ಎನ್ನುವ 'ಫ್ಲೋಚಾರ್ಟ್' ಕೂಡ ಆದೇಶದಲ್ಲಿದೆ. ಕಿರಿಯ ಎಂಜಿನಿಯರ್, ಸಹಾಯಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಕಾರ್ಯಪಾಲಕ ಎಂಜಿನಿಯರ್, ನಗರ ಯೋಜನೆ ಸಹಾಯಕ ನಿರ್ದೇಶಕರಿಗೆ ಜವಾಬ್ದಾರಿ ಹಾಗೂ ದಿನಗಳನ್ನು ನಿಗದಿ ಮಾಡಲಾಗಿದೆ. ಪ್ರಥಮ ನೋಟಿಸ್ ಜಾರಿಯಿಂದ ಹಿಡಿದು ತೆರವು ಕಾರ್ಯಾಚರಣೆ ಮುಗಿಸಿ, ವರದಿ ಸಲ್ಲಿಸಲು ಒಟ್ಟು 117 ದಿನಗಳನ್ನು ನಿಗದಿಪಡಿಸಲಾಗಿದೆ.

ತಂಡ ಹಾಗೂ ಕಾರ್ಯ ಚಟುವಟಿಕೆ

ಅಧ್ಯಕ್ಷ–ವಲಯ ಆಯುಕ್ತ, ಸದಸ್ಯರು–ಜಂಟಿ ಆಯುಕ್ತ, ಮುಖ್ಯ ಎಂಜಿನಿಯರ್, ನಗರ ಯೋಜನೆ ಕೇಂದ್ರ ಕಚೇರಿ ಜಂಟಿ ನಿರ್ದೇಶಕ, ಕಂದಾಯ ಅಧಿಕಾರಿಗಳು, ವಿಭಾಗಗಳ ಕಾರ್ಯಪಾಲಕ ಎಂಜಿನಿಯರ್‌ಗಳು, ನಗರ ಯೋಜನೆ ಸಹಾಯಕ ನಿರ್ದೇಶಕರು, ಉಪ ವಿಭಾಗಗಳ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳು, ವಲಯ ಉಪ ಕಾನೂನು ಅಧಿಕಾರಿ. ಸಮಿತಿ ಸಂಚಾಲಕ–ವಲಯ ಜಂಟಿ ನಿರ್ದೇಶಕ.

ಪ್ರತಿ ತಿಂಗಳು ಕಡ್ಡಾಯವಾಗಿ ಸಭೆ ನಡೆಸುವುದು, ವಾರ್ಡ್ ಎಂಜಿನಿಯರ್ ಅನಧಿಕೃತ ಕಟ್ಟಡ ಮತ್ತು ನಕ್ಷೆ ಉಲ್ಲಂಘನೆಗಳ ಬಗ್ಗೆ ನೀಡಿದ ವರದಿ ಪರಿಶೀಲಿಸುವುದು. ನಾಗರಿಕರ ದೂರುಗಳ ಪರಿಶೀಲನೆ, ನೋಟಿಸ್ ನೀಡಲು ಕ್ರಮ ಕೈಗೊಳ್ಳಬೇಕು. ನೀಡಿರುವ ನೋಟಿಸ್‌ಗಳ ಸ್ಥಿತಿ ಬಗ್ಗೆ ಪರಿಶೀಲಿಸಬೇಕು. ಕಟ್ಟಡಗಳ ವಿರುದ್ಧ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸುವುದು. ನೋಟಿಸ್ ನೀಡಿದ ಕೂಡಲೇ ಕಟ್ಟಡ ನಿರ್ಮಾಣ ಸ್ಥಗಿತಗೊಳ್ಳುವಂತೆ ನೋಡಿಕೊಳ್ಳಬೇಕು. ನಕ್ಷೆ ಉಲ್ಲಂಘನೆ ಮಾಡಿ, ಅಕ್ರಮವಾಗಿ ನಿರ್ಮಾಣ ಮಾಡಿರುವ ಭಾಗಗಳ ತೆರವಿಗೆ ಅಂದಾಜು ಪಟ್ಟಿ ಸಲ್ಲಿಸಿ, ಅಧಿಕಾರಿಗಳಿಂದಲೇ ಸಮನ್ವಯ ಸಾಧಿಸಿ ಕಾರ್ಯಾಚರಣೆ ನಡೆಸಬೇಕು. ನ್ಯಾಯಾಲಯಗಳಿಂದ ತಡೆಯಾಜ್ಞೆ ಇದ್ದರೆ ಅದನ್ನು ಸೂಕ್ತ ದಾಖಲೆಗಳೊಂದಿಗೆ ತ್ವರಿತವಾಗಿ ತೆರವುಗೊಳಿಸುವ ಕ್ರಮ ಕೈಗೊಳ್ಳಬೇಕು. ನಗರ ಯೋಜನೆ ವಲಯ ಜಂಟಿ ನಿರ್ದೇಶಕರು ನಕ್ಷೆ ಉಲ್ಲಂಘನೆಗಳ ಪ್ರಕರಣ ಹಾಗೂ ಅದರ ತೆರವಿಗೆ ಕೈಗೊಂಡ ಕ್ರಮಗಳ ವರದಿಯನ್ನು ಪ್ರತಿ ತಿಂಗಳು, ನಗರ ಯೋಜನೆ ಹೆಚ್ಚುವರಿ ನಿರ್ದೇಶಕರಿಗೆ ಸಲ್ಲಿಸಬೇಕು.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ವಿಶೇಷ ಭೂಸ್ವಾಧೀನಾಧಿಕಾರಿಗಳು–2, ನಂ.14/3, 1ನೇ ಮಹಡಿ, ಅರವಿಂದಭವನ, ನೃಪತುಂಗ ರಸ್ತೆ, ಬೆಂಗಳೂರು–1

ಸಂಖ್ಯೆ: ಕೆಐಎಡಿಬಿ/ಭೂಸ್ವಾ/ಕೆಆರ್‌ಐಡಿಇ/33/2023–24 ದಿನಾಂಕ:25.07.2023

ಸಾರ್ವಜನಿಕ ಪ್ರಕಟಣೆ
(ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 ರ ವಿಧಿ 28(2) ರನ್ವಯ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ/ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿನ ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳನ್ನು 2ನೇ ಹಂತದ **"ಬೆಂಗಳೂರು ಉಪ–ನಗರ ರೈಲ್ವೆ ಯೋಜನೆಗಾಗಿ ಕಾರಿಡಾರ್–2"** ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 ರ ವಿಧಿ 28(1) ರಡಿ ಪ್ರಾಥಮಿಕ ಅಧಿಸೂಚನೆಯನ್ನು ಸಂಖ್ಯೆ:ಸಿಐ 64 ಎಸ್‌ಪಿಕ್ಯೂ (ಇ) 2023 ದಿನಾಂಕ 18.07.2023 ನ್ನು ಸರ್ಕಾರವು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 24–07–2023 ರಂದು ಪ್ರಕಟಣೆ ಹೊರಡಿಸಿದೆ ಈ ಕೆಳಗೆ ವಿವರಿಸಿರುವ ಸ್ವತ್ತುಗಳ ಸಂಬಂಧಪಟ್ಟ ಖಾತೆದಾರರ/ಅನುಭವದಾರರುಗಳಿಗೆ/ಹಿತಾಸಕ್ತ ವ್ಯಕ್ತಿಗಳಿಗೆ ವಿಧಿ 28(2) ರನ್ವಯ ನೋಟಿಸ್ ನೀಡಲಾಗಿದೆ. ಆದರೆ, ಕೆಲವರು ನೋಟಿಸ್ ಪಡೆಯಲು ನಿರಾಕರಿಸಿರುವ ಕಾರಣ ಹಾಗೂ ಕೆಲವು ಸ್ವತ್ತಿನ ಮಾಲೀಕರು ವಾಸವಾಗಿರುವ ನಿಖರವಾದ ವಿಳಾಸ ತಿಳಿಯದ ಕಾರಣ ನೋಟೀಸುಗಳನ್ನು ಜಾರಿ ಮಾಡಲು ಸಾಧ್ಯವಾಗಿರುವುದಿಲ್ಲ. ಆದ ಕಾರಣ ಸ್ವತ್ತಿನ ಮಾಲೀಕರು/ಹಿತಾಸಕ್ತಿಯುಳ್ಳವರಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡುವ ಉದ್ದೇಶದಿಂದ ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆಐಎಡಿಬಿ (ಕೆ.ಆರ್.ಐ.ಡಿ.ಇ.,) ಬೆಂಗಳೂರು ರವರ ಕಛೇರಿಯಲ್ಲಿ **ದಿನಾಂಕ:28.08.2023ರಂದು ಬೆಳಿಗ್ಗೆ 11.30 ಗಂಟೆಗೆ** ವಿಚಾರಣೆ ನಿಗದಿಪಡಿಸಿದೆ. ಸದರಿ ದಿನಾಂಕದಂದು ಸ್ವತ್ತಿನ ಮಾಲೀಕರು/ ಹಿತಾಸಕ್ತಿಯುಳ್ಳವರು ಸದರಿ ಭೂಸ್ವಾಧೀನ ಪ್ರಕ್ರಿಯೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಕೆಳಕಂಡ ಅಧಿಕಾರಿಗಳ ರೂಬು ರೂಬು ಖುದ್ದಾಗಿ ಅಥವಾ ಅಧಿಕಾರ ಪಡೆದ ತಮ್ಮ ಪ್ರತಿನಿಧಿಗಳ ಮುಖಾಂತರವಾಗಲಿ ಹಾಜರಾಗಿ ಆಕ್ಷೇಪಣೆ ಸಲ್ಲಿಸಬಹುದು. ನಂತರದ ಅವಧಿಯಲ್ಲಿ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಒಂದು ವೇಳೆ ವಿಚಾರಣೆಗೆ ಗೈರು ಹಾಜರಾದಲ್ಲಿ ಅಥವಾ ಲಿಖಿತ ಆಕ್ಷೇಪಣೆಯನ್ನು ಸಲ್ಲಿಸದಿದ್ದಲ್ಲಿ ಭೂಸ್ವಾಧೀನ ಪ್ರಕ್ರಿಯೆಗೆ ತಮ್ಮ ಆಕ್ಷೇಪಣೆ ಏನೂ ಇಲ್ಲವೆಂದು ಪರಿಭಾವಿಸಿ ಕಾನೂನು ರೀತ್ಯಾ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಕಲಂ 28(1) ರಲ್ಲಿ ಅಧಿಸೂಚನೆ ಹೊರಡಿಸಿದ ನಂತರ ಸೂಕ್ತ ಪ್ರಾಧಿಕಾರದ ಅನುಮತಿ ಇಲ್ಲದೆ ಸದರಿ ಸ್ವತ್ತುಗಳನ್ನು ಕ್ರಯ, ಕರಾರು, ಭೋಗ್ಯ, ಲೀಸ್, ಅದಲು–ಬದಲು, ಆಧಾರ್, ಹಕ್ಕು ಬಿಡುಗಡೆ ವೈಗೈರೆ ಮಾಡುವಂತಿಲ್ಲ ಮತ್ತು ಸದರಿ ಸ್ವತ್ತುಗಳಲ್ಲಿ ಕಟ್ಟಡ–ನಿರ್ಮಾಣ ಮತ್ತಿತರ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ನಿಷೇಧಿಸಿರುತ್ತದೆ. ಒಂದು ವೇಳೆ ಅಂತಹ ಕಾರ್ಯಗಳನ್ನು ಕೈಗೊಂಡಲ್ಲಿ 1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ ವಿಧಿ 30 ಅನ್ನು ಓದಿಕೊಳ್ಳುವ ಮೇರೆಗೆ (ಪರಿಹಾರ ಧನ ನಿಗದಿ ಮಾಡುವಾಗ ಈ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ) ಮತ್ತು ಅಂತಿಮವಾಗಿ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗುವುದು ಹಾಗೂ ಕಾನೂನಿನನ್ವಯ ಕ್ರಮ ಜರುಗಿಸಲಾಗುವುದು.

ಷೆಡ್ಯೂಲ್ ಸ್ವತ್ತುಗಳು

ಕ್ರ. ಸಂ	ಗುರುತಿನ ಸಂಖ್ಯೆ	ಖಾತಾದಾರರ ಹೆಸರು	ಎಲ್‌ಎ/ ಸಿಟಿಎಸ್ ಸರ್ವೆ ನಂಬರ್	ಸ್ವತ್ತಿನ ಒಟ್ಟು ವಿಸ್ತೀರ್ಣ	ಭೂಸ್ವಾಧೀನಕ್ಕೆ ಒಳಪಟ್ಟ ವಿಸ್ತೀರ್ಣ ಚ.ಮೀ.
ವಿಚಾರಣೆ ದಿನಾಂಕ: 28–08–2023			ವಿಚಾರಣೆ ಸಮಯ: ಬೆಳಿಗ್ಗೆ 11.30 ರಿಂದ		
ಗ್ರಾಮ : ಸೋಲದೇವನಹಳ್ಳಿ		ಹೋಬಳಿ: ಹೆಸರುಘಟ್ಟ		ತಾಲ್ಲೂಕು: ಯಲಹಂಕ	
1	C2/R/27/05/ SDVL/01	ಗುಳ್ಳಮ್ಮ, ಚಿಕ್ಕಣ್ಣ ರೆಡ್ಡಿ, ಮಂಜುನಾಥರೆಡ್ಡಿ, ಅಶ್ವಥಮ್ಮ ಕೋಂ ಲೇಟ್ ಎಂ. ಚಿಕ್ಕಣ್ಣ ಉರುಫ್ ಪಿಳ್ಳ ಚಿಕ್ಕಣ್ಣ, ರತ್ನಮ್ಮ ಬಿನ್ ಲೇಟ್ ಎಂ. ಚಿಕ್ಕಣ್ಣ ಉರುಫ್ ಪಿಳ್ಳ ಚಿಕ್ಕಣ್ಣ, ಸುಧಾ ಬಿನ್ ಲೇಟ್ ಎಂ. ಚಿಕ್ಕಣ್ಣ	60	5159.67	672.86
2	C2/R/27/05/ SDVL/02	ಚಿಕ್ಕಣ್ಣ ರೆಡ್ಡಿ, ಮಂಜುನಾಥರೆಡ್ಡಿ, ಅಶ್ವಥಮ್ಮ ಕೋಂ ಲೇಟ್ ಎಂ. ಚಿಕ್ಕಣ್ಣ ಉರುಫ್ ಪಿಳ್ಳ ಚಿಕ್ಕಣ್ಣ, ರತ್ನಮ್ಮ ಬಿನ್ ಲೇಟ್ ಎಂ. ಚಿಕ್ಕಣ್ಣ ಉರುಫ್ ಪಿಳ್ಳ ಚಿಕ್ಕಣ್ಣ, ಸುಧಾ ಬಿನ್ ಲೇಟ್ ಎಂ. ಚಿಕ್ಕಣ್ಣ	61/1	7486.58	3642.12
3	C2/R/27/05/ SDVL/03	ಆರ್. ಶ್ರೀನಿವಾಸ್‌ರೆಡ್ಡಿ ಬಿನ್ ರಾಜಣ್ಣ	61/2	3642.12	3642.12
4	C2/R/26/ 800/SDVL/04	ಅಶ್ವಥಮ್ಮ ಬಿನ್ ಚಿಕ್ಕಣ್ಣರೆಡ್ಡಿ, ಕೆ. ಶ್ಯಾಮಣ್ಣ ಬಿನ್ ಲೇಟ್ ಎಂ. ಕೊಂಡಮ್ಮ, ಜಿ.ರಾಮಕೃಷ್ಣ ರೆಡ್ಡಿ ಬಿನ್ ಆಂಜಿನಮ್ಮ, ರೈಲ್ವೆ ಇಲಾಖೆಗೆ ಭೂಸ್ವಾಧೀನ, ಗುಳ್ಳಮ್ಮ ಕೋಂ ಲೇಟ್ ಚಿಕ್ಕಣ್ಣರೆಡ್ಡಿ	62/1	22864.42	21928.60 (K)-1214.04 20714.56
5	C2/R/26/ 700/SDVL/05	MSPP LTD	71	43907.78	4266.14
6	C2/R/26/600/ SDVL/06	MSPP LTD	72	14770.82	145.87
ಗ್ರಾಮ : ಚಿಕ್ಕಬಾಣಾವರ		ಹೋಬಳಿ: ಯಶವಂತಪುರ		ತಾಲ್ಲೂಕು : ಬೆಂಗಳೂರು ಉತ್ತರ	
7	C2/R/26/400/ BAW/02	ಟಿ.ಎ. ಜಗದಾಂಬ ಕೋಂ ಈ ಕೃಷ್ಣಪ್ಪ	80/1	10218.17	10218.17
8	C2/R/26/400/ BAW/03	M/s Mysorestone ware and potteries ltd	80/2	4856.16	4856.16
9	C2/R/26/400/ BAW/04	ಟಿ.ಎ. ಜಗದಾಂಬ ಕೋಂ ಈ ಕೃಷ್ಣಪ್ಪ	80/3	17603.58	13253.27 (K)-303.51 = 12949.76
10	C2/R/26/00/ BAW/09	ಹನುಮಕ್ಕ ಕೋಂ ಚಿಕ್ಕ ಪಾಪರೆಡ್ಡಿ, ಮೊಹಮ್ಮದ್ ಮುಕ್ತರ್ ಬಿನ್ ಲೇ ಅಬ್ದುಲ್ ಗನಿ, ಸಕೀನಾ ತಾಸ್ನಿಂ ಕೋಮ್ ಮೊಹಮದ್ ಮುಕ್ತರ್	76	3237.44	3237.44 (K)-202.34 =3035.10
11	C2/R/26/250/ BAW/10	ಜಯಕೀರ್ತಿ ಬಿನ್ ಸೀತಾರಾಮಯ್ಯ	78	3540.95	3540.95 (K)-404.68 =3136.27
12	C2/R/26/150/ BAW/11	ಜಯಕೀರ್ತಿ ಬಿನ್ ಸೀತಾರಾಮಯ್ಯ	77	2731.59	2731.59 (K)-202.34 =2529.25
13	C2/R/26/300/ BAW/12	M/s Mysorestone ware and potteries ltd	79	2832.76	2832.76
14	C2/R/26/400/ BAW/13	M/s Mysorestone ware and potteries ltd	81/1	8498.28	8295.94
15	C2/R/26/400/ BAW/14	ಟಿ.ಎ. ಜಗದಾಂಬ ಕೋಂ ಈ ಕೃಷ್ಣಪ್ಪ	81/2	7385.41	7385.41 (K)-505.85 =6879.56
16	C2/R/26/200/ BAW/15	ರತ್ನಮ್ಮ ಬಿನ್ ಲೇಟ್ ದೊಡ್ಡ ಅಂಕಮ್ಮ	72	35406.99	2783.00 (K)-149.73 =2633.27
17	C2/R/26/200/ BAW/16	ರಾಜಮ್ಮ ಕೋಂ ಕೃಷ್ಣರೆಡ್ಡಿ, ಹನುಮಕ್ಕ ಕೋಂ ಚಿಕ್ಕಪಾಪರೆಡ್ಡಿ	72		5566.00 (K)-299.46 =5266.54
18	C2/R/26/200/ BAW/17	ಮೊಹಮ್ಮದ್ ಮುಕ್ತಾರ್ ಬಿನ್ ಲೇಟ್ ಅಬ್ದುಲ್ ಘನಿ	72		4799.00 (K)-258.64 =4540.36
19	C2/R/26/200/ BAW/18	ಮೊಹಮ್ಮದ್ ಮುಕ್ತಾರ್ ಬಿನ್ ಲೇಟ್ ಅಬ್ದುಲ್ ಘನಿ, ಸಕೀನ ತಾಸ್ನಿಂ ಕೋಂ ಮೊಹಮ್ಮದ್ ಮುಕ್ತಾರ್	72		1416.8 (K)-76.23 =1340.57
20	C2/R/26/200/ BAW/19	ಖರಾಬು	72		784.30

ಸಹಿ/– ವಿಶೇಷ ಭೂಸ್ವಾಧೀನಾಧಿಕಾರಿ–2, ಕೆ.ಐ.ಎ.ಡಿ.ಬಿ (ಕೆ.ಆರ್.ಐ.ಡಿ.ಇ.,)
ನೃಪತುಂಗ ರಸ್ತೆ, ಬೆಂಗಳೂರು.

ಹರಿಹರಪ್ರಿಯ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುರ್ವೆ ಕಲ್ಚರಲ್ ಅಕಾಡೆಮಿ ತನ್ನ 31ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ 'ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ 6ನೇ ಮಾಲಿಕೆ'ಯ ಯು.ಆರ್. ಅನಂತಮೂರ್ತಿ ರಾಷ್ಟ್ರೀಯ ಕಲಾ ಪ್ರತಿಭೋತ್ಸವದ [illegible] ಸಾಹಿತಿ '[illegible]' ಹರಿಹರಪ್ರಿಯ ಆಯ್ಕೆಯಾಗಿದ್ದಾರೆ.

'ಯು.ಆರ್. ಅನಂತಮೂರ್ತಿ ಜೀವನ, ಬದುಕು-ಬರಹ' ಕುರಿತು ವಿಚಾರಸಂಕಿರಣ ಮತ್ತು ಉಪನ್ಯಾಸ ಹಮ್ಮಿಕೊಂಡಿದ್ದು, ಸಾಹಿತಿಗಳಾದ ಸಿದ್ಧರಾಮ ಹೊನ್ನಲ್ [illegible], ರಾಜೇಂದ್ರ ಎಸ್. ಗಡಾದ ಹಾಗೂ ಪತ್ರಕರ್ತ ಬಾಬು ದಿನಕರ್ ಅವರು ವಿಷಯಗಳನ್ನು ಮಂಡಿಸಲಿದ್ದಾರೆ. ಯು.ಆರ್. ಅನಂತಮೂರ್ತಿ ಅವರ ಕಾದಂಬರಿ ಕುರಿತು ಅಂಕಣಕಾರ ಡಿ. ನಳಿನ ಚಿತ್ತಾಯ ಅವರು, ಕವಿತೆಗಳ ಕುರಿತು ಹಾಸನದ ಗೋರೂರು ಪಂಕಜಾ, ಕಥೆಗಳ ಕುರಿತು ಬೆಂಗಳೂರಿನ ವಿಜಯಾ ಕಾಲೇಜಿನ ಪ್ರಾಧ್ಯಾಪಕ ಬಿ.ಸಿ. ರಾಜಕುಮಾರ್ ಅವರು ಉಪನ್ಯಾಸ ನೀಡಲಿದ್ದಾರೆ ಎಂದು ಸಂಸ್ಥೆಯ ಸಂಸ್ಥಾಪಕಾಧ್ಯಕ್ಷ ರಮೇಶ ಸುರ್ವೆ ತಿಳಿಸಿದ್ದಾರೆ.

ಹರಿಹರಪ್ರಿಯ

ಆಕಾಸ ಏರ್‌ನಿಂದ 'ಪರಿಸರ ಸ್ನೇಹಿ' ವಿಮಾನ

ದೇವನಹಳ್ಳಿ: ಆಕಾಸ ಏರ್‌ಲೈನ್ಸ್ ವಿಮಾನಯಾನ ಸಂಸ್ಥೆಯ 'ಪರಿಸರ ಸ್ನೇಹಿ' ವಿಮಾನ ಅಮೆರಿಕದ ಸಿಯಾಟಲ್‌ನಿಂದ ಹೊರಟು ಮಂಗಳವಾರ ಬೆಳಿಗ್ಗೆ ಬೆಂಗಳೂರಿಗೆ ತಲುಪಿತು. ಇದು ಇತರ ಸಾಮಾನ್ಯ ವಿಮಾನಗಳ ಎಂಜಿನ್‌ಗಿಂತ ಶೇ20ರಷ್ಟು ಕಡಿಮೆ ಪ್ರಮಾಣದ ಹೊಗೆ ಹೊರಸೂಸುತ್ತದೆ. ಅಲ್ಲದೇ, ಇತರ ವಿಮಾನಗಳಿಗಿಂತ ಶೇ50ರಷ್ಟು ಕಡಿಮೆ ಶಬ್ದ ಮಾಡುತ್ತದೆ ಎಂದು ಆಕಾಸ ಏರ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವಿನಯ್ ದುಬೆ ಹೇಳಿದ್ದಾರೆ.

5, 6ಕ್ಕೆ ಬೆಂಗಳೂರು ಕಾವ್ಯ ಉತ್ಸವ

5 ಸಾವಿರಕ್ಕೂ ಹೆಚ್ಚು ಕಾವ್ಯಾಸಕ್ತರು ಭಾಗವಹಿಸುವ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟ-ಗಲಾಟ ಸಂಸ್ಥೆಯು 'ಇದೇ 5 ಮತ್ತು 6ಕ್ಕೆ 'ಬೆಂಗಳೂರು ಕಾವ್ಯ ಉತ್ಸವ'ದ ಏಳನೇ ಆವೃತ್ತಿಯನ್ನು ಹಳೆ ಮದ್ರಾಸ್ ರಸ್ತೆಯಲ್ಲಿರುವ ಗೋಪಾಲನ್ ಮಾಲ್‌ನಲ್ಲಿ ಹಮ್ಮಿಕೊಂಡಿದೆ.

ಉತ್ಸವದಲ್ಲಿ ದೇಶದ ಹಲವು ಮತ್ತು ಹೊಸ ತಲೆಮಾರಿನ ಬಹುಭಾಷಾ ಕವಿಗಳು, ಗೀತ ರಚನೆಕಾರರು, ಹಾಡುಗಾರರು, ಸಂಗೀತಗಾರರು ಭಾಗವಹಿಸಲಿದ್ದಾರೆ. ಉತ್ಸವವು ಕವಿತೆ, ಸಂವಾದ, ಭಾಷಣಗಳು ಹಾಗೂ ಕಾರ್ಯಾಗಾರಗಳನ್ನು ಒಳಗೊಂಡಿದೆ.

'ಕವಿತೆಗಳ ವೇದಿಕೆಯಾಗಿ ಸಾಮಾಜಿಕ ಜಾಲತಾಣ' ಎಂಬ ವಿಷಯದ ಮೇಲೆ ಅನುಕೃತಿ ಉಪಾಧ್ಯಾಯ, ಮೇಘಾ ರಾವ್, ಮೆಹಕ್ ಗೋಯಲ್ ಮತ್ತು ನಿಶಿ ಜಗವತ್ ಚರ್ಚಿಸಲಿದ್ದಾರೆ. ಕವಿ ಕೆ. ಸಚ್ಚಿದಾನಂದನ್ ಅವರು ಪಾಲ್ಗೊಳ್ಳಲಿದ್ದಾರೆ ಎಂದು ಉತ್ಸವದ ನಿರ್ದೇಶಕಿ ಶೈನಿ ಆ್ಯಂಟನಿ ತಿಳಿಸಿದ್ದಾರೆ.

'ಮಕ್ಕಳಿಗಾಗಿ ಎರಡೂ ದಿನ ಪ್ರತ್ಯೇಕ ವೇದಿಕೆಗಳನ್ನು ಒದಗಿಸಲಾಗುತ್ತಿದೆ. ಕಥೆ ಹೇಳುವಿಕೆ ಸೇರಿ ವಿವಿಧ ಚಟುವಟಿಕೆಗಳನ್ನು ನಡೆಸಲಾಗುತ್ತದೆ. ಪ್ರತ್ಯೇಕ ಕಾರ್ಯಾಗಾರವೂ ಇರಲಿದೆ. ಎರಡು ದಿನಗಳ ಈ ಉತ್ಸವದಲ್ಲಿ ಬೆಳಿಗ್ಗೆ 10ರಿಂದ ರಾತ್ರಿ 8 ಗಂಟೆಯ ವರೆಗೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಇಂಗ್ಲಿಷ್, ಹಿಂದಿ, ಕನ್ನಡ, ಮಲಯಾಳ, ಬಂಗಾಳಿ ಸೇರಿ ವಿವಿಧ ಪ್ರಾದೇಶಿಕ ಭಾಷೆಗಳಲ್ಲಿ ಕವಿತೆಗಳ ವಾಚನ ನಡೆಯಲಿದೆ' ಎಂದು ಹೇಳಿದ್ದಾರೆ.

'2016ರಿಂದ 2019ರವರೆಗೆ ಹಾಗೂ 2022ರಲ್ಲಿ ನಡೆದ ಉತ್ಸವದಲ್ಲಿ ಪ್ರತಿವರ್ಷ 5 ಸಾವಿರಕ್ಕೂ ಹೆಚ್ಚು ಕಾವ್ಯಾಸಕ್ತರು ಭಾಗವಹಿಸಿದ್ದರು. ಈ ವರ್ಷ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸುವ ನಿರೀಕ್ಷೆಯಿದೆ. ಪ್ರತಿ ವರ್ಷದಂತೆ ಈ ಬಾರಿಯೂ ಬೆಂಗಳೂರು ಸಾಹಿತ್ಯೋತ್ಸವ ಪುಸ್ತಕ ಬಹುಮಾನ ನೀಡಲಾಗುತ್ತದೆ.

ಅತ್ಯುತ್ತಮ ಮುಖಪುಟ ವಿನ್ಯಾಸ ಸೇರಿ ವಿವಿಧ ವಿಭಾಗಗಳಲ್ಲಿ 7 ವಾರ್ಷಿಕ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುತ್ತದೆ' ಎಂದು ತಿಳಿಸಿದ್ದಾರೆ.

'ಈ ಬಾರಿಯಿಂದ 'ಅತ್ಯುತ್ತಮ ಯುವ ಲೇಖಕರ ಪುಸ್ತಕ' ಮತ್ತು 'ಅತ್ಯುತ್ತಮ ಮಕ್ಕಳ ಪುಸ್ತಕ' ಎಂದು ಚಿತ್ರ ಪುಸ್ತಕಗಳಿಗೆ ಪ್ರಶಸ್ತಿ ನೀಡಲಾಗುತ್ತಿದೆ. ಕನ್ನಡದಲ್ಲಿ ಸಾಹಿತ್ಯ ಸಾಧನೆಗಾಗಿ ಲೇಖಕರಿಗೆ ವಾರ್ಷಿಕ ಪ್ರಶಸ್ತಿ ಸಹ ನೀಡಲಾಗುವುದು' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ನೀಟ್: ನೋಂದಣಿ ಇಂದು ಮುಕ್ತಾಯ

ಬೆಂಗಳೂರು: ನೀಟ್ ಅರ್ಹತೆ ಪಡೆದ ಅಭ್ಯರ್ಥಿಗಳು ವೈದ್ಯಕೀಯ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆಗಾಗಿ ನೋಂದಣಿ ಮಾಡಿಕೊಳ್ಳಲು ಆ. 2ರ ರಾತ್ರಿ 8ರವರೆಗೆ ಅಂತಿಮ ಅವಕಾಶ ಕಲ್ಪಿಸಲಾಗಿದೆ.

ಆನ್‌ಲೈನ್ ಮೂಲಕ ಇದುವರೆಗೂ ನೋಂದಣಿ ಮಾಡದೆ ಇರುವ ಅರ್ಹ ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡು ಅರ್ಜಿ ಸಲ್ಲಿಸಬೇಕು. ಶುಲ್ಕ ಪಾವತಿಸಬೇಕು. ಅರ್ಜಿ ಸಲ್ಲಿಸಿದವರು ಆ 3ರಂದು ಬೆಳಿಗ್ಗೆ 10ಕ್ಕೆ ದಾಖಲೆಗಳ ಪರಿಶೀಲನೆಗಾಗಿ ಪ್ರಾಧಿಕಾರದ ಕಚೇರಿಗೆ ಹಾಜರಾಗಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ತಿಳಿಸಿದ್ದಾರೆ.

ಸ್ನಾತಕೋತ್ತರ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನೋಂದಣಿ ಮಾಡಿಕೊಳ್ಳಲು ಆ.3ರ ಸಂಜೆ 6ರವರೆಗೆ ಅವಕಾಶ ನೀಡಲಾಗಿದೆ. ಹೆಚ್ಚಿನ ಮಾಹಿತಿಗೆ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ಭೇಟಿ ನೀಡಬಹುದು.

ಸ್ಪಷ್ಟ ಬರವಣಿಗೆ ಕಮ್ಮಟ 6ರಂದು

ಬೆಂಗಳೂರು: ಶಿಕ್ಷಕರು, ಉಪನ್ಯಾಸಕರು, ಲೇಖಕರು, ವಿದ್ಯಾರ್ಥಿಗಳು ಹಾಗೂ ಆಸಕ್ತರಿಗೆ ಅಕ್ಷರ ಚಪ್ಪರ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಸ್ಥೆಯ ವತಿಯಿಂದ ಕನ್ನಡವನ್ನು ಸ್ಪಷ್ಟವಾಗಿ, ನಿಸ್ಸಂದಿಗ್ಧವಾಗಿ ಬರೆಯುವ ಕ್ರಮವನ್ನು ಬೋಧಿಸುವ ಕಮ್ಮಟ ಇದೇ 6ರಂದು ಬೆಳಿಗ್ಗೆ 11 ಗಂಟೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಕ್ಕಮಹಾದೇವಿ ಸಭಾಂಗಣದಲ್ಲಿ ನಡೆಯಲಿದೆ.

ಕಮ್ಮಟವು ಉಪನ್ಯಾಸ, ಪ್ರಾತ್ಯಕ್ಷಿಕೆ, ಚರ್ಚೆ ಮತ್ತು ಅಭ್ಯಾಸಗಳನ್ನು ಒಳಗೊಂಡಿರುತ್ತವೆ. ಕನ್ನಡ ಬಳಕೆಯಲ್ಲಿ ಇರುವ ಸಮಸ್ಯೆ, ಗೊಂದಲ ಮತ್ತು ಅನುಮಾನಗಳಿಗೆ ಪರಿಹಾರಗಳನ್ನು ದೊರಕಿಸಿಕೊಡುವ ಉದ್ದೇಶ ಈ ಕಮ್ಮಟದ್ದು. ಮೊದಲು ನೋಂದಾಯಿಸಿಕೊಂಡ 60 ಜನರಿಗೆ ಮಾತ್ರ ಪ್ರವೇಶ ಲಭ್ಯ. ಹೆಚ್ಚಿನ ವಿವರಗಳನ್ನು 74068 54007ಗೆ ಕರೆ ಮಾಡಿ ಪಡೆಯಬಹುದು ಎಂದು ಕಮ್ಮಟದ ನಿರ್ದೇಶಕ ಕೆ. ರಾಜಕುಮಾರ್ ತಿಳಿಸಿದ್ದಾರೆ.

3M ಇಂಡಿಯಾ ಲಿಮಿಟೆಡ್

(CIN: L31300KA1987PLC013543)
ನೋಂದಾಯಿತ ಕಛೇರಿ: ಪ್ಲಾಟ್ ನಂ. 48–51, ಇಲೆಕ್ಟ್ರಾನಿಕ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560100,
ಕಾರ್ಪೊರೇಟ್ ಕಛೇರಿ: ವಿವರ್ಕ್ ಪ್ರೆಸ್ಟೀಜ್ ಸೆಂಟ್ರಲ್, 3ನೇ ಮಹಡಿ, 36 ಇನ್‌ಫೆಂಟ್ರಿ ರಸ್ತೆ, ಟಸ್ಕರ್ ಟೌನ್, ಬೆಂಗಳೂರು–560 001. ದೂರವಾಣಿ: 080–22231414
ಇಮೇಲ್: investorhelpdesk.in@mmm.com, ವೆಬ್‌ಸೈಟ್: www.3m.com/in

36ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆ, ರಿಮೋಟ್ ಇ–ಮತದಾನದ ಬಗ್ಗೆ ಮಾಹಿತಿ

ಎಜಿಎಮ್ ಸೂಚನೆಯಲ್ಲಿ ತಿಳಿಸಲಾಗಿರುವಂತಹ ವ್ಯವಹಾರಗಳನ್ನು ನಡೆಸುವ ಸಲುವಾಗಿ 'ಕಂಪನಿ'ಯು ತನ್ನ **36ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಶುಕ್ರವಾರ, ಆಗಸ್ಟ್ 25, 2023ರಂದು ಬೆಳಿಗ್ಗೆ 10.30 ಗಂಟೆಗೆ (ಭಾ.ಕಾ.) ವಿಡಿಯೊ ಕಾನ್ಫರೆನ್ಸ್ (VC)/ಇತರ ಶ್ರವಣ ದೃಶ್ಯ ಮಾಧ್ಯಮಗಳ (OAVM)** ಮೂಲಕ ಸಾಮಾನ್ಯ ಸ್ಥಳವೊಂದರಲ್ಲಿ ನಡೆಸುತ್ತಿದೆ ಎಂದು ಈ ಮೂಲಕ ಸೂಚನೆಯನ್ನು ನೀಡಲಾಗಿದೆ. ಕಂಪನಿಗಳ ಕಾಯಿದೆ, 2013 (ಕಾಯಿದೆ) ರಲ್ಲಿನ ಅನ್ವಯವಾಗುವಂತಹ ಉಪಬಂಧಗಳ, ಅದರ ಅಡಿಯಲ್ಲಿ ಮಾಡಿರುವಂತಹ ನಿಯಮಗಳ ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು (ಎಮ್‌ಸಿಎ) ಹೊರಡಿಸಿರುವ ಡಿಸೆಂಬರ್ 28, 2022 ದಿನಾಂಕದ ಸಾಮಾನ್ಯ ಸುತ್ತೋಲೆ ಸಂ. 10/2022 ಮತ್ತು ಸೆಬಿ ಹೊರಡಿಸಿರುವ ಜನವರಿ 05, 2023 ದಿನಾಂಕದ ಸುತ್ತೋಲೆ ಸಂ. SEBI/HO/CFD/PoD-2/P/CIR/2023/4 (ಇನ್ನು ಮುಂದೆ ಒಟ್ಟಾಗಿ 'ಸುತ್ತೋಲೆಗಳು' ಎಂದು ಉಲ್ಲೇಖಿಸಿದೆ) ಪ್ರಕಾರ ಕಂಪನಿಯ ಸದರಿ ಎಜಿಎಮ್ ಅನ್ನು ಸದಸ್ಯರ ಭೌತಿಕ ಹಾಜರಾತಿ ಇಲ್ಲದೆಯೇ ವಿಸಿ/ಓಎವಿಎಮ್ ಮೂಲಕ ನಡೆಸಲಾಗುವುದು. ಎಜಿಎಮ್ ವ್ಯವಹರಣೆಗಳನ್ನು ಕಂಪನಿಯ ನೋಂದಾಯಿತ ಕಛೇರಿಯಲ್ಲಿಯೇ ನಡೆಸಲಾಗಿದೆ ಎಂದು ಪರಿಗಣಿಸಲಾಗುವುದು. ಸದರಿ ಸುತ್ತೋಲೆಗಳ ಅನುಸಾರ, ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿ/ಡಿಪಾಸಿಟರಿ/ಆರ್‌ಟಿಎ ಗಳೊಂದಿಗೆ ನೋಂದಾಯಿಸಿ ಕೊಂಡಿರುವ ಸದಸ್ಯರಿಗೆ ಎಜಿಎಮ್ ಸೂಚನೆ ಹಾಗೂ ವಿ.ವ. 2022–23ನೇ ಸಾಲಿನ ವಾರ್ಷಿಕ ವರದಿಯ ವಿದ್ಯುನ್ಮಾನ ಪ್ರತಿಗಳನ್ನು ಮಾತ್ರವೇ ವಿದ್ಯುನ್ಮಾನ ವಿಧಾನಗಳಲ್ಲಿ ಕಳುಹಿಸಲಾಗಿದೆ.

ಮೇಲಿನ ಸುತ್ತೋಲೆಗಳ ಅನುಸಾರ, ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿ/ಡಿಪಾಸಿಟರಿ/ಆರ್‌ಟಿಎ ಗಳೊಂದಿಗೆ ನೋಂದಾಯಿಸಿ ಕೊಂಡಿರುವ ಸದಸ್ಯರಿಗೆ ಎಜಿಎಮ್ ಸೂಚನೆ ಹಾಗೂ ವಿ.ವ. 2022–23ನೇ ಸಾಲಿನ ವಾರ್ಷಿಕ ವರದಿಯ ವಿದ್ಯುನ್ಮಾನ ಪ್ರತಿಗಳನ್ನು ಮಾತ್ರವೇ ವಿದ್ಯುನ್ಮಾನ ವಿಧಾನಗಳಲ್ಲಿ ಕಳುಹಿಸಲಾಗಿದೆ. 2022–23ನೇ ಸಾಲಿನ ವಾರ್ಷಿಕ ವರದಿಯ ವಿದ್ಯುನ್ಮಾನ ಪ್ರತಿಗಳ ರವಾನೆ ಕೆಲಸ ಮಂಗಳವಾರ, **ಆಗಸ್ಟ್ 01, 2023** ರಂದು ಮುಗಿದಿದೆ. ಎಜಿಎಮ್ ಸೂಚನೆ ಮತ್ತು 2022–23ನೇ ಸಾಲಿನ ವಾರ್ಷಿಕ ವರದಿಗಳು ಕಂಪನಿಯ https://www.3mindia.in/3M/en_IN/company-in/about-3m/financial-facts-local/, ಸ್ಟಾಕ್ ಎಕ್ಸ್‌ಚೇಂಜುಗಳಾದ ಬಿಎಸ್‌ಇ ಲಿಮಿಟೆಡ್‌ನ www.bseindia.com, ಮತ್ತು ಎನ್‌ಎಸ್‌ಡಿಎಲ್‌ನ www.nseindia.com ಮತ್ತು ಇ–ಮತದಾನದ ಮಧ್ಯವರ್ತಿಗಳಾದ ನ್ಯಾಷನಲ್ ಸೆಕ್ಯುರಿಟಿಸ್ ಡಿಪಾಸಿಟರಿ ಲಿಮಿಟೆಡ್(ಎನ್‌ಎಸ್‌ಡಿಎಲ್)ನ https://www.evoting.nsdl.com ಗಳಲ್ಲಿಯೂ ಲಭ್ಯವಿರುವಂತೆ ವ್ಯವಸ್ಥೆ ಮಾಡಲಾಗುತ್ತದೆ.

ಕಂಪನಿಗಳ ಅಧಿನಿಯಮ, 2013ರ ಕಲಮು 108ರ ಉಪಬಂಧಗಳು ಮತ್ತು ತಿದ್ದುಪಡಿಯಾದ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಾವಳಿ, 2014ರ ನಿಯಮ 20 ಮತ್ತು ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವ ಅಗತ್ಯತೆಗಳು) ಉಪಬಂಧಗಳು, 2015ರ 44ನೇ ಉಪಬಂಧದ ಪ್ರಕಾರ ಅಂತಿಮ ದಿನವಾದ **ಶುಕ್ರವಾರ ಆಗಸ್ಟ್ 18, 2023** ರಂದು ಭೌತಿಕ ಅಥವಾ ಡೀಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವಂತಹ ಸದಸ್ಯರು https://www.evoting.nsdl.com ಗೆ ಹೋಗಿ ಎನ್‌ಎಸ್‌ಡಿಎಲ್ ಒದಗಿಸಿರುವ ಇ–ಮತದಾನ ವೇದಿಕೆಯ ಮೂಲಕ ವಿದ್ಯುನ್ಮಾನ ರೂಪದಲ್ಲಿ ಎಜಿಎಮ್ ಸೂಚನೆಯಲ್ಲಿ ಹೇಳಿರುವಂತಹ ವ್ಯವಹಾರಗಳ ಮೇಲೆ ತಮ್ಮ ಮತಗಳನ್ನು ಚಲಾಯಿಸಬಹುದಾಗಿದೆ. ಇ–ಮತದಾನ ಪ್ರಕ್ರಿಯೆ/ಸೂಚನೆಗಳ ವಿವರಗಳು ಎಜಿಎಮ್ ಸಭೆಯ ಸೂಚನೆಯಲ್ಲೂ ಇವೆ.

ಈ ಸಂಬಂಧ, ಈ ಕೆಳಗಿನ ಅಂಶಗಳನ್ನೂ ಸದಸ್ಯರ ಗಮನಕ್ಕೆ ತರುತ್ತಿದ್ದೇವೆ:

1. ಕಂಪನಿಯು, ಎಜಿಎಮ್‌ಗೆ ವಿಡಿಯೊ ಕಾನ್ಫರೆನ್ಸ್ ಸೌಲಭ್ಯವನ್ನು ಒದಗಿಸಲು ಮತ್ತು ಎಜಿಎಮ್ ನಡೆಸಲು ಅಧಿಕೃತ ಸಹಾಯಕರನ್ನು ಒದಗಿಸಲು ಎನ್‌ಎಸ್‌ಡಿಎಲ್ ಸಂಸ್ಥೆಯನ್ನು ನೇಮಿಸಿಕೊಂಡಿದೆ;
2. ಎಜಿಎಮ್ ಸೂಚನೆಯಲ್ಲಿ ಹೇಳಿರುವಂತಹ ಸಾಮಾನ್ಯ ಹಾಗೂ ವಿಶೇಷ ವ್ಯವಹಾರಗಳನ್ನು ವಿದ್ಯುನ್ಮಾನ ವಿಧಾನದಲ್ಲಿ ಮತ ಚಲಾಯಿಸುವ ಮೂಲಕ ನಡೆಸಲಾಗುವುದು;
3. ರಿಮೋಟ್ ಇ–ಮತದಾನವು **ಮಂಗಳವಾರ, ಆಗಸ್ಟ್ 22, 2023ರಂದು ಭಾ.ಕಾ. ಬೆಳಗ್ಗೆ 09.00ಕ್ಕೆ ಆರಂಭವಾಗಿ ಗುರುವಾರ, ಆಗಸ್ಟ್ 24, 2023ರಂದು ಭಾ.ಕಾ. ಸಂಜೆ 05.00ಕ್ಕೆ** ಮುಗಿಯುತ್ತದೆ;
4. ಇ–ಮತದಾನದ ಅರ್ಹತೆ ಪಡೆಯಲು ಕೊನೆಯ ದಿನಾಂಕ: **ಶುಕ್ರವಾರ, ಆಗಸ್ಟ್ 18, 2023.**
5. ಸದರಿ ಸೂಚನೆಯು ರವಾನೆಯಾದ ದಿನಾಂಕದ ನಂತರ ಷೇರುಗಳನ್ನು ಪಡೆದುಕೊಂಡು ಕಂಪನಿಯ ಸದಸ್ಯರಾಗಿರುವ, ಮತ್ತು ಅಂತಿಮ ದಿನಾಂಕವಾದ **ಶುಕ್ರವಾರ, ಆಗಸ್ಟ್ 18, 2023ರಂದು** ಅರ್ಹ ಷೇರುದಾರರಾಗಿರುವ ವ್ಯಕ್ತಿಗಳು evoting@nsdl.co.in, ಈ ವಿಳಾಸಕ್ಕೆ ಬರೆದು ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಗಳನ್ನು ಪಡೆದುಕೊಳ್ಳಬಹುದು. ಆದರೆ, ರಿಮೋಟ್–ಮತದಾನಕ್ಕಾಗಿ ಎನ್‌ಎಸ್‌ಡಿಎಲ್‌ನಲ್ಲಿ ಅದಾಗಲೇ ನೋಂದಾಯಿಸಿಕೊಂಡಿರುವ ವ್ಯಕ್ತಿಗಳು ಮತ ಚಲಾಯಿಸಲು ಈಗಾಗಲೇ ಇರುವಂತಹ ತಮ್ಮ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಗಳನ್ನು ಬಳಸಿಕೊಂಡು ಮತ ಚಲಾಯಿಸಬಹುದು;
6. ಸದಸ್ಯರು ದಯವಿಟ್ಟು ಗಮನಿಸಬೇಕು: (ಎ) ಮೇಲೆ ಹೇಳಿರುವ ದಿನ ಮತ್ತು ಸಮಯದ ನಂತರ ಎನ್‌ಎಸ್‌ಡಿಎಲ್, ಇ–ಮತದಾನ ಸೌಲಭ್ಯವನ್ನು ತೆಗೆದುಬಿಡುತ್ತದೆ ಮತ್ತು ಸದಸ್ಯರು ಒಮ್ಮೆ ಮತ ಚಲಾಯಿಸಿದ ನಂತರ ಅದನ್ನು ಬದಲಾಯಿಸಲು ಅವಕಾಶವಿರುವುದಿಲ್ಲ; (ಬಿ) ಎಜಿಎಮ್ ಗೆ ಮುಂಚೆಯೇ ರಿಮೋಟ್ ಇ–ಮತದಾನದ ಮೂಲಕ ತಮ್ಮ ಮತವನ್ನು ಚಲಾಯಿಸಿರುವಂತಹ ಸದಸ್ಯರು VC/OAVM ಸೌಲಭ್ಯದ ಮೂಲಕ ಎಜಿಎಮ್ ನಲ್ಲಿ ಪಾಲ್ಗೊಳ್ಳಬಹುದಾದರೂ ಎಜಿಎಮ್ ನಲ್ಲಿರುವ ಇ–ಮತದಾನ ಸೌಲಭ್ಯದ ಮೂಲಕ ಮತ್ತೊಮ್ಮೆ ಮತವನ್ನು ಚಲಾಯಿಸಲು ಅರ್ಹರಾಗಿರುವುದಿಲ್ಲ; (ಸಿ) ಎಜಿಎಮ್‌ನಲ್ಲಿ ಪಾಲ್ಗೊಳ್ಳುತ್ತಿರುವ ಮತ್ತು ರಿಮೋಟ್ ಇ–ಮತದಾನದ ಮೂಲಕ ತಮ್ಮ ಮತವನ್ನು ಚಲಾಯಿಸಿಲ್ಲದ ಸದಸ್ಯರು ಮಾತ್ರವೇ ಎಜಿಎಮ್‌ನಲ್ಲಿ ಇ–ಮತದಾನದ ಮೂಲಕ ತಮ್ಮ ಮತವನ್ನು ಚಲಾಯಿಸಲು ಅರ್ಹರಾಗಿರುತಾರೆ; ಮತ್ತು (ಡಿ) ಅಂತಿಮ ದಿನಾಂಕದಂದು ಡಿಪಾಸಿಟರಿಗಳು ನಿರ್ವಹಿಸುತ್ತಿರುವ ಸದಸ್ಯರ ಪುಸ್ತಕ ಅಥವಾ ಫಲಾನುಭವಿ ಮಾಲಿಕರ ಪುಸ್ತಕದಲ್ಲಿ ಹೆಸರು ದಾಖಲಾಗಿರುವ ವ್ಯಕ್ತಿಗಳು ಮಾತ್ರವೇ ರಿಮೋಟ್ ಇ–ಮತದಾನದ ಸೌಲಭ್ಯವನ್ನು ಬಳಸಿಕೊಳ್ಳಬಹುದು, VC/OAVM ಸೌಲಭ್ಯದ ಮೂಲಕ ಎಜಿಎಮ್‌ನಲ್ಲಿ ಪಾಲ್ಗೊಳ್ಳಬಹುದು ಮತ್ತು ಎಜಿಎಮ್ ಸಂದರ್ಭದಲ್ಲಿ ಇ–ಮತದಾನದಲ್ಲಿ ಪಾಲ್ಗೊಳ್ಳಬಹುದು;
7. ಏನಾದರೂ ಸಂದೇಹಗಳಿದ್ದರೆ www.evoting.nsdl.com ನ ಡೌನ್‌ಲೋಡ್ ವಿಭಾಗದಲ್ಲಿರುವ 'ಷೇರುದಾರರ ಸಾಮಾನ್ಯ ಪ್ರಶ್ನೆಗಳು' (FAQs) ಮತ್ತು ಷೇರುದಾರರಿಗಾಗಿ ಇ–ಮತದಾನ ಬಳಕೆದಾರರ ಕೈಪಿಡಿಗಳನ್ನು ನೋಡಬಹುದು ಅಥವಾ ನಿಶುಲ್ಕ ಸಂಖ್ಯೆ 022–4886 7000 / 022–2499 7000 ಗೆ ಕರೆ ಮಾಡಬಹುದು ಅಥವಾ evoting@nsdl.co.in ಗೆ ಮನವಿ ಕಳುಹಿಸಬಹುದು ಅಥವಾ ಇವರನ್ನು ಸಂಪರ್ಕಿಸಬಹುದು: ಶ್ರೀಮತಿ ಪಲ್ಲವಿ ಮಾತ್ರೆ, ಹಿರಿಯ ವ್ಯವಸ್ಥಾಪಕರು, ಇಮೇಲ್ ಐಡಿ: pallavid@nsdl.co.in; ಪತ್ರವ್ಯವಹಾರಗಳಿಗೆ ವಿಳಾಸ: ನ್ಯಾಷನಲ್ ಸೆಕ್ಯುರಿಟಿಸ್ ಡಿಪಾಸಿಟರಿ ಲಿಮಿಟೆಡ್, ಟ್ರೇಡ್ ವರ್ಲ್ಡ್, ಎಫ್ ವಿಂಗ್, 4ನೇ ಫ್ಲೋರ್, ಕಮಲಾ ಮಿಲ್ಸ್ ಕಾಂಪೌಂಡ್, ಸೇನಾಪತಿ ಬಾಪಟ್ ಮಾರ್ಗ್, ಲೋಯರ್ ಪರೇಲ್, ಮುಂಬೈ–400 013, ಇವರು ವಿದ್ಯುನ್ಮಾನ ವಿಧಾನದಲ್ಲಿ ಮತಚಲಾಯಿಸುವುದಕ್ಕೆ ಸಂಬಂಧಿಸಿದ ದೂರುಗಳನ್ನೂ ಪರಿಹರಿಸುತ್ತಾರೆ. ಸದಸ್ಯರು ಕಂಪನಿ ಸೆಕ್ರೆಟರಿಯವರ investorhelpdesk.in@mmm.com ವಿಳಾಸಕ್ಕೂ ಬರೆಯಬಹುದು.
8. ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿದ್ದು ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿಯೊಂದಿಗೆ ದಾಖಲಿಸಿರದಂತಹ ಸದಸ್ಯರು ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿಯ ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟರಾದ ಕೆಫಿನ್ ಟೆಕ್ನಾಲಜಿಸ್ ಪ್ರೈವೇಟ್ ಲಿಮಿಟೆಡ್‌ನ einward.ris@kfintech.com ವಿಳಾಸಕ್ಕೆ ಕಳುಹಿಸಿ ತಮ್ಮ ಇಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಗಳನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿಸಿಕೊಳ್ಳುತ್ತೇವೆ. ಡೀಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟರೊಂದಿಗೆ ತಮ್ಮ ಇತ್ತೀಚಿನ ಇಮೇಲ್ ವಿಳಾಸಗಳನ್ನು ದಾಖಲಿಸಿಕೊಳ್ಳಬಹುದು; ಮತ್ತು,
9. ವಿದ್ಯುನ್ಮಾನ ಮತದಾನ ಪ್ರಕ್ರಿಯೆಯು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಯುವಂತೆ ನೋಡಿಕೊಳ್ಳಲು ಕಂಪನಿಯು, ಬೋರ್ಡ್‌ನ ದೃಷ್ಟಿಯಲ್ಲಿ ಸೂಕ್ತ ಅರ್ಹತೆಯುಳ್ಳ ವ್ಯಕ್ತಿ ಎಂದು ಪರಿಗಣಿಸಲಾದ ವೃತ್ತಿಪರ ಕಂಪನಿ ಕಾರ್ಯದರ್ಶಿಗಳಾದ ಶ್ರೀ ವಿಜಯಕೃಷ್ಣ ಕೆ.ಟಿ., ಇವರನ್ನು ಸೂಕ್ಷ್ಮಪರಿಶೀಲಕರನ್ನಾಗಿ ನೇಮಿಸಿದೆ.

3M ಇಂಡಿಯಾ ಲಿಮಿಟೆಡ್‌ಗಾಗಿ
ಪ್ರತಾಪ್ ರುದ್ರ ಭುವನಗಿರಿ
ಕಂಪನಿ ಸೆಕ್ರೆಟರಿ

ಸ್ಥಳ: ಬೆಂಗಳೂರು
ದಿನಾಂಕ: ಆಗಸ್ಟ್ 1, 2023

ಶ್ರೀ ಆಂಜನೇಯ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಸ್ಥಾಪನೆ : 1964
ಕೇಂದ್ರ ಕಛೇರಿ : ನಂ.38, ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ರಸ್ತೆ (ಲಿಂಕ್ ರಸ್ತೆ) ಮಲ್ಲೇಶ್ವರಂ, ಬೆಂಗಳೂರು–560 003
ದೂರವಾಣಿ : 080–23563302/23564151,
E-Mail: anjaneyabank@yahoo.com

ಐವತ್ತೊಂಭತ್ತನೇ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆ

ಬ್ಯಾಂಕಿನ 2022–23ನೇ ಸಾಲಿನ 59ನೇ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ: 06–08–2023ನೇ ಭಾನುವಾರದಂದು ಬೆಳಿಗ್ಗೆ 09–30 ಘಂಟೆಗೆ "ಶ್ರೀರಾಮ ಮಂದಿರ ಟ್ರಸ್ಟ್ (ಶ್ರೀರಾಮ ಸಮುದಾಯ ಭವನ)" ನಂ.147, 7ನೇ ಅಡ್ಡರಸ್ತೆ, ತೆಂಗಿನ ಮರದ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003. ಇಲ್ಲಿ ಬ್ಯಾಂಕಿನ ಅಧ್ಯಕ್ಷರಾದ **ಶ್ರೀ ನಂಜಪ್ಪ** ರವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿಸಲಾಗಿದೆ. ಸರ್ವ ಸದಸ್ಯರ ಸಭೆಯ ಆಹ್ವಾನ ಪತ್ರಿಕೆಯನ್ನು ಈಗಾಗಲೇ ಅಂಚೆ ಮೂಲಕ ಕಳುಹಿಸಲಾಗಿದ್ದು, ತಲುಪದಿದ್ದಲ್ಲಿ ಈ ಪ್ರಕಟಣೆಯನ್ನೇ ಆಹ್ವಾನ ಪತ್ರಿಕೆ ಎಂದು ಭಾವಿಸಿ, ಸಭೆಗೆ ಹಾಜರಾಗಬೇಕಾಗಿ ಮಾನ್ಯ ಸದಸ್ಯರಲ್ಲಿ ವಿನಂತಿ.

ಆಡಳಿತ ಮಂಡಲಿ ಅಪ್ಪಣೆ ಮೇರೆಗೆ
ಸಹಿ/–
(ಆರ್.ಶಿವಶಂಕರ)
ಪ್ರಧಾನ ವ್ಯವಸ್ಥಾಪಕರು

ಸ್ಥಳ: ಬೆಂಗಳೂರು
ದಿನಾಂಕ: 02–08–2023

ರೈಲು ಭೂಮಿ ಅಭಿವೃದ್ಧಿ ಪ್ರಾಧಿಕಾರ

(ಭಾರತ ಸರ್ಕಾರದ ರೈಲ್ವೆ ಸಚಿವಾಲಯ ಅಡಿಯಲ್ಲಿನ ಒಂದು ಶಾಸನಬದ್ಧ ಪ್ರಾಧಿಕಾರ)
ಯೂನಿಟ್ ನಂ. 702–ಬಿ, 7ನೇ ಮಹಡಿ, ಕನ್ನೆಕ್ಟಸ್ ಟವರ್–2, ಡಿಎಂಆರ್‌ಸಿ ಬಿಲ್ಡಿಂಗ್, ಅಜ್ಮೇರಿ ಗೇಟ್, ನವದೆಹಲಿ–110002 ಫೋನ್: +91–11–23232854, ಫ್ಯಾಕ್ಸ್: +91–11–23232835

ಇ–ಟೆಂಡರ್ ಮುಖಾಂತರ ಪ್ರಸ್ತಾವಣೆಗೆ ಮನವಿ
(ಆರ್‌ಎಫ್‌ಪಿ ನೋಟಿಸ್ ನಂ. ಆರ್‌ಎಲ್‌ಡಿಎ/2023/ಆರ್‌ಎಫ್‌ಪಿ/ಸಿಡಿ–ಸಿಆರ್‌ಡಿ/44 ದಿನಾಂಕ: 31–07–23)

ದಕ್ಷಿಣ ಮಧ್ಯೆ ರೈಲ್ವೆಯ ಪಾಲಘಾಟ್ ಡಿವಿಜನ್‌ನ ಮಂಗಳೂರು ಸೆಂಟ್ರಲ್ ರೈಲ್ವೆ ಕಾಲೋನಿಯಲ್ಲಿನ 14,950 ಚ.ಮೀ. ರೈಲ್ವೆ ಭೂ ಪ್ರದೇಶದ ಮತ್ತು ಮಂಗಳೂರು ಸೆಂಟ್ರಲ್ ರೈಲ್ವೆ ನಿಲ್ದಾಣದ ಸಮೀಪದಲ್ಲಿರುವ 17,165 ಚ.ಮೀ. ಪ್ರಸಕ್ತ ರೈಲ್ವೆ ಕಾಲೋನಿ ಪ್ರದೇಶದ ಪುನರಾಭಿವೃದ್ಧಿಗಾಗಿ 45 ವರ್ಷಗಳ ಭೋಗ್ಯ/ಪರವಾನಿಗೆ ಮಂಜೂರಾತಿ.

ನಿವೇಶನದ ವಿವರ	ನಿವೇಶನದ ಅಂದಾಜು ವಿಸ್ತೀರ್ಣ	ಉಲ್ಲೇಖಿತ ಬಿಲ್ಟಪ್ ಪ್ರದೇಶ	ಬಿಡ್ ಸೆಕ್ಯೂರಿಟಿ	ಮೀಸಲು ಬೆಲೆ
ಮಂಗಳೂರು ಸೆಂಟ್ರಲ್ ರೈಲ್ವೆ ಕಾಲೋನಿ, ಮಂಗಳೂರು, ಕರ್ನಾಟಕ	14,950 ಚ.ಮೀ.	34,385 ಚ.ಮೀ.	ರೂ. 1.00 ಕೋಟಿ	ರೂ. 27.75 ಕೋಟಿ

ಬಿಡ್–ಪೂರ್ವ ಆನ್‌ಲೈನ್ ಮತ್ತು ಆಫ್‌ಲೈನ್ ಸಭೆ: 14 ಆಗಸ್ಟ್, 2023 ರಂದು 11:30 ಗಂಟೆ.
(ಬಿಡ್–ಪೂರ್ವ ಸಭೆಯ ವಿವರಗಳನ್ನು ಜಾಯಿಂಟ್ ಜನರಲ್ ಮ್ಯಾನೇಜರ್/ಪಿ/ಎಸ್‌ಬಿಸಿ ಇವರಿಂದ ಪಡೆದುಕೊಳ್ಳುವುದು)
ಆನ್‌ಲೈನ್‌ನಲ್ಲಿ ಇ–ಬಿಡ್ ಸಲ್ಲಿಸುವ ಕೊನೆಯ ದಿನಾಂಕ: 25.09.2023 ರಂದು 15:00 ಗಂಟೆ.
ಯೋಜನೆಯ ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು ನಮ್ಮ www.rlda.indianrailways.gov.in ವೆಬ್‌ಸೈಟ್‌ಗೆ ಭೇಟಿ ಕೊಡಿ ಅಥವಾ www.tenderwizard.in/RLDA ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿರುವ 'ಇ–ಟೆಂಡರ್' ಲಿಂಕ್ ಪರಿಶೀಲಿಸಿರಿ.

ಜಾ. ಜನರಲ್ ಮ್ಯಾನೇಜರ್/ಪಿ/ಎಸ್‌ಬಿಸಿ	ಚೀಫ್ ಪ್ರಾಜೆಕ್ಟ್ ಮ್ಯಾನೇಜರ್/ಎಸ್‌ಬಿಸಿ	ಕನ್ಸಲ್ಟಂಟ್/ಆರ್‌ಎಲ್‌ಡಿಎ	ಇ–ಬಿಡ್ ವಿಚಾರಣಗಳಿಗಾಗಿ –
ಮೊಬೈಲ್:9959187887	ಮೊಬೈಲ್: 93615 91387	ಮಿಸ್. ಪ್ರಗೀಜ ಕೆ ಮೊಬೈಲ್ 80500 16272	ಶ್ರೀ ಸೂರಜ್ ಸಿಂಗ್ ಮೊಬೈಲ್: 95996 53865
jgmpsbc@rlda.railnet.gov.in	cpmbangalore@rlda.railnet.gov.in	prageeja.k@cbre.com	suraj@etenderwizard.com

ಸೂಚನೆ:– ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡು ಉಂಟಾದಲ್ಲಿ, ಅಂತಹುದನ್ನು ಮೇಲ್ಕಂಡ ವೆಬ್‌ಸೈಟ್‌ಗಳಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
ಅಸಿಸ್ಟೆಂಟ್ ಮ್ಯಾನೇಜರ್/ಟೆಂಡರ್, (ಮೊ) 87505 54811

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ

ನಂ.16, 2ನೇ ರಾಜಭವನ ರಸ್ತೆ, ಬೆಂಗಳೂರು–01
PH: 080-22867369, E-mail: cgmksamb@gmail.com

ಸಂಖ್ಯೆ:ಕೃಮಾಮಂ/ಪ್ರೋ–ನಿಶೇ/2762/ಟೆಂಡರ್/AUCTION1/2023–24 ದಿನಾಂಕ: 01.08.2023

ಇ–ಟೆಂಡರ್–ಇ–ಹರಾಜು ಪ್ರಕಟಣೆ

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ರೂ.700.00 ಕೋಟಿಗಳನ್ನು (ರೂಪಾಯಿ ಏಳು ನೂರು ಕೋಟಿಗಳು ಮಾತ್ರ) **e-procurement** ಮೂಲಕ ಒಂದು ವರ್ಷದ ಅವಧಿಗೆ ನಿಶ್ಚಿತ ಠೇವಣಿಯಲ್ಲಿ ತೊಡಗಿಸುವ ಕುರಿತು ಆಸಕ್ತ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸ್ಪರ್ಧಾತ್ಮಕ ಇ–ಬಿಡ್ಡಿಂಗ್‌ನ್ನು ಆಹ್ವಾನಿಸಲಾಗಿದ್ದು, ಹೆಚ್ಚಿನ ಮಾಹಿತಿಯನ್ನು **www.kppp.karnataka.gov.in** ವೆಬ್‌ಸೈಟ್‌ನ ಇಂಡೆಂಟ್ **ಸಂಖ್ಯೆ:APMC/2023-24/AUCTION1** ರಲ್ಲಿ **ದಿ:08.08.2023** ರೊಳಗೆ ಪಡೆಯಬಹುದಾಗಿದೆ.

ಸಹಿ/–
ಮುಖ್ಯ ಪ್ರಧಾನ ವ್ಯವಸ್ಥಾಪಕರು
ಕ.ರಾ.ಕೃ.ಮಾ.ಮಂ., ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/737/ಶಿರಡಿಸಾಯಿ/2023–24

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಇಸಿಎನ್–ಟಿಆರ್‌ಡಿ–13–2023
ದಿನಾಂಕ : 08–07–2023 ಗೆ ತಿದ್ದುಪಡಿ–1

ಕೆಲಸದ ಹೆಸರು	ಅಂದಾಜು ಮೌಲ್ಯ
ವಿಜಯಪುರ ಯಾರ್ಡ್‌ನಲ್ಲಿ ಹಾಲಿ ಇರುವ ಓಹೆಚ್‌ಇ ಮಾರ್ಪಾಡು ಮತ್ತು ಮುಂಬರುವ ಹೊಸ ಮಾರ್ಗಗಳ ವಿದ್ಯುದೀಕರಣ.	ರೂ. 6,94,94,284.02

ಮುಕ್ತಾಯದ ದಿನಾಂಕ

ಹಾಲಿ ಇರುವ ದಿನಾಂಕ	ಪರಿಷ್ಕೃತ ದಿನಾಂಕ
31–07–2023 ರಂದು 11:00 ಗಂಟೆಗೆ	04–08–2023 ರಂದು 11:00 ಗಂಟೆಗೆ

ಇತರ ಎಲ್ಲಾ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಯು ಇರುವುದಿಲ್ಲ.
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಉಪ ಮುಖ್ಯ ವಿದ್ಯುತ್ ಇಂಜಿನಿಯರ್ / ಟಿಆರ್‌ಡಿ / ಸಿಎನ್ ಬೆಂಗಳೂರು ದಂಡು
ಪಿಯುಬಿ/279/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023–24
S.W.Railways SWRRLY SWRRLY

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ನನ್ನ ಕಕ್ಷಿದಾರರು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತಿನ ಮಾಲೀಕರಾದ ಶ್ರೀಮತಿ ಬಿ.ಎನ್. ಶೈಲಜ ಕೋಂ ಬಿ.ಆರ್.ವೀರಪ್ಪ ರವರಲ್ಲಿ ಕ್ರಯಕ್ಕೆ ಪಡೆಯಲು ಮಾತುಕತೆ ನಡೆಸಿರುತ್ತಾರೆ.

ಆದ್ದರಿಂದ ಷೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ವ್ಯಕ್ತಿಗಳು ಯಾವುದೇ ರೀತಿಯ ವಾರಸತ್ವ, ಒಡೆತನದ ಹಕ್ಕು, ಅಡಮಾನ ಹಕ್ಕು, ಬೋಗ್ಯ ಹಕ್ಕು, ಕ್ರಯ, ದಾನ, ಸ್ವಾಧೀನತೆ ಹಕ್ಕು, ಜೀವನಾಂಶದ ಹಕ್ಕು, ದಾರಿ ಹಕ್ಕು, ಈ ಮೇಲ್ಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯಗಳಲ್ಲಿ ವ್ಯಾಜ್ಯಗಳು ನಡೆಯುತ್ತಿರುವ ಅಥವಾ ಈ ಮೇಲ್ಕಂಡ ವಿಷಯಗಳಿಗೆ ಸಂಬಂಧಿ ಯಾರಿಗೆ ಆಗಲಿ ಯಾವುದೇ ರೀತಿಯ ಹಕ್ಕು ಬಾಧ್ಯತೆಯ ಇರುವ ಬಗ್ಗೆ ಈ ಕೆಳಕಂಡ ನನ್ನ ಕಛೇರಿಗೆ ಈ ನೋಟಿಸ್ ಪ್ರಕಟಣೆಯಾದ 10 ದಿನಗಳೊಳಗಾಗಿ ಲಿಖಿತ ಮೂಲಕ ತಿಳಿಸತಕ್ಕದ್ದು, ಒಂದು ವೇಳೆ ಯಾವುದೇ ವ್ಯಕ್ತಿ ಲಿಖಿತ ಮೂಲಕ ತಿಳಿಸದ ಪಕ್ಷದಲ್ಲಿ, ಈ ಮೇಲ್ಕಂಡ ಕ್ರಯದ ವ್ಯವಹಾರ ಷೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ಸಾರ್ವಜನಿಕ ವ್ಯಕ್ತಿಗೆ ಯಾವುದೇ ರೀತಿ ಹಕ್ಕು ಹಿತಾಸಕ್ತಿ ಇಲ್ಲವೆಂದು ಮತ್ತು ಒಂದು ವೇಳೆ ಆ ರೀತಿ ಹಕ್ಕುಗಳು ಇದ್ದರೂ ಸಹ ಅದನ್ನು ತ್ಯಜಿಸಿರುತ್ತಾರೆಂದು ಬಾವಿಸತ್ತೇವೆ.

ಷೆಡ್ಯೂಲ್

ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕ್, ಜಾಲ ಹೋಬಳಿ, ಸೊಣ್ಣಪ್ಪನಹಳ್ಳಿ ಗ್ರಾಮದ ಸರ್ವೆ ನಂ.49 ವಿಸ್ತೀರ್ಣ 1–00 ಎಕರೆ ಜಮೀನಿಗೆ ಚೆಕ್ಕುಬಂದಿ: **ಪೂರ್ವಕ್ಕೆ:** ರಸ್ತೆ, **ಪಶ್ಚಿಮಕ್ಕೆ:** ದೊಡ್ಡಮುತ್ತಪ್ಪನ ಜಮೀನು, **ಉತ್ತರಕ್ಕೆ:** ರಸ್ತೆ, **ದಕ್ಷಿಣಕ್ಕೆ:** ಲಕ್ಷ್ಮಯ್ಯ ಮತ್ತು ಇತರರ ಜಮೀನು.

ಆನಂದ .ಹೆಚ್.ಸಿ, ವಕೀಲರು
ಅಭಯ ಲಕ್ಷ್ಮಿ ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ಶಾಂತಿನಗರ ದಕ್ಷಿಣ, ದೇವನಹಳ್ಳಿ.

ಯುವತಿ ಮೇಲೆ ಅತ್ಯಾಚಾರ • ಆ್ಯಪ್ ಮೂಲಕ ಪರಿಚಯವಾಗಿದ್ದ ಸ್ನೇಹಿತನಿಂದ ವಿಡಿಯೊ

ನೃತ್ಯ ಶಿಕ್ಷಕ ಸೇರಿ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಆ್ಯಂಡಿ ಜಾರ್ಜ್

ಸಂತೋಷ್

ಶಶಿ

ಬೆಂಗಳೂರು: ಯುವತಿಯೊಬ್ಬರ ಮೇಲೆ ಅತ್ಯಾಚಾರ ಎಸಗಿರುವ ಆರೋಪದಡಿ ನೃತ್ಯ ಶಿಕ್ಷಕ ಸೇರಿ ಮೂವರನ್ನು ಕೊಡಿಗೇಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ನೃತ್ಯ ಶಿಕ್ಷಕ ಆ್ಯಂಡಿ ಜಾರ್ಜ್ ಅಲಿಯಾಸ್ ಹಾಂಕ್ಲೆ ಹಾಗೂ ಸ್ನೇಹಿತರಾದ ಸಂತೋಷ್, ಶಶಿ ಬಂಧಿತರು. ಮೂವರು ಸೇರಿಕೊಂಡು ಯುವತಿ ಮೇಲೆ ಹಲವು ಬಾರಿ ಅತ್ಯಾಚಾರ ಎಸಗಿದ್ದಾರೆ. ಜುಲೈ 19ರಂದು ಯುವತಿ ನೀಡಿದ್ದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಮೂವರು ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ಪೊಲೀಸರು ಹೇಳಿದರು.

'ಆರೋಪಿ ಜಾರ್ಜ್, ಹಲವು ಶಾಲೆಗಳಿಗೆ ಆಗಾಗ ಹೋಗಿ ಮಕ್ಕಳಿಗೆ ನೃತ್ಯ ಹೇಳಿಕೊಡುತ್ತಿದ್ದ. ಇತರೆ ಆರೋಪಿಗಳು, ಸಣ್ಣ-ಪುಟ್ಟ ಕೆಲಸ ಮಾಡಿಕೊಂಡಿದ್ದಾರೆ. ಮೂವರು ಹಲವು ವರ್ಷಗಳ ಸ್ನೇಹಿತರಾಗಿದ್ದು, ಆಗಾಗ ಒಟ್ಟಿಗೆ ಸುತ್ತಾಡುತ್ತಿದ್ದರು' ಎಂದು ತಿಳಿಸಿದರು.

ಆ್ಯಪ್ ಸ್ನೇಹ: 'ಸಂತ್ರಸ್ತ ಯುವತಿ, ಸಾಮಾಜಿಕ ಮಾಧ್ಯಮದ ಆ್ಯಪ್‌ವೊಂದರಲ್ಲಿ ಖಾತೆ ತೆರೆದಿದ್ದರು. ನಾಲ್ಕು ವರ್ಷಗಳ ಹಿಂದೆ ಯುವತಿಗೆ ಆ್ಯಪ್ ಮೂಲಕ ಆರೋಪಿ ಜಾರ್ಜ್ ಪರಿಚಯವಾಗಿತ್ತು. ಇದಾದ ನಂತರ, ಇಬ್ಬರೂ ಪರಸ್ಪರ ಸಂದೇಶ ಕಳುಹಿಸಲಾರಂಭಿಸಿದ್ದರು' ಎಂದು ಪೊಲೀಸರು ಹೇಳಿದರು.

'ಯುವತಿ ಹಾಗೂ ಆರೋಪಿ, ಮೊಬೈಲ್ ನಂಬರ್ ಸಹ ಬದಲಾಯಿಸಿಕೊಂಡಿದ್ದರು. ಆಗಾಗ ಭೇಟಿಯಾಗುತ್ತಿದ್ದ ಇಬ್ಬರು, ಪರಸ್ಪರ ಪ್ರೀತಿಸಲಾರಂಭಿಸಿದ್ದರು. ಇದೇ ವೇಳೆಯೇ ಆರೋಪಿ, ಯುವತಿ ಮೇಲೆ ಹಲವು ಬಾರಿ ಅತ್ಯಾಚಾರ ಎಸಗಿದ್ದ. ಅದರ ವಿಡಿಯೊ ಚಿತ್ರೀಕರಿಸಿಟ್ಟುಕೊಂಡಿದ್ದ' ಎಂದು ತಿಳಿಸಿದರು.

ವಿಡಿಯೊ ತೋರಿಸಿ ಅತ್ಯಾಚಾರ: 'ವರ್ಷದ ಹಿಂದೆಯಷ್ಟೇ ಆರೋಪಿ ಯುವತಿಗೆ ವಿಪರೀತ ಕಿರುಕುಳ ನೀಡಲಾರಂಭಿಸಿದ್ದ. ಬೇಸತ್ತ ಯುವತಿ, ಆರೋಪಿ ಜೊತೆ ಮಾತನಾಡುವುದನ್ನು ಬಿಟ್ಟು ದೂರವಾಗಿದ್ದರು' ಎಂದು ಪೊಲೀಸರು ಹೇಳಿದರು.

'ಯುವತಿ ಹಿಂದೆ ಬಿದ್ದಿದ್ದ ಆರೋಪಿ, 'ನನ್ನ ಜೊತೆ ಲೈಂಗಿಕವಾಗಿ ಸಹಕರಿಸಬೇಕು. ಇಲ್ಲದಿದ್ದರೆ, ಖಾಸಗಿ ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುತ್ತೇನೆ' ಎಂಬುದಾಗಿ ಬೆದರಿಸಿದ್ದ. ಮರ್ಯಾದೆಗೆ ಹೆದರಿದ್ದ ಯುವತಿ, ಆರೋಪಿ ಹೇಳಿದ ಸ್ಥಳಕ್ಕೆ ಹೋಗುತ್ತಿದ್ದರು. ಅದೇ ಸಂದರ್ಭದಲ್ಲಿ ಆರೋಪಿ ಅತ್ಯಾಚಾರ ಎಸಗಿದ್ದ' ಎಂದು ತಿಳಿಸಿದರು.

ಸ್ನೇಹಿತರಿಂದಲೂ ಅತ್ಯಾಚಾರ: 'ಆರೋಪಿ ಜಾರ್ಜ್ ಬಳಿಯ ವಿಡಿಯೊಗಳನ್ನು ಸ್ನೇಹಿತರಾದ ಸಂತೋಷ್ ಹಾಗೂ ಶಶಿ ಪಡೆದುಕೊಂಡಿದ್ದರು. ಅದೇ ವಿಡಿಯೊಗಳನ್ನು ಯುವತಿ ಮೊಬೈಲ್‌ಗೆ ಕಳುಹಿಸಿದ್ದ ಅವರಿಬ್ಬರು, 'ನಾವು ಕರೆದ ಕಡೆ ಬರಬೇಕು. ಇಲ್ಲದಿದ್ದರೆ, ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಡುತ್ತೇವೆ' ಎಂಬುದಾಗಿ ಬೆದರಿಸಿದ್ದರು' ಎಂದು ಪೊಲೀಸರು ಹೇಳಿದರು.

'ಹೆದರಿದ್ದ ಯುವತಿ, ಇಬ್ಬರು ಆರೋಪಿಗಳು ಹೇಳಿದ ಸ್ಥಳಕ್ಕೆ ಹೋಗಿದ್ದರು. ಅದೇ ಸಂದರ್ಭದಲ್ಲಿ ಆರೋಪಿಗಳು, ಯುವತಿ ಮೇಲೆ ಅತ್ಯಾಚಾರ ಎಸಗಿದ್ದರು. ಮೂವರು ಆರೋಪಿಗಳು, ಪದೇ ಪದೇ ಯುವತಿಗೆ ಕರೆ ಮಾಡಿ ತಾವು ಹೇಳಿದ ಸ್ಥಳಕ್ಕೆ ಬರುವಂತೆ ಒತ್ತಾಯಿಸುತ್ತಿದ್ದರು. ಬೇಸತ್ತ ಯುವತಿ, ಪೋಷಕರಿಗೆ ವಿಷಯ ತಿಳಿಸಿದ್ದರು. ನಂತರವೇ ಠಾಣೆಗೆ ಬಂದು ದೂರು ನೀಡಿದ್ದರು' ಎಂದು ತಿಳಿಸಿದರು.

'ಆರೋಪಿಗಳ ಮೊಬೈಲ್, ಲ್ಯಾಪ್‌ಟಾಪ್ ಜಪ್ತಿ ಮಾಡಲಾಗಿದೆ. ಸಾಕಷ್ಟು ವಿಡಿಯೊಗಳು ಸಿಕ್ಕಿವೆ. ಆರೋಪಿಗಳು ಕೆಲ ಸಾಮಾಜಿಕ ಮಾಧ್ಯಮಗಳಲ್ಲಿ ವಿಡಿಯೊ ಅಪ್‌ಲೋಡ್ ಮಾಡಿದ್ದು, ಖಾತೆಗಳನ್ನು ನಿಷ್ಕ್ರಿಯಗೊಳಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಪತ್ನಿ ಜೊತೆ ಮಾತು: ಪ್ರಶ್ನಿಸಿದ್ದಕ್ಕೆ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಜಾಲ ಠಾಣೆ ವ್ಯಾಪ್ತಿಯಲ್ಲಿ ಸಂದೀಪ್‌ಕುಮಾರ್ ಅವರನ್ನು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿರುವ ಆರೋಪಿ ಶುಭೋದ್ ಮಂಡಲ್‌ನನ್ನು ಪೊಲೀಸರು ಬಂಧಿಸಿದ್ದಾರೆ.

'ಸಂದೀಪ್‌ಕುಮಾರ್ ಹಾಗೂ ಶುಭೋದ್ ಇಬ್ಬರೂ ಬಿಹಾರದವರು. ಸಂಬಂಧಿಕರಾಗಿದ್ದ ಇಬ್ಬರೂ ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಚಿಕ್ಕಜಾಲ ಬಳಿ ಒಂದೇ ಕೊಠಡಿಯಲ್ಲಿ ಉಳಿದುಕೊಂಡಿದ್ದರು. ಜುಲೈ 28ರಂದು ರಾತ್ರಿ ಇವರಿಬ್ಬರ ನಡುವೆ ಜಗಳ ನಡೆದಿತ್ತು. ಸಂದೀಪ್ ಅವರನ್ನು ಕೊಂದು ಪರಾರಿಯಾಗಿದ್ದ ಶುಭೋದ್‌ನನ್ನು ಇದೀಗ ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿ ಶುಭೋದ್, ವರ್ಷದ ಹಿಂದೆಯಷ್ಟೇ ಬೆಂಗಳೂರಿಗೆ ಬಂದಿದ್ದ. ನಾಲ್ಕು ತಿಂಗಳ ಹಿಂದೆಯಷ್ಟೇ ಸಂಬಂಧಿ ಸಂದೀಪ್‌ನನ್ನು ಸಹ ಕರೆಸಿಕೊಂಡಿದ್ದ. ಸಂದೀಪ್ ಅವರಿಗೆ ಮದುವೆಯಾಗಿದ್ದು, ಪತ್ನಿ ಬಿಹಾರದಲ್ಲಿದ್ದಾರೆ. ಆಗಾಗ ಕರೆ ಮಾಡಿ ಮಾತನಾಡುತ್ತಿದ್ದರು.'

'ಶುಭೋದ್, ಸಂದೀಪ್ ಪತ್ನಿಗೆ ಕರೆ ಮಾಡಿ, ಹೆಚ್ಚು ಸಲುಗೆಯಿಂದ ಮಾತನಾಡಲಾರಂಭಿಸಿದ್ದ. ಇದು ಗೊತ್ತಾಗುತ್ತಿದ್ದಂತೆ ಸಂದೀಪ್, ಜಗಳ ತೆಗೆದಿದ್ದರು. ಪತ್ನಿ ಜೊತೆ ಮಾತನಾಡದಂತೆ ತಾಕೀತು ಮಾಡಿದ್ದರು. 'ಜುಲೈ 28ರಂದು ರಾತ್ರಿ ಇಬ್ಬರೂ ಮದ್ಯ ಕುಡಿದಿದ್ದರು. ಇದೇ ವೇಳೆ ಶುಭೋದ್, ಸಂದೀಪ್ ಪತ್ನಿಗೆ ಕರೆ ಮಾಡಿ ಮಾತನಾಡಲಾರಂಭಿಸಿದ್ದ. ಇದನ್ನು ಪ್ರಶ್ನಿಸಿದ್ದ ಸಂದೀಪ್, ಶುಭೋದ್ ಜೊತೆ ಜಗಳ ತೆಗೆದಿದ್ದ. ಮದ್ಯದ ಅಮಲಿನಲ್ಲಿದ್ದ ಶುಭೋದ್, ಸಂದೀಪ್ ಅವರಿಗೆ ಆಯುಧದಿಂದ ಹೊಡೆದು ಪರಾರಿಯಾಗಿದ್ದ ಎಂದು ಮೂಲಗಳು ಹೇಳಿವೆ. 'ತೀವ್ರ ರಕ್ತಸ್ರಾವವಾದರೂ ಸಂದೀಪ್ ಆಸ್ಪತ್ರೆಗೆ ಹೋಗಿರಲಿಲ್ಲ. ಮರುದಿನ ಸ್ನೇಹಿತರು ಮನೆ ಬಳಿ ಬಂದಾಗ, ಸಂದೀಪ್ ಮೃತಪಟ್ಟಿದ್ದು ಗೊತ್ತಾಗಿತ್ತು. ಬಳಿಕ ಠಾಣೆಗೆ ಮಾಹಿತಿ ನೀಡಿದ್ದರು' ಎಂದು ಮೂಲಗಳು ತಿಳಿಸಿವೆ.

ಬಾಲಕಿ ಜೊತೆ ಮಾತನಾಡಿದ್ದಕ್ಕೆ ಹಲ್ಲೆ

ಬೆಂಗಳೂರು: ಶಾಲೆಯೊಂದರಲ್ಲಿ ಬಾಲಕಿ ಜೊತೆ ಮಾತನಾಡಿದನೆಂಬ ಕಾರಣಕ್ಕೆ 10ನೇ ತರಗತಿ ವಿದ್ಯಾರ್ಥಿ ಮೇಲೆ ಹಲ್ಲೆ ಮಾಡಲಾಗಿದ್ದು, ಕೃತ್ಯ ಎಸಗಿರುವ ಸಹಪಾಠಿ ವಿರುದ್ಧ ಪ್ರಕರಣ ದಾಖಲಾಗಿದೆ.

'ಉತ್ತರ ವಿಭಾಗದ ಠಾಣೆಯೊಂದರ ವ್ಯಾಪ್ತಿಯ ಶಾಲೆಯಲ್ಲಿ ನಡೆದಿರುವ ಘಟನೆ ಸಂಬಂಧ ಬಾಲಕನ ತಾಯಿ ದೂರು ನೀಡಿದ್ದಾರೆ. ಪ್ರಕರಣ ದಾಖಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ. 'ಸಂತ್ರಸ್ತ ವಿದ್ಯಾರ್ಥಿ, ನೋಟ್ಸ್ ಪಡೆಯುವ ಉದ್ದೇಶದಿಂದ ಬಾಲಕಿ ಜೊತೆ ಮಾತನಾಡುತ್ತಿದ್ದ. ಅದನ್ನು ನೋಡಿದ್ದ ಸಹಪಾಠಿ, 'ಆಕೆ ಜೊತೆ ಏಕೆ ಮಾತನಾಡುತ್ತಿದ್ದಿಯಾ?' ಎಂದು ಜಗಳ ತೆಗೆದಿದ್ದ. ಮಧ್ಯಪ್ರವೇಶಿಸಿದ್ದ ಶಿಕ್ಷಕರು, ಜಗಳ ಬಿಡಿಸಿ ಇಬ್ಬರನ್ನೂ ಸ್ಥಳದಿಂದ ಕಳುಹಿಸಿದ್ದರು. ಶಾಲೆಯಿಂದ ಮನೆಗೆ ಹೋಗುವ ವೇಳೆ ಬಾಲಕನನ್ನು ಅಡ್ಡಗಟ್ಟಿದ್ದ ಸ್ನೇಹಿತ, ಹಲ್ಲೆ ಮಾಡಿದ್ದ' ಎಂದು ಮೂಲಗಳು ತಿಳಿಸಿವೆ.

ಹನಿಟ್ರ್ಯಾಪ್: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಅಬ್ದುಲ್ ಖಾದರ್

ಯಾಸೀನ್


ಶರಣಪ್ರಕಾಶ್

ಬೆಂಗಳೂರು: ಟೆಲಿಗ್ರಾಮ್ ಆ್ಯಪ್ ಮೂಲಕ ಯುವಕರನ್ನು ಪರಿಚಯ ಮಾಡಿಕೊಂಡು ಹನಿಟ್ರ್ಯಾಪ್ ಜಾಲಕ್ಕೆ ಸಿಲುಕಿಸಿ ಹಣ ಸುಲಿಗೆ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಪುಟ್ಟೇನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಅಬ್ದುಲ್ ಖಾದರ್, ಯಾಸಿನ್ ಹಾಗೂ ಶರಣ ಪ್ರಕಾಶ್ ಬಂಧಿತರು. ಇವರ ಜೊತೆ ಕೃತ್ಯದಲ್ಲಿ ಭಾಗಿಯಾಗುತ್ತಿದ್ದ ಇಬ್ಬರು ಯುವತಿಯರು ತಲೆಮರೆಸಿಕೊಂಡಿದ್ದಾರೆ. ಅವರ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಆ್ಯಪ್ ಮೂಲಕ ಸಂಪರ್ಕ: 'ಇಬ್ಬರು ಯುವತಿಯರು, ಟೆಲಿಗ್ರಾಂ ಆ್ಯಪ್ ಮೂಲಕ ಯುವಕರನ್ನು ಪರಿಚಯ ಮಾಡಿಕೊಳ್ಳುತ್ತಿದ್ದರು. ನಂತರ, ಸಲುಗೆಯಿಂದ ಮಾತನಾಡುತ್ತಿದ್ದರು. ದಿನ ಕಳೆದಂತೆ ಯುವಕರು, ಯುವತಿಯರನ್ನು ಹೆಚ್ಚು ನಂಬುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

'ಮನೆಯಲ್ಲಿ ಯಾರು ಇಲ್ಲ. ಬಾ' ಎಂದು ಹೇಳುತ್ತಿದ್ದ ಯುವತಿಯರು, ಯುವಕರಿಗೆ ಲೈಂಗಿಕ ಆಸೆ ತೋರಿಸಿ ಪ್ರಚೋದಿಸುತ್ತಿದ್ದರು. ನಂತರ, ಜೆ.ಪಿ. ನಗರ ಬಳಿಯ ವಿನಾಯಕ್ ನಗರದಲ್ಲಿರುವ ತಮ್ಮ ಮನೆಗೆ ಯುವಕರನ್ನು ಕರೆಸಿಕೊಳ್ಳುತ್ತಿದ್ದರು' ಎಂದು ಹೇಳಿದರು.

ದಾಳಿ ಮಾಡಿ, ಸುಲಿಗೆ: 'ಯುವಕರು ಮನೆಗೆ ಬರುತ್ತಿದ್ದಂತೆ ಸ್ವಾಗತಿಸುತ್ತಿದ್ದ ಯುವತಿಯರು, ಕೊಠಡಿಗೆ ಕರೆದೊಯ್ಯುತ್ತಿದ್ದರು. ಯುವಕರನ್ನು ಬೆತ್ತಲೆಗೊಳಿಸುತ್ತಿದ್ದರು. ಅದೇ ಸಂದರ್ಭದಲ್ಲಿ ಆರೋಪಿಗಳು, ಮನೆಯೊಳಗೆ ನುಗ್ಗುತ್ತಿದ್ದರು. ವಿಡಿಯೊ ಚಿತ್ರೀಕರಿಸಿಕೊಳ್ಳುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

'ಯುವಕರ ಮೊಬೈಲ್ ಕಸಿದುಕೊಳ್ಳುತ್ತಿದ್ದ ಆರೋಪಿಗಳು, ಪೋಷಕರು ಹಾಗೂ ಸ್ನೇಹಿತರ ಸಂಪರ್ಕ ಸಂಖ್ಯೆಗಳನ್ನು ತಿಳಿದುಕೊಳ್ಳುತ್ತಿದ್ದರು. 'ಮಹಿಳೆ ಜೊತೆ ಅಕ್ರಮ ಸಂಬಂಧ ಹೊಂದಿದೆಯಾ? ಬಟ್ಟೆ ಬಿಚ್ಚಿ ಮೆರವಣಿಗೆ ಮಾಡುತ್ತೇನೆ. ಅಕ್ರಮ ಸಂಬಂಧ ವಿಷಯವನ್ನು ಪೋಷಕರು ಹಾಗೂ ಸ್ನೇಹಿತರಿಗೆ ತಿಳಿಸುತ್ತೇವೆ. ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುತ್ತೇವೆ' ಎಂಬುದಾಗಿ ಬೆದರಿಸುತ್ತಿದ್ದರು.'

'ಮನೆಯಿಂದ ಬಿಟ್ಟು ಕಳುಹಿಸಬೇಕಾದರೆ ಹಣ ನೀಡುವಂತೆ ಆರೋಪಿಗಳು ಒತ್ತಾಯಿಸುತ್ತಿದ್ದರು. ಮರ್ಯಾದೆಗೆ ಹೆದರಿ ಯುವಕರು, ಹಣ ನೀಡಿ ಹೋಗುತ್ತಿದ್ದರು' ಎಂದು ಹೇಳಿದರು.

'ತಿಂಗಳ ಹಿಂದೆಯಷ್ಟೇ ಆರೋಪಿಗಳ ಹನಿಟ್ರ್ಯಾಪ್ ಜಾಲಕ್ಕೆ ಸಿಲುಕಿದ್ದ ವೈಟ್‌ಫೀಲ್ಡ್ ನಿವಾಸಿಯೊಬ್ಬರು ₹ 50 ಸಾವಿರ ನೀಡಿದ್ದರು. ಇದಾದ ನಂತರವೂ ಆರೋಪಿಗಳು ಹಣಕ್ಕಾಗಿ ಪೀಡಿಸುತ್ತಿದ್ದರು. ನೊಂದ ಯುವಕ, ಠಾಣೆಗೆ ದೂರು ನೀಡಿದ್ದರು. ತನಿಖೆ ಕೈಗೊಂಡು ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ' ಎಂದು ತಿಳಿಸಿದರು.

₹ 30 ಲಕ್ಷ ಸುಲಿಗೆ: 'ಆರೋಪಿಗಳು ಹಲವು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದರು. ಹಲವು ಯುವಕರನ್ನು ಬೆದರಿಸಿ ಇದುವರೆಗೂ ₹ 30 ಲಕ್ಷ ಸುಲಿಗೆ ಮಾಡಿರುವುದು ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

ಸಹಕೈದಿ ಎದುರು 'ಕಳ್ಳತನ' ಗುಟ್ಟು: ಸಿಕ್ಕಿಬಿದ್ದ ಎಂಜಿನಿಯರ್

ಮಾಮನಿ

ಬೆಂಗಳೂರು: ನಗರದ ಹಲವು ಮನೆಗಳಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಮಾಮನಿ ಅಲಿಯಾಸ್ ದೀನಾನನ್ನು ಬೈಯಪ್ಪನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ತಮಿಳುನಾಡಿನ ಮಾಮನಿ, ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಷನ್ ವಿಭಾಗದಲ್ಲಿ ಎಂಜಿನಿಯರಿಂಗ್ ಪದವಿ ಪಡೆದಿದ್ದ. ಮೊಬೈಲ್ ತಯಾರಿಕೆ ಕಂಪನಿ ಯೊಂದರಲ್ಲಿ ಎಂಜಿನಿಯರ್ ಆಗಿ ಕೆಲ ವರ್ಷ ಕೆಲಸ ಮಾಡಿದ್ದ. ದುರ್ವರ್ತನೆ ತೋರಿದ್ದರಿಂದ ಈತನನ್ನು ಕೆಲಸದಿಂದ ತೆಗೆಯಲಾಗಿತ್ತು. ನಂತರ, ಈತ ಕಳ್ಳತನ ಮಾಡಲು ಆರಂಭಿಸಿದ್ದ' ಎಂದು ಪೊಲೀಸರು ಹೇಳಿದರು.

'ಬೈಯಪ್ಪನಹಳ್ಳಿ ಠಾಣೆ ವ್ಯಾಪ್ತಿಯ ಎರಡು ಮನೆಗಳಲ್ಲಿ ಕಳ್ಳತನ ನಡೆದಿತ್ತು. ಈ ಸಂಬಂಧ ಪ್ರಕರಣ ದಾಖಲಾಗಿತ್ತು. ಕೃತ್ಯ ಎಸಗಿದ್ದ ಮಾಮನಿ ಇದೀಗ ಸಿಕ್ಕಿಬಿದ್ದಿದ್ದಾನೆ. ಈತನಿಂದ ₹ 29 ಲಕ್ಷ ಮೌಲ್ಯದ 512 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

'ಕೆಲಸ ಹೋದ ನಂತರ ಆರೋಪಿ ಮಾಮನಿ ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದ. ತಮಿಳುನಾಡಿನಿಂದ ಆಗಾಗ ನಗರಕ್ಕೆ ಬರುತ್ತಿದ್ದ ಈತ, ಅಂಗಳದಲ್ಲಿ ರಂಗೋಲಿ ಹಾಕಿರದ ಹಾಗೂ ಬೀಗ ಹಾಕಿರುತ್ತಿದ್ದ ಮನೆಗಳನ್ನು ಗುರುತಿಸಿ ಕಳ್ಳತನ ಮಾಡುತ್ತಿದ್ದ' 'ಎಚ್‌ಎಸ್‌ಆರ್ ಲೇಔಟ್ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ 2020ರಲ್ಲಿ ಕಳ್ಳತನ ಮಾಡಿದ್ದ. ಈ ಪ್ರಕರಣದಲ್ಲಿ ಈತನನ್ನು ಬಂಧಿಸಿದ್ದ ಪೊಲೀಸರು, ಜೈಲಿಗೆ ಕಳುಹಿಸಿದ್ದರು' ಎಂದು ಹೇಳಿದರು.

ಕೊಲೆ ಆರೋಪಿ ಬಾಯ್ಬಿಟ್ಟ ರಹಸ್ಯ: 'ಎರಡು ವರ್ಷಗಳಿಂದ ಜೈಲಿನಲ್ಲಿರುವ ಮಾಮನಿ, ಸಹ ಕೈದಿಯೊಬ್ಬನ ಜೊತೆ ಸ್ನೇಹ ಬೆಳೆಸಿದ್ದ. 'ನಾನು ಬೆಂಗಳೂರಿನ ಹಲವೆಡೆ ಕಳ್ಳತನ ಮಾಡಿದ್ದೇವೆ. ಬೈಯಪ್ಪನಹಳ್ಳಿಯಲ್ಲೂ ಎರಡು ಮನೆಗಳಲ್ಲಿ ಚಿನ್ನಾಭರಣ ಕದ್ದಿದ್ದೇನೆ' ಎಂಬುದಾಗಿ ಸಹಕೈದಿ ಎದುರು ಹೇಳಿದ್ದ' ಎಂದು ಪೊಲೀಸರು ತಿಳಿಸಿದರು.

'ಸಹಕೈದಿ ವಿರುದ್ಧ ಬೈಯಪ್ಪನಹಳ್ಳಿ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿತ್ತು. ಸಹಕೈದಿಯನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗಿತ್ತು. ಅದೇ ಸಂದರ್ಭದಲ್ಲಿ ಆತ, ಮಾಮನಿ ಕಳ್ಳತನದ ರಹಸ್ಯವನ್ನು ಬಾಯ್ಬಿಟ್ಟಿದ್ದ. ಬಳಿಕ, ಬಾಡಿ ವಾರೆಂಟ್ ಮೇಲೆ ಮಾಮನಿಯನ್ನು ಕಸ್ಟಡಿಗೆ ಪಡೆದು ವಿಚಾರಿಸಿದಾಗ ತಪ್ಪೊಪ್ಪಿಕೊಂಡ' ಎಂದರು. 'ಕದ್ದು ಚಿನ್ನಾಭರಣಗಳನ್ನು ಆರೋಪಿ, ಸ್ನೇಹಿತರಿಗೆ ನೀಡಿದ್ದ. ಕೆಲ ಆಭರಣಗಳನ್ನು ಗಿರವಿ ಇರಿಸಿದ್ದ. ಎಲ್ಲವನ್ನೂ ಇದೀಗ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿಗಳು

ಕೊಲೆ: ಆರೋಪಿ ಬಂಧನ

ಬೆಂಗಳೂರು: 'ತಾಯಿ ಜೊತೆ ಸಲುಗೆಯಿಂದ ಮಾತನಾಡುತ್ತಿದ್ದರು' ಎಂಬ ಕಾರಣಕ್ಕೆ ಅಡುಗೆ ತಯಾರಕ ರವಿ ಭಂಡಾರಿ (44) ಅವರನ್ನು ಕೊಲೆ ಮಾಡಿದ್ದ ಆರೋಪಿ ರಾಹುಲ್‌ನನ್ನು (24) ಮಾಗಡಿ ರಸ್ತೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಬಸವೇಶ್ವರನಗರದ ಕೆಎಚ್‌ಬಿ ಕಾಲೊನಿಯಲ್ಲಿರುವ ಪೇಯಿಂಗ್ ಗೆಸ್ಟ್ ಕಟ್ಟಡವೊಂದರಲ್ಲಿ (ಪಿ.ಜಿ) ಅಡುಗೆ ಕೆಲಸ ಮಾಡುತ್ತಿದ್ದ ರವಿ ಅವರನ್ನು ಜುಲೈ 28ರಂದು ಕೊಲೆ ಮಾಡಲಾಗಿತ್ತು. ಕೃತ್ಯ ಎಸಗಿ ಪರಾರಿಯಾಗಿದ್ದ ರಾಹುಲ್‌ನನ್ನು ಕಲಬುರಗಿಯಲ್ಲಿ ಬಂಧಿಸಿ ನಗರಕ್ಕೆ ಕರೆತರಲಾಗಿದೆ' ಎಂದು ಪೊಲೀಸರು ಹೇಳಿದರು.

'ಕೊಲೆ ಬಗ್ಗೆ ಆರೋಪಿ ರಾಹುಲ್ ತಪ್ಪೊಪ್ಪಿಕೊಂಡಿದ್ದಾನೆ. ಈತ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದು ತಿಳಿಸಿದರು.

ರ್‍ಯಾಪಿಡೊ ಸವಾರನಾಗಿ ಕೆಲಸ: 'ಕಲಬುರಗಿಯ ರಾಹುಲ್, ಎಸ್ಸೆಸ್ಸೆಲ್ಸಿವರೆಗೂ ಓದಿದ್ದ. ಎರಡು ವರ್ಷಗಳ ಹಿಂದೆಯಷ್ಟೇ ತಾಯಿ ಜೊತೆ ಬೆಂಗಳೂರಿಗೆ ಬಂದಿದ್ದ. ಪೇಯಿಂಗ್ ಗೆಸ್ಟ್ ಕಟ್ಟಡವೊಂದರಲ್ಲಿ ತಾಯಿ–ಮಗ ಇಬ್ಬರೂ ಕೆಲಸ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

ವ್ಯಾಪಾರಿ ಸುಲಿಗೆ: ಯೂಟ್ಯೂಬ್ ಚಾನೆಲ್‌ನ ಮತ್ತಿಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಆತ್ಮಾನಂದ್

ಆನಂದ್

ಕೇಶವಮೂರ್ತಿ

ಶ್ರೀನಿವಾಸ್

ಬೆಂಗಳೂರು: ವಿಡಿಯೊ ಸುದ್ದಿ ಬಿತ್ತರಿಸಿ ಅಂಗಡಿ ಮುಚ್ಚಿಸುವುದಾಗಿ ಬೆದರಿಸಿ ಹಣ ಸುಲಿಗೆ ಮಾಡಿದ್ದ ಆರೋಪದಡಿ 'ಎಕೆ ನ್ಯೂಸ್ ಕನ್ನಡ' ಯೂಟ್ಯೂಬ್ ಚಾನೆಲ್‌ನ ಮತ್ತಿಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಕೆ.ಆರ್. ಪುರ ನಿವಾಸಿ ಸಾದಿಕ್ ಖಾನ್ ನೀಡಿದ್ದ ದೂರು ಆಧರಿಸಿ ತನಿಖೆ ಕೈಗೊಂಡಿದ್ದ ಸಿಸಿಬಿ ಪೊಲೀಸರು, ಚಾನೆಲ್‌ನ ಆತ್ಮಾನಂದ್ ಹಾಗೂ ಆನಂದ್ ಅಲಿಯಾಸ್ ಫಿಗರ್‌ನನ್ನು ಬಂಧಿಸಿದ್ದರು. ಇದೀಗ, ಚಾನೆಲ್‌ನ ಶ್ರೀನಿವಾಸ್ ಅಲಿಯಾಸ್ ರೇಷ್ಮೆನಾಡು ಹಾಗೂ ಕೇಶವಮೂರ್ತಿ ಅವರನ್ನು ಸೆರೆ ಹಿಡಿದಿದ್ದಾರೆ.

'ಸುದ್ದಿ ವಾಹಿನಿ ಪ್ರತಿನಿಧಿಗಳು ಎಂದು ಹೇಳಿಕೊಂಡು ಸುತ್ತಾಡುತ್ತಿದ್ದ ಆರೋಪಿಗಳು, ಮಾಂಸ ಮಾರಾಟ ವ್ಯಾಪಾರಿ ಸಾದಿಕ್ ಅವರನ್ನು ಬೆದರಿಸಿ ₹ 3 ಲಕ್ಷ ಸುಲಿಗೆ ಮಾಡಿದ್ದರು. ದೂರು ದಾಖಲಾಗುತ್ತಿದ್ದಂತೆ ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ. ಕಾರು, ಮೊಬೈಲ್ ಹಾಗೂ ₹ 13 ಸಾವಿರ ನಗದು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಅಕ್ರಮ ಚಟುವಟಿಕೆ ನಡೆಯುತ್ತಿದ್ದ ಸ್ಥಳಗಳಿಗೆ ಹೋಗುತ್ತಿದ್ದ ಆರೋಪಿಗಳು, ವಿಡಿಯೊ ಚಿತ್ರೀಕರಣ ಮಾಡುತ್ತಿದ್ದರು. ಪೊಲೀಸರಿಂದ ಗೋದಾಮು ಹಾಗೂ ಮಳಿಗೆ ಮೇಲೆ ದಾಳಿ ಮಾಡಿಸುವುದಾಗಿ ವ್ಯಾಪಾರಿಗಳನ್ನು ಬೆದರಿಸುತ್ತಿದ್ದರು. ನಂತರ, ಹಣ ಸುಲಿಗೆ ಮಾಡುತ್ತಿದ್ದರು. ಪ್ರತಿ ತಿಂಗಳು ₹ 20 ಸಾವಿರದಿಂದ ₹ 25 ಸಾವಿರ ನೀಡುವಂತೆಯೂ ಒತ್ತಾಯಿಸುತ್ತಿದ್ದರು. ಕಿರುಕುಳದಿಂದ ಬೇಸತ್ತ ಸಾದಿಕ್ ಖಾನ್, ಠಾಣೆಗೆ ಮೆಟ್ಟಿಲೇರಿದ್ದರು' ಎಂದು ತಿಳಿಸಿವೆ.

ವಿದ್ಯುತ್ ಬಿಲ್ ನೆಪ: ₹ 2 ಲಕ್ಷ ವಂಚನೆ

ಬೆಂಗಳೂರು: ವಿದ್ಯುತ್ ಬಿಲ್ ಪಾವತಿ ನೆಪದಲ್ಲಿ ವ್ಯಕ್ತಿಯೊಬ್ಬರ ಮೊಬೈಲ್‌ಗೆ ಲಿಂಕ್ ಕಳುಹಿಸಿ ಬ್ಯಾಂಕ್ ಖಾತೆಯಿಂದ ₹ 2 ಲಕ್ಷ ವರ್ಗಾಯಿಸಿಕೊಂಡು ವಂಚಿಸಲಾಗಿದ್ದು, ಈ ಸಂಬಂಧ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ವಿಠಲ್ ಮಲ್ಯ ರಸ್ತೆಯ ನಿವಾಸಿಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಬೆಸ್ಕಾಂ ಸಿಬ್ಬಂದಿ ಹೆಸರಿನಲ್ಲಿ ಕರೆ ಮಾಡಿ ವಂಚಿಸಿರುವ ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರರಿಗೆ ಜುಲೈ 13ರಂದು ಕರೆ ಮಾಡಿದ್ದ ಆರೋಪಿ, 'ನಿಮ್ಮ ವಿದ್ಯುತ್ ಬಿಲ್ ಬಾಕಿ ಇದೆ. ಬೇಗನೇ ಪಾವತಿಸಿ. ಇಲ್ಲದಿದ್ದರೆ, ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುವುದು' ಎಂದಿದ್ದ. ಅದನ್ನು ನಂಬಿದ್ದ ದೂರುದಾರ, ಬಿಲ್ ಪಾವತಿಸಲು ಒಪ್ಪಿದ್ದರು. ಲಿಂಕ್ ಕಳುಹಿಸಿದ್ದ ಆರೋಪಿ, ಬಿಲ್ ಪಾವತಿಸುವಂತೆ ಸೂಚಿಸಿದ್ದ.' 'ಲಿಂಕ್ ತೆರೆದು ಮಾಹಿತಿ ಭರ್ತಿ ಮಾಡಿದ್ದ ದೂರುದಾರ, ಬಿಲ್ ತುಂಬಲು ಯತ್ನಿಸಿ ವಿಫಲವಾಗಿದ್ದರು. ಮತ್ತೊಂದು ಲಿಂಕ್ ಕಳುಹಿಸಿದ್ದ ಆರೋಪಿ, ಮುಂಗಡವಾಗಿ ₹ 10 ಪಾವತಿಸುವಂತೆ ಹೇಳಿದ್ದ. ಅದನ್ನೂ ನಂಬಿದ್ದ ದೂರುದಾರ, ಲಿಂಕ್ ತೆರೆದು ಹಣ ಪಾವತಿಸಿದ್ದರು. ಇದಾದ ನಂತರ ದೂರುದಾರರ ಖಾತೆಯಿಂದ ಹಂತ ಹಂತವಾಗಿ ₹ 2 ಲಕ್ಷ ಕಡಿತವಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಲಂಚ: ವೈದ್ಯ, ಸಿಬ್ಬಂದಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಡ ಮಹಿಳೆಯೊಬ್ಬರಿಗೆ ಸಿಸೇರಿಯನ್ ನಡೆಸಲು ಲಂಚ ಪಡೆದ ಆರೋಪದ ಮೇಲೆ ಯಲಹಂಕ ಸಾರ್ವಜನಿಕ ಆಸ್ಪತ್ರೆಯ ಪ್ರಸೂತಿ ತಜ್ಞ ಡಾ. ರಾಮಚಂದ್ರ ಮತ್ತು ವಾರ್ಡ್ ಬಾಯ್ (ಹೊರ ಗುತ್ತಿಗೆ ನೌಕರ) ವಾಹಿದ್ ವಿರುದ್ಧ ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಮಂಜುಳಾ ಅವರಿಗೆ ಸಿಸೇರಿಯನ್ ನಡೆಸಲು ರಾಮಚಂದ್ರ ₹15,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಜುಲೈ 15ರಂದು ಮಹಿಳೆಯ ಪತಿ ಮತ್ತು ಸಂಬಂಧಿಕರಿಂದ ₹10,000ವನ್ನು ವಾಹಿದ್ ಮೂಲಕ ಪಡೆಯಲಾಗಿತ್ತು. ಬಳಿಕ ಸಿಸೇರಿಯನ್ ನಡೆಸಲಾಗಿತ್ತು.

ಲಂಚಕ್ಕೆ ಬೇಡಿಕೆ ಇಟ್ಟಿರುವ ಕುರಿತು ಮಹಿಳೆಯ ಪತಿ ಮತ್ತು ಸಂಬಂಧಿಕರು ಲೋಕಾಯುಕ್ತರ ಗಮನಕ್ಕೆ ತಂದಿದ್ದರು. ಲೋಕಾಯುಕ್ತದ ಬೆಂಗಳೂರು ನಗರ ಘಟಕದ ಡಿವೈಎಸ್‌ಪಿ ಎಂ. ಪ್ರದೀಪ್ ಕುಮಾರ್ ನೇತೃತ್ವದ ತಂಡ ಆಸ್ಪತ್ರೆಗೆ ತೆರಳುವಷ್ಟರಲ್ಲಿ ಲಂಚದ ಹಣ ಪಡೆದುಕೊಂಡು, ಸಿಸೇರಿಯನ್ ಪೂರ್ಣಗೊಳಿಸಲಾಗಿತ್ತು. ವಾಹಿದ್ ಬಳಿಯಿಂದ ಹಣ ವಾಪಸ್ ಕೊಡಿಸಿದ್ದ ತನಿಖಾ ತಂಡ, ಈ ಕುರಿತು ವಾರ್ಡ್‌ಬಾಯ್ ಮತ್ತು ರಾಮಚಂದ್ರ ಮಧ್ಯದ ದೂರವಾಣಿ ಸಂಭಾಷಣೆಯನ್ನು ವಿಡಿಯೊ ರೆಕಾರ್ಡಿಂಗ್ ಮಾಡಿಕೊಂಡಿತ್ತು.

ಲಂಚ ಪಡೆಯುವಾಗಲೇ ಬಂಧನ ಕಾರ್ಯಾಚರಣೆ ನಡೆಸಲು ಸಾಧ್ಯವಾಗದ ಕಾರಣದಿಂದ ಆರಂಭಿಕ ಹಂತದಲ್ಲಿ ಲೋಕಾಯುಕ್ತ ಕಾಯ್ದೆಯಡಿ ಸ್ವಯಂಪ್ರೇರಿತ ದೂರು ದಾಖಲಿಸಿ, ವಿಚಾರಣೆ ಆರಂಭಿಸಲಾಗಿತ್ತು. ಕಾನೂನು ತಜ್ಞರ ಅಭಿಪ್ರಾಯ ಪಡೆದ ಬಳಿಕ ಲೋಕಾಯುಕ್ತದ ಬೆಂಗಳೂರು ನಗರ ಘಟಕದ ಪೊಲೀಸರು, ಜುಲೈ 25ರಂದು ಎಫ್‌ಐಆರ್ ದಾಖಲಿಸಿ, ತನಿಖೆ ಆರಂಭಿಸಿದ್ದಾರೆ.

ಪ್ರತಿಭಟನೆ ಕೇಂದ್ರ ಸರ್ಕಾರವು ಕುಕಿ ಬುಡಕಟ್ಟು ಜನಾಂಗದವರಿಗೆ ಪ್ರತ್ಯೇಕ ಆಡಳಿತ ನೀಡಬೇಕು. ಮಣಿಪುರದಲ್ಲಿ ಶಾಂತಿ ನೆಲೆಸಲು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಬೆಂಗಳೂರು ಯುಎನ್‌ಎಯು ಫೋರಂ ಸಂಘಟನೆಯ ಸದಸ್ಯರು ಮಂಗಳವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟಿಸಿದರು –ಪ್ರಜಾವಾಣಿ ಚಿತ್ರ

ಕ್ಯಾಂಟರ್ ಹರಿದು ಇಬ್ಬರು ಯುವಕರ ಸಾವು

ಆನೇಕಲ್: ಹೆಬ್ಬಗೋಡಿ ಪೊಲೀಸ್ ಠಾಣೆ ವ್ಯಾಪ್ತಿಯ ಬಯೋಕಾನ್ ಕಂಪನಿ ಮುಂಭಾಗ ಮಂಗಳವಾರ ಅಡ್ಡಾದಿಡ್ಡಿ ಚಲಿಸಿದ ಕ್ಯಾಂಟರ್ ರಸ್ತೆ ಬದಿ ನಡೆದು ಹೋಗುತ್ತಿದ್ದ ಇಬ್ಬರು ಯುವಕರ ಮೇಲೆ ಹರಿದಿದೆ. ಆ ಇಬ್ಬರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮೃತರನ್ನು ಬಿಹಾರದ ಆಶಿಕ್ (24) ಮತ್ತು ಆಂಧ್ರಪ್ರದೇಶದ ಮನೋಜ್ ಕುಮಾರ್(30) ಎಂದು ಗುರುತಿಸಲಾಗಿದೆ. ಕೆಲಸ ಹುಡುಕಿಕೊಂಡು ಹೆಬ್ಬಗೋಡಿಗೆ ಬಂದಿದ್ದ ಅವರು ರಸ್ತೆ ಬದಿ ನಡೆದು ಹೋಗುತ್ತಿದ್ದಾಗ ಕ್ಯಾಂಟರ್ ಯುವಕರ ಮೇಲೆ ಹರಿದಿದೆ.

ನಂತರ ಬ್ಯಾರಿಕೇಡ್‌ಗೆ ಡಿಕ್ಕಿ ಹೊಡೆದು ಮುಗುಚಿ ಬಿದ್ದಿದೆ. ಚಾಲಕ ಮದ್ಯದ ಅಮಲಿನಲ್ಲಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಚಾಲಕನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ

ಚಾಕುವಿನಿಂದ ಇರಿದು ಹತ್ಯೆ

ಆನೇಕಲ್: ಆನೇಕಲ್ ಪೊಲೀಸ್ ಠಾಣೆ ವ್ಯಾಪ್ತಿಯ ಮೆಣಸಿಗನಹಳ್ಳಿ ಹೇಮಂತ್ ಕುಮಾರ್(24) ಎಂಬ ಯುವಕನನ್ನು ದುಷ್ಕರ್ಮಿಗಳು ಸೋಮವಾರ ರಾತ್ರಿ ಚಾಕುವಿನಿಂದ ಇರಿದು ಹತ್ಯೆ ಮಾಡಿದ್ದಾರೆ. ಅತ್ತಿಬೆಲೆ ಹಾರ್ಡ್‌ವೇರ್ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಹೇಮಂತ್ ಕೆಲಸ ಮುಗಿಸಿಕೊಂಡು ರಾತ್ರಿ ಮನೆಗೆ ಹೋಗುತ್ತಿದ್ದಾಗ ಈ ಘಟನೆ ನಡೆದಿದೆ. ಕಾರಿನಲ್ಲಿ ಬಂದ ದುಷ್ಕರ್ಮಿಗಳು ಕೆಂಪು ದೊಮ್ಮಸಂದ್ರದ ಬಳಿ ಹೇಮಂತ್ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದ್ದಾರೆ. ಕೆಳಗೆ ಬಿದ್ದ ಹೇಮಂತ್ ಮೇಲೆ ಚಾಕುವಿನಿಂದ ಹಲ್ಲೆ ನಡೆಸಿದ್ದಾರೆ. ಕೂಗಾಟ ಕೇಳಿ ಸಮೀಪದಲ್ಲಿದ್ದ ಕೋಳಿ ಫಾರಂ ಸಿಬ್ಬಂದಿ ಹೊರ ಬರುತ್ತಿದ್ದಂತೆ ದುಷ್ಕರ್ಮಿಗಳು ಪರಾರಿಯಾಗಿದ್ದಾರೆ.

ಕಣ್ವ ಸೊಸೈಟಿ ವಂಚನೆ ಪ್ರಕರಣ

₹426 ಕೋಟಿ ಮೌಲ್ಯದ ಆಸ್ತಿ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀ ಕಣ್ವ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ವಿರುದ್ಧ 2019 ಹಾಗೂ 2020ರಲ್ಲಿ ದಾಖಲಾಗಿರುವ ವಂಚನೆ ಪ್ರಕರಣಗಳ ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳು, ಇದುವರೆಗೆ ₹426 ಕೋಟಿ ₹19 ಲಕ್ಷ ಮೌಲ್ಯದ 118 ಆಸ್ತಿಗಳನ್ನು ಜಪ್ತಿ ಮಾಡಿದ್ದಾರೆ.

ಕಣ್ವ ಸಮೂಹ ಸಂಸ್ಥೆ ಅಧೀನದಲ್ಲಿ ಸ್ಥಾಪಿಸಲಾಗಿದ್ದ ಸೊಸೈಟಿಯಿಂದ ವಂಚನೆ ಆಗಿರುವುದಾಗಿ ಠೇವಣಿದಾರರು ದೂರಿದ್ದರು. ಈ ಸಂಬಂಧ ಬಸವೇಶ್ವರನಗರ, ಕಬ್ಬನ್ ಪಾರ್ಕ್ ಸೇರಿದಂತೆ ನಗರದ ವಿವಿಧ ಠಾಣೆಗಳಲ್ಲಿ 21 ಎಫ್‌ಐಆರ್‌ಗಳು ದಾಖಲಾಗಿದ್ದವು.

ಪ್ರಕರಣದ ತನಿಖೆ ಕೈಗೆತ್ತಿಕೊಂಡಿದ್ದ ಸಿಐಡಿ ಆರ್ಥಿಕ ಅಪರಾಧ ವಿಭಾಗದ ಅಧಿಕಾರಿಗಳು, ಕಣ್ವ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರೂ ಆಗಿರುವ ಸೊಸೈಟಿಯ ಸಂಸ್ಥಾಪಕ ಎನ್. ನಂಜುಂಡಯ್ಯ ಹಾಗೂ ಇತರರನ್ನು ಬಂಧಿಸಿದ್ದರು.

ಬಡ್ಡಿ ಆಮಿಷವೊಡ್ಡಿ ವಂಚನೆ: 'ಹಣ ಹೂಡಿಕೆ ಮಾಡಿದರೆ ಹೆಚ್ಚು ಬಡ್ಡಿ ನೀಡುವುದಾಗಿ ಸೊಸೈಟಿ ಹೇಳಿತ್ತು. ಅದನ್ನು ನಂಬಿದ್ದ ಹಿರಿಯ ನಾಗರಿಕರು, ಸರ್ಕಾರಿ ನೌಕರರು, ಕಂಪನಿ ಉದ್ಯೋಗಿಗಳು ಸೇರಿದಂತೆ ಹಲವರು ಸೊಸೈಟಿಯಲ್ಲಿ ಹಣ ಹೂಡಿಕೆ ಮಾಡಿದ್ದರು' ಎಂದು ಸಿಐಡಿ ಮೂಲಗಳು ಹೇಳಿವೆ.

'ಹೂಡಿಕೆ ಹಣವನ್ನೆಲ್ಲ ಆರೋಪಿಗಳು, ಬೇರೆ ಬೇರೆ ಖಾತೆಗಳಿಗೆ ವರ್ಗಾಯಿಸಿದ್ದರು. ಠೇವಣಿ ಹಣವನ್ನು ವಾಪಸು ನೀಡದೇ ವಂಚಿಸಿದ್ದರು' ಎಂದು ತಿಳಿಸಿವೆ.

ರಾಜ್ಯದ ಹಲವೆಡೆ ಆಸ್ತಿ ಖರೀದಿ: 'ಪ್ರಕರಣದ ಪ್ರಮುಖ ಆರೋಪಿ ಎನ್. ನಂಜುಂಡಯ್ಯನನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗಿತ್ತು. ಸೊಸೈಟಿ ಅಧ್ಯಕ್ಷ ಹರೀಶ್, ಉಪಾಧ್ಯಕ್ಷ ಸಿದ್ದೇಗೌಡ, ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಪ್ರಶಾಂತ್‌ಕುಮಾರ್ ಎಚ್.ಡಿ., ನಿರ್ದೇಶಕರಾದ ವಿಜಯ್‌ಕುಮಾರ್, ನವೀನ್‌ಕುಮಾರ್, ಲಿಂಗರಾಜು ಮತ್ತು ಇತರರು ಸೇರಿಕೊಂಡು ಕೃತ್ಯ ಎಸಗಿರುವುದಾಗಿ ನಂಜುಂಡಯ್ಯ ತಪ್ಪೊಪ್ಪಿಗೆ ನೀಡಿದ್ದರು' ಎಂದು ಸಿಐಡಿ ಮೂಲಗಳು ಹೇಳಿವೆ.

'ಎಲ್ಲ ಆರೋಪಿಗಳನ್ನು ಬಂಧಿಸಿ ಕಾನೂನು ಕ್ರಮ ಜರುಗಿಸಲಾಗಿದೆ. ಸೊಸೈಟಿ ಹಾಗೂ ಆರೋಪಿಗಳ ಹೆಸರಿನಲ್ಲಿದ್ದ 118 ಆಸ್ತಿಗಳನ್ನು ಈಗಾಗಲೇ ಗುರುತಿಸಲಾಗಿದೆ. ಇವುಗಳ ಒಟ್ಟು ಮೌಲ್ಯ ₹426 ಕೋಟಿ ₹19 ಲಕ್ಷ' ಎಂದು ತಿಳಿಸಿವೆ.

10,125 ಠೇವಣಿದಾರರಿಗೆ ವಂಚನೆ: 'ಸೊಸೈಟಿಯಿಂದ ವಂಚನೆಯಾಗಿರುವ ಬಗ್ಗೆ 10,125 ಠೇವಣಿದಾರರು ದಾಖಲೆ ಸಮೇತ ಈಗಾಗಲೇ ದೂರು ಸಲ್ಲಿಸಿದ್ದಾರೆ. ಇವರಿಗೆ ₹500 ಕೋಟಿ ವಂಚನೆ ಆಗಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಮೂಲಗಳು ಹೇಳಿವೆ.

ಆಸ್ತಿಗಳ ಮಾಹಿತಿ ನೀಡಲು ಕೋರಿಕೆ

'ಕಣ್ವ ಸಮೂಹ ಸಂಸ್ಥೆ ಹಾಗೂ ಶ್ರೀ ಕಣ್ವ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಹೆಸರಿನಲ್ಲಿ ಯಾವುದಾದರೂ ಆಸ್ತಿ ಇದ್ದರೆ ಸಿಐಡಿ ಆರ್ಥಿಕ ಅಪರಾಧ ಗುಪ್ತದಳ ವಿಭಾಗಕ್ಕೆ ಮಾಹಿತಿ ನೀಡಬಹುದು' ಎಂದು ತನಿಖಾಧಿಕಾರಿ ಕೋರಿದ್ದಾರೆ.

'ಆರೋಪಿಗಳ ಆಸ್ತಿ ಗುರುತಿಸುವಿಕೆ ಮುಂದುವರಿದಿದೆ. ಬೆಳಿಗ್ಗೆ 11 ಗಂಟೆಯಿಂದ ಸಂಜೆ 5 ಗಂಟೆ ಅವಧಿಯಲ್ಲಿ ಸಾರ್ವಜನಿಕರು ಮಾಹಿತಿ ಹಂಚಿಕೊಳ್ಳಬಹುದು. ಹೆಸರು ಗೌಪ್ಯವಾಗಿರಿಸಲಾಗುವುದು' ಎಂದು ತಿಳಿಸಿದ್ದಾರೆ.

ARMY PUBLIC SCHOOL
K. Kamaraj Road, Bangalore - 42
Tel: 080 - 25581238, www.apsbangalore.edu.in

JOB OPPORTUNITIES NON TEACHING STAFF CONTRACTUAL BASIS

Sl. No	Post	Qualification Required
1	Asst Librarian	B.Lib. Science or Graduate with diploma in library science from recognized institute and computer literate.
2	Computer Lab Technician cum Data Entry Operator	10+2 or PUC or XII std with one year Diploma in Computer Science and knowledge of Hardware, Peripheral & Networking, Microsoft Office and Data Entry. **Age below - 40 years**
3	Science Lab Attendant	Experienced & Qualified in handling Chemistry Labs. Qualification - 10 + 2 with Science and computer literate. **Age below 40 years.**
4	Group - D	Preferably matriculate or 10 years service for Ex-Servicemen. (preference will be given to skilled tradesmen like Plumber/ Electrician / Carpenters / Gardeners). **Age below 40 years**
5	Drivers	Matriculate with HPMV license. Experienced drivers having valid Heavy Passenger Motor Vehicle license to drive school bus and four wheeler electric vehicle.

Note: (a) Interviews only for short listed candidates, dates will be intimated later. (b) NO TA/DA admissible for Interview. (c) Download Application Form from school website: www.apsbangalore.edu.in (d) **No Application will be accepted via e-mail. Submit filled in Application Form super scribed on the envelope mentioning the post applied for ("APPLICATION FOR THE POST OF _") along with all documents by Courier/ Post only addressed to the Principal, Army Public School, K. Kamaraj Road, Bangalore-560042 on or before 10 August 2023. For any clarification contact: 080-25581238.**



ವಂಚನೆಯ ಡೀಪ್‌ಫೇಕ್

ತಂತ್ರಜ್ಞಾನವನ್ನೂ ಹಲವರು ಮೋಸದ ಕುತಂತ್ರವನ್ನಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಈಗ ಡೀಪ್‌ಫೇಕ್ ವಿಡಿಯೊಗಳನ್ನು ಉಪಯೋಗಿಸಿಕೊಂಡು ವಂಚಿಸುವವರು ಹುಟ್ಟಿಕೊಳ್ಳುತ್ತಿದ್ದಾರೆ...

ಕೃಷ್ಣ ಭಟ್

ಹೊಸ ಹೊಸ ತಂತ್ರಜ್ಞಾನ ಮುನ್ನೆಲೆಗೆ ಬರುತ್ತಿದ್ದ ಹಾಗೆ ಮೋಸ ಮಾಡುವ ಹೊಸ ತಂತ್ರಗಳನ್ನೂ ಮೋಸಗಾರರು ಹುಡುಕಿಕೊಳ್ಳುತ್ತಾರೆ. ಇತ್ತೀಚೆಗೆ ಜನರೇಟಿವ್ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಬಳಸಿಕೊಂಡು ಡೀಪ್‌ಫೇಕ್ ವಿಡಿಯೋಗಳು ಮತ್ತು ಫೋಟೋಗಳನ್ನು ಜನರೇಟ್ ಮಾಡುತ್ತಿರುವುದು ಎಲ್ಲರಿಗೂ ತಿಳಿದಿದೆ. ಇದನ್ನು ಬಳಸಿಕೊಂಡು ವ್ಯಕ್ತಿಯೊಬ್ಬ ಆಡದ ಮಾತುಗಳನ್ನೂ ಆಡಿಸಬಹುದು. ಆದರೆ, ಇವೆಲ್ಲ ರೆಕಾರ್ಡೆಡ್ ರೂಪದಲ್ಲೇ ಇರುತ್ತಿದ್ದವು. ಅಂದರೆ, ಒಬ್ಬ ವ್ಯಕ್ತಿಯ ವಿಡಿಯೊವನ್ನೋ ಫೋಟೋವನ್ನೋ ಇಟ್ಟುಕೊಂಡು ಅದಕ್ಕೆ ತುಟಿಚಲನೆ ಹಾಗೂ ಧ್ವನಿಯನ್ನು ಡೀಪ್ ಫೇಕ್ ಮಾಡಲಾಗುತ್ತಿತ್ತು. ಹೀಗೆ ಮಾಡಿ ಅದನ್ನು ಕಂಪ್ಯೂಟರಿನಲ್ಲೋ ಮೊಬೈಲ್‌ನಲ್ಲೋ ಸೇವ್ ಮಾಡಿಕೊಂಡು, ಹರಿಬಿಡಲಾಗುತ್ತಿತ್ತು. ಇದನ್ನು ಒಳ್ಳೆಯದಕ್ಕೂ ಕೆಟ್ಟದ್ದಕ್ಕೂ ಬಳಸಿಕೊಂಡ ಉದಾಹರಣೆಗಳು ನಮಗೆ ಸಾಕಷ್ಟು ಸಿಗುತ್ತವೆ. ಆದರೆ, ಇದೇ ತಂತ್ರಜ್ಞಾನವನ್ನು ಅಂದರೆ, 'ಜನರೇಟಿವ್ ಎಐ' ಅನ್ನೇ ಬಳಸಿಕೊಂಡು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಜನರಿಗೆ ಮೋಸ ಮಾಡುವ ಹೊಸ ತಂತ್ರವನ್ನು ಮೋಸಗಾರರು ಕಂಡುಕೊಂಡಿದ್ದಾರೆ.

ಅಂಥದ್ದೊಂದು ಪ್ರಕರಣ ಕೇರಳದಲ್ಲಿ ವರದಿಯಾದ ಮೇಲೆ, ಹೀಗೊಂದು ಮೋಸದ ವಿಧಾನವಿದೆ ಎಂಬುದು ಎಲ್ಲರಿಗೂ ತಿಳಿದಂತಾಗಿದೆ. ಕೇರಳದ ಕೋಯಿಕ್ಕೋಡಿನ ರಾಧಾಕೃಷ್ಣ ಎಂಬುವವರು ತನ್ನ ಮಾಜಿ ಸಹೋದ್ಯೋಗಿಯಂತೆಯೇ ಮುಖ ಮಾಡಿಕೊಂಡು ಲೈವ್ ವಿಡಿಯೊದಲ್ಲಿ ಹಣ ಕೇಳಿದವನಿಗೆ 40 ಸಾವಿರ ಕೊಟ್ಟು ಮೋಸ ಹೋಗಿದ್ದಾರೆ. ಈ ಪ್ರಕರಣ ನಡೆದಿದ್ದು ಹೀಗೆ:

ಕೋಯಿಕ್ಕೋಡಿನ ರಾಧಾಕೃಷ್ಣ ಅವರಿಗೆ ತಮ್ಮ ಮೊಬೈಲ್‌ಗೆ ಒಂದು ಕಾಲ್ ಬರುತ್ತದೆ. ಆ ಕಾಲ್ ಅವರು ರಿಸೀವ್ ಮಾಡುವುದಿಲ್ಲ. ಸ್ವಲ್ಪವೇ ಹೊತ್ತಿಗೆ ಅವರ ವಾಟ್ಸ್‌ಆ್ಯಪ್‌ಗೆ ಅವರ ಮಾಜಿ ಸಹೋದ್ಯೋಗಿಯ ಫೋಟೋಗಳು ಬಂದವು. ಹಲವು ವರ್ಷ ಒಟ್ಟಿಗೇ ಕೆಲಸ ಮಾಡಿದ್ದರಿಂದ ಅವರದ್ದೇ ಫೋಟೋ ಎಂಬುದು ಅವರಿಗೆ ಖಚಿತವಾಯಿತು. ಆ ಕಡೆ ಇರುವ ವ್ಯಕ್ತಿ ತನ್ನ ಮಾಜಿ ಸಹೋದ್ಯೋಗಿಯೇ ಎಂದುಕೊಂಡು ಸ್ವಲ್ಪ ಹೊತ್ತು ಔಪಚಾರಿಕ ಮಾತುಕತೆಯನ್ನೂ ಚಾಟ್‌ನಲ್ಲಿ ಮಾಡುತ್ತಾರೆ. ಸ್ವಲ್ಪ ಹೊತ್ತಿಗೇ ಒಂದು ಫೋನ್ ಬರುತ್ತದೆ. ಅದು ಕೂಡ ಮಾಜಿ ಸಹೋದ್ಯೋಗಿಯದ್ದೇ ಧ್ವನಿ. ಇದರಲ್ಲಿ ತನ್ನ ಸೊಸೆ ಆಸ್ಪತ್ರೆಗೆ ಅಡ್ಮಿಟ್ ಆಗಿದ್ದಾಳೆ. 40 ಸಾವಿರ ಹಣ ಕೊಡಿ ಎಂದು ಕೇಳಿದ್ದಾರೆ. ಹಣ ಕೇಳಿದ ತಕ್ಷಣ ಇವರಿಗೆ ಅನುಮಾನ ಬಂತು.

ಅನುಮಾನ ವ್ಯಕ್ತಪಡಿಸಿದ ಕೆಲವೇ ಕ್ಷಣದಲ್ಲಿ ಆ ವ್ಯಕ್ತಿ ವಿಡಿಯೊ ಕಾಲ್ ಮಾಡಿದ. ಆ ವಿಡಿಯೊ ಕಾಲ್‌ನಲ್ಲಿ ಕಂಡ ಮುಖವೂ ಮಾಜಿ ಸಹೋದ್ಯೋಗಿಯದ್ದೇ. 'ತುಟಿಗಳ ಚಲನೆ, ಧ್ವನಿ ಎಲ್ಲವೂ ಅವರ ಹಾಗೆಯೇ ಇತ್ತು. ನನ್ನ ಅನುಮಾನ ಪರಿಹಾರವಾಯಿತು. 40 ಸಾವಿರ ಯುಪಿಐ ಮೂಲಕ ಟ್ರಾನ್ಸ್‌ಫರ್ ಮಾಡಿದೆ' ಎಂದು ರಾಧಾಕೃಷ್ಣ ಹೇಳುತ್ತಾರೆ. ದುಡ್ಡು ಕಳಿಸಿದ ಮೇಲೆ ಅನುಮಾನ ಬಂದು ತನ್ನ ಬಳಿ ಇದ್ದ ಮಾಜಿ ಸಹೋದ್ಯೋಗಿಯ ನಂಬರ್‌ಗೆ ಕರೆ ಮಾಡಿದಾಗ ಅವರು ಮೋಸ ಹೋಗಿದ್ದು ಬಯಲಾಯಿತು. ಈ ಪ್ರಕರಣದಲ್ಲಿ ಮೋಸ ಮಾಡಿದವನ ಚಾಣಾಕ್ಷತೆಯೇನೆಂದರೆ, ಡೀಪ್ ಫೇಕ್ ಅನ್ನು ವಿಡಿಯೊ ಕಾಲ್‌ಗೆ ಅಳವಡಿಸಿಕೊಂಡಿದ್ದು! ನಾವು ಈವರೆಗೆ ಈ ಡೀಪ್ ಫೇಕ್ ವಿಡಿಯೊಗಳನ್ನು, ಫೋಟೋಗಳನ್ನು ವಾಟ್ಸ್‌ಆ್ಯಪ್ ಚಾಟ್‌ನಲ್ಲಿ ನೋಡಿದ್ದೇವೆ, ಫೇಸ್‌ಬುಕ್, ಟ್ವಿಟರ್ ಹಾಗೂ ಇತರ ಸೋಷಿಯಲ್ ಮೀಡಿಯಾದಲ್ಲಿ ನೋಡಿದ್ದೇವೆ. ಮೊದಲ ನೋಟಕ್ಕೆ ನಿಜ ಎನಿಸಿದರೂ, ತೀರಾ ಗಮನವಿಟ್ಟು ನೋಡಿದಾಗ, ನಾಲ್ಕಾರು ಬಾರಿ ನೋಡಿದಾಗ ಅದರಲ್ಲೊಂದು ಕೃತಕ ಚಲನೆ ಇರುವುದರಿಂದ ಇದು ಡೀಪ್ ಫೇಕ್ ಆಗಿರಬಹುದು ಎಂದು ಅನುಮಾನವನ್ನಾದರೂ ಪಡಬಹುದು. ಸೋಷಿಯಲ್ ಮೀಡಿಯಾದಲ್ಲೋ ಅಥವಾ ವಾಟ್ಸ್‌ಆ್ಯಪ್ ಚಾಟ್‌ನಲ್ಲೋ ಡೀಪ್ ಫೇಕ್ ನೋಡುವಾಗ ನಮಗೆ ಅಷ್ಟು ಸಮಯಾವಕಾಶ ಇರುತ್ತದೆ. ಅಲ್ಲಿ ಯಾವುದೇ ಅಂತಹ ತುರ್ತು ಇರುವುದಿಲ್ಲ. ಆದರೆ, ಲೈವ್ ಕಾಲ್‌ಗಳಲ್ಲಿ ಹಾಗಲ್ಲ. ಅದು ವಿಡಿಯೊ ಕಾಲ್ ಇರಲಿ, ಫೋನ್ ಕಾಲ್ ಆಗಿರಲಿ. ಅಲ್ಲೊಂದು ತುರ್ತು ಮೂಡುತ್ತದೆ. ಅಷ್ಟೇ ಅಲ್ಲ, ಅದರ ಜೊತೆಗೆ ಕರೆ ಮಾಡಿದ ವ್ಯಕ್ತಿ 'ಯಾರೋ ಆಸ್ಪತ್ರೆಯಲ್ಲಿದ್ದಾರೆ; ನಾನು ಬಿಲ್ ಕೌಂಟರಿನಲ್ಲಿದ್ದೇನೆ' ಎಂದೋ ಅಥವಾ ಮತ್ತಿನ್ನೇನೋ ತುರ್ತನ್ನು ನಮ್ಮ ತಲೆಯೊಳಗೆ ತುಂಬುತ್ತಾನೆ. ಆಗ ನಮ್ಮ ವಿವೇಚನಶಕ್ತಿ ಕಡಿಮೆಯಾಗುತ್ತದೆ. ಅವನ ಗಾಳಕ್ಕೆ ಬೀಳುತ್ತೇವೆ.

ಈ ಹಣ ಕೀಳುವ ದಂಧೆ ಹೊಸ ಹೊಸ ತಂತ್ರಜ್ಞಾನ ಬಂದಾಗಲೂ ಹೊಸ ಹೊಸ ರೂಪದಲ್ಲಿ ಬರುತ್ತೆ. ಡೀಪ್ ಫೇಕ್ ತಂತ್ರಜ್ಞಾನ ಹೊಸದಲ್ಲ. ಆದರೆ, ಇದನ್ನು ಹೊಸ ವಿಧಾನದ ಮೋಸಕ್ಕೆ ಬಳಸಿಕೊಳ್ಳಲಾಗುತ್ತಿದೆ. ಇಲ್ಲಿ ನಾವು ಮಾಡಬೇಕಿರುವುದಿಷ್ಟೇ, ಯಾರೇ ಹಣ ಕೇಳಿದರೂ ಹಣ ಕೇಳಿದ ವ್ಯಕ್ತಿಯ 'ತುರ್ತು ಪರಿಸ್ಥಿತಿ'ಗೆ ನಾವು ಸ್ಪಂದಿಸಬಾರದು. ಹಣ ಕೇಳಿದ ತಕ್ಷಣ, ಕೇಳಿದ ವ್ಯಕ್ತಿಯನ್ನು ನಮ್ಮ ಮೂಲದಿಂದ ಸಂಪರ್ಕಿಸಿ ಅವನ ತುರ್ತನ್ನು ಖಚಿತಪಡಿಸಿಕೊಂಡೇ ಹಣಕಾಸಿನ ನೆರವು ನೀಡುವುದು ಉತ್ತಮ.

ಅದರ ಜೊತೆಗೆ ಈ ಡೀಪ್ ಫೇಕ್ ಅನ್ನು ಗುರುತಿಸುವುದಕ್ಕೂ ಒಂದು ವಿಧಾನವಿದೆ. ಸದ್ಯ ನಮ್ಮಲ್ಲಿ ಚಾಲ್ತಿಯಲ್ಲಿರುವ ಬಹುತೇಕ ಡೀಪ್ ಫೇಕ್‌ಗಳೆಲ್ಲವೂ ಸೀಮಿತ ವ್ಯಾಪ್ತಿಯವು. ಅಂದರೆ ಮುಖವನ್ನಷ್ಟೇ ಲೈವ್ ಡೀಪ್ ಫೇಕ್ ಮಾಡಲು ಸಾಧ್ಯವಾಗುವಂಥವು. ಇಡೀ ದೇಹವನ್ನು ಡೀಪ್ ಫೇಕ್ ಮಾಡಿ, ಅದು ಚಲಿಸುವಂತೆಯೂ ಮಾಡಿದರೆ ಅದರಲ್ಲೊಂದು ಕೃತಕತೆ ಎದ್ದುಕಾಣುತ್ತದೆ. ಅಷ್ಟರ ಮಟ್ಟಿಗೆ ಡೀಪ್ ಫೇಕ್ ಇನ್ನೂ ಸುಧಾರಿಸಬೇಕಿದೆ. ಈ ಕೃತಕತೆ ಎಲ್ಲಾದರೂ ಇದೆಯೇ ಎಂದು ನಾವು ಗಮನಿಸಬೇಕು. ಉದಾಹರಣೆಗೆ, ನಕ್ಕಾಗ ತುಟಿ ತೆರೆದುಕೊಳ್ಳುವ ರೀತಿ, ಕೆನ್ನೆಯ ಆಕಾರ ಬದಲಾಗುವ ರೀತಿಯೆಲ್ಲವೂ ಒಬ್ಬೊಬ್ಬರಿಗೂ ವಿಭಿನ್ನ. ಅದನ್ನು ಹಾಗೆ ಹಾಗೆಯೇ ಅನುಕರಿಸುವುದು ಡೀಪ್ ಫೇಕ್‌ಗೆ ಅಷ್ಟು ಸುಲಭವಲ್ಲ. ಮೋಸಗಾರರು ವ್ಯಕ್ತಿಯೊಬ್ಬನ ಬರಿ ಒಂದು ಫೋಟೋವನ್ನೋ, ಸಣ್ಣ ವಿಡಿಯೊವನ್ನೋ ಇಟ್ಟುಕೊಂಡು ಜನರೇಟಿವ್ ಎಐಗೆ ತರಬೇತಿ ಕೊಟ್ಟುಕೊಂಡು ಡೀಪ್ ಫೇಕ್ ಲೈವ್ ವಿಡಿಯೊ ಕಾಲ್ ಮಾಡಿದರೆ ಇಂತಹ ಕೃತಕತೆ ಕಣ್ಣಿಗೆ ರಾಚುವಂತೆ ಇರುತ್ತದೆ.

ಹೀಗಾಗಿ ಇಂತಹ ಸಂಗತಿಗಳ ಮೇಲೆ ಗಮನ ಹರಿಸಿ, ಈ ಡೀಪ್ ಫೇಕ್ ವಿಡಿಯೊ, ಆಡಿಯೊ ಕಾಲ್‌ಗಳ ಮೋಸದಿಂದ ತಪ್ಪಿಸಿಕೊಳ್ಳಬಹುದು.

❖

ನೆನಪು: ಇದು ಮೆದುಳಿನ ವಿಷಯ

ಅಮೃತೇಶ್ವರಿ ಬಿ.

ನಾವು, ಮಾನವರು, ಭೂಮಿಯ ಮೇಲಿನ ಇತರೆಲ್ಲಾ ಜೀವಿಗಳಂತೆಯೇ ಆದರೂ ಬೌದ್ಧಿಕವಾಗಿ, ಭಾವುಕವಾಗಿ ಅವುಗಳಿಗಿಂತ ತುಸು ಭಿನ್ನ. ಪ್ರಾಣಿಗಳು ಆಯಾ ಕ್ಷಣದಲ್ಲಷ್ಟೆ ಬದುಕುತ್ತವೆ; ಅವು ನಮ್ಮಷ್ಟು ಭಾವುಕಜೀವಿಗಳಲ್ಲ; ಏನನ್ನೂ ನೆನಪಿಡುವುದಿಲ್ಲ. ಹಾಗಾಗಿ ಜಗತ್ತಿನ ಜೀವರಾಶಿಗಳಲ್ಲೇ ನಾವು ಹೆಚ್ಚಾಗಿ ಎಲ್ಲವನ್ನೂ ಭಾವಿಸುವವರೂ ಅನುಭವಿಸುವವರೂ ನೆನಪಿಡುವವರೂ ಎನ್ನಬಹುದು. ಇದವುಗಳ ಫಲವಾಗಿ ನಮ್ಮ ನೆನಪುಗಳು ಕೂಡ ನೂರಾರು. ಆ ನೆನಪು ಭಾವನೆ ಅನುಭವಗಳೆಲ್ಲವನ್ನೂ ಸಂಗ್ರಹಿಸಿ ಮುಂದಿನ ಹೆಜ್ಜೆಗಳಲ್ಲಿ ಅವುಗಳನ್ನು ಅನ್ವಯಿಸುತ್ತಾ ಬದುಕುವ ಬುದ್ಧಿವಂತಿಕೆ ನಮಗಿರುವುದು ವಿಶೇಷ. ಇದಕ್ಕೆಲ್ಲಾ ಬುನಾದಿಯೇ ನಮ್ಮ ಮೆದುಳು ಹಾಗೂ ಕಾಲಕಾಲಕ್ಕೂ ಅದು ವಿಕಾಸವಾಗುತ್ತಿರುವುದು, ನಮ್ಮ ಮೆದುಳಿನ ಸಂಕೀರ್ಣ ನರವ್ಯವಸ್ಥೆ, ಅದಕ್ಕಿರುವ ಅಗಾಧ ನೆನಪಿನ ಶಕ್ತಿ. ಹಾಗೆಯೇ ಮರೆವಿನ ಶಕ್ತಿಯೂ. ನಮಗಾಗುವ ಕಹಿ ಘಟನೆಗಳೆಲ್ಲವನ್ನೂ ಮರೆತರೆ ಮಾತ್ರವೇ ಜೀವನದಲ್ಲಿ ಮುಂದೆ ಸಾಗಲು ಸಾಧ್ಯವಾಗುವುದು. ಹಾಗಾಗಿ ನೆನಪಿನ ಶಕ್ತಿಯಂತೆಯೇ ಮರೆವೂ ಕೂಡ ಒಂದು ಶಕ್ತಿ ಹಾಗೂ ವರವೇ, ಹಾಗಾದರೆ ಈ ನೆನಪು ಹಾಗೂ ಮರೆವನ್ನು ನಮ್ಮ ಮೆದುಳು ಹೇಗೆ ನಿರ್ವಹಿಸುತ್ತದೆ ಎನ್ನುವುದು ಅತ್ಯಂತ ಸೋಜಿಗದ ವಿಷಯವಲ್ಲವೇ?

ಮನುಷ್ಯನ ಮೆದುಳಿನಲ್ಲಿ ದಾಖಲಾಗುವ ನೆನಪುಗಳು ಬಹಳ ವೈವಿಧ್ಯ ಹಾಗೂ ಜಟಿಲವೆಂದು ಸಂಶೋಧಕರು ಹೇಳುತ್ತಾರೆ. ಸೂಚ್ಯ ಜ್ಞಾಪಕ ಶಕ್ತಿ, ಸ್ಪಷ್ಟ ಜ್ಞಾಪಕ ಶಕ್ತಿ, ಇಂದ್ರಿಯ ಸ್ಮರಣಾ ಶಕ್ತಿ, ಅಲ್ಪಾವಧಿ ಜ್ಞಾಪಕ ಶಕ್ತಿ ಮತ್ತು ದೀರ್ಘಾವಧಿ ಜ್ಞಾಪಕ ಶಕ್ತಿ. ಇವೆಲ್ಲಾ ನೆನಪುಗಳ ಬಗೆ. ಅರ್ಥಾತ್, ನಾವು ಅನುಭವಿಸಿದ್ದವನ್ನೂ ನಮ್ಮ ಮೆದುಳು ನೆನಪಿಟ್ಟುಕೊಳ್ಳುವುದು ಒಂದು ಸಂಕೀರ್ಣ ಹಾಗೂ ಆಶ್ಚರ್ಯಕರ ಕ್ರಿಯೆ. ಅದು ಇಂದ್ರಿಯಗಳ ಮೂಲಕ ಅನುಭವಿಸಿದ್ದಿರಬಹುದು, ಯಾವುದೇ ಸಂತಸ ಅಥವಾ ಕಹಿ ಘಟನೆಗಳಿರಬಹುದು. ಇಲ್ಲಿ ನಮ್ಮ ಮೆದುಳಿನಲ್ಲಿರುವ ಹಿಪ್ಪೋಕ್ಯಾಂಪಸ್ ಅನ್ನುವ ಭಾಗ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಮೊದಲಿಗೆ ಎಲ್ಲ ಅನುಭವಗಳನ್ನೂ ಸ್ವೀಕರಿಸಿಕೊಳ್ಳುವ ಭಾಗವಿದು. ಮುಂದೆ ಆ ನೆನಪುಗಳ ಮಹತ್ವದ ಮೇಲೆ ಅವು ಮೆದುಳಿನ ಇತರೆ ಭಾಗದಲ್ಲಿ ದಾಖಲಾಗುತ್ತ ಹೋಗುತ್ತದೆ. ಈ ಎಲ್ಲವನ್ನೂ ನಮ್ಮ ಮೆದುಳು ಕ್ರೋಢೀಕರಿಸುತ್ತಹೋಗುತ್ತದೆ, ನಾವು ನಮ್ಮ ಕಪಾಟಿನಲ್ಲಿ ಬಟ್ಟೆ ಅಥವಾ ಕಡತಗಳನ್ನು ವ್ಯವಸ್ಥಿತವಾಗಿ ಜೋಡಿಸಿಡುವ ಹಾಗೆ. ನಾವು ನಮಗಾಗುವ ಎಲ್ಲ ಅನುಭವಗಳನ್ನೂ ನೆನಪಿಡಲಾಗುವುದಿಲ್ಲ. ಅದನ್ನು ಕಾಲಕಾಲಕ್ಕೆ ಮರೆಯುತ್ತಿರುತ್ತೇವೆ, ನಮಗೆ ಬೇಡವಾದ ವಸ್ತುಗಳನ್ನು ನಮ್ಮ ಕಪಾಟಿನಿಂದ ಆಗಾಗ್ಗೆ ತೆಗೆದು ಜಾಗ ಖಾಲಿಮಾಡಿಟ್ಟುಕೊಳ್ಳುವಂತೆ.

ಮನುಷ್ಯನ ಮೆದುಳಿನಲ್ಲಿ ದಾಖಲಾಗುವ ನೆನಪುಗಳು ವೈವಿಧ್ಯ ಹಾಗೂ ಜಟಿಲ. ನಮ್ಮ ಮೆದುಳು ನಿತ್ಯದ ವಿವರಗಳನ್ನು ನೆನಪಿಟ್ಟುಕೊಳ್ಳುವ ಪ್ರಕ್ರಿಯೆ ತುಂಬ ಸಂಕೀರ್ಣವೂ ಆಶ್ಚರ್ಯಕರವೂ ಆದ ಕ್ರಿಯೆ. ಕೃತಕ ಬುದ್ಧಿಮತ್ತೆಗೂ ನಮ್ಮ ಮೆದುಳಿನ ಜ್ಞಾಪಕಶಕ್ತಿಗೂ ಇರುವ ನಂಟಿನ ಬಗ್ಗೆ ಇತ್ತೀಚೆಗೆ ನಡೆದಿರುವ ಸಂಶೋಧನೆಗಳು ಬೆಳಕನ್ನು ಚೆಲ್ಲುತ್ತಿವೆ.

ಇದುವರೆಗೂ ಈ 'ನೆನಪುಗಳ ವ್ಯವಸ್ಥಿತವಾದ ಕ್ರೋಢೀಕರಣ' ಕ್ರಿಯೆಯ ಪ್ರಕಾರ ಎಲ್ಲ ನೆನಪುಗಳೂ 'ಹಿಪ್ಪೋಕ್ಯಾಂಪಸ್' ಭಾಗದಲ್ಲಿದ್ದು, ಕಾಲಕಳೆದಂತೆ 'ನಿಯೋಕಾರ್ಟೆಕ್ಸ್' ಭಾಗಕ್ಕೆ ಹೋಗಿ ದಾಖಲಾಗುತ್ತವೆ ಎನ್ನಲಾಗುತ್ತಿತ್ತು. ಆದರೆ ಅದು ನಿಜವಲ್ಲವಂತೆ. ನಮ್ಮ ನೆನಪುಗಳು ಮುಂದೆ ಎಷ್ಟರ ಮಟ್ಟಿಗೆ ಉಪಯೋಗಕ್ಕೆ ಬರಬಹುದು ಎನ್ನುವುದನ್ನು ಆಧರಿಸಿ ಮೆದುಳಿನ ಯಾವ ಭಾಗದಲ್ಲಿ ಅದನ್ನು ದಾಖಲಿಸಬೇಕು ಎನ್ನುವುದನ್ನು ನಮ್ಮ ನರವ್ಯವಸ್ಥೆ ನಿರ್ಧರಿಸುತ್ತದೆ ಎಂದು ವರ್ಜೀನಿಯಾದ ಜನೀಲಿಯಾದ ರಿಸರ್ಚ್ ಕ್ಯಾಂಪಸ್ ಹಾಗೂ ಯೂನಿವರ್ಸಿಟಿ ಕಾಲೇಜ್ ಲಂಡನ್ನಿನ ಸಂಶೋಧಕರು ನೇಚರ್ ನ್ಯೂರೋಸೈನ್ಸ್ ಪತ್ರಿಕೆಯಲ್ಲಿ ವರದಿ ಮಾಡಿದ್ದಾರೆ. ಇವರ ಪ್ರಕಾರ ಕೆಲವು ನೆನಪುಗಳು ನಿಯೋಕಾರ್ಟೆಕ್ಸ್ ಭಾಗಕ್ಕೆ ವರ್ಗಾವಣೆಯಾಗದೆಯೇ, ಶಾಶ್ವತವಾಗಿ ಹಿಪ್ಪೋಕ್ಯಾಂಪಸ್ ಭಾಗದಲ್ಲಿಯೇ ಉಳಿದುಕೊಳ್ಳಬಹುದಂತೆ. ಇದುವರೆಗೂ ಈ ಜಟಿಲವಾದ ವ್ಯವಸ್ಥಿತವಾದ ಕ್ರೋಢೀಕರಣ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳಲು ಸಾಕಷ್ಟು ಸಿದ್ಧಾಂತಗಳನ್ನು ಮನೋತಜ್ಞರು ಪ್ರಕಟಿಸಿದ್ದಾರೆ. ಆದರೆ ಯಾರೊಬ್ಬರೂ ನೆನಪುಗಳು ಹಿಪ್ಪೋಕ್ಯಾಂಪಸ್ ಭಾಗದಲ್ಲಿಯೇ ಉಳಿಯುತ್ತದೆಯೇ ಅಥವಾ ನಿಯೋಕಾರ್ಟೆಕ್ಸ್ ಭಾಗದಲ್ಲಿ ಹೋಗಿ ದಾಖಲಾಗುತ್ತದೆಯೇ ಎಂದು ಗಣಿತೀಯವಾದ ಪುರಾವೆ ನೀಡಿ ಸಾಬೀತುಪಡಿಸಿರಲಿಲ್ಲ. ಇದೋ ಈಗ ಜನೀಲಿಯಾದ ಸಂಶೋಧಕರು ಈ ದೀರ್ಘಕಾಲದ ಒಗಟನ್ನು ಬಿಡಿಸಲು ಒಂದು 'ನ್ಯೂರಲ್ ನೆಟ್ ವರ್ಕ್ ಥಿಯರಿ' ಅಥವಾ 'ನರಜಾಲಸಿದ್ಧಾಂತ' ಎನ್ನುವ ಸಿದ್ಧಾಂತವನ್ನು ಪ್ರಸ್ತುತಪಡಿಸಿದ್ದಾರೆ.

ಈ ಸಂಶೋಧಕರು ಹೇಳುವುದೇನೆಂದರೆ ನಮ್ಮ ನೆನಪುಗಳು ಅಥವಾ ಅನುಭವಗಳು ಮುಂದೆ ಸಾಮಾನ್ಯೀಕರಿಸಲ್ಪಡಬೇಕು; ಆಗ ಮಾತ್ರವೇ ಅವು ನಿಯೋಕಾರ್ಟೆಕ್ಸ್ ಭಾಗಕ್ಕೆ ವರ್ಗಾವಣೆಯಾಗುತ್ತವೆ. ಅರ್ಥಾತ್, ಅವು ಯಾವುದೇ ಪರಿಸ್ಥಿತಿಗಳಲ್ಲೂ ಬಳಸಿಕೊಳ್ಳಬಹುದಾದ ಅಥವಾ ಅನ್ವಯವಾಗಬಹುದಾದಂತಹ ನೆನಪುಗಳಾದರೆ ಮಾತ್ರವೇ ಅವನ್ನು ನಮ್ಮ ಮೆದುಳು ದಾಖಲಿಸಿಕೊಳ್ಳುಸುತ್ತದೆ. ಇದನ್ನು 'ನೆನಪುಗಳ ಸಾಮಾನ್ಯೀಕರಣ' ಎನ್ನಬಹುದು; ಒಂದು ಕಣಿವೆಯನ್ನು ನೋಡಿದಾಗ ಅಲ್ಲಿ ನೀರು ಇತ್ತು ಅಥವಾ ಇದೆ ಎನ್ನುವುದನ್ನು ನಾವು ಸಾಮಾನ್ಯವಾಗಿ ಹೇಗೆ ಅರ್ಥಮಾಡಿಕೊಳ್ಳುತ್ತೇವೆಯೋ ಹಾಗೆ. ಇಂತಹ ನೆನಪುಗಳು ನಮಗೆ ಜಗತ್ತನ್ನು ಅರ್ಥಮಾಡಿಕೊಳ್ಳಲು ಅನುಕೂಲವಾಗುತ್ತದೆ. ಪ್ರಾಣಿಗಳಿಗೂ ಈ ನೆನಪಿನ ಅವಶ್ಯಕತೆ ಅನಿವಾರ್ಯ. ಒಂದು ಪರಿಸರದಲ್ಲಿ ನೆಲೆಸಿದ್ದಾಗ ಎಲ್ಲೆಲ್ಲಿ ಏನೇನು ಲಭ್ಯವಿದೆ ಎನ್ನುವದರ ಅರಿವು ಅವುಗಳಿಗಿರಬೇಕು. ಉದಾಹರಣೆಗೆ, ಅವುಗಳಿಗೆ ನೀರು ಬೇಕಾದಾಗ ಅಲ್ಲಿಯೇ ಹೋಗಿ ಕುಡಿಯಬೇಕು. ಇಲ್ಲಿ ನೆನಪು ಹಾಗೂ ಅರಿವಿನ ಅನಿವಾರ್ಯತೆ ಬಹಳಷ್ಟಿದೆ. ಹಾಗಾಗಿ ನೆನಪಿನ ಸಾಮಾನ್ಯೀಕರಣ ಅವುಗಳ ಮೆದುಳಿನಲ್ಲಿಯೂ ನಡೆಯುವ ಕ್ರಿಯೆಯೇ. ಇದು ಸಾಮಾನ್ಯ ಕಲ್ಪನೆಯಾಗಿರಬಹುದಷ್ಟೆ. ಈ ಸಾಮಾನ್ಯೀಕರಣ ಪ್ರಕ್ರಿಯೆಯೇ ಯಾಂತ್ರಿಕ ಕಲಿಕೆಯಲ್ಲಿಯೂ ಅನ್ವಯವಾಗುತ್ತಿರುವುದು.

ಆದರೆ ಈ ರೀತಿಯ ನೆನಪು ಸ್ಪಷ್ಟ ನೆನಪಿನ ಒಂದು ವಿಧವಾದ ಪ್ರಾಸಂಗಿಕ ನೆನಪಿಗಿಂತ ಭಿನ್ನ. ಇಲ್ಲಿ ನಮಗೆ ಸಂಪೂರ್ಣವಾಗಿ ಒಂದು ಪ್ರಸಂಗದ ನೆನಪು ನಮ್ಮ ಮುಂದೆ ಪ್ರಸ್ತುತವಾಗುತ್ತಹೋಗುತ್ತದೆ. ಅಂದರೆ ಕಣಿವೆಯನ್ನು ನೋಡಿದಾಗ ನೀರು ಇತ್ತೋ ಇಲ್ಲವೋ ಎನ್ನುವ ಒಂದು ಕಲ್ಪನೆ ನಮಗೆ ಮೂಡುವುದು ಸೂಚ್ಯ ನೆನಪಾದರೆ, ಇಲ್ಲಿ ನದಿ, ಬಾವಿ, ಸಮುದ್ರಗಳಂತಹ ಒಂದು ನೀರಿನ ಆಕರವೇ ನೆನಪಾಗುತ್ತದೆ. ಈ ದೃಷ್ಟಿಕೋನದಲ್ಲಿ ನೋಡುವುದಾದರೆ, ನೆನಪುಗಳ ಕ್ರೋಢೀಕರಣ ಎನ್ನುವುದು ಕೇವಲ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ನೆನಪುಗಳನ್ನು ಅಥವಾ ಅನುಭವಗಳನ್ನು ನಕಲು ಮಾಡುವುದಲ್ಲ. ಪ್ರತಿಯಾಗಿ ಹಳೆಯ ನೆನಪುಗಳ ಆಧಾರದಿಂದ ಹೊಸದೊಂದು ನೆನಪನ್ನು ಸೃಷ್ಟಿಸುವುದಾಗುತ್ತದೆ. ನಮ್ಮ ಅನುಭವಕ್ಕೆ ಬರುವ ವಿಷಯಗಳು ಎಷ್ಟರ ಮಟ್ಟಿಗೆ ಸಾಮಾನ್ಯೀಕರಿಸಲ್ಪಡಬಲ್ಲವು ಎನ್ನವುದರ ಮೇಲೆ ಅವು ಹಿಪ್ಪೋಕ್ಯಾಂಪಸ್ ಭಾಗದಲ್ಲಿಯೇ ಉಳಿಯುತ್ತದೆಯೇ ಅಥವಾ ಶಾಶ್ವತವಾಗಿ ದಾಖಲಾಗುವ ನಿಯೋಕಾರ್ಟೆಕ್ಸ್ ಭಾಗದಲ್ಲಿ ಹೋಗಿ ಸೇರುತ್ತವೆಯೇ ಎನ್ನುವುದು ನಿರ್ಧಾರವಾಗುತ್ತದೆ. ಹಾಗಾಗಿ ಸಾಮಾನ್ಯೀಕರಿಸಲ್ಪಡುವಂತವಾದ್ದರೆ ಮಾತ್ರವೇ ಅವು ನಿಯೋಕಾರ್ಟೆಕ್ಸ್ ಭಾಗಕ್ಕೆ ವರ್ಗಾವಣೆಯಾಗುತ್ತವೆ ಎನ್ನುವುದು ಇವರ ಅಭಿಪ್ರಾಯ.

ಈ ಸಂಶೋಧಕರು ಈ ಸಂಶೋಧನೆಯ ಸಂದರ್ಭದಲ್ಲಿ, ಶಿಕ್ಷಕ-ವಿದ್ಯಾರ್ಥಿ-ಪುಸ್ತಕ ಮಾದರಿಯನ್ನು ಅಧ್ಯಯನ ಮಾಡಿದ್ದಾರೆ. ಇವರ ಪ್ರಕಾರ ಶಿಕ್ಷಕರು ವಿದ್ಯಾರ್ಥಿಗಳ ನರವ್ಯವಸ್ಥೆಯನ್ನು ಕ್ರಿಯಾಶೀಲಗೊಳಿಸಿದಾಗ ಅವರಲ್ಲಿ ಕಲಿಕೆ ಆರಂಭವಾಗುತ್ತದೆ. ಅದನ್ನು ವಿದ್ಯಾರ್ಥಿಗಳು ಪುಸ್ತಕದಲ್ಲಿ ಬರೆದಿಡುತ್ತಾರೆ. ಅದೇ ಪುಸ್ತಕವನ್ನು ಮುಂದೆಂದೋ ನೋಡಿದಾಗ ಮತ್ತೆ ವಿದ್ಯಾರ್ಥಿಯ ನೆನಪು, ಪರಿಸರ, ಅನುಭವ ಹಾಗೂ ಮೆದುಳಿನಲ್ಲಿ ಸಂಗ್ರಹವಾಗಿರುವ ಮಾಹಿತಿಯ ಆಧಾರದ ಮೇಲೆ ಅದು ಅರ್ಥವಾಗುತ್ತಹೋಗುತ್ತದೆ. ನೆನಪುಗಳು ಎಷ್ಟು ಸಾಮಾನ್ಯೀಕರಿಸಲ್ಪಡಬಲ್ಲವು ಎಂಬುದರ ಆಧಾರ ಮೇಲೆ ಈ ಕ್ರೋಢೀಕರಣವು ಹೇಗೆ ನಡೆಯುತ್ತದೆ ಎಂದು ತೋರಿಸಲು ಇವರು ಈ 'ನ್ಯೂರಲ್ ನೆಟ್‌ವರ್ಕ್' ಅಥವಾ 'ನರಜಾಲವ್ಯವಸ್ಥೆ'ಯನ್ನು ಬಳಸಿಕೊಂಡಿದ್ದಾರೆ. ಈ ಹಿಂದೆ ಸಂಶೋಧಕರು ಅರಿತಿದ್ದ ವ್ಯವಸ್ಥಿತ ಕ್ರೋಢೀಕರಣ ಸಿದ್ಧಾಂತದಿಂದ ವಿವರಿಸಲಾಗದ ಮೆದುಳಿನ ನೆನಪಿನ ಜಾಲವನ್ನು ಈ ಸಿದ್ಧಾಂತವು ವಿವರಿಸಿತಂತೆ.

ಈ ಸಿದ್ಧಾಂತವನ್ನು ಬಳಸಿಕೊಂಡು ಮೆದುಳಿನಲ್ಲಿ ಎಷ್ಟು ನೆನಪು ಕ್ರೋಢೀಕರಣವಾಗುತ್ತದೆ ಎಂಬುದನ್ನು ಮುಂದಿನ ಹಂತದಲ್ಲಿ ಪ್ರಾಯೋಗಿಕವಾಗಿ ಪರೀಕ್ಷೆ ಮಾಡಲಾಗುತ್ತದೆ. ಈ ಕ್ರೋಢೀಕರಣವನ್ನು ನಿಯಂತ್ರಿಸುವ ನೆನಪುಗಳಲ್ಲಿ ನಮ್ಮ ಮೆದುಳು ನಿರೀಕ್ಷಿತ ಹಾಗೂ ಅನಿರೀಕ್ಷಿತ ಅಂಶಗಳ ವ್ಯತ್ಯಾಸಗಳನ್ನು ಹೇಗೆ ಗುರುತಿಸಬಲ್ಲದು, ವಿಭಾಗಿಸಬಲ್ಲದು ಎನ್ನುವುದನ್ನು ಪರೀಕ್ಷಿಸಲು ಅನುಕೂಲವಾಗುತ್ತದೆ ಎನ್ನುತ್ತಾರೆ, ಸಂಶೋಧಕರು. ನೆನಪು ಮತ್ತು ಮೆದುಳಿನ ನೆನಪನ್ನು ಸಂಗ್ರಹಿಸುವ, ವಿಂಗಡಿಸುವ ಹಾಗೂ ಶಾಶ್ವತವಾಗಿ ದಾಖಲಾಗಿಸುವ ಕಾರ್ಯವೈಖರಿಯನ್ನು ಅರ್ಥಮಾಡಿಕೊಳ್ಳುವುದು ಸಂಶೋಧಕರಿಗೆ ಮುಂದೆ ಮೆದುಳಿನ ಅರಿವಿನ ಸಮಗ್ರತೆ ಹಾಗೂ ಅದು ಹೇಗೆ ಮಾನವನ ಆರೋಗ್ಯ ಮತ್ತು ಕೃತಕ ಬುದ್ಧಿಮತ್ತೆಯಲ್ಲಿ ಸಹಾಯವಾಗಬಲ್ಲದು ಎಂಬುದರತ್ತ ಸಂಶೋಧನೆಗೆ ನಾಂದಿಯಾಗಬಲ್ಲದು ಎಂಬುದು ವಿಜ್ಞಾನಿಗಳ ಅಭಿಪ್ರಾಯ.

❖

ಗೂಗಲ್ ಲೆನ್ಸ್ ಜಗದ ಅಂಗೈಕಣ್ಣು

ಆಂಡ್ರಾಯ್ಡ್ ಸ್ಮಾರ್ಟ್ ಫೋನ್‌ನ ಹೋಂ ಸ್ಕ್ರೀನ್‌ನ ಸರ್ಚ್ ಬಾರ್‌ನ ಬಲತುದಿಯಲ್ಲೊಂದು ಕ್ಯಾಮೆರಾ ಲೆನ್ಸ್‌ನಂತೆ ಕಾಣಿಸುವ ಚಿಹ್ನೆಯಿದೆ. ಅದೇ ಗೂಗಲ್ ಲೆನ್ಸ್. ಅದರ ಸಾಧ್ಯತೆಗಳು ಅಗಾಧ.



ಗೂಗಲ್ ಲೆನ್ಸ್: ಪ್ರಜಾವಾಣಿಯನ್ನು ಇಂಗ್ಲಿಷಿನಲ್ಲಿಯೂ ಓದಬಹುದು

ಅವಿನಾಶ್ ಬಿ.

ಆಂಡ್ರಾಯ್ಡ್ ಸ್ಮಾರ್ಟ್ ಫೋನ್ ಅನ್ನು ಬಳಸುತ್ತಿರುವವರ ಫೋನ್‌ನಲ್ಲಿ ಹೋಂ ಸ್ಕ್ರೀನ್‌ನಲ್ಲಿಯೇ ಗೂಗಲ್ ಹುಡುಕಾಟದ ಪಟ್ಟಿ ('ಸರ್ಚ್ ಬಾರ್') ಇರುವುದನ್ನು ನಾವು ನೋಡಿರುತ್ತೇವೆ. ಈ ಸರ್ಚ್ ಬಾರ್‌ನ ಬಲ ತುದಿಯಲ್ಲೊಂದು ಕ್ಯಾಮೆರಾ ಲೆನ್ಸ್‌ನಂತೆ ಕಾಣಿಸುವ ಚಿಹ್ನೆಯಿದೆ. ಆದರೆ, ಬಹುತೇಕರಿಗೆ ಇದರ ಉಪಯೋಗ ಏನು ಎಂಬುದು ತಿಳಿದಿಲ್ಲ. 'ಚಾಟ್‌ಜಿಪಿಟಿ' ಎಂಬ 'ಆರ್ಟಿಫಿಶಿಯಲ್ ಇಂಟೆಲಿಜೆನ್ಸ್' ಆಧಾರಿತ ತಂತ್ರಜ್ಞಾನವು ಭಾರಿ ಸದ್ದು ಮಾಡುವ ಮೊದಲೇ, ಉಪಯುಕ್ತವಾಗಿ ಸಹಕರಿಸುತ್ತಿದ್ದ ಮತ್ತು ಈಗಲೂ ಕ್ಷಿಪ್ರವಾಗಿ ಸಹಕರಿಸುವ ಈ ಐಕಾನ್ ಹೆಸರು 'ಗೂಗಲ್ ಲೆನ್ಸ್'. ಈ ಲೆನ್ಸ್ ಬಳಸಿದರೆ, ಗೂಗಲ್ ಸರ್ಚ್ ಪುಟಕ್ಕೆ ಹೋಗಿ, ಟೈಪ್ ಮಾಡಿ ಅಂತರ್ಜಾಲದಲ್ಲಿ ಮಾಹಿತಿ ತಿಳಿಯುವ ಸುತ್ತುಬಳಸುವ ಶ್ರಮ ಕಡಿಮೆಯಾಗುತ್ತದೆ. ಒಂದೇ ಮಾತಲ್ಲಿ ಹೇಳುವುದಾದರೆ, ಫೋಟೊ ತೆಗೆದ ಕ್ಷಣಾರ್ಧದಲ್ಲಿ ನಮ್ಮ ಮುಂದೆ ಆ ಕುರಿತು ಮಾಹಿತಿಯನ್ನು ತಂದಿಡುವ ತಂತ್ರಜ್ಞಾನ ಈ ಗೂಗಲ್ ಲೆನ್ಸ್.

ಪ್ರಧಾನ ಉಪಯೋಗಗಳು

ಒಂದು ಚಿತ್ರ ನಮ್ಮಲ್ಲಿದ್ದರೆ, ಅದು ಎಲ್ಲೆಲ್ಲ ಬಳಕೆಯಾಗಿದೆ, ಅದರಂತೆ ಇರುವ ಬೇರೆ ಚಿತ್ರ ಅಥವಾ ವಸ್ತು ಇದೆಯೇ ಎಂದು ತಿಳಿಯಬಹುದು; ಪರವೂರಿಗೆ ಹೋದಾಗ ಯಾವುದಾದರೂ ಸೈನ್ ಬೋರ್ಡ್ ಆ ದೇಶದ ಭಾಷೆಯಲ್ಲಿದ್ದರೆ, ಕ್ಷಣಾರ್ಧದಲ್ಲಿ ಅದನ್ನು ನಮಗೆ ತಿಳಿದಿರುವ ಭಾಷೆಗೆ ಅನುವಾದಿಸಿ ಓದಿಕೊಳ್ಳಬಹುದು; ಒಂದು ಪರಭಾಷಾ ಪತ್ರಿಕೆಯ ಸುದ್ದಿಯನ್ನು ನಮ್ಮದೇ ಭಾಷೆಯಲ್ಲಿ ಓದಬಹುದು; ನಾಮಫಲಕ ಅಥವಾ ಪತ್ರಿಕೆಯ ಪಠ್ಯವನ್ನೂ ನಕಲಿಸಿಕೊಳ್ಳಬಹುದು; ನಮ್ಮ ಮುಂದಿರುವ ಪ್ರಾಣಿ, ಪಕ್ಷಿಗಳ, ವಸ್ತುಗಳ ಪೂರ್ವಾಪರ ತಿಳಿದುಕೊಳ್ಳಬಹುದು. ಇಷ್ಟೇ ಅಲ್ಲ, ಮಕ್ಕಳಿಗೆ ಹೋಮ್ ವರ್ಕ್ ಮಾಡುವುದಕ್ಕೂ ನೆರವಾಗಬಲ್ಲದು!

ಇಷ್ಟು ಕೆಲಸಗಳನ್ನು ಮಾಡಬಲ್ಲ ಗೂಗಲ್ ಲೆನ್ಸ್ ಎಂಬುದು ದೃಶ್ಯ ಆಧಾರಿತ, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಕಾರ್ಯಕ್ಷಮತೆಯುಳ್ಳ ಕಂಪ್ಯೂಟಿಂಗ್ ಸಾಮರ್ಥ್ಯದ ತಂತ್ರಜ್ಞಾನ.

ಬಳಕೆ ಹೇಗೆ?

ಫೋನ್‌ನಲ್ಲಿ ಗೂಗಲ್ ಆ್ಯಪ್ ಇರಬೇಕು. ಹೆಚ್ಚಿನ ಆಂಡ್ರಾಯ್ಡ್ ಫೋನ್‌ಗಳಲ್ಲಿ ಮೊದಲೇ ಅಳವಡಿಸಿರುತ್ತದೆ ಮತ್ತು ಹೋಂ ಸ್ಕ್ರೀನ್‌ನಲ್ಲೇ ಗೂಗಲ್ ಸರ್ಚ್ ಬಾರ್ ಕಾಣಿಸುತ್ತದೆ. ಅದರ ಬಲ ತುದಿಯಲ್ಲಿರುವ ಲೆನ್ಸ್ ಬಟನ್ ಒತ್ತಿ. ಅದು ಕ್ಯಾಮೆರಾಕ್ಕೆ ಪ್ರವೇಶಾನುಮತಿ ಕೇಳುತ್ತದೆ. ನಂತರ Search With Your Camera ಎಂಬ ಆಯ್ಕೆಯನ್ನು ಒತ್ತಿ. ಕೆಳಭಾಗದಲ್ಲಿ ಹಲವು ಆಯ್ಕೆಗಳಿರುತ್ತವೆ. ಟ್ರಾನ್ಸ್‌ಲೇಟ್, ಟೆಕ್ಸ್ಟ್, ಸರ್ಚ್, ಹೋಂವರ್ಕ್, ಶಾಪಿಂಗ್, ಪ್ಲೇಸಸ್ ಮುಂತಾದವು. ಬೇಕಾದುದನ್ನು ಸ್ಲೈಡ್ ಮಾಡಿಕೊಳ್ಳಿ. ಟೆಕ್ಸ್ಟ್ ಒತ್ತಿದರೆ, ನಕಲಿಸಬೇಕಾದ ಪಠ್ಯದ ಫೋಟೊ ತೆಗೆಯುವಂತೆ ಸೂಚನೆ ದೊರೆಯುತ್ತದೆ. ಕ್ಯಾಮೆರಾ ಮೂಲಕ ಪಠ್ಯವನ್ನು ಕ್ಲಿಕ್ ಮಾಡಿ. 'ಸೆಲೆಕ್ಟ್ ಆಲ್' ಆಯ್ಕೆಯಾಗಿರುತ್ತದೆಯಾದರೂ, ನಮಗೆ ಬೇಕಾದಷ್ಟೇ ಪಠ್ಯವನ್ನು ನಕಲು ಮಾಡಿಕೊಳ್ಳಬೇಕಿದ್ದರೆ, ಸ್ಕ್ರೀನ್ ಮೇಲೆ ಬೆರಳಿನಿಂದ ಒತ್ತಿ ಹಿಡಿಯಿರಿ. ಅಲ್ಲಿ ಪಠ್ಯದ ಭಾಗವನ್ನು ಆಯ್ಕೆ ಮಾಡುವ ಆದಿ ಮತ್ತು ಅಂತ್ಯದ ಬಟನ್‌ಗಳು ಕಾಣಿಸುತ್ತವೆ. ಅವುಗಳನ್ನು ಸರಿಯಾದ ಸ್ಥಳಕ್ಕೆ ಸ್ಲೈಡ್ ಮಾಡಿದ ಬಳಿಕ, ಕೆಳಗೆ ಸಾಕಷ್ಟು ಆಯ್ಕೆಗಳು ಗೋಚರಿಸುತ್ತವೆ. 'ಕಾಪಿ ಟೆಕ್ಸ್ಟ್' (ನಕಲಿಸಲು), 'ಲಿಸನ್' (ಕೇಳಿಸಿಕೊಳ್ಳಲು), 'ಟ್ರಾನ್ಸ್‌ಲೇಟ್' (ಅನುವಾದಿಸಲು), 'ಸರ್ಚ್' (ಹುಡುಕಲು), 'ಕಾಪಿ ಟು ಕಂಪ್ಯೂಟರ್' (ಕಂಪ್ಯೂಟರಿಗೆ ಸೇರಿಸಲು) ಆಯ್ಕೆಗಳಿರುತ್ತವೆ.

ಪಿಡಿಎಫ್, ಫೋಟೊ ಮತ್ತು ಸ್ಕ್ರೀನ್‌ಶಾಟ್‌ನಿಂದಲೂ ಪಠ್ಯವನ್ನು ನಕಲಿಸಬಹುದು.

ಬೇರೆ ಭಾಷೆಯಲ್ಲಿ ಓದಿ!

ಮುಖ್ಯವಾದ ಉಪಯೋಗವೆಂದರೆ, ಪಠ್ಯಕ್ಕೆ ಸಂಬಂಧಿಸಿದ್ದು. ನಿಮ್ಮಲ್ಲಿ ಹಳೆಯ ಪುಸ್ತಕಗಳಿದ್ದರೆ ಅದನ್ನು ಡಿಜಿಟಲ್ ರೂಪಕ್ಕೆ ಪರಿವರ್ತಿಸಲು ಈ ಲೆನ್ಸ್ ಬಳಸಬಹುದು. ಅಥವಾ ಹೊರ ದೇಶ ಇಲ್ಲವೇ ಹೊರ ರಾಜ್ಯಕ್ಕೆ ಹೋದಾಗ, ಅಲ್ಲಿನ ಭಾಷೆಯಲ್ಲಿರುವ ಸೈನ್ ಬೋರ್ಡ್ ಮೇಲೆ ಗೂಗಲ್ ಲೆನ್ಸ್ ಹಿಡಿದರೆ, ಅದನ್ನು ನಮ್ಮ ಭಾಷೆಗೆ ಅನುವಾದಿಸಿ ಅರ್ಥ ಮಾಡಿಕೊಳ್ಳಬಹುದಾಗಿದೆ.

ಹೀಗೆ, ಗೂಗಲ್ ಟ್ರಾನ್ಸ್‌ಲೇಟರ್ ಎಂಜಿನ್ ಬಳಸಿ ಗೂಗಲ್ ಲೆನ್ಸ್ ಮಾಡುವ ಅನುವಾದದ ಕಾರ್ಯವಂತೂ ಅದ್ಭುತವೇ ಸರಿ. ಆಂಗ್ಲ, ಕನ್ನಡ ಅಥವಾ ಯಾವುದೇ ಭಾಷೆಯಲ್ಲಿರುವ ಪತ್ರಿಕೆಯನ್ನು ಕ್ಷಣಾರ್ಧದಲ್ಲಿ ಫ್ರೆಂಚ್, ಜರ್ಮನಿ ಅಥವಾ ಭಾರತೀಯ ಭಾಷೆಗಳಿಗೂ ತರ್ಜುಮೆ ಮಾಡಿ ಓದಬಹುದಾಗಿದೆ. ಗೂಗಲ್ ಅನುವಾದ ತಂತ್ರಜ್ಞಾನವು ಶೇ.100ರಷ್ಟು ನಿಖರವಾಗಿರುವುದಿಲ್ಲ ಎಂಬುದು ಗಮನದಲ್ಲಿರಬೇಕು. ಅದು ಹಿಂದಿಗಿಂತ ಸಾಕಷ್ಟು ಸುಧಾರಣೆಯಾಗಿದೆ ಮತ್ತು ಸುಧಾರಣೆ ಆಗುತ್ತಲೇ ಇರುತ್ತದೆ.

ಚಿತ್ರಮಾಹಿತಿ

ಒಂದು ಚಿತ್ರ ಕಂಡರೆ, ಅದೇ ರೀತಿಯ ಮತ್ತಷ್ಟು ಚಿತ್ರಗಳನ್ನು ಅಂತರ್ಜಾಲದಲ್ಲಿ ನೋಡುವುದಕ್ಕೆ ಲೆನ್ಸ್ ಬಳಸಬಹುದು. ಉದಾಹರಣೆಗೆ, ಒಂದು ಗುಬ್ಬಚ್ಚಿಯ ಚಿತ್ರದ ಮೇಲೆ ಲೆನ್ಸ್ ಫೋಕಸ್ ಮಾಡಿದರೆ, ಗುಬ್ಬಚ್ಚಿ ಕುರಿತಾದ ಸಮಗ್ರ ಮಾಹಿತಿಯನ್ನು, ಅದೇ ರೀತಿಯ ಮತ್ತಷ್ಟು ಚಿತ್ರಗಳನ್ನು ಗೂಗಲ್ ಸರ್ಚ್ ಎಂಜಿನ್ ಮೂಲಕ ನೇರವಾಗಿ ಕಾಣಿಸಬಹುದು. ಒಂದು ಆಹಾರವಸ್ತುವಿನ ಮೇಲೆ, ಉದಾಹರಣೆಗೆ ಗೋಬಿ ಮಂಚೂರಿ ಚಿತ್ರದ ಮೇಲೆ ಗೂಗಲ್ ಕಣ್ಣನ್ನು (ಲೆನ್ಸ್) ಹಾಯಿಸಿದರೆ, ಗೋಬಿ ಮಂಚೂರಿ ಮಾಡಲು ಏನೇನು ಸಾಮಗ್ರಿ ಬೇಕು, ಮಾಡುವ ವಿಧಾನ - ಹೀಗೆ ಚಿತ್ರ, ಮಾಹಿತಿ ಹಾಗೂ ವಿಡಿಯೊಗಳು ನಿಮ್ಮ ಸ್ಕ್ರೀನ್ ಮೇಲಿರುತ್ತದೆ. ಇದು ಒಂದು ರೀತಿಯಲ್ಲಿ ಗೂಗಲ್ ಹುಡುಕಾಟದ ಅತ್ಯಾಧುನಿಕ ರೂಪ.

ಕ್ಯಾಲೆಂಡರ್, ಕ್ಯುಆರ್ ಕೋಡ್

ಇಮೇಲ್‌ನಲ್ಲಿ ಅಥವಾ ಆಮಂತ್ರಣ ಪತ್ರಿಕೆಯಲ್ಲಿರುವ ದಿನಾಂಕದ ಮಾಹಿತಿಯ ಮೇಲೆ ಗೂಗಲ್ ಲೆನ್ಸ್ ಹಿಡಿದರೆ, ಅದನ್ನು ನಮ್ಮ ಕ್ಯಾಲೆಂಡರ್‌ಗೆ (ದಿನಚರಿ) ಸೇರಿಸುವ ಆಯ್ಕೆಯಿದ್ದು, ಆಯಾ ದಿನಾಂಕದಂದು ನಮಗೆ ಫೋನ್ ನೆನಪಿಸಬಲ್ಲುದು.

ಅಂತೆಯೇ, ಗೂಗಲ್ ಲೆನ್ಸ್ ಅನ್ನು QR ಕೋಡ್ ಸ್ಕ್ಯಾನರ್ ಆಗಿಯೂ ಬಳಸಬಹುದು. 'ಪ್ರಜಾವಾಣಿ' ಪತ್ರಿಕೆಯಲ್ಲಿ ಬರುವ ವಿಶೇಷ ಸುದ್ದಿಗಳಿಗೆ ಸಂಬಂಧಿಸಿದ ಆಕರ್ಷಕ ವಿಡಿಯೊಗಳನ್ನು ನೋಡಲು ಸುದ್ದಿಯ ಜೊತೆಗೆ ಕ್ಯುಆರ್ ಕೋಡ್ ನೀಡಲಾಗಿರುತ್ತದೆ. ಇದಕ್ಕಾಗಿ ಪ್ರತ್ಯೇಕ ಕ್ಯುಆರ್ ಕೋಡ್ ಸ್ಕ್ಯಾನರ್ ಆ್ಯಪ್ ಅಳವಡಿಸಬೇಕಾಗಿಲ್ಲ. ಲೆನ್ಸ್ ಮೂಲಕವೇ ಕೋಡ್ ಮೇಲೆ ಹಿಡಿದಾಗ, ಅದು ಸಂಬಂಧಿಸಿದ ವಿಡಿಯೊಗೆ (ಅಥವಾ ನಿರ್ದಿಷ್ಟ ಜಾಲತಾಣಕ್ಕೆ) ನಿಮ್ಮನ್ನು ಕರೆದೊಯ್ಯುತ್ತದೆ. ಈಗೀಗ ಆಮಂತ್ರಣ ಪತ್ರಿಕೆಗಳಲ್ಲಿ ಸ್ಥಳದ ಮಾಹಿತಿ ಇರುವ ಕ್ಯುಆರ್ ಕೋಡ್ ಕಾಣಿಸುತ್ತದೆ. ಅದರ ಮೇಲೆ ಹಿಡಿದರೆ ನೇರವಾಗಿ ಗೂಗಲ್ ಮ್ಯಾಪ್ ತೆರೆದು ದಾರಿ ತೋರಿಸುತ್ತದೆ.

ಹೋಂ ವರ್ಕ್‌ಗೂ ನೆರವು!

ಇಷ್ಟೇ ಅಲ್ಲ, ಮಕ್ಕಳಿಗೆ ಮನೆಗೆಲಸ ಮಾಡುವುದಕ್ಕೂ ಈ ಲೆನ್ಸ್ ಸುಲಭ ಮಾಡುತ್ತದೆ. ವಿಶೇಷವಾಗಿ ಯಾವುದಾದರೂ ಗಣಿತದ ವಿಷಯದ ಮೇಲೆ ಗೂಗಲ್ ಲೆನ್ಸ್ ಹಿಡಿದರೆ, ಅದಕ್ಕೆ ಉತ್ತರವನ್ನು ಲೆಕ್ಕಾಚಾರ ಮಾಡಿ ನಮ್ಮ ಮುಂದಿಡುತ್ತದೆ. ಉದಾಹರಣೆಗೆ, 123456 x 654321 ಎಷ್ಟು ಎಂದು ತಕ್ಷಣ ತಿಳಿಯಬೇಕಿದ್ದರೆ, ಇದರ ಮೇಲೆ ಗೂಗಲ್ ಲೆನ್ಸ್ ಹಿಡಿದರಾಯಿತು. ಕೆಳಭಾಗದಲ್ಲಿ 'Home Work' ಎಂಬ ಬಟನ್ ಒತ್ತಿದ ಕ್ಷಣ ಮಾತ್ರದಲ್ಲಿ ಉತ್ತರ ಲಭ್ಯವಾಗುತ್ತದೆ.

ಗೂಗಲ್ ಲೆನ್ಸ್‌ನಲ್ಲಿರುವ 'ಕಾಪಿ ಟು ಕಂಪ್ಯೂಟರ್' ಎಂಬ ಆಯ್ಕೆ ಬಳಸಬೇಕಿದ್ದರೆ, ಫೋನ್‌ಗೆ ಲಾಗಿನ್ ಆಗಿರುವ ಗೂಗಲ್ ಐಡಿಯಿಂದ ಕಂಪ್ಯೂಟರಿನಲ್ಲಿ ಕ್ರೋಮ್ ಬ್ರೌಸರ್‌ಗೂ ಲಾಗಿನ್ ಆಗಿರಬೇಕಾಗುತ್ತದೆ. ಇದರ ಮೂಲಕ, ಫೋನ್‌ನಲ್ಲಿ ಸೆರೆಹಿಡಿದ ಪಠ್ಯವನ್ನು ನೇರವಾಗಿ ಕಂಪ್ಯೂಟರ್‌ನ ಬ್ರೌಸರ್‌ಗೆ ರವಾನಿಸಬಹುದು.

ಹೀಗೆ ಅಂಗೈಯಲ್ಲೇ ಜಗತ್ತು ಎಂಬ ಮಾತು ಗೂಗಲ್‌ಗೆ ಹೇಗೆ ಅನ್ವಯವಾಗುತ್ತದೋ, ಗೂಗಲ್ ಲೆನ್ಸ್‌ಗೂ ಅನ್ವಯವಾಗುತ್ತದೆ!

❖

ನೀರಜಾ ಅವರ 'ಹೌ ಪ್ರೈಮ್ ಮಿನಿಸ್ಟರ್ ಡಿಸೈಡ್' ಕೃತಿಯಲ್ಲಿ ಪ್ರತಿಪಾದನೆ

ಆರೆಸ್ಸೆಸ್ ಮುಖಂಡರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದ ಇಂದಿರಾಗಾಂಧಿ!

ಇಂದಿರಾ ಗಾಂಧಿ

ನವದೆಹಲಿ (ಪಿಟಿಐ): 'ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಬಹುತೇಕ ನಾಯಕರೊಂದಿಗೆ ಉತ್ತಮ ಸಂಬಂಧ ಹೊಂದಿದ್ದರು. ಆದರೆ, ಸಂಘ ಮತ್ತು ತಮ್ಮ ನಡುವೆ ಎಚ್ಚರಿಕೆಯಿಂದ ಅಂತರವನ್ನೂ ಕಾಯ್ದುಕೊಂಡಿದ್ದರು...' ಎಂಬ ಆಸಕ್ತಿಕರ ಮಾಹಿತಿ ಪತ್ರಕರ್ತೆ ನೀರಜಾ ಚೌಧರಿ ಅವರ ಕೃತಿಯಲ್ಲಿದೆ.

'ಆರ್‌ಎಸ್‌ಎಸ್ ತಮ್ಮ ಸಹಾಯಕ್ಕೆ ಬಂದಾಗ ಅದನ್ನು ತಮ್ಮ ಉದ್ದೇಶಗಳಿಗೆ ಬಳಸಿಕೊಂಡಿದ್ದ ಇಂದಿರಾ, ಎಚ್ಚರಿಕೆಯಿಂದಲೇ ಸಂಘದಿಂದ ಅಂತರ ಕಾಯ್ದುಕೊಂಡಿದ್ದರು' ಎಂದು ನೀರಜಾ ಅವರು ತಮ್ಮ 'ಹೌ ಪ್ರೈಮ್ ಮಿನಿಸ್ಟರ್ ಡಿಸೈಡ್' ಕೃತಿಯಲ್ಲಿ ವಿವರಿಸಿದ್ದಾರೆ.

ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಆರ್‌ಎಸ್‌ಎಸ್, ಇಂದಿರಾ ಅವರ ಜತೆಗೆ ಸಂಧಾನಕ್ಕೆ ಮುಂದಾಗಿತ್ತು ಎಂಬುದನ್ನೂ ಕೃತಿ ಪ್ರತಿಪಾದಿಸಿದೆ.

'ಆರ್‌ಎಸ್‌ಎಸ್ ಮುಖ್ಯಸ್ಥ ಬಾಳಾಸಾಹೇಬ್ ದೇವರಸ್ ಅವರು ಇಂದಿರಾ ಅವರಿಗೆ ಹಲವು ಬಾರಿ ಪತ್ರ ಬರೆದಿದ್ದರು. ಕೆಲ ಆರ್‌ಎಸ್‌ಎಸ್ ನಾಯಕರು ಕಪಿಲ್ ಮೋಹನ್ ಮೂಲಕ ಸಂಜಯ್ ಗಾಂಧಿ ಅವರನ್ನು ಸಂಪರ್ಕಿಸಿದ್ದರು. ಈ ಸಂದರ್ಭದಲ್ಲಿ ಎರಡೂ ಕಡೆ ಇಂದಿರಾ ಗಮನವಿರಿಸಬೇಕಾಗಿತ್ತು. ಬಲು ಸೂಕ್ಷ್ಮವಾಗಿ ಈ ಸನ್ನಿವೇಶ ವನ್ನು ಇಂದಿರಾ ನಿಭಾಯಿಸಿದ್ದರು' ಎಂದು ನೀರಜಾ ವಿವರಿಸಿದ್ದಾರೆ.

'ಮುಸ್ಲಿಮರಿಗೆ ಕಾಂಗ್ರೆಸ್ ಮೇಲಿದ್ದ ಅಸಮಾಧಾನವನ್ನು ಗ್ರಹಿಸಿದ್ದ ಇಂದಿರಾ, ತಮ್ಮ ತಟಸ್ಥ ನಿಲುವಿನ ಮೂಲಕ ಆರ್‌ಎಸ್‌ಎಸ್ ಸಹಾಯ ಪಡೆಯಬಹುದೆಂದು ಅಂದುಕೊಂಡಿದ್ದರು. ಆ ಮೂಲಕ ತಮ್ಮ ರಾಜಕಾರಣದಲ್ಲಿ ಹಿಂದುತ್ವವನ್ನು ತರಲು ಬಯಸಿದ್ದರು. 1980ರಲ್ಲಿ ಒಂದೆಡೆ ಬಿಜೆಪಿಯ ಅಟಲ್ ಬಿಹಾರಿ ವಾಜಪೇಯಿ ಅವರು ಜಾತ್ಯತೀತ ನಿಲುವಿನ ಇಮೇಜ್ ಪಡೆಯಲು ಪ್ರಯತ್ನಿಸುತ್ತಿದ್ದರೆ, ಮತ್ತೊಂದೆಡೆ ಇಂದಿರಾ ಗಾಂಧಿ ಕಾಂಗ್ರೆಸ್ ಅನ್ನು ಹಿಂದೂಕರಣ ಮಾಡಲು ಯತ್ನಿಸುತ್ತಿದ್ದರು' ಎಂದೂ ವಿಶ್ಲೇಷಿಸಿದ್ದಾರೆ.

'1980ರಲ್ಲಿ ಇಂದಿರಾ ಮತ್ತೆ ಅಧಿಕಾರಕ್ಕೆ ಬರಲು ಆರ್‌ಎಸ್‌ಎಸ್ ಸಹಾಯ ಮಾಡಿತು. ಆರ್‌ಎಸ್‌ಎಸ್ ತಮ್ಮನ್ನು ಬೆಂಬಲಿಸುತ್ತದೆ ಎಂಬುದು ಅವರಿಗೆ ತಿಳಿದಿತ್ತು. ಆದರೆ, ಅದನ್ನು ಅವರು ಎಂದಿಗೂ ಸಾರ್ವಜನಿಕ ವಾಗಿ ಒಪ್ಪಿಕೊಳ್ಳಲಿಲ್ಲ. ಆರ್‌ಎಸ್‌ಎಸ್ ಬೆಂಬಲ ದೊರೆಯದಿದ್ದರೆ ತಾನು 353 ಸ್ಥಾನಗಳನ್ನು ಗೆಲ್ಲುತ್ತಿರಲಿಲ್ಲ ಎಂಬುದನ್ನು ಖಾಸಗಿಯಾಗಿ ಒಪ್ಪಿಕೊಂಡಿದ್ದರು' ಎಂದು ಇಂದಿರಾ ಗಾಂಧಿ ಅವರ ಆಪ್ತರಾದ ಅನಿಲ್ ಬಾಲಿ ಅವರು ಹೇಳಿದ್ದಾರೆ.

'ಆರ್‌ಎಸ್‌ಎಸ್‌ನ ಮುಖ್ಯಸ್ಥ ಬಾಳಾಸಾಹೇಬ್ ದೇವರಸ್ ಅವರು ಕಾರ್ಯಕ್ರಮವೊಂದರಲ್ಲಿ 'ಇಂದಿರಾ ಗಾಂಧಿ ಬಹುದೊಡ್ಡ ಹಿಂದೂ (ಇಂದಿರಾ ಗಾಂಧಿ ಬಹುತ್ ಬಡೀ ಹಿಂದೂ ಹೈ)' ಎನ್ನುವ ಹೇಳಿಕೆಯನ್ನೂ ಕೊಟ್ಟಿದ್ದರು. ಅಷ್ಟೇ ಅಲ್ಲ, ಬಾಳಾಸಾಹೇಬ್ ಮತ್ತು ಅವರ ಸಹೋದರ, ಇಂದಿರಾ ಗಾಂಧಿ ಅವರಲ್ಲಿ ಹಿಂದೂಗಳ ಸಂಭಾವ್ಯ ನಾಯಕಿಯನ್ನೂ ಕಂಡಿದ್ದರು' ಎಂದೂ ಬಾಲಿ ಹೇಳಿದ್ದಾರೆ.

'1971ರಲ್ಲಿ ಪಾಕಿಸ್ತಾನವನ್ನು ವಿಭಜಿಸಿ, ಆ ದೇಶವನ್ನು ದುರ್ಬಲಗೊಳಿಸಿದ್ದಕ್ಕಾಗಿ ಇಂದಿರಾ ಅವರನ್ನು ಆರ್‌ಎಸ್‌ಎಸ್ ಹೊಗಳಿತ್ತು. ಆರ್‌ಎಸ್‌ಎಸ್ ಮುಖಂಡ ಮಾಧವ್‌ರಾವ್ ಸದಾಶಿವರಾವ್ ಗೋಳವಲಕರ್ (ಗುರೂಜಿ) ಅವರು ಇಂದಿರಾ ಅವರಿಗೆ ಪತ್ರ ಬರೆದು, 'ಈ ಬಹುದೊಡ್ಡ ಸಾಧನೆಯ ಶ್ರೇಯಸ್ಸು ನಿಮಗೆ ಸಲ್ಲುತ್ತದೆ' ಎಂದು ಮೆಚ್ಚುಗೆ ಸೂಚಿಸಿದ್ದರು. ಅಷ್ಟೇ ಅಲ್ಲ, 1974ರಲ್ಲಿ ಪರಮಾಣು ಪರೀಕ್ಷೆಯನ್ನು ನಡೆಸಿ ಇಂದಿರಾ ಆರ್‌ಎಸ್‌ಎಸ್‌ನ ಮೆಚ್ಚುಗೆಗೆ ಪಾತ್ರವಾಗಿದ್ದರು. ಏಕೆಂದರೆ ಆರ್‌ಎಸ್‌ಎಸ್ ಎಂದಿಗೂ ಮಿಲಿಟರಿ ಸಾಮರ್ಥ್ಯ ಹೊಂದಿದ್ದ ಬಲಿಷ್ಠ ಭಾರತವನ್ನು ಬಯಸುತ್ತಿತ್ತು' ಎಂಬ ವಿಷಯವೂ ಕೃತಿಯಲ್ಲಿದೆ.

ದೇಶದ ವಿವಿಧ ಪ್ರಧಾನಿಗಳ ಕಾರ್ಯವೈಖರಿಯನ್ನು ವಿಶ್ಲೇಷಿಸಿರುವ ಈ ಕೃತಿಯಲ್ಲಿ, ತುರ್ತು ಪರಿಸ್ಥಿತಿಯ ಬಳಿಕ 1980ರಲ್ಲಿ ಇಂದಿರಾ ಗಾಂಧಿ ಅವರು ಶಾ ಬಾನೊ ಪ್ರಕರಣದ ಮೂಲಕ ಹೇಗೆ ಮರಳಿ ಅಧಿಕಾರದ ಗದ್ದುಗೆ ಏರಿದರು. ಮಂಡಲ್ ಕಮಿಷನ್, ಬಾಬರಿ ಮಸೀದಿ ಘಟನೆ ಕುರಿತು ವಿಶ್ಲೇಷಣೆ, ಪರಮಾಣು ಪರೀಕ್ಷೆಗಳಿಗೆ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಒಪ್ಪಿಗೆ, ಪ್ರಧಾನಿ ಮನಮೋಹನ್ ಸಿಂಗ್ ಅವಧಿಯಲ್ಲಿ ನಡೆದ ಭಾರತ– ಅಮೆರಿಕ ನಡುವಣ ಪರಮಾಣು ಒಪ್ಪಂದ... ಹೀಗೆ ಅನೇಕ ವಿಷಯಗಳ ಕುರಿತು ಆಳವಾದ ಒಳನೋಟ ಬೀರಲಾಗಿದೆ.

ಶೀಘ್ರದಲ್ಲೇ ಬಿಡುಗಡೆಯಾಗಲಿರುವ 'ಹೌ ಪ್ರೈಮ್ ಮಿನಿಸ್ಟರ್ ಡಿಸೈಡ್' ಕೃತಿಯನ್ನು ಅಲೆಫ್ ಬುಕ್ ಕಂಪನಿ ಪ್ರಕಾಶನ ಪ್ರಕಟಿಸಿದೆ.

ಹಿಂದೆಯೂ ಪೋಕ್ಸೊ ಅಡಿ ಬಂಧಿತನಾಗಿದ್ದ ಆರೋಪಿ

ಕೇರಳ ಅತ್ಯಾಚಾರ ಪ್ರಕರಣ

ಕೊಚ್ಚಿ (ಪಿಟಿಐ): ವಾರದ ಹಿಂದೆ ರಾಜ್ಯದಲ್ಲಿ ನಡೆದಿರುವ ಐದು ವರ್ಷದ ಬಾಲಕಿ ಮೇಲಿನ ಅತ್ಯಾಚಾರ ಹಾಗೂ ಕೊಲೆ ಪ್ರಕರಣದ ಆರೋಪಿಗೆ ಅಪರಾಧದ ಹಿನ್ನೆಲೆ ಇದ್ದು, ಆತನ ವಿರುದ್ಧ ಐದು ವರ್ಷದ ಹಿಂದೆಯೇ ಮಕ್ಕಳ ವಿರುದ್ಧ ಲೈಂಗಿಕ ಅಪರಾಧಗಳ ತಡೆ ಕಾಯ್ದೆ (ಪೋಕ್ಸೊ) ಪ್ರಕರಣ ದಾಖಲಾಗಿದೆ ಎಂದು ಕೇರಳ ರಾಜ್ಯ ಪೊಲೀಸರು ಮಂಗಳವಾರ ಹೇಳಿದ್ದಾರೆ.

'ಅತ್ಯಾಚಾರ, ಕೊಲೆ ಪ್ರಕರಣದಲ್ಲಿ ಬಂಧಿತನಾಗಿರುವ ಆರೋಪಿ ಅಶ್ಫಾಕ್ ಆಲಂ ನವ ದೆಹಲಿಯಲ್ಲಿ ಅಪರಾಧ ಕೃತ್ಯವೊಂದರಲ್ಲಿ ಭಾಗಿಯಾಗಿದ್ದು, ಒಂದು ತಿಂಗಳ ಕಾಲ ಸೆರೆವಾಸ ದಲ್ಲಿದ್ದ. ಬಳಿಕ ಜಾಮೀನು ಪಡೆದು ಹೊರಬಂದಿದ್ದ' ಎಂದು ಅಳುವ (ಗ್ರಾಮೀಣ) ಪೊಲೀಸ್ ವರಿಷ್ಠಾಧಿಕಾರಿ ವಿವೇಕ್‌ಕುಮಾರ್ ಸುದ್ದಿಗಾರರಿಗೆ ಮಾಹಿತಿ ನೀಡಿದ್ದಾರೆ.

'2018ರಲ್ಲಿ ಉತ್ತರಪ್ರದೇಶದ ಗಾಜಿಯಾಪುರದಲ್ಲಿ 10 ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯಕ್ಕೆ ಯತ್ನಿಸಿದ್ದ ಆರೋಪದಲ್ಲಿ ಅಲ್ಲಿನ ಪೊಲೀಸರು ಆತನನ್ನು ಬಂಧಿಸಿದ್ದರು. ಆರೋಪಿಯ ಹಿನ್ನೆಲೆ, ಮಾಹಿತಿಯನ್ನು ಪೊಲೀಸರು ಕಲೆ ಹಾಕುತ್ತಿರುವಾಗ ಆತನಿಗೆ ಅಪರಾಧದ ಹಿನ್ನೆಲೆ ಇರುವುದು ತಿಳಿದುಬಂದಿದೆ. ಆರೋಪಿ ಮೂಲತಃ ಬಿಹಾರದ ನಿವಾಸಿಯೇ, ಕೇರಳಕ್ಕೆ ವಲಸೆ ಕಾರ್ಮಿಕನಾಗಿ ಬರುವ ಮುನ್ನ ಆತ ಇತರೆಡೆಗಳಲ್ಲಿ ಅಪರಾಧ ಕೃತ್ಯಗಳನ್ನು ಎಸಗಿದ್ದಾನೆಯೇ ಎನ್ನುವ ಬಗ್ಗೆಯೂ ವಿವರವಾಗಿ ಪರಿಶೀಲಿಸಲಾಗುತ್ತಿದೆ' ಎಂದೂ ಅವರು ಹೇಳಿದ್ದಾರೆ.

'ಈ ನಡುವೆ ಆರೋಪಿಯನ್ನು ಅಳುವ ಸಮೀಪದ ಉಪ ಕಾರಾಗೃಹಕ್ಕೆ ಭಾನುವಾರ ಕರೆತರಲಾಗಿದ್ದು, ಆರೋಪಿಯ ಗುರುತು ಪತ್ತೆಗಾಗಿ ಪರೇಡ್ ನಡೆಸಲಾಗಿದೆ. ಈ ವೇಳೆ ಕನಿಷ್ಠ ಮೂವರು ಆರೋಪಿಯ ಗುರುತು ಪತ್ತೆ ಹಚ್ಚಿದ್ದಾರೆ' ಎಂದು ತಿಳಿಸಿರುವ ಪೊಲೀಸರು ಹೆಚ್ಚಿನ ಮಾಹಿತಿಯನ್ನು ಬಹಿರಂಗ ಪಡಿಸಿಲ್ಲ.

'ಪೊಲೀಸರು ನಡೆಸಿದ ಪರೇಡ್ ವೇಳೆ ಆರೋಪಿಯನ್ನು ಗುರುತು ಹಿಡಿದಿರುವೆ. ಆತನಿಗೆ ಗರಿಷ್ಠ ಪ್ರಮಾಣದ ಶಿಕ್ಷೆ ಆಗಬೇಕು. ಆ ದಿನ ಅಪರಾಧ ಕೃತ್ಯ ಎಸಗುವ ಮುನ್ನ ಆರೋಪಿ ಐದು ವರ್ಷದ ಬಾಲಕಿಯನ್ನು ಮಾರುಕಟ್ಟೆಯೊಳಗೆ ಕರೆದೊಯ್ದಿದ್ದನ್ನು ನೋಡಿರುವೆ. ಆತನ ವಿರುದ್ಧ ಯಾವ ಸ್ಥಳದಲ್ಲಾದರೂ ನಾನು ಸಾಕ್ಷ್ಯ ನುಡಿಯಲು ಸಿದ್ಧ' ಎಂದು ಸ್ಥಳೀಯ ಕಾರ್ಮಿಕ ತಾಜುದ್ದೀನ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

'ಆರೋಪಿ ಆಲಂನನ್ನು ವಶಕ್ಕೆ ಪಡೆಯಲು ಈಗಾಗಲೇ ಅರ್ಜಿ ಸಲ್ಲಿಸಿದ್ದೇವೆ. ಗುರುತು ಪತ್ತೆಯ ಪರೇಡ್ ಪ್ರಕ್ರಿಯೆ ಮುಗಿದ ಬಳಿಕ ಆತನನ್ನು ವಶಕ್ಕೆ ಪಡೆಯುವ ಸಾಧ್ಯತೆ ಇದೆ. ಉಳಿದ ವಿಚಾರಗಳನ್ನು ನ್ಯಾಯಾಲಯ ತೀರ್ಮಾನಿಸಲಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಬ್ರಿಜ್‌ಭೂಷಣ್ ಸಿಂಗ್ ವಿರುದ್ಧದ ಪ್ರಕರಣ ಸಮಾಪ್ತಿಗೆ ವಿರೋಧವಿಲ್ಲ'

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್‌ನ ನಿರ್ಗಮಿತ ಅಧ್ಯಕ್ಷ ಹಾಗೂ ಬಿಜೆಪಿ ಸಂಸದ ಬ್ರಿಜ್‌ಭೂಷಣ್ ಸಿಂಗ್ ವಿರುದ್ಧದ ಪ್ರಕರಣ ಸಮಾಪ್ತಿಗೊಳಿಸಿ ದೆಹಲಿ ಪೊಲೀಸರು ನ್ಯಾಯಾಲಯಕ್ಕೆ ವರದಿ ಸಲ್ಲಿಸಿರುವುದಕ್ಕೆ ಅವರ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಮಾಡಿದ್ದ ಅಪ್ರಾಪ್ತ ವಯಸ್ಕಳಾದ ಕುಸ್ತಿಪಟು ಮಂಗಳವಾರ ವಿರೋಧ ವ್ಯಕ್ತಪಡಿಸಲಿಲ್ಲ ಎಂದು ಸರ್ಕಾರಿ ವಕೀಲ ತಿಳಿಸಿದ್ದಾರೆ.

ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶೆ ಛವಿ ಕಪೂರ್ ಅವರ ಕೊಠಡಿಯಲ್ಲಿ ನಡೆದ ಕಲಾಪದ ವೇಳೆ, ಸಂತ್ರಸ್ತೆಳೆನ್ನಲಾದ ಬಾಲಕಿ ಮತ್ತು ಆಕೆಯ ತಂದೆ ತಮ್ಮ ಹೇಳಿಕೆಗಳನ್ನು ದಾಖಲಿಸಿದ್ದಾರೆ.

'ಪೊಲೀಸರು ನಡೆಸಿದ ತನಿಖೆ ಬಗ್ಗೆ ನಮಗೆ ತೃಪ್ತಿ ಇದ್ದು, ಪ್ರಕರಣ ಸಮಾಪ್ತಿಗೊಳಿಸಿ ದೆಹಲಿ ಪೊಲೀಸರು ವರದಿ ಸಲ್ಲಿಸಿರುವುದಕ್ಕೆ ನಮ್ಮ ವಿರೋಧ ಇಲ್ಲ ಎಂಬುದಾಗಿ ಇಬ್ಬರೂ ಹೇಳಿಕೆ ದಾಖಲಿಸಿದ್ದಾರೆ' ಎಂದು ಸರ್ಕಾರಿ ವಕೀಲ ಅತುಲ್ ಶ್ರೀವಾಸ್ತವ ಹೇಳಿದ್ದಾರೆ.

'ಇಬ್ಬರ ಹೇಳಿಕೆಗಳನ್ನು ದಾಖಲಿಸಿಕೊಂಡಿರುವ ನ್ಯಾಯಾಲಯ ಸೆಪ್ಟೆಂಬರ್ 6ಕ್ಕೆ ತೀರ್ಪು ಕಾಯ್ದಿರಿಸಿದೆ. ಪೊಲೀಸರು ಸಲ್ಲಿಸಿರುವ ವರದಿಯನ್ನು ಅಂಗೀಕರಿಸಬೇಕೋ ಬೇಡವೋ ಎಂಬ ಬಗ್ಗೆ ನ್ಯಾಯಾಲಯ ಅಂದು ತೀರ್ಪು ಪ್ರಕಟಿಸಲಿದೆ' ಎಂದು ಶ್ರೀವಾಸ್ತವ ಹೇಳಿದ್ದಾರೆ.

ಅಪ್ರಾಪ್ತ ವಯಸ್ಕ ಕುಸ್ತಿಪಟು ದಾಖಲಿಸಿದ್ದ ಪ್ರಕರಣವನ್ನು ರದ್ದುಪಡಿಸುವ ಸಂಬಂಧ ಪೊಲೀಸರು ಜೂನ್ 15ರಂದು ನ್ಯಾಯಾಲಯಕ್ಕೆ ವರದಿ ಸಲ್ಲಿಸಿದ್ದರು.

ಎಸ್‌ಡಿಆರ್‌ಎಫ್: ರಾಜ್ಯಕ್ಕೆ ₹929 ಕೋಟಿ

ನವದೆಹಲಿ: ಕರ್ನಾಟಕದ ರಾಜ್ಯ ವಿಪತ್ತು ಸ್ಪಂದನೆ ನಿಧಿಗೆ (ಎಸ್‌ಡಿಆರ್‌ಎಫ್) ಈ ವರ್ಷ ₹929 ಕೋಟಿ ಹಂಚಿಕೆ ಮಾಡಲಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯವು ಲೋಕಸಭೆಗೆ ಮಂಗಳವಾರ ತಿಳಿಸಿದೆ.

ಗೃಹ ಖಾತೆಯ ರಾಜ್ಯ ಸಚಿವ ನಿತ್ಯಾನಂದ ರಾಯ್, 'ಕೇಂದ್ರ ಸರ್ಕಾರದ ಪಾಲು ₹697 ಕೋಟಿ ಹಾಗೂ ರಾಜ್ಯ ಸರ್ಕಾರದ್ದು ₹232 ಕೋಟಿ. ಕೇಂದ್ರವು ಈಗಾಗಲೇ ₹348 ಕೋಟಿ ಬಿಡುಗಡೆ ಮಾಡಿದೆ' ಎಂದರು.

15ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ, ಎಲ್ಲ ರಾಜ್ಯಗಳ ಎಸ್‌ಡಿಆರ್‌ಎಫ್‌ಗೆ 2021–22ರಿಂದ 2025–26ರ ಅವಧಿಗೆ ₹1,28,122 ಕೋಟಿ ಹಂಚಿಕೆ ಮಾಡಿದೆ.

ಬದ್ರಿಗೆ ಜಾಮೀನು

ಚೆನ್ನೈ: ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ವಿರುದ್ಧ 'ಪ್ರಚೋದನಕಾರಿ ಟೀಕೆ' ಮಾಡಿದ್ದ ಆರೋಪದಡಿ ಬಂಧಿತರಾಗಿದ್ದ ಪ್ರಕಾಶಕ ಬದ್ರಿ ಶೇಷಾದ್ರಿಗೆ ಸ್ಥಳೀಯ ನ್ಯಾಯಾಲಯ ಮಂಗಳವಾರ ಜಾಮೀನು ನೀಡಿದೆ.

ಕುನ್ನಂನ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಮುಂದೆ ಬದ್ರಿಯನ್ನು ಹಾಜರುಪಡಿಸಿದ ಪೊಲೀಸರು ಕಸ್ಟಡಿಗೆ ಕೋರಿದರು. ಈ ಮನವಿಯನ್ನು ನ್ಯಾಯಾಲಯ ತಿರಸ್ಕರಿಸಿದೆ.

ಇತಿಹಾಸಕಾರ ರಾಮಚಂದ್ರ ಗುಹಾ, ಗಾಯಕ ಟಿ.ಎಂ.ಕೃಷ್ಣ, ಲೇಖಕ ಪೆರುಮಾಳ್ ಮುರುಗನ್ ಸೇರಿದಂತೆ 8 ಗಣ್ಯರು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್‌ಗೆ ಪತ್ರ ಬರೆದು ಬದ್ರಿಯನ್ನು ಜೈಲಿನಿಂದ ಬಿಡುಗಡೆಗೊಳಿಸಿ, ಅಭಿವ್ಯಕ್ತಿ ಸ್ವಾತಂತ್ರ್ಯ ಎತ್ತಿ ಹಿಡಿಯಬೇಕು ಎಂದಿದ್ದಾರೆ.

ಅಮೆರಿಕ ದೂತಾವಾಸದ ಮುಖ್ಯಸ್ಥರಾಗಿ ಕ್ರಿಸ್ಟೋಫರ್ ಹಾಜಸ್ ಅಧಿಕಾರ ಸ್ವೀಕಾರ

ಕ್ರಿಸ್ಟೋಫರ್ ಡಬ್ಲ್ಯು. ಹಾಜಸ್

ಚೆನ್ನೈ: ಚೆನ್ನೈನ ಅಮೆರಿಕ ದೂತಾವಾಸದ ಮುಖ್ಯಸ್ಥರಾಗಿ (ಕಾನ್ಸಲ್ ಜನರಲ್) ಕ್ರಿಸ್ಟೋಫರ್ ಡಬ್ಲ್ಯು. ಹಾಜಸ್ ಅವರು ಈಚೆಗೆ ಅಧಿಕಾರ ವಹಿಸಿಕೊಂಡರು.

'ಅಮೆರಿಕ-ಭಾರತ ಸಹಭಾಗಿತ್ವದ ಮಹತ್ವದ ಹೊತ್ತಿನಲ್ಲಿ ದಕ್ಷಿಣ ಭಾರತದಲ್ಲಿ ಅಮೆರಿಕವನ್ನು ಪ್ರತಿನಿಧಿಸುತ್ತಿರುವ ಗೌರವ ನನ್ನದು. ನಾವು ಸ್ಥಳೀಯ ಮತ್ತು ಪ್ರಾದೇಶಿಕವಾಗಿ ಮಾಡುವ ಕೆಲಸಗಳು ಉಭಯ ದೇಶಗಳ ನಡುವಣ ಶ್ರೀಮಂತ ವಾಣಿಜ್ಯ ಮತ್ತು ಶೈಕ್ಷಣಿಕ ಸಂಬಂಧಗಳು ಹಾಗೂ ಬಾಹ್ಯಾಕಾಶ ವಲಯವೂ ಸೇರಿದಂತೆ ದ್ವಿಪಕ್ಷೀಯ ಸಹಭಾಗಿತ್ವವನ್ನು ವಿಸ್ತಾರಗೊಳಿಸುವಲ್ಲಿ ಕೊಡುಗೆ ನೀಡಲಿವೆ' ಎಂದು ಹಾಜಸ್ ಹೇಳಿದ್ದಾರೆ.

'ಅಮೆರಿಕದ ಪೌರರಿಗೆ ಬೆಂಬಲ ನೀಡುವುದು ಹಾಗೂ ಕಾನ್ಸಲರ್ ಸೇವೆಗಳನ್ನು ಒದಗಿಸುವುದಕ್ಕೆ ನಮಗೆ ಹೆಮ್ಮೆಯಿದೆ' ಎಂದಿದ್ದಾರೆ.

'ಅಮೆರಿಕ - ಭಾರತ ನಡುವಿನ ಸಂಬಂಧವು ಎರಡು ಸರ್ಕಾರಗಳ ನಡುವೆ ಮಾತ್ರವಲ್ಲ, ಉಭಯ ದೇಶಗಳ ಜನರ ನಡುವಿನ ಸಂಬಂಧ ಎಂಬುದನ್ನು ನಮ್ಮ ಪ್ರಯತ್ನಗಳು ಎತ್ತಿ ತೋರುತ್ತಿವೆ. ನಮ್ಮ ಪ್ರಾಂತ್ಯದಲ್ಲಿ ಬರುವ ಕರ್ನಾಟಕ, ಕೇರಳ, ತಮಿಳುನಾಡು, ಮೂರು ಕೇಂದ್ರಾಡಳಿತ ಪ್ರದೇಶಗಳಾದ ಅಂಡಮಾನ್ ನಿಕೊಬಾರ್ ದ್ವೀಪ ಸಮೂಹ, ಲಕ್ಷದ್ವೀಪ ಮತ್ತು ಪುದುಚೇರಿಗಳಲ್ಲಿ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸಲು ಎದುರು ನೋಡುತ್ತಿದ್ದೇನೆ' ಎಂದು ಅವರು ತಿಳಿಸಿದ್ದಾರೆ.

ಹಾಜಸ್ ಅವರು 2000ರಲ್ಲಿ ವಿದೇಶಾಂಗ ಸೇವೆಗೆ ಸೇರಿಕೊಂಡಿದ್ದು ಜೆರುಸಲೇಂ, ವಿಯೆಟ್ನಾಂ, ಘಾನಾ, ಆಸ್ಟ್ರಿಯಾ, ಜರ್ಮನಿ, ಸ್ವಿಟ್ಜರ್‌ಲೆಂಡ್, ಜರ್ಮನಿ ಮೊದಲಾದೆಡೆಗಳಲ್ಲೂ ಕೆಲಸ ಮಾಡಿದ್ದಾರೆ.

ಮುಂಬೈ-ಜೈಪುರ ರೈಲಿನಲ್ಲಿ ನಡೆದ ಘಟನೆ

'ಪ್ಯಾಂಟ್ರಿ ಕಾರ್‌ವರೆಗೆ ಕರೆದೊಯ್ದು ಹತ್ಯೆ'

ಮುಂಬೈ(ಪಿಟಿಐ): ಮುಂಬೈ-ಜೈಪುರ ರೈಲಿನ 'ಬಿ-2' ಬೋಗಿಯಲ್ಲಿದ್ದ ಪ್ರಯಾಣಿಕ ಬೀದರ್‌ನ ಸೈಯದ್ ಎಸ್. ಎಂಬುವವರಿಗೆ ಬಂದೂಕು ತೋರಿಸಿ ಬೆದರಿಸಿದ್ದ ಆರ್‌ಪಿಎಫ್ ಕಾನ್‌ಸ್ಟೆಬಲ್ ಚೇತನ್ ಕುಮಾರ್ ಚೌಧರಿ, ಪ್ಯಾಂಟ್ರಿ ಕಾರ್ (ಅಡುಗೆ ಪರಿಕರಗಳಿರುವ ಕೋಚ್)ವರೆಗೆ ಹೋದ ನಂತರ ಅವರನ್ನು ಗುಂಡಿಕ್ಕಿ ಕೊಂದಿದ್ದ ಎಂದು ರೈಲ್ವೆ ಪೊಲೀಸ್ ಅಧಿಕಾರಿ ಮಂಗಳವಾರ ತಿಳಿಸಿದ್ದಾರೆ.

'ಸೈಯದ್ ಹಾಗೂ ಕಾನ್‌ಸ್ಟೆಬಲ್ ಚೌಧರಿ ಬಿ–2 ಮತ್ತು ಬಿ–1 ಬೋಗಿಗಳನ್ನು ದಾಟಿ, ಪ್ಯಾಂಟ್ರಿ ಕಾರ್ ತನಕ ಹೋಗುತ್ತಿದ್ದುದನ್ನು ಇತರ ಪ್ರಯಾಣಿಕರು ನೋಡುತ್ತಿದ್ದರು' ಎಂದು ತನಿಖೆಯಲ್ಲಿ ತಿಳಿದುಬಂದ ವಿವರಗಳನ್ನು ಉಲ್ಲೇಖಿಸಿ ಅಧಿಕಾರಿ ಹೇಳಿದ್ದಾರೆ.

'ಬಂದೂಕು ಪ್ರದರ್ಶಿಸುತ್ತಾ ಚೌಧರಿ ಹೋಗುತ್ತಿದ್ದುದನ್ನು ಕನಿಷ್ಠ ಐದು ಬೋಗಿಗಳಲ್ಲಿನ ಪ್ರಯಾಣಿಕರು ನೋಡಿದ್ದು, ಅವರ ವಿವರಗಳನ್ನು ಸಂಗ್ರಹಿಸಲಾಗುತ್ತಿದೆ. 10ಕ್ಕೂ ಹೆಚ್ಚು ಪ್ರಯಾಣಿಕರ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗಿದೆ' ಎಂದೂ ಅವರು ಹೇಳಿದ್ದಾರೆ.

'ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ. ಈ ಕೃತ್ಯದ ಹಿಂದಿರುವ ಉದ್ದೇಶ ಇನ್ನೂ ಸ್ಪಷ್ಟವಾಗಿಲ್ಲ' ಎಂದು ತಿಳಿಸಿದ್ದಾರೆ.

ಈ ಘಟನೆಯಲ್ಲಿ ಮೃತಪಟ್ಟ ಇತರ ಪ್ರಯಾಣಿಕರನ್ನು ಪಾಲ್ಘರ್ ನಿವಾಸಿ ಅಬ್ದುಲ್ ಖಾದರ್‌ಭಾಯ್ ಮೊಹ್ಮದ್ ಹುಸೇನ್ ಭಾನಪುರವಾಲಾ (58), ಬಿಹಾರದ ಮಧುಬನಿ ನಿವಾಸಿ ಅಸ್ಗರ್ ಅಬ್ಬಾಸ್ ಶೇಖ್ (48) ಎಂದು ಗುರುತಿಸಲಾಗಿದೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಅಜ್ಮೇರ್‌ಗೆ ಹೋದವರು ಮರಳಲಿಲ್ಲ

ಸೈಯದ್

ಬೀದರ್: ತಾಲ್ಲೂಕಿನ ಹಮಿಲಾಪುರದ ಸೈಯದ್ ಸೈಫುದ್ದೀನ್ ಮುನಿರುದ್ದೀನ್ (38) ಮೃತ ವ್ಯಕ್ತಿ. ಅವರಿಗೆ ಪತ್ನಿ, ಮೂವರು ಹೆಣ್ಣು ಮಕ್ಕಳಿದ್ದಾರೆ.

'ಸೈಫುದ್ದೀನ್ ಅವರು ಅಜ್ಮೇರ್ ದರ್ಗಾಕ್ಕೆ ಭೇಟಿ ಕೊಟ್ಟು ಜೈಪುರ-ಮುಂಬೈ ಸೆಂಟ್ರಲ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಹಿಂತಿರುಗುತ್ತಿದ್ದರು. ಕಾನ್‌ಸ್ಟೆಬಲ್ ಚೇತನ್‌ಕುಮಾರ್ ಚೌಧರಿ ಬಂದೂಕಿನಿಂದ ಗುಂಡು ಹಾರಿಸಿ ನಾಲ್ವರನ್ನು ಕೊಂದಿದ್ದ. ಅವರಲ್ಲಿ ಸೈಫುದ್ದೀನ್ ಕೂಡ ಸೇರಿದ್ದಾರೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚನ್ನಬಸವಣ್ಣ ಎಸ್.ಎಲ್. 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಅವಿಶ್ವಾಸ ನಿರ್ಣಯ: 8ರಿಂದ 3 ದಿನ ಚರ್ಚೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ವಿರುದ್ಧ ವಿರೋಧ ಪಕ್ಷಗಳು ಮಂಡಿಸಿರುವ ಅವಿಶ್ವಾಸ ನಿರ್ಣಯ ಕುರಿತು ಆಗಸ್ಟ್ 8ರಿಂದ 10ರ ವರೆಗೆ ಲೋಕಸಭೆಯಲ್ಲಿ ಚರ್ಚೆ ನಡೆಯಲಿದೆ.10ರಂದು ಪ್ರಧಾನಿ ಉತ್ತರಿಸುವ ಸಾಧ್ಯತೆ ಇದೆ.

ಮಂಗಳವಾರ ನಡೆದ ಲೋಕಸಭೆಯ ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.

ಅವಿಶ್ವಾಸ ನಿರ್ಣಯ ಕುರಿತು ಚರ್ಚೆಯನ್ನು ಕೈಗೆತ್ತಿಕೊಳ್ಳದಿರುವುದನ್ನು ಪ್ರತಿಭಟಿಸಿ 'ಇಂಡಿಯಾ' ಪಕ್ಷಗಳು ಸಭೆಯಿಂದ ಹೊರ ನಡೆದವು.

'ಆ. 8ರಂದು ಅವಿಶ್ವಾಸ ನಿರ್ಣಯ ಕುರಿತು ಚರ್ಚೆ ಆರಂಭಿಸುವ ತೀರ್ಮಾನಕ್ಕೆ ನಾವು ಒಪ್ಪಿಗೆ ನೀಡಬೇಕು ಎಂಬುದು ಸರ್ಕಾರದ ನಿಲುವಾಗಿತ್ತು. ಇದನ್ನು ಪ್ರತಿಭಟಿಸಿ ಕಲಾಪ ಸಲಹಾ ಸಮಿತಿ ಸಭೆಯಿಂದ ಹೊರ ನಡೆದೆವು' ಎಂದು ಡಿಎಂಕೆ ನಾಯಕ ಟಿ.ಆರ್.ಬಾಲು ಹೇಳಿದರು.

ಉಡುಪಿ ಕಾಲೇಜಿನ ಶೌಚಾಲಯದಲ್ಲಿ ವಿಡಿಯೊ ಚಿತ್ರೀಕರಣ ಪ್ರಕರಣ

ಎಸ್‌ಐಟಿ ರಚನೆ ಬೇಡಿಕೆ ತಳ್ಳಿಹಾಕಿದ ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಮಂಗಳೂರು/ಉಡುಪಿ: ಉಡುಪಿಯ ಪ್ಯಾರಾಮೆಡಿಕಲ್ ಕಾಲೇಜಿನ ಶೌಚಾಲಯದಲ್ಲಿ ವಿಡಿಯೊ ಚಿತ್ರೀಕರಣ ನಡೆಸಲಾಗಿದೆ ಎನ್ನಲಾದ ಪ್ರಕರಣದ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಬೇಕು ಎಂಬ ಬಿಜೆಪಿ ಬೇಡಿಕೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ತಳ್ಳಿಹಾಕಿದರು.

'ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ. ರಾಷ್ಟ್ರೀಯ ಮಹಿಳಾ ಆಯೋಗದವರು ಬಂದು ಪರಿಶೀಲಿಸಿ, 'ಕಾಲೇಜಿನ ಶೌಚಾಲಯದಲ್ಲಿ ರಹಸ್ಯ ಕ್ಯಾಮೆರಾ ಇಟ್ಟಿರಲಿಲ್ಲ' ಎಂದು ಹೇಳಿಕೆ ನೀಡಿದ್ದಾರೆ. ಡಿವೈಎಸ್ಪಿ ಹಂತದ ಅಧಿಕಾರಿ ತನಿಖೆ ನಡೆಸುತ್ತಿದ್ದು, ತನಿಖಾ ವರದಿ ನ್ಯಾಯಾಲಯಕ್ಕೆ ಸಲ್ಲಿಕೆಯಾಗಲಿ. ಆಮೇಲೆ ಈ ಬಗ್ಗೆ ಪರಿಶೀಲಿಸುತ್ತೇವೆ. ಪ್ರಕರಣದ ತನಿಖೆಯನ್ನು ವಿಶೇಷ ತನಿಖಾ ತಂಡಕ್ಕೆ ಹಸ್ತಾಂತರಿಸುವುದಕ್ಕೆ ಇದು ಸೂಕ್ತ ಸಂದರ್ಭ ಅಲ್ಲ' ಎಂದು ಪ್ರತಿಕ್ರಿಯಿಸಿದರು.

'ಕಾಲೇಜು ವಿದ್ಯಾರ್ಥಿನಿಯರು ತಮಾಷೆಗೆ ಈ ರೀತಿ ಮಾಡಿರಬಹುದು ಎಂದು ಗೃಹ ಸಚಿವರು ಹೇಳಿಕೆ ನೀಡಿರಬಹುದು. ಆದರೂ ಪ್ರಕರಣದ ತನಿಖೆ ನಡೆಯುತ್ತಿದೆ' ಎಂದರು.

ಮುಖ್ಯಮಂತ್ರಿಯವರ ಕುಟುಂಬದವರನ್ನು ಉಲ್ಲೇಖಿಸಿ ಉಡುಪಿ ಪ್ರಕರಣ ಕುರಿತು ಟ್ವೀಟ್ ಮಾಡಿದ ಮಹಿಳೆಯನ್ನು ಬಂಧಿಸಿದ್ದನ್ನು ಸಮರ್ಥಿಸಿಕೊಂಡ ಸಿದ್ದರಾಮಯ್ಯ, 'ಟೀಕೆ ಮಾಡುವ ನೆಪದಲ್ಲಿ ಕುಟುಂಬದ ಬಗ್ಗೆ ಏನು ಬೇಕಾದರೂ ಹೇಳಬಹುದಾ? ಟೀಕೆ ಬೇರೆ, ಸುಳ್ಳು ಸುದ್ದಿ ಹಬ್ಬಿಸುವುದು, ವೈಯಕ್ತಿಕ ತೇಜೋವಧೆ ಮಾಡುವುದು ಬೇರೆ' ಎಂದರು.

'ಸಾಮಾಜಿಕ ಜಾಲತಾಣದಲ್ಲಿ ಸರ್ಕಾರ ಅಥವಾ ವ್ಯಕ್ತಿ ವಿರುದ್ಧ ಸುಳ್ಳು ಸುದ್ದಿ ಹಬ್ಬಿಸಿದರೆ ಕ್ರಮ ತಗೆದುಕೊಳ್ಳುತ್ತೇವೆ. ಟೀಕೆ ಮಾಡಿದರೆ ಕ್ರಮ ತೆಗೆದುಕೊಳ್ಳಲ್ಲ' ಎಂದು ಸ್ಪಷ್ಟಪಡಿಸಿದರು.

ಕರಾವಳಿಯಲ್ಲಿ ಮತೀಯ ಗೂಂಡಾಗಿರಿ ಪ್ರಕರಣಗಳು ಹೆಚ್ಚುತ್ತಿರುವ ಕುರಿತು ಪ್ರತಿಕ್ರಿಯಿಸಿದ ಅವರು, 'ಯಾರೇ ಕಾನೂನು ಕೈಗೆತ್ತಿಕೊಂಡರೂ ತಪ್ಪು. ಕಾನೂನು ಕೈಗೆತ್ತಿಕೊಳ್ಳುವುದಕ್ಕೆ ಯಾರಿಗೂ ಅವಕಾಶ ನೀಡಬಾರದು. ಅಂತಹವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ' ಎಂದರು.

'ಪಶ್ಚಿಮ ಘಟ್ಟ ಸಂರಕ್ಷಣೆ ಕುರಿತ ಕಸ್ತೂರಿರಂಗನ್ ವರದಿ ಅನುಷ್ಠಾನದ ಬಗ್ಗೆ ಕೇಂದ್ರ ಸರ್ಕಾರ ನಿರ್ಧಾರ ತೆಗೆದುಕೊಳ್ಳುತ್ತದೆ. ನಾವು ಅದನ್ನು ಜಾರಿಗೆ ತರುವುದು ಬೇಡ ಎಂದಿದ್ದೆವು. ಆದರೆ, ಪರಿಸರ ರಕ್ಷಣೆ ಮಾಡುವುದರಲ್ಲಿ ನಾವು ಹಿಂದೆ ಬೀಳುವುದಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ವಿದೂಷಕನಿದ್ದಂತೆ. ಅವರ ಹೇಳಿಕೆಗಳಿಗೆ ಪ್ರತಿಕ್ರಿಯೆ ನೀಡುವುದಿಲ್ಲ. ಅವರ ಹೇಳಿಕೆ ಅವರಿಗೇ ತಿಳಿಯುವುದಿಲ್ಲ

ಸಿದ್ದರಾಮಯ್ಯ, ಮುಖ್ಯಮಂತ್ರಿ

'ಸೌಜನ್ಯ ಪ್ರಕರಣ: ತೀರ್ಪು ಓದಿದ ನಂತರ ಕ್ರಮ'

ಸಿದ್ದರಾಮಯ್ಯ

'ಧರ್ಮಸ್ಥಳದ ವಿದ್ಯಾರ್ಥಿನಿ ಸೌಜನ್ಯ ಕೊಲೆ ಪ್ರಕರಣವನ್ನು ಸಿಬಿಐ ತನಿಖೆ ನಡೆಸಿದೆ. ನ್ಯಾಯಾಲಯ ತೀರ್ಪು ನೀಡಿದೆ. ಪೋಷಕರು ಮರು ತನಿಖೆಗೆ ಒತ್ತಾಯಿಸಿದ್ದಾರೆ. ಈ ಮರುತನಿಖೆಗೆ ಮುನ್ನ ನ್ಯಾಯಾಲಯದ ತೀರ್ಪಿನ ವಿರುದ್ಧವಾಗಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬೇಕಾಗುತ್ತದೆ. ತೀರ್ಪಿನ ಪ್ರತಿ ನನಗೆ ಕೊಟ್ಟಿದ್ದಾರೆ. ಅದನ್ನು ಇನ್ನೂ ಓದಿಲ್ಲ. ಮೇಲ್ಮನವಿ ಸಲ್ಲಿಸಲು ಅವಕಾಶ ಇದ್ದರೆ, ತೀರ್ಪನ್ನು ಓದಿದ ನಂತರ ಈ ಬಗ್ಗೆ ಪರಿಶೀಲಿಸುತ್ತೇನೆ' ಎಂದು ಸಿದ್ದರಾಮಯ್ಯ ಹೇಳಿದರು.

ಸೌಜನ್ಯ ಕೊಲೆ ಪ್ರಕರಣ: ನ್ಯಾಯ ಒದಗಿಸಿ– ವೀರೇಂದ್ರ ಹೆಗ್ಗಡೆ



ವೀರೇಂದ್ರ ಹೆಗ್ಗಡೆ

ಉಜಿರೆ (ದಕ್ಷಿಣ ಕನ್ನಡ): 'ಧರ್ಮಸ್ಥಳದ ಪಾಂಗಾಳ ನಿವಾಸಿ ಸೌಜನ್ಯ ಕೊಲೆ ಪ್ರಕರಣವು ಪ್ರಸ್ತುತ ನ್ಯಾಯಾಲಯ, ಸರ್ಕಾರ ಮತ್ತು ತನಿಖಾ ಸಂಸ್ಥೆಯ ವ್ಯಾಪ್ತಿಯಲ್ಲಿ ಇರುವುದರಿಂದ ಸರ್ಕಾರ ಮತ್ತು ತನಿಖಾ ಸಂಸ್ಥೆ ಆದಷ್ಟು ಶೀಘ್ರ ನೊಂದ ಕುಟುಂಬಕ್ಕೆ ನ್ಯಾಯ ಒದಗಿಸಿಕೊಡಬೇಕು' ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಒತ್ತಾಯಿಸಿದ್ದಾರೆ.

'ಧರ್ಮಸ್ಥಳದ ಬಗ್ಗೆ ಅವಹೇಳನಕಾರಿ ಸುಳ್ಳು ಹೇಳಿಕೆ, ಆಪಾದನೆ, ವದಂತಿಗಳನ್ನು ಪಸರಿಸುತ್ತಿರುವ ಬಗ್ಗೆ ಭಕ್ತರು, ಅಭಿಮಾನಿಗಳು ಹಾಗೂ ಸಾರ್ವಜನಿಕರು ಯಾವುದೇ ಗೊಂದಲಕ್ಕೆ ಒಳಗಾಗಬಾರದು. 2012ರಲ್ಲಿ ಸೌಜನ್ಯ ಹತ್ಯೆಯಾದಾಗ ಉನ್ನತ ಮಟ್ಟದ ತನಿಖೆ ನಡೆಸಿ ಸತ್ಯಾಂಶ ಹೊರಬರುವಂತೆ, ದೇಶದ ಅತ್ಯುನ್ನತ ತನಿಖಾ ಸಂಸ್ಥೆಯಾದ ಸಿಬಿಐ ಮೂಲಕ ತನಿಖೆ ನಡೆಸುವಂತೆ ಧರ್ಮಸ್ಥಳದ ಪರವಾಗಿ ಮತ್ತು ನಮ್ಮ ಕುಟುಂಬದ ಪರವಾಗಿ ಒತ್ತಾಯಿಸಿದ್ದೆ' ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಸರ್ಕಾರವು ಸಿಬಿಐ ತನಿಖೆಗೆ ಆದೇಶಿಸಿತ್ತು. ತನಿಖೆ ನಡೆಸಿದ ಸಿಬಿಐ ಆರೋಪಿ ವಿರುದ್ಧ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದೆ. ಬಳಿಕ ನ್ಯಾಯಾಲಯವು ವಿಚಾರಣೆ ನಡೆಸಿ ಆರೋಪಿಯನ್ನು ಖುಲಾಸೆಗೊಳಿಸಿದೆ. ನಂತರ ಕೆಲವು ವ್ಯಕ್ತಿಗಳು ಧರ್ಮಸ್ಥಳ ಹಾಗೂ ನಮ್ಮ ಕುಟುಂಬವನ್ನು ಗುರಿಯಾಗಿಸಿ ಸುಳ್ಳು ಆರೋಪ ಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಇದರಿಂದ ಕ್ಷೇತ್ರದ ಭಕ್ತರಲ್ಲಿ ಹಾಗೂ ಅಭಿಮಾನಿಗಳಲ್ಲಿ ಖೇದ ಉಂಟಾಗಿದೆ. ಭಕ್ತರು ಗೊಂದಲಕ್ಕೆ ಒಳಗಾಗಬಾರದು' ಎಂದು ಅವರು ವಿನಂತಿಸಿದ್ದಾರೆ.

ಸಚಿವ ಈಶ್ವರ್ ಖಂಡ್ರೆ ಮತ್ತು ಖರ್ಗೆಗೆ ಅವಹೇಳನ

'ಕಸ್ತೂರಿ ರಂಗನ್ ಪರಿಸರ ತಜ್ಞ ಅಲ್ಲ'

ಪ್ರಜಾವಾಣಿ ವಾರ್ತೆ

ತೀರ್ಥಹಳ್ಳಿ: 'ಅರಣ್ಯ ಸಚಿವರಿಗೆ ಪಶ್ಚಿಮಘಟ್ಟದ ಜನರ ಜೀವನಕ್ರಮ, ಗಿಡ- ಮರಗಳ ಕುರಿತು ತಿಳಿವಳಿಕೆ ಇಲ್ಲ. ಪಶ್ಚಿಮ ಘಟ್ಟಗಳ ಬಗ್ಗೆ ವರದಿ ನೀಡಿರುವ ವಿಜ್ಞಾನಿ ಕಸ್ತೂರಿರಂಗನ್ ಪರಿಸರ ತಜ್ಞ ಅಲ್ಲ' ಎಂದು ಬಿಜೆಪಿ ಶಾಸಕ ಆರಗ ಜ್ಞಾನೇಂದ್ರ ಹರಿಹಾಯ್ದರು.

ಕಸ್ತೂರಿ ರಂಗನ್ ವರದಿ ಜಾರಿ ಕುರಿತು ಅರಣ್ಯ ಸಚಿವ ಈಶ್ವರ್ ಖಂಡ್ರೆ ನೀಡಿದ ಹೇಳಿಕೆಗೆ ವಿರೋಧ ವ್ಯಕ್ತಪಡಿಸಿ, ಮಂಗಳವಾರ ಇಲ್ಲಿ ಬಿಜೆಪಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

'ಅರಣ್ಯವೇ ಇಲ್ಲದ ಪ್ರದೇಶದವರು ಅರಣ್ಯ ಸಚಿವರಾಗಿರುವುದು ನಮ್ಮ ದುರದೃಷ್ಟ. ಬೀದರ್ ಮೂಲದ ಅವರಿಗೆ ಮರ–ಗಿಡ ಅಂದರೆ ಏನು, ಅದರ ನೆರಳು ಅಂದರೆ ಏನು ಎಂಬುದೇ ಗೊತ್ತಿಲ್ಲ. ಅವರಿಗೆ ಮಲೆನಾಡಿನವರ ಬದುಕು, ಪಶ್ಚಿಮ ಘಟ್ಟದವರ ಸಮಸ್ಯೆಗಳ ಬಗ್ಗೆ ಗೊತ್ತಿಲ್ಲ. ಆ ಭಾಗದವರು ಸುಟ್ಟು ಕರಕಲಾಗಿರುತ್ತಾರೆ. ಖರ್ಗೆ ಅವರನ್ನು ನೋಡಿದರೇ ಅಲ್ಲಿನವರ ಸ್ಥಿತಿ ಗೊತ್ತಾಗುತ್ತದೆ. ಪಾಪ ಅವರ ತಲೆಕೂದಲು ಮುಚ್ಚಿಕೊಂಡಿದ್ದರಿಂದ ಸ್ವಲ್ಪ ಉಳಕೊಂಡಿದ್ದಾರೆ. ಅದೇ ಅವರ ನೆರಳು. ಇದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅರ್ಥ ಮಾಡಿಕೊಳ್ಳಬೇಕು' ಎಂದರು.

'ಮೂಲ ನಿವಾಸಿಗಳಿಲ್ಲದಿದ್ದರೆ ಸಹ್ಯಾದ್ರಿಯ ಅರಣ್ಯ ಶ್ರೇಣಿ ಉಳಿಯುತ್ತಿರಲಿಲ್ಲ. ದೆಹಲಿಯಲ್ಲಿ ಕುಳಿತು ಉಪಗ್ರಹ ಚಿತ್ರಗಳನ್ನು ಅವಲೋಕಿಸಿ ಅವೈಜ್ಞಾನಿಕವಾಗಿ ಸಮೀಕ್ಷೆ ನಡೆಸಲಾಗಿದೆ. ಈಗಾಗಲೇ ಹಲವು ಕಾಯ್ದೆಗಳಿಂದ ಜನರು ತೊಂದರೆ ಅನುಭವಿಸುತ್ತಿದ್ದಾರೆ. ಕಸ್ತೂರಿರಂಗನ್ ವರದಿ ಜಾರಿಯಾದರೆ ಸಮಸ್ಯೆ ಬಿಗಡಾಯಿಸಲಿದೆ' ಎಂದು ಅವರು ಹೇಳಿದರು.

ಮಲ್ಲಿಕಾ ಘಂಟಿ ವಿರುದ್ಧ ಎಫ್‌ಐಆರ್

ಹೊಸಪೇಟೆ (ವಿಜಯನಗರ): ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ 2015ರಿಂದ 2019ರ ಅವಧಿಯಲ್ಲಿ ₹50.86 ಕೋಟಿ ಮೊತ್ತದ ಕಾಮಗಾರಿಗಳನ್ನು ಇ– ಟೆಂಡರ್ ಇಲ್ಲದೇ ಕೈಗೊಂಡಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ (ಕೆಟಿಪಿಪಿ) ಕಾಯ್ದೆ ಉಲ್ಲಂಘನೆಯಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ವಿಶ್ರಾಂತ ಕುಲಪತಿ ಪ್ರೊ.ಮಲ್ಲಿಕಾ ಘಂಟಿ ವಿರುದ್ಧ ಕಮಲಾಪುರ ಪೊಲೀಸ್ ಠಾಣೆಯಲ್ಲಿ ಮಂಗಳವಾರ ಎಫ್‌ಐಆರ್ ದಾಖಲಾಗಿದೆ.

'ಉನ್ನತ ಶಿಕ್ಷಣ ಇಲಾಖೆ ನಡೆಸಿದ ತನಿಖಾ ವರದಿ ಆಧರಿಸಿ ಸರ್ಕಾರದಿಂದ ಬಂದ ಕಟ್ಟುನಿಟ್ಟಿನ ಸೂಚನೆ ಮೇರೆಗೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಮಲ್ಲಿಕಾ ಘಂಟಿ ಅವರ ಹೆಸರು ಮಾತ್ರ ಎಫ್‌ಐಆರ್‌ನಲ್ಲಿ ಉಲ್ಲೇಖವಾಗಿದೆ' ಎಂದು ಮೂಲಗಳು ತಿಳಿಸಿವೆ.

₹50.86 ಕೋಟಿ ವೆಚ್ಚದ ವಿವಿಧ ಕಾಮಗಾರಿಗಳನ್ನು ಕೆಟಿಪಿಪಿ ಕಾಯ್ದೆ ಉಲ್ಲಂಘಿಸಿ ಮಾಡಲಾಗಿದೆ ಎಂದು ಲೋಕಾಯುಕ್ತ ತನಿಖೆ ನಡೆಸಿ 2021ರಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ವಿಶ್ವವಿದ್ಯಾಲಯ ದೂರು ದಾಖಲಿಸಲು ವಿಳಂಬ ತಂತ್ರ ಅನುಸರಿಸುತ್ತಿದೆ ಎಂಬ ಆರೋಪ ಕೇಳಿಬಂದಿತ್ತು. ಈಚೆಗೆ ಸಿಂಡಿಕೇಟ್ ಸಭೆಯಲ್ಲಿ ದೂರು ಸಲ್ಲಿಸಬೇಕು ಎಂಬ ನಿರ್ಣಯ ಕೈಗೊಳ್ಳಲಾಗಿತ್ತು' ಎಂದೂ ಹೇಳಿವೆ.

ವಿಐಎಸ್‌ಎಲ್: 10ರಿಂದ ಪುನರಾರಂಭ

ಒಂದನೇ ಪುಟದಿಂದ...

'ಕಾರ್ಖಾನೆಯು ಸಂಪೂರ್ಣವಾಗಿ ಮುಚ್ಚಿ ಹೋಗುತ್ತದೆ ಎಂದು ಹೇಳಲಾಗುತ್ತಿತ್ತು. ಇದರ ವಿರುದ್ಧ ನಾವು ಹೋರಾಟ ನಡೆಸುತ್ತಿದ್ದೇವೆ. ನಮ್ಮ ಹೋರಾಟ ಇಲ್ಲಿಗೆ ನಿಲ್ಲುವುದಿಲ್ಲ. ಕಾರ್ಖಾನೆಯನ್ನು ಉಳಿಸುವ ನಿರ್ಧಾರ ಕೈಗೊಳ್ಳುವವರೆಗೂ ಇದನ್ನು ಮುಂದುವರೆಸುತ್ತೇವೆ' ಎಂದು ಹೇಳಿದರು.

ಕಾರ್ಖಾನೆ ಮುಚ್ಚದಂತೆ ಕಾರ್ಮಿಕ ಸಂಘಟನೆ ಭದ್ರಾವತಿಯಲ್ಲಿ ನಡೆಸುತ್ತಿರುವ ಪ್ರತಿಭಟನೆ ಮಂಗಳವಾರ 194ನೇ ದಿನಕ್ಕೆ ಕಾಲಿಟ್ಟಿದೆ.

'ಬಾರ್ ಮಿಲ್ ಕಾಯಂ ಆಗಿ ಮುಚ್ಚಿರಲಿಲ್ಲ. ಕಚ್ಚಾವಸ್ತುವಿನ ಕೊರತೆಯಿಂದ ಕಾರ್ಖಾನೆಯ ಒಂದು ವಿಭಾಗ ತಾತ್ಕಾಲಿಕವಾಗಿ ಸ್ಥಗಿತಗೊಂಡಿತ್ತು. ಈಗ ಪೂರೈಕೆ ಆಗಿರುವುದರಿಂದ ಮತ್ತೆ ಚಾಲನೆಗೊಳ್ಳುತ್ತಿದೆ. ಉಕ್ಕು ಉತ್ಪಾದನೆ ಆರಂಭ, ಪುನರಾರಂಭ ಎಂಬುದೇನೂ ಇಲ್ಲ. ಜನರಿಗೆ ತಪ್ಪು ಸಂದೇಶ ನೀಡುವುದು ಬೇಡ. ಅದೊಂದು ಪ್ರಕ್ರಿಯೆಯಷ್ಟೇ' ಎಂದು ವಿಐಎಸ್‌ಎಲ್ ಕಾರ್ಖಾನೆಯ ಸಾರ್ವಜನಿಕ ಸಂಪರ್ಕಾಧಿಕಾರಿ ಎಲ್. ಪ್ರವೀಣ್‌ಕುಮಾರ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಕೇಂದ್ರ ಸಚಿವ ಅಮಿತ್ ಶಾ ಅವರ ನಿರ್ದೇಶನದೊಂದಿಗೆ ಸೇಲ್ ಆಡಳಿತ ಮಂಡಳಿಯು ವಿಐಎಸ್‌ಎಲ್‌ನಲ್ಲಿ ಉತ್ಪಾದನಾ ಚಟುವಟಿಕೆ ಪುನರಾರಂಭಿಸಲು ಒಪ್ಪಿದೆ

ಬಿ.ವೈ.ರಾಘವೇಂದ್ರ, ಶಿವಮೊಗ್ಗ ಸಂಸದ

ಕಲಬುರಗಿಯಲ್ಲಿ ಆ. 5ರಂದು 'ಗೃಹಜ್ಯೋತಿ' ಯೋಜನೆಗೆ ಮುಖ್ಯಮಂತ್ರಿ ಚಾಲನೆ

'ಉಪಕೇಂದ್ರಗಳ ಬಳಿ ಸೌರಶಕ್ತಿ ಘಟಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರಾಹಕರಿಗೆ ಹೊರೆಯಾಗುವುದನ್ನು ತಪ್ಪಿಸುವ ನಿಟ್ಟಿನಲ್ಲಿ ಅಸಾಂಪ್ರದಾಯಿಕ ಇಂಧನ ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು ಕಡಿಮೆ ವೆಚ್ಚದಲ್ಲಿ ವಿದ್ಯುತ್ ಉತ್ಪಾದಿಸಲು ಪ್ರತ್ಯೇಕ ನೀತಿ ರೂಪಿಸಲಾಗುವುದು' ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ತಿಳಿಸಿದರು.

'ರೈತರ ಪಂಪ್‌ಸೆಟ್, ಬೃಹತ್ ಹಾಗೂ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ವಿದ್ಯುತ್ ಬಿಲ್ ಕಡಿಮೆ ಮಾಡಲು ಎಲ್ಲ ವಿದ್ಯುತ್ ಉಪಕೇಂದ್ರಗಳ ಸಮೀಪ ಸೌರವಿದ್ಯುತ್ ಘಟಕಗಳನ್ನು ಅಳವಡಿಸಲು ಚಿಂತನೆ ನಡೆಸಲಾಗುತ್ತಿದೆ. ಇದರಿಂದ, ವಿತರಣಾ ನಷ್ಟ ತಡೆಯಲು ಹಾಗೂ ಸ್ಥಳೀಯವಾಗಿ ಉತ್ತಮ ಗುಣಮಟ್ಟದ ವಿದ್ಯುತ್ ಪೂರೈಕೆಗೆ ಸಹಕಾರಿಯಾಗಲಿದೆ. ಅತ್ಯಾಧುನಿಕ ತಂತ್ರಜ್ಞಾನ ಬಳಸಿ ವಿದ್ಯುತ್ ಉತ್ಪಾದಿಸಿದರೆ ಸೋರಿಕೆ ತಪ್ಪಿಸಬಹುದು' ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

'ಉಪಕೇಂದ್ರಗಳ ಸುತ್ತ ರೈತರು ಲೀಸ್ ಆಧಾರದ ಮೇಲೆ ಭೂಮಿ ನೀಡಿದರೆ ಪಾವಗಡ ರೀತಿಯಲ್ಲೇ ಸೌರಶಕ್ತಿ ವಿದ್ಯುತ್ ಉತ್ಪಾದನೆ ಮಾಡಬಹುದು. ಈ ಸ್ಥಳಗಳ ಸುತ್ತ 5ರಿಂದ 10 ಎಕರೆ ಪ್ರದೇಶದಲ್ಲಿ 10 ಮೆಗಾವ್ಯಾಟ್‌ವರೆಗೂ ಸೌರ ಹಾಗೂ ಪವನ ವಿದ್ಯುತ್ ಉತ್ಪಾದನೆಗೆ ಅವಕಾಶವಿದೆ. ಇದರಿಂದ, ಗ್ರಾಹಕರಿಗೂ ಅನುಕೂಲವಾಗಲಿದೆ' ಎಂದರು.

'ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ 11 ಮೆಗಾವಾಟ್ ಸಾಮರ್ಥ್ಯದ ಸ್ಥಾವರವನ್ನು ಬಿಡದಿಯಲ್ಲಿ ಇಂಧನ ಇಲಾಖೆ ಮತ್ತು ಬಿಬಿಎಂಪಿ ವತಿಯಿಂದ ಸ್ಥಾಪಿಸಲಾಗಿದ್ದು, ಆಗಸ್ಟ್ ಅಂತ್ಯಕ್ಕೆ ಅಥವಾ ಸೆಪ್ಟೆಂಬರ್‌ನಲ್ಲಿ ಉದ್ಘಾಟನೆಯಾಗಲಿದೆ. ಈ ಘಟಕದಲ್ಲಿ ಪ್ರತಿ ಯೂನಿಟ್ ವಿದ್ಯುತ್ ಉತ್ಪಾದನೆಗೆ ₹8 ವೆಚ್ಚವಾಗಲಿದೆ. ಈ ಯೋಜನೆ ಯಶಸ್ವಿ ಯಾದರೆ ರಾಜ್ಯದ ಉಳಿದ ಸ್ಥಳೀಯ ಸಂಸ್ಥೆಗಳಲ್ಲೂ ಅನುಷ್ಠಾನಗೊಳಿಸಲಾಗು ವುದು. ಇದರಿಂದ, ಸ್ಥಳೀಯ ಮಟ್ಟದಲ್ಲಿ ತ್ಯಾಜ್ಯ ಸಮಸ್ಯೆ ಪರಿಹರಿಸಲು ನೆರವು ದೊರೆಯಲಿದೆ' ಎಂದು ಸಚಿವರು ತಿಳಿಸಿದರು.

ಗೃಹಜ್ಯೋತಿ ಯೋಜನೆ ಕುರಿತು ವಿವರಿಸಿದ ಸಚಿವರು, 'ಈ ಯೋಜನೆಗೆ ಆಗಸ್ಟ್ 5ರಂದು ಕಲಬುರಗಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಲನೆ ನೀಡಲಿದ್ದಾರೆ. ಅರ್ಹ ಗ್ರಾಹಕರಿಗೆ ಶೂನ್ಯ ಬಿಲ್ ನೀಡುವ ಕಾರ್ಯ ಮಂಗಳವಾರ ದಿಂದಲೇ ಆರಂಭವಾಗಿದೆ' ಎಂದು ತಿಳಿಸಿದರು.

'ಗೃಹಜ್ಯೋತಿ ಯೋಜನೆಯ ಅನುಷ್ಠಾನದ ಮೊದಲ ತಿಂಗಳಿನಲ್ಲೇ 1.42 ಕೋಟಿ ಕುಟುಂಬಗಳು ಪ್ರಯೋಜನ ಪಡೆಯಲಿವೆ. ಜುಲೈ 27ರ ಒಳಗೆ ಅರ್ಜಿ ಸಲ್ಲಿಸಿದ ಅರ್ಹ ಫಲಾನುಭವಿಗಳು ಆಗಸ್ಟ್ ತಿಂಗಳಲ್ಲಿ ಶೂನ್ಯ ಬಿಲ್ ಪಡೆಯಲಿದ್ದಾರೆ. ಜುಲೈ 27ರ ನಂತರ ಅರ್ಜಿ ಸಲ್ಲಿಸಿದವರು ಆಗಸ್ಟ್‌ನಲ್ಲಿ ಬಳಕೆ ಆಧಾರದ ಮೇಲೆ ಸೆಪ್ಟೆಂಬರ್ ತಿಂಗಳ ಬಿಲ್‌ನಲ್ಲಿ ಪ್ರಯೋಜನ ಪಡೆಯಲಿದ್ದಾರೆ' ಎಂದು ವಿವರಿಸಿದರು.

'ರಾಜ್ಯದ ಸರಾಸರಿ ತಲಾ ವಿದ್ಯುತ್ ಬಳಕೆ 53 ಯೂನಿಟ್‌ಗಳು. ಸರಾಸರಿ ಬಳಸುವ ಯೂನಿಟ್ ವಿದ್ಯುತ್ 200 ಯೂನಿಟ್‌ಗಳಿಗಿಂತ ಕಡಿಮೆ ಇದ್ದರೆ, ಗ್ರಾಹಕರು ಯಾವುದೇ ಶುಲ್ಕ ಪಾವತಿಸ ಬೇಕಾಗಿಲ್ಲ. ಸರಾಸರಿಗಿಂತ ಹೆಚ್ಚು ಯೂನಿಟ್ ಬಳಸಿದರೆ, ಹೆಚ್ಚುವರಿ ಯೂನಿಟ್‌ಗೆ ಮಾತ್ರ ಶುಲ್ಕ ಪಾವತಿಸ ಬೇಕಾಗುತ್ತದೆ. ಆದರೆ, 200ಕ್ಕೂ ಹೆಚ್ಚು ಯೂನಿಟ್ ಬಳಸಿದರೆ ಪೂರ್ಣ ಶುಲ್ಕ ಪಾವತಿಸಬೇಕಾಗುತ್ತದೆ' ಎಂದು ತಿಳಿಸಿದರು.

'ಈ ಯೋಜನೆ ಅಡಿಯಲ್ಲಿ ನೋಂದಣಿಗೆ ಯಾವುದೇ ಕೊನೆಯ ದಿನಾಂಕ ಘೋಷಿಸಿಲ್ಲ. ಯಾವುದೇ ಸಮಯದಲ್ಲಿ ನೋಂದಾಯಿಸಿಕೊಂಡರೂ ನಂತರದ ತಿಂಗಳಿನಿಂದ ಪ್ರಯೋಜನ ಪಡೆಯಬಹುದು' ಎಂದು ವಿವರಿಸಿದರು.

ಬೆಂಗಳೂರಿನಲ್ಲಿ ಮಂಗಳವಾರ ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ಗೃಹ ಜ್ಯೋತಿ ಯೋಜನೆಯ ಅರ್ಹ ಗ್ರಾಹಕರಿಗೆ ನೀಡುವ ಶೂನ್ಯ ಬಿಲ್ ಪ್ರತಿಯನ್ನು ಬಿಡುಗಡೆ ಮಾಡಿದರು. ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಕರ್ನಾಟಕ ವಿದ್ಯುತ್ ನಿಗಮದ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ್ ಬೀಳಗಿ, ಬೆಸ್ಕಾಂ ನಿರ್ದೇಶಕ (ಹಣಕಾಸು) ದರ್ಶನ್ ಇದ್ದರು.

ಜುಲೈ ಬಿಲ್ ಪಾವತಿಸಿದ್ದರೆ ವಾಪಸ್

'ಜುಲೈ 1ರಿಂದ 15ರ ಅವಧಿಯಲ್ಲಿ ಬಿಲ್ ಪಾವತಿಸಿದ ಗ್ರಾಹಕರಿಗೆ ಮರುಪಾವತಿ ಮಾಡಲಾಗುವುದು. ಆದರೆ, ಯಾವುದೇ ರೀತಿ ಬಾಕಿ ಇರಬಾರದು. ಬಾಕಿ ಉಳಿದಿದ್ದರೆ ಆ ಮೊತ್ತವನ್ನು ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ಜತೆಗೆ ನಿಗದಿಪಡಿಸಿದ ಮಾನದಂಡಗಳನ್ನು ಪೂರೈಸಿರಬೇಕು' ಎಂದು ಸಚಿವ ಜಾರ್ಜ್ ತಿಳಿಸಿದರು.

ಸರ್ಕಾರದ ನಿರ್ಧಾರಕ್ಕೆ ಆಕ್ರೋಶ ● ಬೀದಿಗಿಳಿದು ಹೋರಾಡುವ ಎಚ್ಚರಿಕೆ ನೀಡಿದ ದಲಿತ ಸಮಿತಿ

ಗ್ಯಾರಂಟಿಗೆ ಪರಿಶಿಷ್ಟರ ಅನುದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡದವರ ಅಭಿವೃದ್ಧಿಗಾಗಿ ಇರುವ ವಿಶೇಷ ಅನುದಾನದಲ್ಲಿ (ಎಸ್‌ಸಿಎಸ್‌ಪಿ-ಟಿಎಸ್‌ಪಿ) ₹11 ಸಾವಿರ ಕೋಟಿಯನ್ನು ಐದು 'ಗ್ಯಾರಂಟಿ'ಗಳ ಜಾರಿಗಾಗಿ ಬಳಕೆ ಮಾಡುವ ರಾಜ್ಯ ಸರ್ಕಾರದ ತೀರ್ಮಾನಕ್ಕೆ ಆಕ್ರೋಶ ವ್ಯಕ್ತವಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿತ್ತು. ಗ್ಯಾರಂಟಿಗಳಿಗಾಗಿ ಈ ಅನುದಾನ ಬಳಸುವುದನ್ನು ತಕ್ಷಣವೇ ನಿಲ್ಲಿಸಬೇಕು ಮತ್ತು ನಿಗದಿತ ಉದ್ದೇಶಗಳಿಗೆ ಮಾತ್ರವೇ ಬಳಸಬೇಕು ಎಂದು ದಲಿತ ಸಂಘಟನೆಗಳು ಆಗ್ರಹಿಸಿವೆ.

ಈ ಕುರಿತು ಹೇಳಿಕೆ ನೀಡಿರುವ ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ, 'ಎಸ್‌ಸಿಎಸ್‌ಪಿ-ಟಿಎಸ್‌ಪಿ ಕಾಯ್ದೆಯ ಪರಿಶಿಷ್ಟ ಸಮುದಾಯದ ಅಭಿವೃದ್ಧಿಗೆ ಮೀಸಲಿಟ್ಟ ಅನುದಾನವನ್ನು ವರ್ಗಾವಣೆ ಮಾಡುತ್ತಿರುವುದು ಈ ಸಮುದಾಯದ ಅಭಿವೃದ್ಧಿಗೆ ಮಾರಕವಾಗಲಿದೆ' ಎಂದು ಹೇಳಿದ್ದಾರೆ.

ಈ ನಿರ್ಣಯದಿಂದಾಗಿ, ರಾಜ್ಯ ಸರ್ಕಾರ ಎಸ್‌ಸಿಎಸ್‌ಪಿ-ಟಿಎಸ್‌ಪಿ ಯೋಜನೆಗೆ ₹34,000 ಕೋಟಿ ಬದಲು ಕೇವಲ ₹23,000 ಕೋಟಿಗೆ ಅನುಮೋದನೆ ನೀಡಿದಂತಾಗಿದೆ. ಇದು ಎಸ್‌ಸಿಪಿ ಕಾಯ್ದೆಯ ಉಲ್ಲಂಘನೆಯ ಜೊತೆಗೆ ಆ ಸಮುದಾಯಕ್ಕೆ ಕಾಂಗ್ರೆಸ್ ಮಾಡುತ್ತಿರುವ ದ್ರೋಹವಾಗಿದೆ ಎಂದು ಬೊಮ್ಮಾಯಿ ಅಭಿಪ್ರಾಯಪಟ್ಟಿದ್ದಾರೆ.

ಸಚಿವ ಎಚ್.ಸಿ.ಮಹದೇವಪ್ಪ ಅವರು ಅಸಹಾಯಕರಾಗಿ ಇದಕ್ಕೆ ಒಪ್ಪಿಕೊಂಡಂತಿದೆ. ಸರ್ಕಾರದ ನಡೆಯ ಬಗ್ಗೆ ಎಸ್‌ಸಿ, ಎಸ್‌ಟಿ ಸಮುದಾಯಕ್ಕಿರುವ ಅಸಮಾಧಾನವನ್ನು ಇದು ತೋರಿಸುತ್ತದೆ. ಈ ಸಮುದಾಯದ ಬಗ್ಗೆ ಕಾಂಗ್ರೆಸ್ ಪಕ್ಷದ ನಿರ್ಲಕ್ಷ್ಯ ಧೋರಣೆಯನ್ನೂ ಎತ್ತಿ ತೋರಿಸುತ್ತದೆ ಎಂದು ದೂರಿದ್ದಾರೆ.

ರಾಜ್ಯಾದ್ಯಂತ ಹೋರಾಟ- ಕಾರಜೋಳ ಎಚ್ಚರಿಕೆ: ಗ್ಯಾರಂಟಿಗೆ ವರ್ಗಾವಣೆ ಮಾಡಿರುವ ₹11,000 ಕೋಟಿಯನ್ನು ಹಿಂದಕ್ಕೆ ಪಡೆದು, ಅದರಲ್ಲಿ ₹2,500 ಕೋಟಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಹಾಸ್ಟೆಲ್ ಮತ್ತು ವಸತಿ ಶಾಲೆಗಳ ನಿರ್ಮಾಣಕ್ಕೆ ಕೊಡಬೇಕು ಎಂದು ಮಾಜಿ ಸಚಿವ ಗೋವಿಂದ ಕಾರಜೋಳ ಅವರು ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದ್ದಾರೆ.

ವಸತಿ ಶಾಲೆಗಳಿಗಾಗಿ ಭೂಮಿ ಖರೀದಿಗೆ ₹2,500 ಕೋಟಿ, ಗಂಗಾಕಲ್ಯಾಣ ಯೋಜನೆಗೆ ₹1,000 ಕೋಟಿ ನೀಡಬೇಕು. ಬಸ್‌ಗಳಲ್ಲಿ ಪ್ರಯಾಣ, ಉಚಿತ ವಿದ್ಯುತ್ ನೀಡಲು ಎಸ್‌ಸಿ-ಎಸ್‌ಟಿ ಅನುದಾನ ಬಳಸಿಕೊಳ್ಳುವುದು ಮೋಸದಾಟ. ಇದು ಮುಂದುವರಿದರೆ ರಾಜ್ಯಾದ್ಯಂತ ಹೋರಾಟ ಮಾಡುವುದಾಗಿ ಎಚ್ಚರಿಸಿದರು.

'ಸರ್ಕಾರ ನಿಲುವು ಬದಲಿಸಬೇಕು'

'ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಯೋಜನೆಗೆಂದೇ ಮೀಸಲಿಟ್ಟ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸುವುದು ಕಾಯ್ದೆಯ ದುರ್ಬಳಕೆ. ಸರ್ಕಾರ ತನ್ನ ನಿಲುವು ಬದಲಿಸಿಕೊಂಡು, ಪರಿಶಿಷ್ಟರ ಅಭಿವೃದ್ಧಿಗೆ ಈ ಅನುದಾನ ಬಳಸಬೇಕು' ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಸಮಿತಿ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಆಗ್ರಹಿಸಿದ್ದಾರೆ.

'ಪರಿಶಿಷ್ಟರ ಅಭಿವೃದ್ಧಿಗೆ ಮೀಸಲಿಟ್ಟ ₹11,000 ಕೋಟಿಯಷ್ಟು ಹಣವನ್ನು ಅನ್ಯ ಉದ್ದೇಶಕ್ಕೆ ಬಳಸುವುದು ಕಾನೂನುಬಾಹಿರ ತೀರ್ಮಾನ. ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನವನ್ನು ಅನ್ಯ ಉದ್ದೇಶಕ್ಕೆ ಬಳಸಲು ಅವಕಾಶ ಒದಗಿಸುತ್ತಿದ್ದ ಕಾಯ್ದೆಯ ಸೆಕ್ಷನ್ 7-ಡಿ ಅನ್ನು ರದ್ದುಗೊಳಿಸುವ ಸರ್ಕಾರದ ತೀರ್ಮಾನ ಸ್ವಾಗತಾರ್ಹ. ಈ ಸೆಕ್ಷನ್ ರದ್ದಾದ ನಂತರವೂ ಉಪ ಯೋಜನೆಗಳ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸುವುದು ದಲಿತ ಸಮುದಾಯಗಳನ್ನು ವಂಚಿಸುವ ಪ್ರಯತ್ನವಾಗಿದೆ' ಎಂದು ಟೀಕಿಸಿದ್ದಾರೆ.

ಬಿಜೆಪಿ ನೇತೃತ್ವದ ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನ ದುರುಪಯೋಗ ಆದಾಗ ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರೋಧಿಸಿದ್ದರು. ಈಗ ಅವರ ಸಂಪುಟದ ಸಮಾಜ ಕಲ್ಯಾಣ ಸಚಿವರ ತದ್ವಿರುದ್ಧವಾದ ನಿರ್ಧಾರ ಕೈಗೊಂಡಿರುವುದು ಸರಿಯಲ್ಲ' ಎಂದಿದ್ದಾರೆ.

ದಲಿತ ಹಕ್ಕುಗಳ ಸಮಿತಿ ಎಚ್ಚರಿಕೆ

ದಲಿತರ ಸಬಲೀಕರಣಕ್ಕಾಗಿ ಕಾಂಗ್ರೆಸ್ ಸರ್ಕಾರ ಬದ್ಧವೆಂದು ಘೋಷಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗ್ಯಾರಂಟಿ ಯೋಜನೆಗಳಿಗೆ ಎಸ್‌ಸಿಎಸ್‌ಪಿ-ಟಿಎಸ್‌ಪಿ ಹಣ ಬಳಕೆ ತೀರ್ಮಾನವನ್ನು ಕೂಡಲೇ ಹಿಂಪಡೆಯಬೇಕು. ಇಲ್ಲದಿದ್ದರೆ ಬೀದಿಗಿಳಿದು ಹೋರಾಟ ಮಾಡುವುದಾಗಿ ಎಂದು ದಲಿತ ಹಕ್ಕುಗಳ ಸಮಿತಿ ಎಚ್ಚರಿಸಿದೆ.

'2023-24ನೇ ಸಾಲಿನ ಬಜೆಟ್‌ನಲ್ಲಿ ₹34,293.69 ಕೋಟಿ ಹಣವನ್ನು ದಲಿತರಿಗೆ ಮೀಸಲಿಟ್ಟಿದ್ದಾಗಿ ಹೇಳಿದ್ದರು. ಆದರೆ, ಎಡಗೈಯಲ್ಲಿ ಕೊಟ್ಟಂತೆ ಮಾಡಿ ಬಲಗೈಯಿಂದ ಗ್ಯಾರಂಟಿ ಯೋಜನೆಗಳ ಜಾರಿಗೆ ದಲಿತರ ಹಣವನ್ನು ಕಿತ್ತುಕೊಳ್ಳುತ್ತಿದ್ದಾರೆ. ಈ ಬಗ್ಗೆ ಮೀಸಲು ಕ್ಷೇತ್ರಗಳಿಂದ ಗೆದ್ದಿರುವ ಸಚಿವರು, ಶಾಸಕರು ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಲಾಗದ ಹೇಡಿಗಳಂತೆ ವರ್ತಿಸುತ್ತಿದ್ದಾರೆ' ಎಂದು ಸಮಿತಿಯ ಸಂಚಾಲಕ ಬಿ. ರಾಜಶೇಖರಮೂರ್ತಿ ಹೇಳಿದರು.

ಹಿಂದಿನ ಬಿಜೆಪಿ ಸರ್ಕಾರದಲ್ಲಿ ಎಸ್‌ಸಿಎಸ್‌ಪಿ-ಟಿಎಸ್‌ಪಿ ಯೋಜನೆ ಅನುಷ್ಠಾನದ ಕುರಿತು ತನಿಖೆ ಕೈಗೊಳ್ಳಬೇಕು. ಈ ಯೋಜನೆಯ ಮೂಲ ಉದ್ದೇಶವನ್ನು ಜಾರಿಗಾಗಿ ಯೋಜನೆಗಳನ್ನು ಪುನರ್ ರೂಪಿಸಬೇಕು. ಬಡ ದಲಿತರ ಈ ಯೋಜನೆ ತಲುಪುವುದನ್ನು ಖಾತ್ರಿ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಮತ್ಸ್ಯಬೇಟೆ ಆರಂಭ... ಯಾಂತ್ರೀಕೃತ ಮೀನುಗಾರಿಕೆ ಮಂಗಳವಾರದಿಂದ ಆರಂಭವಾಗಿದ್ದು ಕಾರವಾರದ ಬೈತಖೋಲ ಬಂದರಿನಲ್ಲಿ ದೋಣಿಗಳಿಂದ ಮೀನು ಬುಟ್ಟಿಯನ್ನು ತೆಗೆದುಕೊಳ್ಳುವಲ್ಲಿ ಕಾರ್ಮಿಕರು ನಿರತರಾಗಿದ್ದರು. ಎಂಜಿನ್ ದೋಣಿ, ಕೆಲವು ಟ್ರಾಲರ್ ಬೋಟ್ ಮಾತ್ರ ಸಮುದ್ರಕ್ಕೆ ಇಳಿದಿವೆ, ಪರ್ಸಿನ್ ಬೋಟ್‌ಗಳು ಆಗಸ್ಟ್ 7ರ ಬಳಿಕ ಕಡಲಿಗೆ ಇಳಿಯಲಿವೆ -ಪ್ರಜಾವಾಣಿ ಚಿತ್ರ/ದಿಲೀಪ್ ರೇವಣಕರ್

'ಕಾಡು' ಯೋಜನೆ ಹುಲಿಗೆ ಅಪಾಯ!

ಒಂದನೇ ಪುಟದಿಂದ...

ಧಾರವಾಡ ಅರಣ್ಯ ವಿಭಾಗವು ಕೃಷಿ ಕ್ಷೇತ್ರಗಳು, ಮಾನವ ವಾಸಸ್ಥಾನಗಳ ನಡುವೆ ಹಾಗೂ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳ ನಡುವೆ ಹಾದು ಹೋಗುವ ಸಣ್ಣ ಅರಣ್ಯ ಪ್ರದೇಶಗಳ ತಾಣವಾಗಿದೆ. ಆದರೂ, ಇದು ಅಣಶಿ-ದಾಂಡೇಲಿ ಹಾಗೂ ಭದ್ರಾ ಹುಲಿ ಸಂರಕ್ಷಿತ ಪ್ರದೇಶಗಳ ಮಧ್ಯೆ ಸಂಪರ್ಕ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತದೆ. ಪ್ರಸ್ತಾವಿತ ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗವು ಈ ಸಂಪರ್ಕವನ್ನು ತೀವ್ರವಾಗಿ ವಿಭಜಿಸುತ್ತದೆ. ಹಾಗಾಗಿ, ಹುಲಿ ಸಂರಕ್ಷಣೆಯ ಉದ್ದೇಶದಿಂದ ರೈಲ್ವೆ ಮಾರ್ಗದ ಕಾರ್ಯಸಾಧ್ಯತೆ ಕುರಿತು ಮರುಪರಿಶೀಲಿಸುವುದು ಉತ್ತಮ ಎಂದು ವರದಿಯಲ್ಲಿ ಸಲಹೆ ನೀಡಲಾಗಿದೆ.

ಕುದುರೆಮುಖ ರಾಷ್ಟ್ರೀಯ ಉದ್ಯಾನದಲ್ಲಿ ಹುಲಿ ಪತ್ತೆ ನಿರಂತರವಾಗಿ ಕಡಿಮೆಯಾಗಿದೆ. ಆದಾಗ್ಯೂ, ಈ ರಾಷ್ಟ್ರೀಯ ಉದ್ಯಾನವು ಶ್ರೀಮಂತ ಜೀವವೈವಿಧ್ಯ ಮತ್ತು ಸ್ಥಳೀಯತೆ ಹೊಂದಿದೆ. ಆದರೆ, ಕುದುರೆಮುಖ ಮೂಲಕ ಹಾದುಹೋಗುವ ರಸ್ತೆಗಳಲ್ಲಿ ದೊಡ್ಡ ಪ್ರಾಣಿಗಳು ಸಾಯುತ್ತಿವೆ. ಪ್ರಸ್ತಾವಿತ ರಸ್ತೆ ವಿಸ್ತರಣೆ ಮತ್ತು ಅಭಿವೃದ್ಧಿ, ಶಿರಾಡಿ ಘಾಟ್ ಸುರಂಗ ಯೋಜನೆಗಳಿಂದ ಈ ಆವಾಸಸ್ಥಾನಕ್ಕೆ ಭಾರಿ ಅಪಾಯ ಉಂಟಾಗಲಿದೆ. ಜತೆಗೆ, ಕುದುರೆಮುಖ ಹಾಗೂ ಪುಷ್ಪಗಿರಿ ವನ್ಯಜೀವಿಧಾಮಗಳ ಮೇಲೂ ವ್ಯತಿರಿಕ್ತ ಪರಿಣಾಮ ಬೀರಲಿದೆ ಎಂದು ಸಚಿವಾಲಯ ಎಚ್ಚರಿಸಿದೆ.

ಕಾಳ್ಗಿಚ್ಚು ಹೆಚ್ಚಳ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶವು ಹುಲಿಗಳ ಹೆಚ್ಚಿನ ಸಾಂದ್ರತೆ ಹೊಂದಿದೆ. ಆದರೂ, ಇಲ್ಲಿ ಸಾಕಷ್ಟು ಸಂರಕ್ಷಣಾ ಸವಾಲುಗಳು ಇವೆ. ಕಾಳ್ಗಿಚ್ಚು ಪ್ರಕರಣಗಳು ಹೆಚ್ಚುತ್ತಿವೆ. ಬಾಹ್ಯ ಪ್ರದೇಶಗಳಲ್ಲಿ ಮಾನವ-ಹುಲಿ ಸಂಘರ್ಷಗಳು ಜಾಸ್ತಿ ಅಗುತ್ತಿವೆ ಎಂದು ಸಚಿವಾಲಯ ಹೇಳಿದೆ.

ಘೋಷಣೆಗೆ ಶಿಫಾರಸು

ಮಲೆ ಮಹದೇಶ್ವರ ಅಭಯಾರಣ್ಯವನ್ನು ಹುಲಿ ಸಂರಕ್ಷಣಾ ಪ್ರದೇಶವನ್ನಾಗಿ ಘೋಷಿಸಬೇಕು ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

ಕಳೆದ ಸಾಲಿನ ಗಣತಿಗೆ ಹೋಲಿಸಿದರೆ ಈ ಅಭಯಾರಣ್ಯದಲ್ಲಿ ಹುಲಿಗಳ ಸಾಂದ್ರತೆ ಕಡಿಮೆಯಾಗಿದೆ. ಆದರೆ, ಇದು ನೀಲಗಿರಿ ಪ್ರದೇಶದ ಭಾಗವಾಗಿದೆ. ಇದನ್ನು ಹುಲಿ ಸಂರಕ್ಷಿತ ಪ್ರದೇಶವನ್ನಾಗಿ ಘೋಷಿಸಿ ಸಂರಕ್ಷಣೆಗೆ ಇನ್ನಷ್ಟು ಉಪಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಲಹೆ ನೀಡಲಾಗಿದೆ.

'ರಾಜ್ಯ ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ ಹುಲಿ ಸಂರಕ್ಷಿತ ಪ್ರದೇಶವೆಂದು ಘೋಷಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ವನ್ಯಜೀವಿ ಸಂರಕ್ಷಣಾವಾದಿ ಗಿರಿಧರ ಕುಲಕರ್ಣಿ ಒತ್ತಾಯಿಸಿದರು.

ಕೆಎಂಎಫ್‌ಗೆ ಶಿವರಾಜಕುಮಾರ್ ರಾಯಭಾರಿ



ಬೆಂಗಳೂರು: ಕರ್ನಾಟಕ ರಾಜ್ಯ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳದ (ಕೆಎಂಎಫ್) ನಂದಿನಿ ಉತ್ಪನ್ನಗಳಿಗೆ ಚಲನಚಿತ್ರ ನಟ ಶಿವರಾಜಕುಮಾರ್ ಅವರು ನೂತನ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ.

ಈ ಹಿಂದೆ ರಾಜಕುಮಾರ್ ಅವರು ಯಾವುದೇ ಸಂಭಾವನೆ ಪಡೆಯದೆ ನಂದಿನಿ ಬ್ರ್ಯಾಂಡ್‌ಗಳ ರಾಯಭಾರಿಯಾಗಿದ್ದರು. ಪುನೀತ್ ರಾಜಕುಮಾರ್ ಸಹ ಹಲವು ವರ್ಷಗಳ ಕಾಲ ನಂದಿನಿ ಉತ್ಪನ್ನಗಳ ಪ್ರಚಾರ ರಾಯಭಾರಿಯಾಗಿದ್ದರು. ಅಪ್ಪ ಮತ್ತು ತಮ್ಮನಂತೆ ಶಿವರಾಜ್ ಕುಮಾರ್ ಕೂಡ ಯಾವುದೇ ಸಂಭಾವನೆ ಪಡೆಯದೇ ರಾಯಭಾರತ್ವ ವಹಿಸಿಕೊಂಡಿದ್ದಾರೆ.

ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ: ನೇಮಕಾತಿಗೆ ಆಕ್ಷೇಪಣೆ ಬಾರದಂತೆ ನೋಡಿಕೊಳ್ಳಲು ಸೂಚನೆ

'ಕೆಪಿಎಸ್‌ಸಿ: ಪಾರದರ್ಶಕತೆ ಕಾಯ್ದುಕೊಳ್ಳಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಅಧ್ಯಕ್ಷ ಮತ್ತು ಸದಸ್ಯರ ನೇಮಕಾತಿಯಲ್ಲಿ ಸಂಪೂರ್ಣ ಪಾರದರ್ಶಕತೆ ಕಾಯ್ದುಕೊಳ್ಳಬೇಕು' ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಖಡಕ್ ನಿರ್ದೇಶನ ನೀಡಿದೆ.

'ಕೆಪಿಎಸ್‌ಸಿ ಅಧ್ಯಕ್ಷ ಮತ್ತು 11 ಮಂದಿ ಸದಸ್ಯರ ನೇಮಕಾತಿ ಆದೇಶ ರದ್ದುಪಡಿಸಬೇಕು' ಎಂದು ಕೋರಿ ಟಿ.ನರಸಿಂಹ ಮೂರ್ತಿ ಮತ್ತು ಶಶಿಪ್ರಸಾದ್ ಗಾಂಧಿ ಸಲ್ಲಿಸಿದ್ದ ಎರಡು ಪ್ರತ್ಯೇಕ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ (ಪಿಐಎಲ್) ಮೇಲಿನ ಕಾಯ್ದಿರಿಸಿದ್ದ ತೀರ್ಪನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಪ್ರಕಟಿಸಿದೆ.

ಕೆಪಿಎಸ್‌ಸಿ ಅಧ್ಯಕ್ಷ ಹಾಗೂ ಸದಸ್ಯರ ಹುದ್ದೆಗಳು ಉನ್ನತ್ತರದ ಮತ್ತು ಸೂಕ್ಷ್ಮವಾದ ಸಾಂವಿಧಾನಿಕ ಹುದ್ದೆಗಳು. ಇವುಗಳ ನೇಮಕಾತಿ ವೇಳೆ ಯಾವುದೇ ಆಕ್ಷೇಪಣೆ, ಆರೋಪಗಳು ಕೇಳಿ ಬರಬಾರದು. ನಿರಂಕುಶ ರೀತಿಯಲ್ಲಿ ಅಧಿಕಾರವನ್ನು ಸ್ವೇಚ್ಛೆಯಿಂದ ಬಳಸಲು ಅವಕಾಶ ಕಲ್ಪಿಸಬಾರದು. ಲೋಕಸೇವಾ ಆಯೋಗದ ಅಧ್ಯಕ್ಷರ ನೇಮಕಾತಿಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ಪ್ರಕ್ರಿಯೆ ಕುರಿತಂತೆ ಪಂಜಾಬ್ ಸರ್ಕಾರ ಮತ್ತು ಸಲೀಲ್ ಸಬ್ಲೋಕ್ ಮಧ್ಯದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನಗಳ ಪಾಲನೆಯಾಗುವಂತೆ ರಾಜ್ಯ ಸರ್ಕಾರ ಎಲ್ಲಾ ಪ್ರಯತ್ನ ನಡೆಸಬೇಕು' ಎಂದು ನ್ಯಾಯಪೀಠ ನಿರ್ದೇಶಿಸಿದೆ.

'ಕೆಪಿಎಸ್‌ಸಿ ಅಧ್ಯಕ್ಷ ಹಾಗೂ ಸದಸ್ಯರ ನೇಮಕಾತಿಗೆ ನಿರ್ದಿಷ್ಟ ನಿಯಮಗಳಿಲ್ಲ. ಆ ನಿಯಮಗಳನ್ನು ರೂಪಿಸುವವರೆಗೆ ಕೇಂದ್ರ ಲೋಕಸೇವಾ ಆಯೋಗದ ನಿವೃತ್ತ ಅಧ್ಯಕ್ಷ ಪಿ.ಸಿ.ಹೋಟಾ ನೇತೃತ್ವದ ಸಮಿತಿ ಶಿಫಾರಸು ಮಾಡಿರುವ ಮಾರ್ಗಸೂಚಿಗಳನ್ನೇ ಪಾಲಿಸಬೇಕು' ಎಂದು ತಾಕೀತು ಮಾಡಿದೆ.

ಅಗತ್ಯವಿಲ್ಲ: ಇದೇ ವೇಳೆ ನ್ಯಾಯಪೀಠವು, 'ಕೆಪಿಎಸ್‌ಸಿ ಅಧ್ಯಕ್ಷರ ಹಾಗೂ ಸದಸ್ಯರ ನೇಮಕಕ್ಕೆ ಹೋಟಾ ಸಮಿತಿಯ ಮಾರ್ಗಸೂಚಿ ಪಾಲಿಸಬೇಕು ಮತ್ತು ನಿರ್ದಿಷ್ಟ ನಿಯಮ ರೂಪಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು ಎಂಬ ಅರ್ಜಿದಾರರ ಮನವಿ ಪರಿಗಣಿಸಲು ಅಗತ್ಯವಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

'ಕೆಪಿಎಸ್‌ಸಿ ಅಧ್ಯಕ್ಷ ಹಾಗೂ ಸದಸ್ಯರ ನೇಮಕಾತಿಗೆ ಶೋಧನಾ ಸಮಿತಿ ರಚಿಸಬೇಕು ಎಂಬ ಪಿ.ಸಿ. ಹೋಟಾ ಸಮಿತಿಯ ಶಿಫಾರಸನ್ನು ಕೈಬಿಡಲು ರಾಜ್ಯ ಸಚಿವ ಸಂಪುಟಸಭೆ 2013ರ ಆಗಸ್ಟ್ 23ರಂದು ನಿರ್ಣಯ ಕೈಗೊಂಡಿದೆ. ಹೀಗಾಗಿ, 2021ರಲ್ಲಿ ಶಿವಶಂಕರ ಎಸ್.ಸಾಹುಕಾರ್ ಸದಸ್ಯರಾಗಿ, ನಂತರ ಅವರನ್ನೇ ಅಧ್ಯಕ್ಷರನ್ನಾಗಿ ಹಾಗೂ ಡಾ.ಚಂದ್ರಕಾಂತ್ ಡಿ.ಶಿವಕೇರಿ ಸೇರಿದಂತೆ 11 ಮಂದಿ ಸದಸ್ಯರನ್ನು ನೇಮಿಸಿದ ವೇಳೆ ಹೋಟಾ ಸಮಿತಿ ಮಾರ್ಗಸೂಚಿ ಅನುಸರಿಸಬೇಕಿತ್ತು ಎಂಬ ನಿಯಮ ಪ್ರಚಲಿತದಲ್ಲಿ ಇರಲಿಲ್ಲ' ಎಂದು ಹೇಳಿದೆ.

ಮನವಿ ಏನಿತ್ತು?: 'ಕೆಪಿಎಸ್‌ಸಿ ಅಧ್ಯಕ್ಷ ಹಾಗೂ ಸದಸ್ಯರ ನೇಮಕಾತಿಗೆ ನಿರ್ದಿಷ್ಟ ನಿಯಮಗಳನ್ನು ರೂಪಿಸ ಬೇಕು. ಆ ನಿಯಮಗಳನ್ನು ರೂಪಿಸುವ ವರೆಗೆ ಹೋಟಾ ನೇತೃತ್ವದ ಸಮಿತಿ ಶಿಫಾರಸು ಮಾಡಿರುವ ಮಾರ್ಗಸೂಚಿಗಳನ್ನು ಪಾಲಿಸಬೇಕು' ಎಂದು ಹೈಕೋರ್ಟ್ 2016ರಲ್ಲಿ ಆದೇಶಿಸಿತ್ತು.

'ಹೋಟಾ ಸಮಿತಿ ಮಾರ್ಗಸೂಚಿಯಂತೆ ಶೋಧನಾ ಸಮಿತಿ ರಚಿಸದೆ ಮತ್ತು ಯಾವುದೇ ನಿಯಮ ರೂಪಿಸದೆ ಕೆಪಿಎಸ್‌ಸಿಗೆ ಮಾಡಿರುವ ನೇಮಕಾತಿಯನ್ನು ನೇಮಕಾತಿ ರದ್ದುಪಡಿಸಬೇಕು. ಹೊಸದಾಗಿ ಸದಸ್ಯರನ್ನು ನೇಮಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ಬಿಜೆಪಿ ಅಧ್ಯಕ್ಷ ಸ್ಥಾನ: ಮುನ್ನೆಲೆಗೆ ಅರವಿಂದ ಲಿಂಬಾವಳಿ ಹೆಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಆಯ್ಕೆಯ ಕಸರತ್ತು ಮುಂದುವರಿದಿದ್ದು, ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರ ಹೆಸರು ಮುನ್ನೆಲೆಗೆ ಬಂದಿದೆ.

ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ಸಿ.ಟಿ. ರವಿ ಹೆಸರನ್ನು ಕೈಬಿಡಲಾಗಿತ್ತು. ಅವರನ್ನೇ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗುತ್ತದೆ ಎಂಬ ಚರ್ಚೆಗಳು ನಡೆದಿದ್ದವು. ಆ ಬಳಿಕ ನಡೆದ ಬೆಳವಣಿಗೆಯಲ್ಲಿ, ಒಕ್ಕಲಿಗ–ಲಿಂಗಾಯತರ ಮಧ್ಯೆ ಈ ಹುದ್ದೆಗಿರುವ ಪೈಪೋಟಿ ತಪ್ಪಿಸಬೇಕಾದರೆ ಭೋವಿ ಸಮಾಜದವರಾದ ಲಿಂಬಾವಳಿ ಅವರನ್ನೇ ತರುವುದು ಸೂಕ್ತ ಎಂಬ ತೀರ್ಮಾನಕ್ಕೆ ಪಕ್ಷದ ವರಿಷ್ಠರು ಬಂದಿದ್ದಾರೆ. ಬಹುತೇಕ ಅವರ ಹೆಸರೇ ಅಖೈರುಗೊಳ್ಳುವ ಸಾಧ್ಯತೆ ಇದೆ. ಇನ್ನೆರಡು ದಿನಗಳಲ್ಲಿ ಈ ಸಂಬಂಧ ಘೋಷಣೆ ಹೊರಬೀಳಲಿದೆ ಎಂದು ಬಿಜೆಪಿಯ ಮೂಲಗಳು ತಿಳಿಸಿವೆ.



ಅರವಿಂದ ಲಿಂಬಾವಳಿ

ರಾಜ್ಯ ಘಟಕ ಅಧ್ಯಕ್ಷ ಸ್ಥಾನಕ್ಕೆ ಸಿ.ಟಿ.ರವಿಯವರಲ್ಲದೇ, ಶೋಭಾ ಕರಂದ್ಲಾಜೆ, ಆರ್. ಅಶೋಕ ಅವರ ಹೆಸರು ಪ್ರಸ್ತಾಪವಾಗಿತ್ತು. ಪಕ್ಷದ ಅಧ್ಯಕ್ಷ ಸ್ಥಾನವನ್ನು ತಮಗೆ ನೀಡಬೇಕು ಎಂದು ವಿ.ಸೋಮಣ್ಣ ಪ್ರತಿಪಾದಿಸಿದ್ದರು. ಸಿ.ಟಿ.ರವಿ ನೇಮಕಕ್ಕೆ ಬಿ.ಎಸ್.ಯಡಿಯೂರಪ್ಪ ಬಲವಾದ ವಿರೋಧ ವ್ಯಕ್ತಪಡಿಸಿದ್ದರು. ತಮ್ಮ ಮಗ ವಿಜಯೇಂದ್ರಗೆ ಅಧ್ಯಕ್ಷ ಸ್ಥಾನ ಅಥವಾ ವಿರೋಧ ಪಕ್ಷದ ನಾಯಕನ ಸ್ಥಾನ ನೀಡಬೇಕು ಎಂಬ ಬೇಡಿಕೆ ಇಟ್ಟಿದ್ದರು.

ಯಡಿಯೂರಪ್ಪ ಅವರ ಬೇಡಿಕೆಯನ್ನು ಒಪ್ಪದ ಪಕ್ಷದ ವರಿಷ್ಠರು ಪರ್ಯಾಯ ನಾಯಕನ ಹುಡುಕಾಟದಲ್ಲಿದ್ದರು. 'ಈಗ ಪೈಪೋಟಿಯಲ್ಲಿರುವ ಯಾರನ್ನೇ ಮಾಡಿದರೂ ಮುಂದೆ ಸಮಸ್ಯೆಗೆ ಕಾರಣವಾಗಬಹುದು. ಪರಿಶಿಷ್ಟ ಸಮುದಾಯದವರೊಬ್ಬರನ್ನು ನೇಮಕ ಮಾಡಿದರೆ ಸಮಸ್ಯೆ ಆಗುವುದಿಲ್ಲ. ಇದು ಮುಂದೆ ಚುನಾವಣೆಗಳಲ್ಲಿ ಪಕ್ಷಕ್ಕೆ ಲಾಭ ತರಬಹುದು' ಎಂಬ ಸಲಹೆ ಆರ್‌ಎಸ್‌ಎಸ್‌ನಿಂದ ಬಂದಿತ್ತು.

ಹೀಗಾಗಿ, ಲಿಂಬಾವಳಿ ಹೆಸರು ಅಧ್ಯಕ್ಷ ಸ್ಥಾನದ ಪರಿಶೀಲನೆಗೆ ಬಂದಿದೆ. ಯಡಿಯೂರಪ್ಪ ಅವರ ಜತೆಗೂ ಉತ್ತಮ ಬಾಂಧವ್ಯ ಹೊಂದಿದ್ದಾರೆ. ಅವರನ್ನೇ ಅಧ್ಯಕ್ಷರನ್ನಾಗಿ ಮಾಡಿದರೆ, ಯಡಿಯೂರಪ್ಪ ಕೂಡ ಸಹಕಾರ ನೀಡಬಹುದು ಎಂಬ ಲೆಕ್ಕಾಚಾರ ಇದರ ಹಿಂದಿದೆ. ಅಧ್ಯಕ್ಷ ಸ್ಥಾನ ಭರ್ತಿ ಆದ ಮೇಲೆ ವಿರೋಧ ಪಕ್ಷದ ನಾಯಕ ಸ್ಥಾನವನ್ನೂ ಭರ್ತಿ ಮಾಡಲಾಗುವುದು ಎಂದು ಮೂಲಗಳು ತಿಳಿಸಿವೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಲಿಂಬಾವಳಿ ಅವರಿಗೆ ಮಹದೇವಪುರದ ವಿಧಾನಸಭಾ ಕ್ಷೇತ್ರದಲ್ಲಿ ಟಿಕೆಟ್ ನಿರಾಕರಿಸಲಾಗಿತ್ತು. ಇವರ ಪತ್ನಿ ಮಂಜುಳಾ ಅವರಿಗೆ ಟಿಕೆಟ್ ನೀಡಲಾಗಿತ್ತು.

ದೆಹಲಿ ಸಭೆಗೆ 50 ನಾಯಕರಿಗೆ ಆಹ್ವಾನ– ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೆಹಲಿಯಲ್ಲಿ ಬುಧವಾರ (ಆಗಸ್ಟ್ 2) ನಡೆಯಲಿರುವ ಸಭೆಗೆ ಸಚಿವರಿಗಷ್ಟೇ ಆಹ್ವಾನ ನೀಡಿದ್ದಲ್ಲ. ಕೆಲವು ಶಾಸಕರು, ಸಂಸದರು, ಪಕ್ಷದ ಹಿರಿಯ ಮುಖಂಡರೂ ಸೇರಿದಂತೆ 50 ನಾಯಕರನ್ನು ಮೂರು ತಂಡಗಳಂತೆ ಆಹ್ವಾನಿಸಲಾಗಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಮುಂಬರುವ ಲೋಕಸಭೆ ಚುನಾವಣೆಯ ತಂತ್ರಗಾರಿಕೆ ಕುರಿತು ಚರ್ಚೆ ಮಾಡುವ ಉದ್ದೇಶದಿಂದ ಸಚಿವರು, ಶಾಸಕರು ಮತ್ತು ಇತರ ನಾಯಕರು ದೆಹಲಿ ಪ್ರವಾಸ ಮಾಡುತ್ತಿದ್ದೇವೆ' ಎಂದರು.

'ಪಕ್ಷ ಸಂಘಟನೆ, ಲೋಕಸಭೆ ಚುನಾವಣೆಗೆ ತಂತ್ರಗಾರಿಕೆ, ಜವಾಬ್ದಾರಿಗಳ ಹಂಚಿಕೆ ಕುರಿತು ಚರ್ಚಿಸಲು ಹೈಕಮಾಂಡ್ ನಾಯಕರು ದೆಹಲಿಯಲ್ಲಿ ಸಭೆ ಕರೆದಿದ್ದಾರೆ. ಜೊತೆಗೆ, ಜನರಿಗೆ ನಮ್ಮ ಎಲ್ಲ ಗ್ಯಾರಂಟಿಗಳನ್ನು ಸಮರ್ಪಕವಾಗಿ ತಲುಪಿಸುವ ಬಗ್ಗೆಯೂ ಚರ್ಚೆ ಮಾಡಲಾಗುವುದು' ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	113.42	6,391	3,193
ಹಾರಂಗಿ	2,859	2,857.79	2,940	2,000
ಕಬಿನಿ	2284.00	2,283.40	4,373	3,500
ಹೇಮಾವತಿ	2,922	2,913.75	3,720	200
ಲಿಂಗನಮಕ್ಕಿ	1,819	1,787.90	13,660	3,899.20
ಸೂಪಾ (ಮೀ)	564	545	11,008	2,570
ಮಾಣಿ	595	580.68	2,673	00
ತುಂಗಭದ್ರಾ	1,633	1,625.81	29,956	2,066
ಮಲಪ್ರಭಾ	2079.5	2,063.90	3,284	194
ಘಟಪ್ರಭಾ	2175	2,154.98	11,588	1,739
ಭದ್ರಾ	186	162.80	5,750	189
ಆಲಮಟ್ಟಿ (ಮೀ)	519.6	518.71	1,28,158	57,731
ನಾರಾಯಣಪುರ (ಮೀ)	492.25	491.73	60,000	85,369

* ನೆಲಮಟ್ಟದಿಂದ

ತಿರುಪತಿಗೆ ತುಪ್ಪ: ಬಿಜೆಪಿ ಅವಧಿಯಲ್ಲಿ ಸ್ಥಗಿತ– ಸಿಎಂ

ಬೆಂಗಳೂರು: 'ತಿರುಪತಿಗೆ ನಂದಿನಿ ತುಪ್ಪ ಪೂರೈಕೆ ಸ್ಥಗಿತಗೊಂಡಿರುವುದು ಇಂದು, ನಿನ್ನೆಯ ವಿಚಾರವಲ್ಲ. ಕಳೆದ ಒಂದೂವರೆ ವರ್ಷದ ಹಿಂದೆಯೇ, ಬಿಜೆಪಿ ಸರ್ಕಾರದ ಅವಧಿಯಲ್ಲಿ ಸ್ಥಗಿತಗೊಳಿಸಲಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ-ನಳಿನ್‌ಕುಮಾರ್ ಕಟೀಲ್ ಅವರನ್ನು ಉದ್ದೇಶಿಸಿ ಟ್ವೀಟ್ ಮಾಡಿರುವ ಮುಖ್ಯಮಂತ್ರಿ, 'ಹಿಂದೆ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರ ಹಿಂದೂ ಧಾರ್ಮಿಕ ಶ್ರದ್ಧಾ ಭಕ್ತಿಯ ವಿರೋಧಿಯೋ ಅಥವಾ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಅವರು ಮಾತ್ರ ಹಿಂದೂ ವಿರೋಧಿಯೋ?' ಎಂದು ಕೆಣಕಿದ್ದಾರೆ.

'ನಮಗೆ ಜನರ ಧಾರ್ಮಿಕ ನಂಬಿಕೆಯ ಜೊತೆಗೆ ಹೈನುಗಾರರ ಬದುಕು ಮುಖ್ಯ. ಹೀಗಾಗಿ ನಾಡಿನ ರೈತರ ಹಿತದೃಷ್ಟಿಯಿಂದ ನಾವು ಕೇಳುವ ದರ ನೀಡಲು ತಿರುಪತಿ ದೇವಾಲಯದವರು ಒಪ್ಪುವುದಾದರೆ ನಂದಿನಿ ತುಪ್ಪ ಪೂರೈಸಲು ನಮಗೆ ಯಾವ ಸಮಸ್ಯೆಯೂ ಇಲ್ಲ' ಎಂದಿದ್ದಾರೆ.

ಪರೀಕ್ಷೆ ನಂತರವೇ ತುಪ್ಪ ಖರೀದಿ –ಟಿಟಿಡಿ

ತಿರುಪತಿ, ಆಂಧ್ರಪ್ರದೇಶ (ಪಿಟಿಐ): ತಿರುಮಲ ತಿರುಪತಿ ದೇವಸ್ಥಾನದ (ಟಿಟಿಡಿ) ಆಡಳಿತ ಮಂಡಳಿಯು ಲಾಡು ತಯಾರಿಸಲು ಅಗತ್ಯವಿರುವ ತುಪ್ಪವನ್ನು ಗುಣಮಟ್ಟ ಕುರಿತು ಎರಡು ಹಂತದ ಪರೀಕ್ಷೆಯ ನಂತರ ಹಾಗೂ ಇ-ಟೆಂಡರ್‌ನಲ್ಲಿ ಕಡಿಮೆ ಬಿಡ್ ದಾಖಲಿಸುವ ಪೂರೈಕೆದಾರರಿಂದ ಮಾತ್ರವೇ ಖರೀದಿಸಲಿದೆ ಎಂದು ಟಿಟಿಡಿ ಅಧಿಕಾರಿಗಳು ತಿಳಿಸಿದ್ದಾರೆ.

ಕೆಎಂಎಫ್ ಅಧ್ಯಕ್ಷ ಭೀಮಾನಾಯ್ಕ ಅವರು ಇತ್ತೀಚೆಗೆ ಆಡಳಿತ ಮಂಡಳಿಯು ಕಡಿಮೆ ಗುಣಮಟ್ಟದ ತುಪ್ಪವನ್ನು ಖರೀದಿಸುತ್ತಿದೆ ಎಂದು ಹೇಳಿದ್ದರು. ಅದಕ್ಕೆ ಪ್ರತಿಕ್ರಿಯಿಸಿ ಟಿಟಿಡಿ ಕಾರ್ಯ ನಿರ್ವಾಹಕ ಅಧಿಕಾರಿ ಎ.ವಿ. ಧರ್ಮರೆಡ್ಡಿ ಅವರು ಈ ಸ್ಪಷ್ಟನೆ ನೀಡಿದ್ದಾರೆ.

ಹಾಲಿನ ದರ ಏರಿಕೆಗೆ ಗ್ರಾಹಕರ ಆಕ್ರೋಶ, ಅವೈಜ್ಞಾನಿಕ ದರ ಪರಿಷ್ಕರಣೆ

ಅರ್ಧ ಲೀಟರ್ ಖರೀದಿದಾರರಿಗೆ ಬರೆ

ಪ್ರಜಾವಾಣಿ ವಾರ್ತೆ

ಹಾಲಿನ ವಿಧ	ಹಳೆ ದರ ಒಂದು ಲೀಟರ್‌ಗೆ	ಹೊಸ ದರದಂತೆ ಅರ್ಧ ಲೀಟರ್‌ನ ಎರಡು ಪ್ಯಾಕೆಟ್	ಹೆಚ್ಚುವರಿ
ಶುಭಂ ಹಾಲು	₹45	₹50	₹5
ಸ್ಪೆಷಲ್ ಹಾಲು	₹45	₹50	₹5
ಟೋನ್ಡ್ ಹಾಲು	₹39	₹44	₹5

ಬೆಂಗಳೂರು: ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳ (ಕೆಎಂಎಫ್) ನಂದಿನಿ ಹಾಲಿನ ದರವನ್ನು ಅವೈಜ್ಞಾನಿಕವಾಗಿ ಪರಿಷ್ಕರಣೆ ಮಾಡಿದ್ದು, ಅರ್ಧ ಲೀಟರ್ ಹಾಲಿನ ಪ್ಯಾಕೇಟ್‌ಗಳ ಖರೀದಿದಾರರಿಗೆ ಬರೆ ಹಾಕಿದೆ ಎಂದು ಗ್ರಾಹಕರು ದೂರಿದ್ದಾರೆ.

ಒಂದು– ಎರಡು ಲೀಟರ್ ಹಾಲು ಬಳಸುವವರು ಒಂದು ಲೀಟರ್‌ನ ಪ್ಯಾಕೆಟ್ ಖರೀದಿಸುವ ಬದಲು ಅರ್ಧ ಲೀಟರ್‌ನ ಎರಡು ಅಥವಾ ನಾಲ್ಕು ಪ್ಯಾಕೆಟ್ ಖರೀದಿಸುವವರ ಸಂಖ್ಯೆ ಹೆಚ್ಚಿದೆ. ಕೆಎಂಎಫ್‌ನ ಪರಿಷ್ಕರಣೆ ಈ ಬಹುಸಂಖ್ಯಾತ ಗ್ರಾಹಕರ ಜೇಬಿಗೆ ನಿತ್ಯವೂ ಕತ್ತರಿ ಹಾಕುವಂತಹ ಪರಿಸ್ಥಿತಿ ನಿರ್ಮಾಣ ಮಾಡಿದೆ ಎಂದು ದೂರಿದ್ದಾರೆ.

'ಶುಭಂ ಹಾಲು' (ಎಸ್‌ಎಸ್‌ಎಂ) ಪ್ರತಿ ಲೀಟರ್ ಹಾಲಿಗೆ ಹಳೆ ಮಾರಾಟ ದರವು ₹45 ಇತ್ತು. ಇದಕ್ಕೆ ₹3 ದರ ಹೆಚ್ಚಿಸಿ ₹48 ನಿಗದಿ ಪಡಿಸಲಾಗಿದೆ. ಶುಭಂ ಹಾಲಿನ ಅರ್ಧ ಲೀಟರ್‌ನ ಪರಿಷ್ಕೃತ ದರವು ₹25 ಆಗಿದ್ದು ಹಳೆಯ ಒಂದು ಲೀಟರ್ ದರಕ್ಕೆ ಹೋಲಿಸಿದರೆ ಅರ್ಧ ಲೀಟರ್ ಎರಡು ಪ್ಯಾಕೆಟ್ ಖರೀದಿಸಿದರೆ ಹೆಚ್ಚುವರಿಯಾಗಿ ₹5 ಪಾವತಿಸಬೇಕಿದೆ. ಈ ಹಿಂದೆ ಒಂದು ಲೀಟರ್‌ಗೆ ₹45 ಇದ್ದಾಗ, ಅರ್ಧ ಲೀಟರ್ ಹಾಲಿಗೆ ₹23 ಪಡೆಯಲಾಗುತ್ತಿತ್ತು. ಆಗಲೇ, ಅರ್ಧ ಲೀಟರ್ ಹಾಲಿನ ಮೇಲೆ 50 ಪೈಸೆ ಹೆಚ್ಚುವರಿ ವಸೂಲಿ ಮಾಡುತ್ತಿದ್ದ ಕೆಎಂಎಫ್ ಮತ್ತೆ ಬರೆ ಹಾಕಿದೆ ಎಂದು ಗ್ರಾಹಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಅದೇ ರೀತಿ ಟೋನ್ಡ್ ಹಾಲಿನ (ಟಿಎಂ) ಪ್ರತಿ ಲೀಟರ್‌ಗೆ ಹಳೆ ದರವು ₹39 ಆಗಿತ್ತು. ಇದಕ್ಕೆ ₹3ರಂತೆ ಪರಿಷ್ಕರಿಸಿ ಹೊಸ ದರವನ್ನು ₹42ಕ್ಕೆ ಏರಿಸಲಾಗಿದೆ. ಹೊಸ ದರದಲ್ಲಿ (₹22) ಅರ್ಧ ಲೀಟರ್‌ನ ಎರಡು ಪ್ಯಾಕೆಟ್‌ಗಳನ್ನು ಖರೀದಿಸಿದರೆ ₹44 ಆಗಲಿದೆ. ಹಳೆ ದರವಾದ ₹39ಕ್ಕೆ ಹೆಚ್ಚುವರಿ ₹3 ಸೇರಿಸಿದರೆ ಅರ್ಧ ಲೀಟರ್ ಎರಡು ಪ್ಯಾಕೆಟ್‌ಗಳಿಗೆ ₹42 ಆಗಬೇಕಿತ್ತು. ಆದರೆ, ಅರ್ಧ ಲೀಟರ್ ಖರೀದಿದಾರರು ಹೆಚ್ಚುವರಿಯಾಗಿ ₹5 ಪಾವತಿಸಬೇಕಿದೆ. ಈ ಮಾದರಿ ಹಾಲಿನಲ್ಲೂ ಹಿಂದೆಯೇ 50 ಪೈಸೆ ಹೆಚ್ಚುವರಿಯಾಗಿ ಪಡೆಯಲಾಗುತ್ತಿತ್ತು' ಎಂದು ಗ್ರಾಹಕ ಮಂಜುನಾಥ್ ನೋವು ತೋಡಿಕೊಂಡಿದ್ದಾರೆ.

'ಪ್ರತಿ ಲೀಟರ್ ಹಾಲಿಗೆ ₹3 ಹೆಚ್ಚಿಸಲಾಗಿದೆ. ಅದರಂತೆ ಅರ್ಧ ಲೀಟರ್‌ಗೆ ₹1.50 ಹೆಚ್ಚಿಸಬೇಕಿತ್ತು. ಶುಭಂ ಹಾಲಿನ 500 ಮಿ.ಲೀ ಪ್ಯಾಕೆಟ್‌ಗೆ ₹23ರಿಂದ ₹24.50ಕ್ಕೆ, ಟೋನ್ಡ್ ಹಾಲಿನ ಅರ್ಧ ಲೀಟರ್ ದರವನ್ನು ₹20ರಿಂದ ₹21.50 ಏರಿಸಬೇಕಿತ್ತು. ಆದರೆ, ಚಿಲ್ಲರೆ ಸಮಸ್ಯೆ ಕಾರಣದಿಂದ 500 ಮಿ.ಲೀ ಪೊಟ್ಟಣಕ್ಕೆ 10 ಮಿ.ಲೀ ಹಾಲನ್ನು ಹೆಚ್ಚಿಗೆ ನೀಡಿ ಸರಿದೂಗಿಸಲಾಗಿದೆ. ಹಳೆಯ ಅರ್ಧ ಲೀಟರ್ ಹಾಲಿನ ದರವನ್ನೇ ಪರಿಗಣಿಸಿ ಏರಿಕೆ ಮಾಡಲಾಗಿದೆ. ಒಂದು ಲೀಟರ್ ಆಧರಿಸಿ ದರ ಪರಿಷ್ಕರಿಸಿಲ್ಲ' ಎಂದು ಕೆಎಂಎಫ್ ಅಧಿಕಾರಿಗಳು ಹೇಳಿದರು.

ಹೆಚ್ಚುವರಿ ಹಾಲಿನ ಬದಲಿಗೆ 50 ಪೈಸೆಯಷ್ಟು ಕಡಿಮೆ ಮಾಡಬಹುದಿತ್ತು. ಅದು ದುರುಪಯೋಗವಾಗುವ ಸಾಧ್ಯತೆಯಿತ್ತು. ಕೆಎಂಎಫ್‌ಗೆ ಹಣ ಬಂದರೆ ರೈತರಿಗೆ ಅನುಕೂಲವಾಗಲಿದೆ ಹೆಚ್ಚುವರಿ ಹಾಲು ನೀಡಲಾಗುತ್ತಿದೆ ಎಂದು ಅವರು ಹೇಳಿದರು.

ಸರ್ಕಾರದ ಅನುಮೋದನೆ ಬಳಿಕ ಕೆಎಂಎಫ್ ಎಲ್ಲ ಮಾದರಿಯ ಹಾಲಿನ ಮೇಲೆ ₹3 ಹೆಚ್ಚಿಸಿದೆ. ಒಂದು ಲೀಟರ್‌ಗೆ ಹಿಂದಿನ ದರಕ್ಕೆ(₹45) ₹3 ಸೇರಿಸಿದರೆ ₹48 ಆಗುತ್ತದೆ. ಆ ಲೆಕ್ಕದಲ್ಲಿ ಅರ್ಧ ಲೀಟರ್ ಹಾಲಿಗೆ ₹24 ಆಗಬೇಕಿತ್ತು. ಹಾಗೆ ಮಾಡುವ ಬದಲು, ಅರ್ಧ ಲೀಟರ್‌ಗೆ ಇದ್ದ ದರಕ್ಕೆ, ಅದಕ್ಕೆ ಸಮನಾಗಿ ಹೆಚ್ಚಳ ಮಾಡುವ ಜತೆಗೆ 50 ಪೈಸೆ ಹೆಚ್ಚುವರಿ ವಸೂಲು ಮಾಡಲಾಗಿದೆ. ಇದಕ್ಕೆ ಕೆಎಂಎಫ್ ನೀಡುತ್ತಿರುವ ಸಮರ್ಥನೆ ಎಷ್ಟು ಸರಿ ಎಂದು ಗ್ರಾಹಕಿ ಅನುರಾಧ ಪ್ರಶ್ನಿಸಿದರು.

ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದೆ. ಈಗ ಹಾಲಿನ ದರವನ್ನು ಅವೈಜ್ಞಾನಿಕವಾಗಿ ಏರಿಕೆ ಮಾಡಲಾಗಿದೆ ಎಂದು ಗ್ರಾಹಕರಾದ ಎಸ್. ಚಂದನಾ ಹೇಳುತ್ತಾರೆ.

ಉದ್ಯೋಗ ವಾಣಿ

PKM EDUCATIONAL TRUST (R)
R.R. INSTITUTIONS
BANGALORE
Since 1993
30 YEARS OF ACADEMIC EXCELLENCE
PHD | ENGINEERING | ARCHITECTURE | NURSING | PHARMACY | MBA
ALLIED HEALTH SCIENCES | POLYTECHNIC | EDUCATION | DEGREE | PUC

R.R. Institutions invites application for the following Administrative, Teaching & non-teaching positions for those candidates having passion towards Quality Education, Accreditation, Research &Consultancy.

Chief Executive Officer (CEO)/
Administrator/ Administrative officer
We are seeking a dynamic and visionary person to lead our esteemed educational institution with the competence of providing strategic leadership, fostering academic excellence, and ensuring the institution's growth and success with Proven experience in educational leadership or senior management roles. Join us in shaping the future of education and making a lasting impact on the lives of students.
Applicants can submit their resumes along with all relevant documents to contact@rrinstitutions.com within 10 days of the date of this advertisement.

Professor/Associate Prof. with Ph.D. /Assistant Prof/ Lecturer
R.R. Institute of Technology
In the departments of Civil | Mechanical Engineering | CSE | ISE Electrical | Electronics | English | Physics | Chemistry | Maths
R.R. School of Architecture
R.R. Nursing Institutions
In the departments of Paediatrics | Medical Surgical Nursing Community Health Nursing | OBG | Psychiatry | Tutors – B.Sc.
R.R. Institute of Medical Sciences
In the departments of Operation Theatre Technology | Medical Imaging Technology | Anaesthesia | Cardiac Care | Radiotherapist Anatomy | Optometry | Physiology | Pathology | Perfusion | English | Hindi
R.R. College of Pharmacy
In the departments of Pharmaceutics | Pharmacology Pharmacy practice | Pharmacognosy
R.R. Institute of Management Studies
In the departments of Finance & Commerce | Computer Application Criminology | Forensic Science | Aviation | Statistics | English | Hindi
R.R. Polytechnic
In the departments of Civil | Mechanical | CSE | Electrical | Electronics English | Hindi
R.R. Institute of Physiotherapy
Academy of Learning PU College
In the departments of Biology | Chemistry | Physics | Mathematics Statistics | English | Hindi
NON-TEACHING-TECHNICAL & NON-TECHNICAL
Administrative Officer | HR | Placement Officer | Physical Education Director | Librarian | Hostel Warden | System Admin | Digital Marketing Executive | Accountant | Office Assistant | Lab Instructor | Attenders | Drivers | Helpers

Qualifications & Experience as per the norms of Affiliated University & Institution Interested Candidates can submit their Resume with Photographs to the below mentioned mail ID within 10 days of the advertisement.
resume@rrinstitutions.com | Contact details: 888 000 1111
Reservation for SC/ST Candidates as per rules Sd\- Secretary

ಕಲ್ಲೇಶ್ವರ ವಿದ್ಯಾವರ್ಧಕ ಸಂಘ (ರಿ.), ಶಿಗ್ಗಾ
ತಾಲ್ಲೂಕ: ಸೊರಬ, ಜಿಲ್ಲೆ: ಶಿವಮೊಗ್ಗ.
ಬೇಕಾಗಿದ್ದಾರೆ (ಮರು ಪ್ರಕಟಣೆ)

ನಮ್ಮ ಸಂಘದಡಿಯಲ್ಲಿ ನಡೆಯುತ್ತಿರುವ ಅನುದಾನಿತ ಪ್ರೌಢಶಾಲೆಯಲ್ಲಿ ತೆರವಾದ ಹುದ್ದೆಯನ್ನು ಭರ್ತಿ ಮಾಡಲು ಮಾನ್ಯ ನಿರ್ದೇಶಕರು, ಪ್ರೌಢಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಸಿ8(1)ಶಾ.ಶಿ.ಆ..ಹು.ಭ.ನು/184/2015–16 ದಿನಾಂಕ: 23.07.2016ರಂತೆ ಅನುಮತಿ ನೀಡಿದ್ದು, ಹಾಗೂ ಮಾನ್ಯ ಉಪನಿರ್ದೇಶಕರು, ಶಾ.ಶಿ. ಇಲಾಖೆ, ಶಿವಮೊಗ್ಗ ಇವರ ಪತ್ರ ಸಂಖ್ಯೆ: ಜಿ.3/ಇತರೆ ಹಿಂಬರಹ/01/2023–24, ದಿನಾಂಕ: 30.06.2023ರಲ್ಲಿ ಸೂಚಿಸಿರುವಂತೆ ಈ ಕೆಳಗಿನ ಶಿಕ್ಷಕರ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಅಹ್ವಾನಿಸಿದೆ.

ಅ. ನಂ.	ಶಾಲೆಯ ಹೆಸರು ಮತ್ತು ವಿಳಾಸ	ಹುದ್ದೆಯ ವಿವರ	ಹುದ್ದೆಯ ಸಂಖ್ಯೆ	ವಿದ್ಯಾರ್ಹತೆ	ಮಾಧ್ಯಮ	ಮೀಸಲಾತಿ ವಿವರ ಮತ್ತು ಗುಂಪು
01	ಮಲೆನಾಡು ಪ್ರೌಢಶಾಲೆ ಹೊಸನಗರ ತಾ॥ ಹೊಸನಗರ	ಸಹಶಿಕ್ಷಕ ಹಿಂದಿ ಭಾಷೆ	01	ಬಿ.ಎ. (ಹಿಂದಿ ಐಚ್ಛಿಕ) ಬಿ.ಇಡಿ.	ಕನ್ನಡ	ಮೀಸಲಾತಿ ಬಿಂದು 17 3.ಎ

ಮೇಲ್ಕಂಡ ಹುದ್ದೆಗೆ ಅರ್ಜಿ ಸಲ್ಲಿಸುವವರು ಪ್ರಕಟಣೆಯ ದಿನಾಂಕದಿಂದ 21 ದಿನದೊಳಗೆ, ಇತ್ತೀಚಿನ ಪಾಸ್‌ಪೋರ್ಟ ಅಳತೆಯ ಭಾವಚಿತ್ರದೊಂದಿಗಿನ ಅರ್ಜಿಯ ಜೊತೆಗೆ ರೂ. 500/– ಡಿ.ಡಿ.ಯನ್ನು ಅಧ್ಯಕ್ಷರು, ಕ.ವಿ.ವ ಸಂಘ (ರಿ.), ಶಿಗ್ಗಾ, ತಾಲೂಕು ಸೊರಬ ಇವರ ಹೆಸರಿಗೆ ಎಸ್.ಬಿ.ಐ. ಸೊರಬದಲ್ಲಿ ನಗದೀಕರಣ (payable at, soraba) ವಾಗುವಂತೆ ಪಡೆದು ಅಗತ್ಯ ದಾಖಲೆಗಳೊಂದಿಗೆ ಮಲೆನಾಡು ಪ್ರೌಢಶಾಲೆ, ಹೊಸನಗರ ತಾ॥ ಹೊಸನಗರ, ಶಿವಮೊಗ್ಗ ಇಲ್ಲಿಗೆ ಸಲ್ಲಿಸಬೇಕು. ಅರ್ಜಿಯ ಇನ್ನೊಂದು ಪ್ರತಿಯನ್ನು ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಶಿವಮೊಗ್ಗ ಇವರಿಗೆ ಸಲ್ಲಿಸಬೇಕು.

ಸಹಿ/– ಕಾರ್ಯದರ್ಶಿ,
ಕ.ವಿ.ವ. ಸಂಘ (ರಿ.), ಶಿಗ್ಗಾ

ರಾಜಕಾಲುವೆ ಒತ್ತುವರಿ ತೆರವಿಗೆ ನಿರ್ಲಕ್ಷ್ಯ: ಹೈಕೋರ್ಟ್ ಕಿಡಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯ ಪೀಠದಿಂದ ವಿಚಾರಣೆ
- ಒತ್ತುವರಿ ತೆರವಿನ ಕ್ರಮ ತೃಪ್ತಿದಾಯಕವಾಗಿಲ್ಲ ಎಂದು ಅಸಮಾಧಾನ
- ಸೆಪ್ಟೆಂಬರ್ 4ಕ್ಕೆ ವಿಚಾರಣೆ ಮುಂದೂಡಿಕೆ

ಬೆಂಗಳೂರು: 'ಕೋರ್ಟ್ ನಿರ್ದೇಶನ ನೀಡಿದ್ದರೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ಕೆರೆ, ರಾಜಕಾಲುವೆಗಳ ಒತ್ತುವರಿ ತೆರವಿಗೆ ಕ್ರಮ ಕೈಗೊಂಡಿಲ್ಲ' ಎಂದು ನಗರಾಭಿವೃದ್ಧಿ ಇಲಾಖೆ ಮತ್ತು ಬಿಬಿಎಂಪಿ ವಿರುದ್ಧ ಹೈಕೋರ್ಟ್ ಕಿಡಿ ಕಾರಿದೆ.

'ಕೆರೆ ಹಾಗೂ ರಾಜಕಾಲುವೆ ಒತ್ತುವರಿ ತೆರವುಗೊಳಿಸಲು ನಿರ್ದೇಶಿಸಬೇಕು' ಎಂದು ಕೋರಿ 'ಸಿಟಿಜನ್ ಆ್ಯಕ್ಷನ್ ಫೋರಂ' ಸೇರಿದಂತೆ ಹಲವು ಸಂಘಟನೆಗಳು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಬಿಎಂಪಿ ಪರ ವಕೀಲರು, ರಾಷ್ಟ್ರೀಯ ಎಂಜಿನಿಯರಿಂಗ್ ಸಂಶೋಧಾನ ಸಂಸ್ಥೆ (ನೀರಿ) ವರದಿ ಆಧರಿಸಿ ಒತ್ತುವರಿ ತೆರವಿಗೆ ಬಿಬಿಎಂಪಿ ಕೈಗೊಂಡಿರುವ ಕ್ರಮಗಳ ಕುರಿತಾದ ಪ್ರಮಾಣ ಪತ್ರವನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು. ಪ್ರಮಾಣ ಪತ್ರ ಪರಿಶೀಲಿಸಿದ ನ್ಯಾಯಪೀಠ, 'ಒತ್ತುವರಿ ತೆರವಿಗೆ ಕೈಗೊಂಡ ಕ್ರಮಗಳು ತೃಪ್ತಿಕರವಾಗಿಲ್ಲ' ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿತು.

'ಅಧಿಕಾರಿಗಳು ಒಬ್ಬರ ಮೇಲೊಬ್ಬರು ಸಬೂಬು ಹೇಳುವುದನ್ನು ನೋಡಿದರೆ ಬೆಕ್ಕಿನ ಕೊರಳಿಗೆ ಗಂಟೆ ಕಟ್ಟೋರು ಯಾರು ಎಂಬಂತಹ ಪರಿಸ್ಥಿತಿ ಇದೆ. ಒತ್ತುವರಿಯ ದೂರುಗಳಿದ್ದರೂ ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಎಂಪ್ರಿ) ಹಾಗೂ ನೀರಿ ಸಂಸ್ಥೆಗಳ ವರದಿ ಆಧರಿಸಿ ಒತ್ತುವರಿ ತಡೆಗಂದೇ ಕೆರೆ ಸಂರಕ್ಷಣಾ ಕಾಯ್ದೆ ಮತ್ತು ಬಿಬಿಎಂಪಿ ಕಾಯ್ದೆಯಡಿ ಪ್ರತ್ಯೇಕ ಅಧಿಕಾರಿಯನ್ನು ನೇಮಿಸಬೇಕು' ಎಂದು ಆದೇಶಿಸಿತು.

'ಒತ್ತುವರಿದಾರರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಿ. ಭೂ ಕಬಳಿಕೆ ತಡೆ ನ್ಯಾಯಾಲಯದಲ್ಲಿ ಕೇಸ್ ದಾಖಲಿಸಿ' ಎಂದು ಆದೇಶಿಸಿ ವಿಚಾರಣೆಯನ್ನು ಸೆಪ್ಟೆಂಬರ್ 4ಕ್ಕೆ ಮುಂದೂಡಿತು.

ಅಂತೆಯೇ, 'ನಗರಾಭಿವೃದ್ಧಿ ಇಲಾಖೆ, ಬಿಬಿಎಂಪಿ, ಬೆಂಗಳೂರು ಜಲಮಂಡಳಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸೇರಿದಂತೆ ಎಲ್ಲ ಪ್ರಾಧಿಕಾರಗಳು ಸಮಾಲೋಚನೆ ನಡೆಸಿ ನಾಲ್ಕು ವಾರಗಳಲ್ಲಿ ಕ್ರಿಯಾ ಯೋಜನೆ ಸಲ್ಲಿಸಬೇಕು' ಎಂದು ನಿರ್ದೇಶಿಸಿತು.

ವಿಚಾರಣೆ ವೇಳೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹಾಗೂ ನಗರಾಭಿವೃದ್ಧಿ ಇಲಾಖೆ ಉಪ ಕಾರ್ಯದರ್ಶಿ ಖುದ್ದು ಹಾಜರಿದ್ದರು. ಬಿಬಿಎಂಪಿ ಜುಲೈ 22ರಂದು ಸಲ್ಲಿಸಿದ್ದ ಪ್ರಮಾಣ ಪತ್ರದಲ್ಲಿ 'ಒಟ್ಟು 2,951 ಒತ್ತುವರಿಗಳನ್ನು ಗುರುತಿಸಲಾಗಿದೆ. ಈವರೆಗೆ (2023ರ ಜುಲೈ 18ರವರೆಗೆ) 2,183 ತೆರವುಗೊಳಿಸಲಾಗಿದೆ. ಇನ್ನೂ 768 ತೆರವುಗೊಳಿಸಬೇಕಿದೆ' ಎಂದು ಹೇಳಿತ್ತು.

ನಿಂಬಾಳ್ಕರ್ ವಿರುದ್ಧದ ಇಲಾಖಾ ವಿಚಾರಣೆ ಕೈಬಿಟ್ಟ ಸರ್ಕಾರ

ಬೆಂಗಳೂರು: ಐಎಂಎ (ಐ-ಮಾನಿಟರಿ ಅಡ್ವೈಸರಿ) ಕಂಪನಿಯ ಬಹುಕೋಟಿ ವಂಚನೆ ಪ್ರಕರಣದಲ್ಲಿ ಐಪಿಎಸ್ ಅಧಿಕಾರಿ, ಸದ್ಯ ವಾರ್ತಾ ಇಲಾಖೆಯ ಆಯುಕ್ತರಾಗಿರುವ ಹೇಮಂತ್ ನಿಂಬಾಳ್ಕರ್ ವಿರುದ್ಧದ ಆರೋಪಕ್ಕೆ ಸಂಬಂಧಿಸಿದಂತೆ ನಿವೃತ್ತ ಜಿಲ್ಲಾ ನ್ಯಾಯಾಧೀಶರ ವರದಿ ಆಧರಿಸಿ ಇಲಾಖಾ ವಿಚಾರಣೆಯನ್ನು ರಾಜ್ಯ ಸರ್ಕಾರ ಮುಕ್ತಾಯಗೊಳಿಸಿದೆ.

ಹೇಮಂತ್ ನಿಂಬಾಳ್ಕರ್ ವಿರುದ್ಧದ ಆರೋಪಗಳು ಸಾಬೀತಾಗಿಲ್ಲ ಎಂದು ನಿವೃತ್ತ ಜಿಲ್ಲಾ ನ್ಯಾಯಾಧೀಶರ ವರದಿಯಲ್ಲಿದೆ. ಹೀಗಾಗಿ, ಅವರ ಮೇಲಿನ ಎಲ್ಲ ಆರೋಪಗಳನ್ನು ಕೈಬಿಡಲಾಗಿದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ. ಐಎಂಎ ವಂಚನೆ ಪ್ರಕರಣವನ್ನು ರಾಜ್ಯ ಸರ್ಕಾರ ಸಿಬಿಐಗೆ ವಹಿಸಿತ್ತು. ತನಿಖೆ ನಡೆಸಿದ್ದ ಸಿಬಿಐ, ಅಂದು ಅಪರಾಧ ತನಿಖಾ ದಳದ ಪೊಲೀಸ್ ಮಹಾನಿರ್ದೇಶಕರಾಗಿದ್ದ ಹೇಮಂತ್ ನಿಂಬಾಳ್ಕರ್ ವಿರುದ್ಧ ಇಲಾಖಾ ಕ್ರಮಕ್ಕೆ ಶಿಫಾರಸು ಮಾಡಿತ್ತು. ಎಐಎಸ್ (ಶಿಸ್ತು ಮತ್ತು ಮೇಲ್ಮನವಿ) ನಿಯಮಗಳ ಅಡಿಯಲ್ಲಿ ನಿಂಬಾಳ್ಕರ್ ಅವರಿಗೆ ನೋಟಿಸ್ ನೀಡಲಾಗಿತ್ತು.

ಇದಕ್ಕೆ ಪ್ರತಿಕ್ರಿಯಿಸಿದ್ದ ನಿಂಬಾಳ್ಕರ್, ತಮ್ಮ ಮೇಲಿನ ಕ್ರಿಮಿನಲ್ ಪ್ರಕ್ರಿಯೆಯನ್ನು ಹೈಕೋರ್ಟ್ ವಜಾಗೊಳಿಸಿರುವುದರಿಂದ ಇಲಾಖಾ ವಿಚಾರಣೆಯನ್ನು ಮುಕ್ತಾಯಗೊಳಿಸಬೇಕು ಎಂದು 2021ರ ಮೇ 18ರಂದು ಪತ್ರ ಬರೆದಿದ್ದರು. ಅದಕ್ಕೆ ರಾಜ್ಯ ಸರ್ಕಾರವು ಕ್ರಿಮಿನಲ್ ಪ್ರಕ್ರಿಯೆ ಮತ್ತು ಇಲಾಖಾ ವಿಚಾರಣೆ ವಿಭಿನ್ನ ತತ್ವದ ಮೇಲೆ ನಡೆಸಲಾಗುತ್ತದೆ. ಕ್ರಿಮಿನಲ್ ಪ್ರಕ್ರಿಯೆ ವಜಾ ಮಾಡಿರುವುದರಿಂದ ಇಲಾಖಾ ವಿಚಾರಣೆ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಹೇಳಿತ್ತು. ಅಲ್ಲದೆ, ನಿಂಬಾಳ್ಕರ್ ಮತ್ತು ಇನ್ನೊಬ್ಬ ಐಪಿಎಸ್ ಅಧಿಕಾರಿ ಎಸ್. ಮುರುಗನ್ ವಿರುದ್ಧ ವಿಚಾರಣೆಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶ ಕೆ.ಎಂ. ತಿಮ್ಮಯ್ಯ ಅವರನ್ನು ನೇಮಿಸಿತ್ತು.

ವಿಚಾರಣಾಧಿಕಾರಿಯು ನಿಂಬಾಳ್ಕರ್ ವಿರುದ್ಧ ಯಾವುದೇ ಆರೋಪ ಸಾಬೀತಾಗಿಲ್ಲ ಎಂದು ವರದಿ ನೀಡಿದ್ದರು. ಈ ವರದಿಯನ್ನು ಒಪ್ಪಿಕೊಂಡಿರುವ ಸರ್ಕಾರ, ಅವರನ್ನು ಆರೋಪಗಳಿಂದ ಮುಕ್ತಗೊಳಿಸಿದೆ.

ಯಲಹಂಕ ಜಂಟಿ ಆಯುಕ್ತರ ವರ್ಗ

ಬೆಂಗಳೂರು: ಬಿಬಿಎಂಪಿ ಯಲಹಂಕ ವಲಯದ ಜಂಟಿ ಆಯುಕ್ತರಾಗಿ ಮೊಹಮ್ಮದ್ ನಯೀಮ್ ಮೊಮಿನ್ ವರ್ಗಾವಣೆಯಾಗಿದ್ದಾರೆ. ಇವರು ಮಂಗಳೂರು ವಿಶ್ವವಿದ್ಯಾಲಯದ ಆಡಳಿತದ ಕುಲಸಚಿವರಾಗಿದ್ದರು. ಜಂಟಿ ಆಯುಕ್ತರಾಗಿದ್ದ ಪಿ.ವಿ. ಪೂರ್ಣಿಮಾ ಅವರಿಗೆ ಹುದ್ದೆ ತೋರಿಸಿಲ್ಲ.

ನಿರ್ಮಾಣ ಹಂತದ ಧ್ಯಾನ ಮಂದಿರ ಕುಸಿತ: ಇಬ್ಬರಿಗೆ ಗಾಯ

ಪ್ರಜಾವಾಣಿ ವಾರ್ತೆ

ನಿರ್ಮಾಣ ಹಂತದ ಕಟ್ಟಡದ ಮೇಲ್ಚಾವಣಿ ಕುಸಿದು ಬಿದ್ದಿದೆ

ಬೊಮ್ಮನಹಳ್ಳಿ: ಐಟಿಐ ಬಡಾವಣೆಯ ಕುವೆಂಪು ಉದ್ಯಾನದಲ್ಲಿ ಬಿಬಿಎಂಪಿಯ ನಿರ್ಮಾಣ ಹಂತದ ಧ್ಯಾನ ಮಂದಿರ ಮಂಗಳವಾರ ಕುಸಿದು ಇಬ್ಬರು ಕಾರ್ಮಿಕರು ಗಾಯಗೊಂಡಿದ್ದಾರೆ.

ಮಧ್ಯಾಹ್ನ 3ರ ಸಮಯದಲ್ಲಿ ಧ್ಯಾನ ಮಂದಿರದ ಮೇಲ್ಚಾವಣಿಗೆ ಹೆಂಚು ಜೋಡಿಸುತ್ತಿದ್ದ ವೇಳೆ ಇದ್ದಕ್ಕಿದ್ದಂತೆ ಇಡೀ ಕಟ್ಟಡ ಕುಸಿದು ಬಿದ್ದಿದೆ. ಗಾಯಗೊಂಡ ಕಾರ್ಮಿಕರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಕುಸಿತಕ್ಕೆ ಕಳಪೆ ಕಾಮಗಾರಿ ಕಾರಣ?: ನಿರ್ಮಾಣ ಹಂತದಲ್ಲಿ ಕುಸಿದು ಬಿದ್ದಿರುವ ಗೋಪುರ ಆಕಾರದ ಉಕ್ಕಿನ ಚಾವಣಿಯು ದಿಢೀರ್ ಕುಸಿದು ಬಿದ್ದಿರುವುದಕ್ಕೆ ಕಳಪೆ ಕಾಮಗಾರಿಯೇ ಕಾರಣ ಎಂಬ ದೂರು ಕೇಳಿಬಂದಿದೆ. ಕಟ್ಟಡದ ದೋಷಪೂರಿತ ವಿನ್ಯಾಸ, ಕಡಿಮೆ ತೂಕದ ಉಕ್ಕು ಬಳಕೆ, ಗುಣಮಟ್ಟವಿಲ್ಲದ ಕಂಬಗಳನ್ನು ಬಳಸಲಾಗಿದೆ ಎಂದು ಸ್ಥಳೀಯರು ದೂರಿದರು.

ಕಾಮಗಾರಿ ಕೈಗೊಳ್ಳಲು ಕಾಮಗಾರಿ ಆದೇಶವೇ ಇಲ್ಲದೇ ಕಾಮಗಾರಿ ನಡೆಯುತ್ತಿತ್ತು ಎನ್ನಲಾಗಿದೆ. ಟೆಂಡರ್ ಪ್ರಕ್ರಿಯೆ ಮುಗಿದ ಮೇಲೆ ಕಾರ್ಯನಿರ್ವಾಹಕ ಎಂಜಿನಿಯರ್ ಕಾಮಗಾರಿ ಆದೇಶ ಪ್ರತಿಯನ್ನು ಗುತ್ತಿಗೆದಾರರಿಗೆ ನೀಡುವುದು ನಿಯಮ. ಕಾಮಗಾರಿ ಆದೇಶ ಇಲ್ಲದೆ ಕಾಮಗಾರಿ ನಡೆಸಲಾಗಿದೆ ಎಂದು ಸ್ಥಳೀಯರು ದೂರಿದ್ದಾರೆ.

'ಪ್ರತಿ ದಿನ ಮಕ್ಕಳು ಸಂಜೆ 5 ಗಂಟೆ ನಂತರ ಆಟವಾಡಲು ಬರುತ್ತಿದ್ದರು. ಮಧ್ಯಾಹ್ನ ಘಟನೆ ಸಂಭವಿಸಿದ್ದರಿಂದ ಭಾರಿ ಅನಾಹುತವೊಂದು ತಪ್ಪಿದೆ' ಎಂದು ಸ್ಥಳೀಯರಾದ ಲೋಕೇಶ್ ಹೇಳಿದರು.

'ಕಳಪೆ ಕಾಮಗಾರಿಯಿಂದಾಗಿ ಈ ದುರ್ಘಟನೆ ಸಂಭವಿಸಿದೆ, ಹಿಂದೆಯೂ ಎಚ್ಎಸ್ಆರ್ ಬಡಾವಣೆಯಲ್ಲಿ ನಿರ್ಮಾಣವಾಗುತ್ತಿದ್ದ ವಾಜಪೇಯಿ ಕ್ರೀಡಾಂಗಣವೂ ಕುಸಿದು ಬಿದ್ದಿತ್ತು. ಬಿಬಿಎಂಪಿಯಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರವೇ ಇದಕ್ಕೆ ಕಾರಣ. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಬೇಕು' ಎಂದು ಎಚ್ಎಸ್ಆರ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ. ವಾಸುದೇವರೆಡ್ಡಿ ಹೇಳಿದರು.

'ಕಳಪೆ ಕಾಮಗಾರಿಯಿಂದಾಗಿಯೇ ಇದು ಸಂಭವಿಸಿದೆ ಎಂದು ವಾರ್ಡ್ ಎಂಜಿನಿಯರ್ ತಿಳಿಸಿದ್ದಾರೆ. ಬೆಳಿಗ್ಗೆ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ, ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳುವುದಾಗಿ' ಬಿಬಿಎಂಪಿ ಬೊಮ್ಮನಹಳ್ಳಿ ವಲಯ ಜಂಟಿ ಆಯುಕ್ತ ಅಜಿತ್ ಹೇಳಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

We are Hiring
Western and Classical Dance Teacher
Music Teacher
Aerobics Instructor
Drawing / Painting Teacher
Location: Nelamangla
8197846999

ENGLISH, SOCIAL Studies, PCM & D.Ed. Teachers Wanted. Contact: CAMLIN HIGH SCHOOL, 6th 'C' Main Hampinagar, Vijaynagar 2nd Stage Bangalore. Phone: 080-23301363

B.G. NATIONAL Public School,Jakkur Layout, Opp GKVK Campus. Requires TEACHERS for Higher Primary English,Maths. Contact: 9740619796/ 8050088907 Mail: bgnps2015@gmail.com

WANTED HIGH SCHOOL Mathematics/ Kindergarten TEACHERS MODERN SCHOOL SARAKKI-78 Phone: 08048144415 mesprincipal1986@gmail.com

SHREE SHARADA Education Centre, MC Layout, Vijayanagar, Bangalore, requires teachers for English Medium Primary & High school contact HM: 9980109803 / 080-23113366

WANTED Office Admin. Proficiency in English is must, Call 90083-00153. Immediate Appointment. Email: psin8084@gmail.com

SVR PRE-UNIVERSITY COLLEGE
HSR Layout Sector 2, Bangalore 560102
www.svrinstitutions.com
Requires Lecturer in Economics with prior experience.
Call: 9886461664 / 9448883586
Send Resume to: svrfaculty@gmail.com

"WANTED-FOR IMMEDIATE appointment, qualified experienced Teachers to teach Computer Science'(for 4th-9th.Std.)'& Mathematics (for_Primary Classes).Walk-in with_Resume "Maithry Vidyanikethan" 3rd Main,NRI Layout, RamamurthyNagar, Bangalore-560016. Contact: 9900311166. for_further details"

FRANK PUBLIC SCHOOL, JP.Nagar, HIGH SCHOOL ENGLISH, PHYSICAL EDUCATION TEACHERS 7019301626 rumysud@gmail.com

Receptionist/ Secretary

WANTED RECEPTIONIST (Age no_bar) for Consultancy Firm Race course Road. Fluency in English &Computer preferred. Mail resume with photo- sp290486@gmail.com

WANTED RECEPTIONIST, ACCOUNTANTS, GRADUATE TRAINEE ADMINISTRATORS, HVAC DESIGN ENGINEERS, HRM, ANZ CONSULTANTS 08023443555, 8183046799

"RECEPTIONIST AND Office Assistant female Wanted for Builders Office in H.S.R.Layout, Good Salary. "Krishna"- 9886294610"

General

REQUIRED MEDICAL Social Worker, Qualification: MSW, Work around Mandya, Fresher or Experienced. Contact: 9886170470

BHUMIKA BUILDERS in Jayanagar requires experienced OFFICE Asst. Cum CAR DRIVER immediately Call : 9538223507

Multiple Vacancy

JOB VACANCY
(CONTRACTUAL) AT URC 515 ARMY BASE WORKSHOP ULSOOR, BANGALORE-06
Account Clerk : 01- (Five years experience in account keeping)
Billing Clerk: 01- (Minimum 12th Pass & good Computer Knowledge)
Sale Attendant: 01- (Minimum 10th pass)
(a) Eligible category as per preference for the above posts:
i) War Widows/Widows of Defence pors, ii) Disabled solider, iii) Ex-servicemen, iv) Spouse/ Widows of ex servicemen, v) Others
Last date of application 09-08-2023
Email: bangmweagle@gmail.com

Accounts & Finance

WANTED ACCOUNTS personnel experienced in CA/ Audit Firm. Salary Rs.25,000/- Contact:- G.Subramaniam BIMS Consulting Group,Near Shivananda Circle (9448575683) bimsconsult@yahoo.com

WANTED ACCOUNTS Assistants. C.A. Office at Jayanagar. IT/G.S.T/Tally knowledge- 9743522111 venkatkrishna46@gmail.com

Hospital & Medical Jobs

WANTED DUTY DOCTORS, MEDICAL CONSULTANTS, NURSES for CV HOSPITAL at Chetana Vihara- 143B Bommasandra IA, Bangalore. Contact: 97418-62781, 080-41511101 Mail: cvhospital.in@gmail.com

Part-Time Jobs

TOP MNC COMPANY LICENSED BY GOVT. Restart Your 2nd Career Opportunity With Flexible Timings Age Limit 45yrs And Above: 7019215243/ 9886641282

Wanted

MAJESTIC DEVELOPERS Require Immediately Civil Engineers, Site Supervisors and Accountants, Contact: 9341228681/ Send Your Bio- data to majesticdevelopers@yahoo.in

WANTED DIPLOMA Civil Draughtsman. Pruthvi Associates, Near Rammandir Canara Bank, Rajajinagar, Bengaluru-10. Ph: 08023403080

DH DECCAN HERALD ಪ್ರಜಾವಾಣಿ
REAL ESTATE
PAY FOR 2 GET 1 FREE
BOOK YOUR PROPERTY AD IN DECCAN HERALD ALL KARNATAKA + PRAJAVANI BENGALURU CITY
conditions apply*
@1070/-* Per Sqcm Single Column
@1100/-* Per Sqcm Multi Column
For More Details Contact:
9845114560 | 9731810277
9901641752 | 9886213331
080- 45557163 | 45557164

ADMISSION CORNER ಕ್ಲಾಸಿಫೈಡ್ಸ್

We are proud of our students

Our students achieved 100% success rate in their final year final semester results; with overall 86% distinction and 14% first-class.
The Aeronautical stream excelled with 100% distinction.
The Management of HEA extends their heartfelt congratulations to all the students for their exceptional performance and wishes them the very best for their future endeavors.

Diploma in Engineering Courses
- Aeronautical Engineering
- Automobile Engineering
- Mechanical Engineering
- Computer Science & Engg.

Minimum Eligibility: 10th Pass
LIMITED SEATS ONLY
Continuing a legacy of Academic Excellence
Last date for admission is August 5th. Few seats available.
Few seats left for Aircraft Maintenance Engineering. Classes have commenced.
ADMISSIONS ARE OPEN for 2023-24
8050461016
9740037853
8971404357
(Approved by DTE & AICTE)
HEA POLYTECHNIC Bengaluru
P. B.No. 3776, Ashwathanagar, Marathahalli, Bengaluru-560037
Email: admissions@hindustanacademy.edu.in
www.hindustanacademy.edu.in

RGUHS FELLOWSHIP IN ALLERGY

ADMISSION NOTICE
Fellowship in Allergy and Allergen Specific Immunotherapy 2023-24

Applications are invited for the Fellowship in Allergy and Allergen Specific Immunotherapy (ASI) awarded by Rajiv Gandhi University of Health Sciences. This program provides expertise in the diagnosis and management of allergic disorders with an emphasis on Immunotherapy.

Duration	: 12 Months
No of Seats	: Four
Course Director	: Dr. Nagendra Prasad KV
Dean & Course Coordinator	: Dr. Gayathri Devi S
Last Date to Apply	: 15th August 2023

Minimum qualifications for admission :
MD/DNB in Internal Medicine/Pediatrics/Respiratory Medicine/ Dermatology/MS/DNB in ENT
To apply, visit: www.bafacademy.com OR contact by Email/Phone
BAF Academy & Bengaluru Allergy Centr
Jayanagar 4th Block, Bengaluru – 560011
Email: bafacademy20@gmail.com • Mob No. : 9019856454, 6360402341

WANTED
SAPTAGIRI SUZUKI Dr. Rajkumar Road, Rajajinagar, Blr -10, Requires 1). Sales Executives - 5 No's, Graduates - English, Kannada & Computer Knowledge, Call: 8147202081 / 9845029331
2). Service Telecallers - 3 No's, Graduates/ PUC - English, Kannada & Computer Knowledge, Call: 9742714373 / 9845029331
Mail: saptagirisuzuki1@gmail.com

REAL ESTATE BUYING

Farm House/ Land/ Resorts

Multiple Locations

ADELIE INTERNATIONAL SCHOOL: A Chain of schools backed by Eduweft group looking to take over management of Preschools, CBSE, CISCE & Residential Schools (Long Lease/ Partnership/ Investment) Looking for multiple locations across Karnataka. Requirement: Excellent Location. Contact: Sumanth Narayan of Eduweft Services Pvt Ltd, Mobile: 9606353036, Email: info@eduweft.com; www.eduweft.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

RENTAL PROPERTIES

Accommodation Available

Commercial

OFFICE PREMISES Rent #33 Swiss Complex Mezzanine Floor M-1, 840 Sqft Race Course Road, Bangalore- 560001 Call: 9845081411/08029521081

AVAILABLE FOR RENT RPC Layout near Swimming pool 2600 sqft Commercial 4floor Building. Call: 8867569333

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

DH ಪ್ರಜಾವಾಣಿ Classifieds More value, more impact
JOB HUNT
Get your HIRING NEEDS answered
Get the right people for your company...
Book your Ad with us now !
BOOK NOW
www.dhclassifieds.com
For more details contact:
+91 9886213331
+91 9845114560
+91 9731810277
+91 9901641752
+91 9900428036
080- 45557163/164

PERSONAL

Change of Name

CHANGE OF NAME
I, SARASWATHI SHASHIDHAR, R/at. # 148, 10th Cross, 11th Main, Sector 1, Nobonagar, Bannerghatta Road, Bangalore-560076 have changed my name to SARASWATHI vide affidavit dated 01/08/2023 before Notary D.K.Rameshappa, Bangalore.

CHANGE OF NAME
I, NITISH.S.K S/o S.G.Krishna Murthy R/a #1366, TAPCMS Layout, Surya Chowtry. V. V. Puram. Gauribidanur, Chikkaballapura, Karnataka-561208, have changed my name to NITHISH. S. K vide affidavit dated: 31/07/2023 sworn Before Notary Deepa. M Bangalore.

CHANGE OF NAME
I, CHANNAPPA K M, R/at # 51/1, Pragathi 2nd Cross, Next to Krishna Garden, Nanjappa Layout, R R Nagar, Bangalore-98 have changed my son's name from MONISH GOWDA C to MONISH CHANNAPPA vide affidavit dated 31/07/2023 before Notary K.C.Shashikala, Bangalore.

I,DANIEL ELIAS residing_at No.1,Church Road,1st Block, Thattaguppe, Bengaluru South, Bengaluru-560082 have changed-my name-to DANIEL ELIAS S. vide-affidavit dtd:01.08.2023 sworn_before notary Ambreshappa, Bengaluru

I, HREHAAN_IYER S/o.Swaminathan Varadarajan Lalgudi R/a#31, Purva Parkridge, Goshala Road, Mahadevapura, Bangalore- 560048 have`changed_my Name_to HREHAAN SWAMINATHAN IYER vide_affidavit dated 1.8.2023 before`Notary Srinatha.D.R Bengaluru

I, RAJASHEKHAR G.A. S/o.Gundappa Allapur R/o. Shivam co-operative Housing Society Ltd. P.1118, 1119,Bld. F.A.304, Chanod Colony,Vapi, Pardi,Valsad, Gujarat-396195 Have Changed My`Name_to RAJASHEKHAR S/o. GUNDAPPA ALLAPUR vide_affidavit dated:31-7-2023 before`notary Shivaraj, Kalaburgi

I, SWAMINATHAN IYER S/o.Varadarajan Lalgudi R/a#31,Purva Parkridge, Goshala Road, Mahadevapura, Bangalore- 560048 have`changed my_Name_to SWAMINATHAN VARADARAJAN LALGUDI vide`affidavit dated:1.8.2023 before_Notary Srinatha.D.R. Bengaluru

I, NAMRATA_JOSHI W/o.Swaminathan Varadarajan Lalgudi R/a#31,Purva Parkridge, Goshala Road, Mahadevapura, Bangalore- 560048 have`changed_my Name_to NAMRATA CHANDRAKANT JOSHI vide_affidavit dated:1.8.2023 before`Notary Srinatha.D.R. Bengaluru

CHANGE OF NAME
I Herama Reddy s/o N. Govinda Reddy residing at No 12, Sapthagiri, 10 th cross, Gokula, 1st stage, 1st phase Mathikere lay out, yeshwanthpur Bangalore - 560054 changed my name as Herama Reddy G.

I, MUKHTAR Khan S/o Abdul Khan, aged about 49Years, residing at Sulthan Thippasandra, Near Channa Nanjappa Old Water Tank Kolar. Have changed my name to Mokthar Khan vide affidavit dated 01.08.2023 before Notary M Ramalinge Gowda Kolar.

CONNECT ಕ್ಲಾಸಿಫೈಡ್ಸ್

Manya®
in Collaboration with
ಹಸ್ತಕಲಾ
Hastakalaa
CRAFTS | TEXTILES | HOME DECOR | JEWELLERY
smart art events

28th July to 6th Aug. 2023
Timings: 11.00 am. to 8.00 pm.
Venue :
WHITE HOUZZ CONVENTIONAL CENTER
Next to BDA Complex, Sector 6, HSR Layout, Bengaluru - 102.
ENTRY & PARKING FREE
Mob : +91 98456 95922 / +91 78291 70001
Regd. with O/o The Development Commissioner (H), Ministry of Textiles, Government of India

ಲಾಲ್‌ಬಾಗ್: ಕೆಂಗಲ್ ಹನುಮಂತಯ್ಯ ಸ್ಮರಣಾರ್ಥ 214ನೇ ಫಲಪುಷ್ಪ ಪ್ರದರ್ಶನಕ್ಕೆ ಸಿದ್ಧತೆ

‘ಹೂಗಳಲ್ಲಿ ಅನಾವರಣಗೊಳ್ಳಲಿದೆ ವಿಧಾನಸೌಧ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕದ ಶಕ್ತಿ ಕೇಂದ್ರ ವಿಧಾನಸೌಧ ನಿರ್ಮಾತೃ ಕೆಂಗಲ್ ಹನುಮಂತಯ್ಯ ಅವರ ಸ್ಮರಣಾರ್ಥ ಸ್ವಾತಂತ್ರ್ಯೋತ್ಸವದ ಫಲಪುಷ್ಪ ಪ್ರದರ್ಶನವು ಆಗಸ್ಟ್ 4 ರಿಂದ ಆಗಸ್ಟ್ 15ರವರೆಗೂ ಲಾಲ್‌ಬಾಗ್‌ನಲ್ಲಿ ನಡೆಯಲಿದೆ’ ಎಂದು ತೋಟಗಾರಿಕೆ ಸಚಿವ ಎಸ್‌.ಎಸ್‌. ಮಲ್ಲಿಕಾರ್ಜುನ್ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಅವರು, ‘ನಾಡಿನ ಕೀರ್ತಿಯನ್ನು ದೇಶದಲ್ಲಿ ಪಸರಿಸಿದ ಕೆಂಗಲ್ ಹನುಮಂತಯ್ಯ ಅವರ ಜೀವನ, ಸಾಧನೆ, ಹೋರಾಟಗಳನ್ನು ಈ ವರ್ಷ ನಡೆಯುವ ಫಲಪುಷ್ಪ ಪ್ರದರ್ಶನದಲ್ಲಿ ಪುಷ್ಪ ಗೌರವ ಸಲ್ಲಿಸಲು ತಯಾರಿ ಮಾಡಿಕೊಳ್ಳಲಾಗುತ್ತಿದೆ. ಈ ಬಾರಿ ಫಲಪುಷ್ಪ ಪ್ರದರ್ಶನಕ್ಕೆ 10 ಲಕ್ಷಕ್ಕೂ ಹೆಚ್ಚು ಜನ ಆಗಮಿಸುವ ನಿರೀಕ್ಷೆ ಇದೆ’ ಎಂದು ವಿವರಿಸಿದರು.

‘ತೋಟಗಾರಿಕೆ ಇಲಾಖೆ ಸ್ವಾತಂತ್ರ್ಯೋ ತ್ಸವದ ಅಂಗವಾಗಿ ಹಮ್ಮಿಕೊಂಡಿರುವ 214ನೇ ಫಲಪುಷ್ಪ ಪ್ರದರ್ಶನ ಇದಾಗಿದೆ. ಹಚ್ಚ ಹಸಿರಿನಿಂದ ಕಂಗೊಳಿಸುತ್ತಿರುವ ಸಸ್ಯಕಾಶಿ ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನಕ್ಕೆ ವೇದಿಕೆ ಸಜ್ಜಾಗುತ್ತಿದೆ. ಆಗಸ್ಟ್ 4ರಂದು ಸಂಜೆ 6ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ ನೀಡಲಿದ್ದಾರೆ’ ಎಂದರು.

ಸ್ವಾತಂತ್ರ್ಯೋತ್ಸವದ ಅಂಗವಾಗಿ ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ಆಯೋಜಿಸುತ್ತಿರುವ ಫಲಪುಷ್ಪ ಪ್ರದರ್ಶನದಲ್ಲಿ ವಿಧಾನಸೌಧದ ಪ್ರತಿಕೃತಿ ನಿರ್ಮಾಣ ಕೆಲಸ ಭರದಿಂದ ನಡೆದಿದೆ —ಪ್ರಜಾವಾಣಿ ಚಿತ್ರ

‘ಗಾಜಿನ ಮನೆಯ ಕೇಂದ್ರ ಭಾಗದಲ್ಲಿ 18 ಅಡಿ ಅಗಲ, 36 ಅಡಿ ಉದ್ದ ಮತ್ತು 18 ಅಡಿ ಎತ್ತರದ ವಿಧಾನಸೌಧವು 7.2 ಲಕ್ಷ ವಿವಿಧ ತಳಿಯ ಪುಷ್ಪಗಳಲ್ಲಿ ಅರಳಲಿದೆ. ಕೆಂಗಲ್ ಹನುಮಂತಯ್ಯ ಅವರ 14 ಅಡಿ ಎತ್ತರದ ಬೃಹತ್ ಪ್ರತಿಮೆಯು ಅನಾವರಣಗೊಳ್ಳಲಿದ್ದು, ನೋಡಗರ ಕಣ್ಮನ ಸೆಳೆಯಲಿದೆ. ಗಾಜಿನ ಮನೆಯ ಕೇಂದ್ರ ಭಾಗದ ಬಲಬದಿಗೆ ಶಿವಪುರ ಧ್ವಜ ಸತ್ಯಾಗ್ರಹ ಸೌಧದ ಪುಷ್ಪ ಮಾದರಿಯನ್ನು 3.48 ಲಕ್ಷ ಸೇವಂತಿಗೆ ಹೂಗಳನ್ನು ನಿರ್ಮಿಸಲಾಗುತ್ತಿದೆ’ ಎಂದು ಮಾಹಿತಿ ನೀಡಿದರು.

ಆಗಸ್ಟ್ 5ರಂದು ನಡೆಯುವ ಇಕೆಬಾನ, ತರಕಾರಿ ಕೆತ್ತನೆ, ಪುಷ್ಪಭಾರತಿ, ಬೋನ್ಸಾಯ್, ಡಚ್ ಹೂವಿನ ಜೋಡಣೆ, ಥಾಯ್ ಆರ್ಟ್, ಜಾನೂರು ಒಣಹೂವಿನ ಜೋಡಣೆಯ ಕಲೆಗಳ ಸ್ಪರ್ಧೆಯ ಪ್ರದರ್ಶನವನ್ನು ಹೈಕೋರ್ಟ್ ನ್ಯಾಯಮೂರ್ತಿ ಎಚ್. ಪಿ. ಸಂದೇಶ್ ಉದ್ಘಾಟಿಸಲಿದ್ದಾರೆ. ಚಲನಚಿತ್ರ ನಟಿ ಉಮಾಶ್ರೀ ಭಾಗವಹಿಸ ಲಿದ್ದಾರೆ.

ಇಕೆಬಾನ ಸೇರಿ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದವರಿಗೆ ಆಗಸ್ಟ್ 14ರಂದು ಸಾಹಿತಿ ಶೂದ್ರ ಶ್ರೀನಿವಾಸ್, ಜಾನಪದ ತಜ್ಞೆ ಕೆ.ಆರ್. ಸಂಧ್ಯಾ ರೆಡ್ಡಿ, ಚಲನಚಿತ್ರ ನಟಿ ರಚಿತಾ ರಾಮ್ ಬಹುಮಾನ ವಿತರಿಸಲಿದ್ದಾರೆ.

ತೋಟಗಾರಿಕೆ ನಿರ್ದೇಶಕ ರಮೇಶ್ ಡಿ.ಎಸ್., ಜಂಟಿ ನಿರ್ದೇಶಕ ಎಂ. ಜಗದೀಶ್, ಉಪನಿರ್ದೇಶಕಿ ಜಿ. ಕುಸುಮಾ ಇದ್ದರು.

ಅಂಕಿ–ಅಂಶಗಳು

- **₹2.50 ಕೋಟಿ** ಫಲಪುಷ್ಪ ಪ್ರದರ್ಶನದ ಒಟ್ಟು ವೆಚ್ಚ
- **10 ಲಕ್ಷ** ಫಲಪುಷ್ಪ ಪ್ರದರ್ಶನಕ್ಕೆ ಭೇಟಿ ನೀಡುವವರ ಅಂದಾಜು ಸಂಖ್ಯೆ
- **136** ಉದ್ಯಾನದಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮೆರಾಗಳು
- **29 ಲಕ್ಷ** ಅಂದಾಜು ಬಳಕೆಯಾಗುವ ಹೂ ಕುಂಡಗಳು, ಪ್ರತ್ಯೇಕಿಸಿದ ಹೂಗಳ ಸಂಖ್ಯೆ

ಪ್ರವೇಶ ಶುಲ್ಕ ಹೀಗಿದೆ...

ಲಾಲ್‌ಬಾಗ್‌ನ ಪ್ರವೇಶ ದ್ವಾರಗಳಲ್ಲಿ ಎಲೆಕ್ಟ್ರಾನಿಕ್ ಟಿಕೆಟ್ ಯಂತ್ರ ಅಳವಡಿಸಿದ್ದು, ಆನ್‌ಲೈನ್ ಬುಕ್ಕಿಂಗ್‌ಗೂ ಪ್ರಥಮ ಬಾರಿಗೆ ಅವಕಾಶ ನೀಡಲಾಗಿದೆ.

- ವಯಸ್ಕರಿಗೆ ₹ **70**
- ರಜೆ ದಿನಗಳಲ್ಲಿ ₹ **80**
- ಮಕ್ಕಳಿಗೆ ₹ **30**
- ಸಮವಸ್ತ್ರ ಧರಿಸಿ ಬರುವ ಶಾಲಾ ವಿದ್ಯಾರ್ಥಿಗಳಿಗೆ ಪ್ರವೇಶ ಉಚಿತ
- **ಪ್ರದರ್ಶನದ ಸಮಯ:** ಬೆಳಿಗ್ಗೆ 7ರಿಂದ ಸಂಜೆ 7ರ ವರೆಗೆ

ವಾಹನ ನಿಲುಗಡೆ ಎಲ್ಲಿ?

- ಹಾಪ್‌ಕಾಮ್ಸ್ ಆವರಣ ಮತ್ತು ಜೆ.ಸಿ. ರಸ್ತೆಯಲ್ಲಿರುವ ಬಿಬಿಎಂಬಿ ಬಹುಮಹಡಿ ವಾಹನ ನಿಲ್ದಾಣ
- ಶಾಂತಿನಗರ ಬಸ್‌ನಿಲ್ದಾಣದ ಬಹುಮಹಡಿ ವಾಹನ ನಿಲ್ದಾಣ
- ಅಲ್ ಅಮೀನ್ ಕಾಲೇಜು ಮೈದಾನ

ಪ್ರಜಾವಾಣಿ @75
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ಆಸ್ಟ್ರೇಲಿಯಾ ಕಡಲ ತೀರದಲ್ಲಿ ಸಿಕ್ಕಿದ್ದು ಇಸ್ರೊ ರಾಕೆಟ್ ಬಿಡಿ ಭಾಗ: ಎಎಸ್‌ಎ

ಮೆಲ್ಬರ್ನ್(ಪಿಟಿಐ): ಆಸ್ಟ್ರೇಲಿಯಾದ ಕಡಲತೀರದಲ್ಲಿ ಕಳೆದ ತಿಂಗಳು ಪತ್ತೆಯಾಗಿದ್ದ ಗುಮ್ಮಟ ಆಕಾರದ ನಿಗೂಢ ವಸ್ತು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ)ಯ ರಾಕೆಟ್‌ನ ಭಾಗ ಎಂದು ಆಸ್ಟ್ರೇಲಿಯಾ ಬಾಹ್ಯಾಕಾಶ ಸಂಸ್ಥೆ (ಎಎಸ್‌ಎ) ಅಂತಿಮ ನಿರ್ಣಯಕ್ಕೆ ಬಂದಿದೆ.

ಪಶ್ಚಿಮ ಆಸ್ಟ್ರೇಲಿಯಾದ ಗ್ರೀನ್ ಹೆಡ್ ಬೀಚ್ ಬಳಿ ಜುಲೈ 15ರಂದು ವಸ್ತು ಪತ್ತೆಯಾಗಿತ್ತು.

‘ನಿಗೂಢ ವಸ್ತುವಿನ ವಿಚಾರವಾಗಿ ನಾವು ಅಂತಿಮ ನಿರ್ಣಯಕ್ಕೆ ಬಂದಿದ್ದೇವೆ. ಅದು ಇಸ್ರೊ ಹಾರಿಸಿದ್ದ ‘ಪೋಲಾರ್ ಉಪಗ್ರಹ ಉಡಾವಣಾ ವಾಹನ (ಪಿಎಸ್‌ಎಲ್‌ವಿ)’ದ ಮೂರನೇ ಹಂತದ ಬಿಡಿ ಭಾಗ ಎಂದು ತೀರ್ಮಾನಿಸಿದ್ದೇವೆ’ ಎಂದು ಎಎಸ್‌ಎ ತಿಳಿಸಿದೆ.

‘ಅವಶೇಷಗಳನ್ನು ನಾವು ಸಂರಕ್ಷಿಸಿಟ್ಟಿದ್ದೇವೆ. ವಿಶ್ವಸಂಸ್ಥೆಯ ಬಾಹ್ಯಾಕಾಶ ಒಪ್ಪಂದಗಳ ಬಾಧ್ಯತೆಗಳಡಿ ಮುಂದಿನ ಕ್ರಮ ಕೈಗೊಳ್ಳುವ ಸಂಬಂಧ ಇಸ್ರೊ ಜತೆಗೆ ಮಾತುಕತೆ ನಡೆದಿದೆ’ ಎಂದು ಎಎಸ್‌ಎ ತಿಳಿಸಿದೆ

ವಿಶ್ವಸಂಸ್ಥೆಯ ಬಾಹ್ಯಾಕಾಶ ಒಪ್ಪಂದದ ಪ್ರಕಾರ, ಬಾಹ್ಯಾಕಾಶ ಅಧ್ಯಯನಕ್ಕೆ ಸಂಬಂಧಿಸಿದ ಯಾವುದೇ ವಸ್ತು, ಯಾವುದೇ ದೇಶದಲ್ಲಿ ಸಿಕ್ಕರೆ ಅದನ್ನು ಸಂಬಂಧಪಟ್ಟ ದೇಶಕ್ಕೆ ಹಿಂದಿರುಗಿಸಬೇಕು.

‘ಅಡುಗೆ ಅನಿಲ ದರ ಇಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಮತ್ತು ಅಡುಗೆ ಅನಿಲ ಬೆಲೆ ಕಡಿಮೆಯಾದರೂ ದೇಶದಲ್ಲಿ ಅವುಗಳ ಬೆಲೆ ಇಳಿಕೆಯಾಗುತ್ತಿಲ್ಲ ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘ ದೂರಿದೆ.

ಈ ಬಗ್ಗೆ ಪ್ರಧಾನಿಗೆ ಪತ್ರ ಬರೆದಿರುವ ಸಂಘದ ಅಧ್ಯಕ್ಷ ಪಿ.ಸಿ. ರಾವ್, ‘ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಒಂದು ಬ್ಯಾರೆಲ್ ಕಚ್ಚಾ ತೈಲದ ಬೆಲೆ 134 ಡಾಲರ್‌ನಿಂದ 72 ಡಾಲರ್‌ಗೆ ಸಿಗುತ್ತಿದೆ. ಹೀಗಿದ್ದರೂ, ದೇಶದಲ್ಲಿ ಡೀಸೆಲ್ ಮತ್ತು ಪೆಟ್ರೋಲ್ ಬೆಲೆ ಕಡಿಮೆಯಾಗಿಲ್ಲ. ಪ್ರತಿ ಲೀಟರ್‌ಗೆ ₹102 ಮಾರಾಟವಾಗುತ್ತಿದೆ. ಇದರಿಂದ, ಜನಸಾಮಾನ್ಯರಿಗೆ ಹಾಗೂ ಉದ್ಯಮಿಗಳಿಗೆ ಅನ್ಯಾಯವಾಗುತ್ತಿದೆ’ ಎಂದು ತಿಳಿಸಿದ್ದಾರೆ.

‘ವಾಣಿಜ್ಯ ಅಡುಗೆ ಅನಿಲ ದರದ ಮೇಲೆ 18ರಷ್ಟು ಜಿಎಸ್‌ಟಿ ಹಾಕಲಾಗುತ್ತಿದೆ. ಇದನ್ನು ಶೇ 5ಕ್ಕೆ ಇಳಿಸಬೇಕು’ ಎಂದು ಒತ್ತಾಯಿಸಿದ್ದಾರೆ.

ಕೊನೆಗೂ ಮನೆ ಸೇರಿದ ಬಾಣಂತಿ

ಕೋರ (ತುಮಕೂರು): ಸಂಪ್ರದಾಯ ಆಚರಣೆ ಹೆಸರಲ್ಲಿ ಊರಾಚೆ ಗುಡಿಸಲಿನಲ್ಲಿದ್ದ ಗೊಲ್ಲ ಸಮುದಾಯದ ಬಾಣಂತಿ ವಸಂತ ಮಂಗಳವಾರ ಮಲ್ಲೇನಹಳ್ಳಿ ಗೊಲ್ಲರಹಟ್ಟಿಯ ತಂದೆಯ ಮನೆ ಸೇರಿಕೊಂಡಿದ್ದಾರೆ.

ಊರಾಚೆ ಗುಡಿಸಲಿನಲ್ಲಿ ಬಾಣಂತಿ ಹಾಗೂ ನವಜಾತ ಶಿಶು ಇರಿಸಲಾದ ಪ್ರಕರಣ ರಾಜ್ಯದಾದ್ಯಂತ ಸದ್ದು ಮಾಡಿತ್ತು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಘಟಿಕೋತ್ಸವ ನಾಳೆ

160 ವಿದ್ಯಾರ್ಥಿಗಳಿಗೆ ಚಿನ್ನದ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 57ನೇ ಘಟಿಕೋತ್ಸವವು ಆಗಸ್ಟ್ 3ರಂದು ನಡೆಯಲಿದ್ದು ಈ ವರ್ಷ 160 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಹಾಗೂ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ವಿತರಿಸ ಲಾಗುವುದು’ ಎಂದು ಕೃಷಿ ವಿವಿ ಕುಲಪತಿ ಎಸ್.ವಿ. ಸುರೇಶ ಮಾಹಿತಿ ನೀಡಿದರು.

‘ಒಟ್ಟು 66 ವಿದ್ಯಾರ್ಥಿಗಳಿಗೆ, ವಿಶ್ವವಿದ್ಯಾಲಯದ 54 ಚಿನ್ನದ ಪದಕ ಹಾಗೂ ದಾನಿಗಳ 86 ಚಿನ್ನದ ಪದಕ, 20 ವಿದ್ಯಾರ್ಥಿಗಳಿಗೆ ದಾನಿಗಳ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರವನ್ನು ವಿತರಿಸಲಾಗುವುದು. ಅಂದು ಬೆಳಿಗ್ಗೆ 11ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ ಪದಕ ಪ್ರದಾನ ಮಾಡಲಿದ್ದಾರೆ. ಭಾರತೀಯ ಕೃಷಿ ಅನುಸಂಧಾನ ಪರಿಷತ್ ಮಹಾನಿರ್ದೇಶಕ ಹಿಮಾಂಶು ಪಾಠಕ್ ಅವರು ಘಟಿಕೋತ್ಸವದಲ್ಲಿ ಪ್ರದಾನ ಭಾಷಣ ಮಾಡಲಿದ್ದಾರೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

‘49 ವಿದ್ಯಾರ್ಥಿನಿಯರು, 42 ಚಿನ್ನದ ಪದಕ, 56 ದಾನಿಗಳ ಚಿನ್ನದ ಪದಕ ಹಾಗೂ 11 ದಾನಿಗಳ ಚಿನ್ನದ ಪದಕ ಪ್ರಶಸ್ತಿ ಪಡೆಯಲಿದ್ದಾರೆ. 17 ವಿದ್ಯಾರ್ಥಿಗಳು, ವಿಶ್ವವಿದ್ಯಾಲಯದ 12 ಚಿನ್ನದ ಪದಕ, 30 ದಾನಿಗಳ ಚಿನ್ನದ ಪದಕ, 9 ದಾನಿಗಳ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ಪಡೆಯಲಿದ್ದಾರೆ’ ಎಂದು ಹೇಳಿದರು.

ಸಂಗ್ರಹಾಲಯ: ಉದ್ಘಾಟನೆಗೆ ಸಜ್ಜು

ಜಿಕೆವಿಕೆ ಆವರಣದಲ್ಲಿ ನಿರ್ಮಿಸಿರುವ ಕೃಷಿ ವಿಜ್ಞಾನಗಳ ವಸ್ತು ಸಂಗ್ರಹಾಲಯ ಹಾಗೂ ತರಬೇತಿಗೆ ಬರುವ ರೈತರಿಗೆ ವಾಸ್ತವ್ಯ ಕಟ್ಟಡದ ಉದ್ಘಾಟನೆಯೂ ಆ.3ರಂದೇ ನಡೆಯಲಿದೆ ಎಂದು ಕುಲಪತಿ ಮಾಹಿತಿ ನೀಡಿದರು. 2013ರಲ್ಲೇ ಈ ವಸ್ತು ಸಂಗ್ರಹಾಲಯ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿತ್ತು. ಹಂತ ಹಂತವಾಗಿ ಕಾಮಗಾರಿ ನಡೆಸಿ ಈಗ ಉದ್ಘಾಟನೆಗೊಳ್ಳಲಿದೆ ಎಂದರು.

ವಸ್ತು ಸಂಗ್ರಹಾಲಯವು ಕೃಷಿ ಇತಿಹಾಸ ಸಾರಲಿದೆ. ಹಳ್ಳಿ ಸಂತೆ, ಕೃಷಿ ಮಾರುಕಟ್ಟೆ, ಪಶುಪಾಲನೆ, ಕುಕ್ಕುಟೋದ್ಯಮ, ಅರಣ್ಯ, ಹವಾಮಾನ ವೈಪರೀತ್ಯ, ಕೃಷಿ ಯಾಂತ್ರೀಕರಣ, ನವೀಕರಿಸಬಹುದಾದ ಇಂಧನ, ಧಾನ್ಯ ಶೇಖರಣೆ, ವಿಸ್ತರಣಾ ತಂತ್ರಜ್ಞಾನವನ್ನು ಒಳಗೊಂಡಿದೆ. ನೀರಾವರಿ ಪದ್ಧತಿ, ರಾಜ್ಯದಲ್ಲಿನ ಕೃಷಿ ಚಟುವಟಿಕೆ, ಬೆಳೆಗಳ ಮಾಹಿತಿ, ಬೇಸಾಯ ವಿಧಾನ, ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಕುರಿತೂ ಮಾಹಿತಿ ನೀಡಲಿದೆ. ವಿವಿ ಕೆಲಸದ ಅವಧಿಯಲ್ಲಿ ಸಾರ್ವಜನಿಕರಿಗೆ ಉಚಿತ ಪ್ರವೇಶ ಇರಲಿದೆ. ಕೃಷಿ ವಿಜ್ಞಾನಿಯೊಬ್ಬರನ್ನು ಇಲ್ಲಿ ನಿಯೋಜಿಸಲಾಗುವುದು. ಈ ವಸ್ತು ಸಂಗ್ರಹಾಲಯಕ್ಕೆ ₹ 1.5 ಕೋಟಿ ವೆಚ್ಚವಾಗಿದೆ. ರಾಜ್ಯದ ಬೇರೆಲ್ಲೂ ಈ ಮಾದರಿಯ ವಸ್ತು ಸಂಗ್ರಹಾಲಯ ಇಲ್ಲ ಎಂದು ಹೇಳಿದರು.

ರೈತರಿಗೆ ನಿರ್ಮಿಸಿರುವ ಕೊಠಡಿಯಲ್ಲಿ 45 ಮಂದಿ ವಾಸ್ತವ್ಯಕ್ಕೆ ಅವಕಾಶವಿದೆ. ತರಬೇತಿ ದಿನಗಳನ್ನು ಆಧರಿಸಿ ರೈತರು ವಾಸ್ತವ್ಯ ಮಾಡಬಹುದಾಗಿದೆ ಎಂದು ಮಾಹಿತಿ ನೀಡಿದರು.

ಚಿನ್ನದ ಪದಕಗಳ ವಿತರಣೆ	
ಪಿ.ಎಚ್‌ಡಿಯಲ್ಲಿ	29
ಸ್ನಾತಕೋತ್ತರ ಪದವಿಯಲ್ಲಿ	74
ಪದವಿ ವಿಭಾಗದಲ್ಲಿ	57

ಪದವಿ ಪ್ರದಾನದ ವಿವರ	
ಸ್ನಾತಕ ಪದವಿ	891
ಸ್ನಾತಕೋತ್ತರ ಪದವಿ	299
ಪಿಎಚ್‌.ಡಿ	105
ಒಟ್ಟು ವಿದ್ಯಾರ್ಥಿಗಳು	1,295

ಗೌರವ ಡಾಕ್ಟರೇಟ್: ಈ ಬಾರಿ ಭಾರತ್ ಬಯೋಟೆಕ್‌ನ ವಿಜ್ಞಾನಿ ಕೃಷ್ಣ ಎಲ್ಲ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುವುದು. ಕೋವಿಡ್ ವೇಳೆ ಭಾರತದಲ್ಲಿ ಕಂಡು ಹಿಡಿದ ಮೊದಲ ಕೋವಿಡ್ ಲಸಿಕೆ ಸಂಶೋಧನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಆರೋಗ್ಯ ಕ್ಷೇತ್ರಕ್ಕೆ ಕೃಷ್ಣ ಅವರ ಕೊಡುಗೆ ಅಪಾರ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಸ್ಯರೋಗ ವಿಜ್ಞಾನ ವಿಭಾಗದ ಹಳೇ ವಿದ್ಯಾರ್ಥಿ ಅವರು. ತಮಿಳುನಾಡಿನ ಕೃಷ್ಣ ಅವರು ಪ್ರಸ್ತುತ ಆಂಧ್ರಪ್ರದೇಶದಲ್ಲಿ ನೆಲೆಸಿದ್ದಾರೆ’ ಎಂದರು.

‘ಕಳೆದ ವರ್ಷ ರೈತರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗಿತ್ತು. ಈ ವರ್ಷ ನೀಡುತ್ತಿಲ್ಲ. ಹಾಗಂತ ರೈತರನ್ನು ವಿಶ್ವವಿದ್ಯಾಲಯ ಮರೆತಿಲ್ಲ. ಅವರಿಗಾಗಿಯೇ ಕೃಷಿ ವಿಶ್ವವಿದ್ಯಾಲಯ ಕೆಲಸ ಮಾಡುತ್ತಿರುವುದು’ ಎಂದು ಹೇಳಿದರು.

ಪತ್ರಿಕಾಗೋಷ್ಠಿ ಯಲ್ಲಿ ಶಿಕ್ಷಣ ನಿರ್ದೇಶಕ ಡಾ.ಕೆ.ಸಿ. ನಾರಾಯಣ ಸ್ವಾಮಿ, ಡಾ.ಬಸವೇಗೌಡ ಹಾಜರಿದ್ದರು.

ಡಿ.ದರ್ಶನ್‌ಗೆ 13 ಪದಕ

ಬಿಎಸ್‌ಸಿಯಲ್ಲಿ ಡಿ.ದರ್ಶನ್ ಒಟ್ಟು 13 ಪದಕಗಳನ್ನು ಗಳಿಸಿದ್ದಾರೆ. ಕೃಷಿ ವಿವಿಯ 1 ಚಿನ್ನದ ಪದಕ, ದಾನಿಗಳ 7 ಚಿನ್ನದ ಪದಕಗಳು ಹಾಗೂ ದಾನಿಗಳ7 ಚಿನ್ನದ ಪದಕಗಳ ಪ್ರಮಾಣ ಪತ್ರಗಳನ್ನು ಗಳಿಸಿದ್ದಾರೆ. ಇವರ ತಂದೆ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ತಾಯಿ ಗೃಹಿಣಿ ಎಂದು ಕುಲಪತಿ ಹೇಳಿದರು.

ಅತ್ಯುತ್ತಮ ಕ್ರೀಡಾಪಟುಗಳಿಗೆ ನೀಡುವ ಚಿನ್ನದ ಪದಕವು ಬಿ.ಎಸ್.ರಕ್ಷಿತಾ ಅವರಿಗೆ ಲಭಿಸಿದೆ. ಇವರು ಅಥ್ಲೆಟಿಕ್ಸ್‌ನಲ್ಲಿ ಸಾಧನೆ ಮಾಡಿದ್ದಾರೆ. ಸಕಾಲ ಬಂಧು ವಾರ ಪತ್ರಿಕೆಯ ಸಂಪಾದಕ ರಾಗಿದ್ದ ದಿವಂಗತ ಬಿ.ಸಿ.ರಾಮಲಿಂಗಯ್ಯ ಅವರ ಪುತ್ರಿ ಬಿ.ಆರ್.ಗಾನವಿ ಎರಡು ಚಿನ್ನದ ಪದಕಗಳನ್ನು ಗಳಿಸಿದ್ದಾರೆ ಎಂದು ಮಾಹಿತಿ ನೀಡಿದರು.

ಕೆಎಸ್‌ಆರ್‌ಟಿಸಿ 62ನೇ ಸಂಸ್ಥಾಪನಾ ದಿನಾಚರಣೆ

ಪುನಶ್ಚೇತನ ವಾಹನಗಳಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ವತಿಯಿಂದ ಪುನಶ್ಚೇತನಗೊಂಡಿರುವ 510 ವಾಹನಗಳಿಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಂಗಳವಾರ ಚಾಲನೆ ನೀಡಿದರು.

ನಿಗಮದ 62ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಮಾತನಾಡಿದ ಅವರು, 9 ಲಕ್ಷದಿಂದ 10 ಲಕ್ಷ ಕ್ರಮಿಸಿದ ವಾಹನಗಳನ್ನು ಎರಡು ಪ್ರಾದೇಶಿಕ ಕಾರ್ಯಾಗಾರಗಳಲ್ಲಿ 385 ಹಾಗೂ 13 ವಿಭಾಗಗಳಲ್ಲಿ 125 ವಾಹನಗಳು ಸೇರಿದಂತೆ ಒಟ್ಟಾರೆ 510 ಹಳೆಯ ಬಸ್‌ಗಳನ್ನು ಪುನಶ್ಚೇತನಗೊಳಿಸಲಾಗಿದೆ. ಆಧುನಿಕ ವಿಧಾನಗಳನ್ನು ಹಾಗೂ ತಾಂತ್ರಿಕತೆಗಳನ್ನು ಅಳವಡಿಸಿಕೊಂಡಿರುವುದಕ್ಕೆ ಸಾಕ್ಷಿಯಾಗಿದೆ ಎಂದರು.

ಪುನಶ್ಚೇತನ ವಾಹನಗಳನ್ನು ಕಾರ್ಯಾಚರಣೆಗೆ ಬಳಸಿಕೊಂಡ ಎರಡು ಪ್ರಾದೇಶಿಕ ಕಾರ್ಯಾಗಾರ ಗಳಿಗೆ ತಲಾ ₹2 ಲಕ್ಷ, ವಿಭಾಗಗಳಿಗೆ ತಲಾ ₹1 ಲಕ್ಷ ಪುರಸ್ಕಾರ ನೀಡಲಾಯಿತು. ಪುನಶ್ಚೇತನದ ನೇತೃತ್ವ ವಹಿಸಿದ್ದ ಮೂವರು ಹಿರಿಯ ತಾಂತ್ರಿಕ ಅಧಿಕಾರಿಗಳಿಗೆ ತಲಾ ₹50 ಸಾವಿರ ನೀಡಲಾಯಿತು.

ಸಾರಿಗೆ ಮಿತ್ರಕ್ಕೆ ಚಾಲನೆ: ಘಟಕಗಳ ಗಣಕೀಕರಣ, ಆನ್‌ಲೈನ್ ರಜೆ ನಿರ್ವಹಣೆ, ಸೇವಾ ಪುಸ್ತಕ ಹಾಗೂ ವೈಯಕ್ತಿಕ ವಿವರಗಳ ಗಣಕೀಕರಣದ ಸಾರಿಗೆ ಮಿತ್ರ ಎಚ್‌ಆರ್‌ಎಂಎಸ್ ಯೋಜನೆಗೆ ಚಾಲನೆ ನೀಡಲಾಯಿತು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಪುನಶ್ಚೇತನಗೊಂಡ ವಾಹನಗಳಿಗೆ ಹಸಿರು ನಿಶಾನೆ ತೋರಿದರು

ಐದು ವರ್ಷ ಅಪಘಾತ ಹಾಗೂ ಅಪರಾಧರಹಿತ ಚಾಲನೆ ಮಾಡಿದ 38 ಚಾಲಕರಿಗೆ ಬೆಳ್ಳಿ ಪದಕ, ತಲಾ ₹2 ಸಾವಿರ ನಗದು, ಮಾಸಿಕ ₹250 ಭತ್ಯೆ ನೀಡಲಾಯಿತು. ನಾಲ್ಕು ಸಾರಿಗೆ ನಿಗಮಗಳಲ್ಲಿನ ಅನುಕಂಪ ಆಧಾರಿತ 14 ಹುದ್ದೆಗಳಲ್ಲಿ, 10 ಮಂದಿಗೆ ತಾಂತ್ರಿಕ ಹುದ್ದೆ, ನಾಲ್ವರಿಗೆ ಚಾಲಕ–ನಿರ್ವಾಹಕ ಹುದ್ದೆಯ ನೇಮಕಾತಿ ಪತ್ರ ನೀಡಲಾಯಿತು.

ಅಪಘಾತ ಸ್ಥಳಕ್ಕೆ ಧಾವಿಸಿ ಪರಿಹಾರ ಕೈಗೊಳ್ಳಲು 20 ನೂತನ ಬೊಲೆರೊ ವಾಹನಗಳಿಗೆ ಚಾಲನೆ ನೀಡಲಾಯಿತು. ನಿಗಮದ ಚಟುವಟಿಕೆಗಳ ಕುರಿತು ಆಂತರಿಕ ಮೂರು ತಿಂಗಳಿಗೊಮ್ಮೆ ಪ್ರಕಟವಾಗುವ ನಿಯತಕಾಲಿಕ ‘ಸಾರಿಗೆ ಸಂಪದ‘ ಬಿಡುಗಡೆ ಮಾಡಲಾಯಿತು.

ನಿಗಮದ ಸಿಬ್ಬಂದಿ ಮಕ್ಕಳ ವಿದ್ಯಾರ್ಥಿ ವೇತನ ಒದಗಿಸುವ ‘ಸಾರಿಗೆ ವಿದ್ಯಾ ಚೇತನ’ ಯೋಜನೆ ಜಾರಿಗೊಳಿಸಲಾಗಿದೆ. ಪಿಯುಸಿ, ಪದವಿ ಬಿ.ಎ., ಬಿ.ಕಾಂ., ಪಿಎಚ್.ಡಿ ಹಾಗೂ ವಿದೇಶದಲ್ಲಿ ಮಾಡುತ್ತಿರುವ ಪದವಿ ವ್ಯಾಸಂಗವನ್ನು ಈ ಯೋಜನೆಗೆ ಸೇರಿಸಲಾಗಿದೆ. 10 ಸಿಬ್ಬಂದಿ ಮಕ್ಕಳಿಗೆ ಈ ವಿದ್ಯಾರ್ಥಿವೇತನವನ್ನು ಸಚಿವರು ವಿತರಿಸಿದರು.

ಏಕ ಸದಸ್ಯ ಸಮಿತಿ ಅಧ್ಯಕ್ಷ ಎಂ.ಆರ್. ಶ್ರೀನಿವಾಸಮೂರ್ತಿ, ಸಾರಿಗೆ ಇಲಾಖೆ ಕಾರ್ಯದರ್ಶಿ ಡಾ. ಎನ್.ವಿ. ಪ್ರಸಾದ್, ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅನ್ಬುಕುಮಾರ್, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ. ಸತ್ಯವತಿ ಇದ್ದರು.

ಚಾಲಕರ ನಿಧಿ ಸ್ಥಾಪಿಸಲು ಚಿಂತನೆ: ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೆಸ್ ಸಂಗ್ರಹಿಸಿ ಚಾಲಕರ ನಿಧಿ ಸ್ಥಾಪಿಸಲು ಚಿಂತನೆ ನಡೆಸಲಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ತಿಳಿಸಿದರು.

ಖಾಸಗಿ ಬಸ್, ಟ್ಯಾಕ್ಸಿ, ಆಟೊ ಚಾಲಕರ ಮತ್ತು ಮಾಲೀಕರ ಸಂಘ ಮತ್ತು ಅಧಿಕಾರಿಗಳೊಂದಿಗೆ ಸೋಮವಾರ ಸಭೆ ನಡೆಸಿ ಅವರು ಮಾತನಾಡಿದರು.

ತೆರಿಗೆ ಕಟ್ಟದೇ ಬಾಕಿ ಉಳಿಸಿಕೊಂಡಿರುವುದನ್ನು ವಸೂಲಿ ಮಾಡಲು ತೆರಿಗೆ ಅದಾಲತ್ ಮಾಡಲಾಗುವುದು. ರಿಯಾಯಿತಿ ನೀಡಿ ವಸೂಲಿಗೆ ಕ್ರಮ ಕೈಗೊಳ್ಳಲಾಗುವುದು. ಚಾಲಕರ ಮಕ್ಕಳಿಗೆ 10ನೇ ತರಗತಿಯಿಂದ ವಿದ್ಯಾರ್ಥಿವೇತನ ನೀಡಲಾಗುತ್ತಿದೆ. 1ನೇ ತರಗತಿಯಿಂದಲೇ ನೀಡಬೇಕು ಎಂಬ ಬೇಡಿಕೆ ಬಂದಿದೆ. ಈ ಬಗ್ಗೆ ಶೀಘ್ರದಲ್ಲಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಹೇಳಿದರು.

ಅನಧಿಕೃತವಾಗಿ ಸಂಚರಿಸುತ್ತಿರುವ ರ್‍ಯಾಪಿಡೊ ನಿಷೇಧಿಸಲಾಗುವುದು. ಪ್ರಕರಣ ನ್ಯಾಯಾಲಯದಲ್ಲಿ ಇರುವುದರಿಂದ ಅಲ್ಲಿ ಇತ್ಯರ್ಥ ಆಗುವವರೆಗೆ ಕಾಯಬೇಕಾಗುತ್ತದೆ. ರ್‍ಯಾಪಿಡೊ ಕಂಪನಿ ತಂದಿರುವ ತಡೆಯಾಜ್ಞೆಯನ್ನು ಒಂದು ವಾರದೊಳಗೆ ತೆರವುಗೊಳಿಸಲು ಪ್ರಯತ್ನಿಸಲಾಗುವುದು ಎಂದರು.

ಜುಲೈ 25 ಚಾಲಕರ ದಿನ ಎಂದು ನಿರ್ಧಾರವಾಗಿದೆ. ಆದರೆ, ಅನುಷ್ಠಾನಕ್ಕೆ ಬಂದಿಲ್ಲ. ಪ್ರತಿ ವರ್ಷ ಜುಲೈ 25ರಂದು ಚಾಲಕರ ದಿನ ಆಚರಿಸುವಂತೆ ಮಾಡಲಾಗುವುದು ಎಂದರು.

ಸಾರಥಿ ಸೂರು ಯೋಜನೆಯಡಿ ವಸತಿ ಒದಗಿಸುವ ಬಗ್ಗೆ ವಸತಿ ಸಚಿವರ ಜಮೀರ್ ಅಹ್ಮದ್‌ಖಾನ್ ಜೊತೆ ಸಭೆ ನಡೆಸಲಾಗುವುದು. ಇಲಾಖೆಯ ಹಂತದಲ್ಲೇ ಪರಿಹರಿಸಬಹುದಾದ ಎಲ್ಲ ಬೇಡಿಕೆಗಳನ್ನು ಈಡೇರಿಸಲಾಗುವುದು. ತೆರಿಗೆ ಕಡಿತ ಮುಂತಾದ ವಿಚಾರಗಳ ಬಗ್ಗೆ ಮುಖ್ಯಮಂತ್ರಿ ಜತೆ ಚರ್ಚಿಸ ಲಾಗುವುದು ಎಂದು ಭರವಸೆ ನೀಡಿದರು.

ಭಾರತ್ ಟ್ರಾನ್ಸ್‌ಪೋರ್ಟ್ ಅಸೋಸಿಯೇಶನ್, ಜೈ ಭಾರತ್ ವಾಹನ ಚಾಲಕರ ಸಂಘ, ಕರ್ನಾಟಕ ರಾಜೀವ್ ಗಾಂಧಿ ಅಟೊ ಚಾಲಕರ ವೇದಿಕೆ, ಬೆಂಗಳೂರು ಅಟೊ ಸೇನೆ, ನಮ್ಮ ಚಾಲಕರ ಟ್ರೇಡ್ ಯೂನಿಯನ್. ಕರ್ನಾಟಕ ರಾಜ್ಯ ಶಾಲಾ ವಾಹನ ಚಾಲಕರ ಟ್ರೇಡ್ ಯೂನಿಯನ್, ಆಟೊ ರಿಕ್ಷಾ ಡ್ರೈವರ್ ಯೂನಿಯನ್ (ಎಆರ್‌ಡಿಯು), ಸ್ನೇಹಜೀವಿ ಚಾಲಕರ ಟ್ರೇಡ್ ಯೂನಿಯನ್, ವಿಜಯಸೇನೆ ಅಟೊ ಘಟಕ, ಬೆಂಗಳೂರು ಸಾರಥಿ ಸೇನೆ, ಅಟೊರಿಕ್ಷಾ ಡ್ರೈವರ್ ಯೂನಿಯನ್ (ಸಿಐಟಿಯು), ಕರುನಾಡ ಸಾರಥಿ ಸೇನೆ ಟ್ರೇಡ್ ಯೂನಿಯನ್, ನೊಂದ ಚಾಲಕರ ವೇದಿಕೆ, ಕರ್ನಾಟಕ ಟ್ಯಾಕ್ಸಿ ಓನರ್ಸ್ ಆ್ಯಂಡ್ ಡ್ರೈವರ್ ಸಹಿತ ವಿವಿಧ ಸಂಘಟನೆಗಳು, ಅಧಿಕಾರಿಗಳು ಇದ್ದರು.

ಎಕ್ಸ್‌ಪ್ರೆಸ್ ವೇ: ಮೊದಲ ದಿನ ₹68 ಸಾವಿರ ದಂಡ ವಸೂಲಿ

ರಾಮನಗರ: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ (ರಾಷ್ಟ್ರೀಯ ಹೆದ್ದಾರಿ 275) ಬೈಕ್, ಆಟೊ, ಟ್ರ್ಯಾಕ್ಟರ್ ಹಾಗೂ ಕೃಷಿ ಬಳಕೆ ವಾಹನ ಸಂಚಾರ ನಿರ್ಬಂಧ ಮಂಗಳವಾರದಿಂದ ಕಟ್ಟುನಿಟ್ಟಾಗಿ ಜಾರಿಯಾಗಿದೆ.

ನಿರ್ಬಂಧ ಮೀರಿ ಎಕ್ಸ್‌ಪ್ರೆಸ್ ವೇಯಲ್ಲಿ ಸಂಚರಿಸಿದ ಪ್ರತಿ ವಾಹನ ಸವಾರರು, ಚಾಲಕರಿಗೆ ಪೊಲೀಸರು ₹500 ದಂಡ ವಿಧಿಸಿದರು. ಮೊದಲ ದಿನ ಒಟ್ಟು 137 ಸವಾರರ ವಿರುದ್ಧ ಪ್ರಕರಣ ದಾಖಲಿಸಿ ₹68,500 ದಂಡ ವಸೂಲಿ ಮಾಡಲಾಗಿದೆ ಎಂದು ರಾಮನಗರ ಎಸ್‌ಪಿ ಕಾರ್ತಿಕ್ ರೆಡ್ಡಿ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಬೆಳಿಗ್ಗೆ 8 ಗಂಟೆಯಿಂದಲೇ ಹೆದ್ದಾರಿಯಲ್ಲಿ ಬೀಡು ಬಿಟ್ಟಿದ್ದ ಪೊಲೀಸರು ನಿರ್ಬಂಧಿತ ವಾಹನಗಳು ಎಕ್ಸ್‌ಪ್ರೆಸ್ ವೇ ಪ್ರವೇಶಿಸದಂತೆ ನೋಡಿಕೊಂಡರು. ಸವಾರರಿಗೆ ಮಾಹಿತಿ ನೀಡಲು ಹೆದ್ದಾರಿಯ ಅಲ್ಲಲ್ಲಿ ಪ್ರವೇಶ ನಿರ್ಬಂಧ ಪೋಸ್ಟರ್ ಹಾಕಲಾಗಿತ್ತು.

‘ಪ್ರವೇಶ ನಿರ್ಬಂಧ ಕುರಿತು ಕೆಲವರಿಗೆ ಮಾಹಿತಿ ಕೊರತೆ ಇದೆ. ಹಾಗಾಗಿ, ಮೊದಲ ದಿನ ಹೆದ್ದಾರಿ ಪ್ರವೇಶಿಸಲು ಮುಂದಾದವರಿಗೆ ಪ್ರವೇಶ ಸ್ಥಳದ ಬಳಿ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದ ಸಿಬ್ಬಂದಿ ಎಚ್ಚರಿಕೆ ನೀಡಿ, ಸರ್ವೀಸ್ ರಸ್ತೆಯಲ್ಲಿ ಕಳಿಸಿದರು. ಅದನ್ನು ಮೀರಿಯೂ ಹೆದ್ದಾರಿ ಪ್ರವೇಶಿಸಿದವರಿಗೆ ನಿರ್ಗಮನ ಸ್ಥಳಗಳಲ್ಲಿ ₹500 ದಂಡ ಹಾಕಲಾಯಿತು’ ಎಂದು ಪೊಲೀಸರು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ, ಹೆಚ್ಚುವರಿ ಎಸ್‌ಪಿ ಟಿ.ವಿ. ಸುರೇಶ್, ಡಿವೈಎಸ್‌ಪಿ ದಿನಕರ ಶೆಟ್ಟಿ, ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕ ರಾಹುಲ್ ಗುಪ್ತಾ ಅವರು ಹೆದ್ದಾರಿಗೆ ಭೇಟಿ ನೀಡಿ, ಮೊದಲ ದಿನ ವಾಹನ ಸವಾರರ ಪ್ರತಿಕ್ರಿಯೆ ಗಮನಿಸಿದರು.

ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತಗಳ ಸಂಖ್ಯೆ ಹೆಚ್ಚಳವಾದ ಬೆನ್ನಲ್ಲೇ, ಪ್ರಾಧಿಕಾರವು ದ್ವಿಚಕ್ರ, ತ್ರಿಚಕ್ರ ಹಾಗೂ ಕೃಷಿ ಬಳಕೆಯ ವಾಹನಗಳಿಗೆ ನಿರ್ಬಂಧ ಹೇರುವ ತೀರ್ಮಾನ ಕೈಗೊಂಡಿತ್ತು. ಆಗಸ್ಟ್ 1ರಿಂದ ನಿಯಮ ಜಾರಿಗೆ ಬರುವಂತೆ ಸರ್ಕಾರ ಇದೇ ಜುಲೈ 12ರಂದು ಅಧಿಸೂಚನೆ ಹೊರಡಿಸಿತ್ತು.

ಶಪಿಸುತ್ತಲೇ ದಂಡ ತೆತ್ತ ಬೈಕ್ ಸವಾರರು

ಹೆದ್ದಾರಿ ಪ್ರವೇಶಿಸಿ ಬೆಂಗಳೂರು ಕಡೆಯಿಂದ ಬಂದ ಬೈಕ್ ಸವಾರರಿಬ್ಬರನ್ನು ಸಂಗಬಸವನ ದೊಡ್ಡಿ ಬಳಿ ಇರುವ ಹೆದ್ದಾರಿ ನಿರ್ಗಮನ ಸ್ಥಳದಲ್ಲಿ ಪೊಲೀಸರು ತಡೆದರು.

‘ನಿಯಮ ಮೀರಿ ಪ್ರವೇಶಿಸಿದ್ದಕ್ಕಾಗಿ ದಂಡ ಪಾವತಿಸಿ’ ಎಂದರು. ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸವಾರರು, ‘ನಾವೂ ರಸ್ತೆ ತೆರಿಗೆ ಪಾವತಿಸುತ್ತೇವೆ. ನಮಗೂ ಬೇಗನೇ ಹೋಗಬೇಕಿರುತ್ತದೆ. ಹೀಗಿರುವಾಗ ನಿರ್ಬಂಧ ಹೇರುವುದು ಎಷ್ಟು ಸರಿ?’ ಎಂದು ವಾಗ್ವಾದ ನಡೆಸಿದರು.

ಅದಕ್ಕೆ ಪೊಲೀಸರು, ‘ಎಕ್ಸ್‌ಪ್ರೆಸ್ ವೇನಲ್ಲಿ ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳಿಗೆ ಎಲ್ಲಿಯೂ ಪ್ರವೇಶವಿಲ್ಲ. ಈ ಕುರಿತು ಅಧಿಸೂಚನೆ ಹೊರಡಿಸಲಾಗಿದೆ. ಹೆದ್ದಾರಿಯಲ್ಲಿ ಈ ಬಗ್ಗೆ ಪೋಸ್ಟರ್ ಮತ್ತು ಫ್ಲೆಕ್ಸ್ ಕೂಡ ಹಾಕಲಾಗಿದೆ. ಅದನ್ನು ಗಮನಿಸದೆ ನಿಯಮ ಉಲ್ಲಂಘಿಸಿದ್ದೀರಿ. ಹಾಗಾಗಿ, ದಂಡ ಪಾವತಿಸಲೇಬೇಕು’ ಎಂದರು.

ನಿರ್ಬಂಧಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತಲೇ ₹500 ದಂಡ ಪಾವತಿಸಿದ ಸವಾರರು, ನಂತರ ಸರ್ವಿಸ್ ರಸ್ತೆಯಲ್ಲಿ ಮೈಸೂರು ಕಡೆಗೆ ತೆರಳಿದರು.

ನಗರದಲ್ಲಿ ಇಂದು

‘ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪುನರ್ವಸತಿ ಯೋಜನೆಗಳ ಬಲವರ್ಧನೆ’ ರಾಜ್ಯಮಟ್ಟದ ಕಾರ್ಯಾಗಾರ: ಅಧ್ಯಕ್ಷತೆ: ಎಚ್‌.ಸಿ. ಮಹದೇವಪ್ಪ, ಅತಿಥಿಗಳು: ಇ. ವೆಂಕಟಯ್ಯ, ರಾಕೇಶ ಕುಮಾರ್ ಕೆ., ಚಂದ್ರಕಲಾ, ಸೋನಿ ಪಿಲ್ಲಿಸರಿ, ಬಾಬು ಮ್ಯಾಥ್ಯೂ, ಆಯೋಜನೆ: ಸಮಾಜ ಕಲ್ಯಾಣ ಇಲಾಖೆ, ಸ್ಥಳ: ಮೌಲಾನಾ ಅಬ್ದುಲ್ ಕಲಾಂ ಆಜಾದ್ ಭವನ, ವಸಂತನಗರ, ಬೆಳಿಗ್ಗೆ 10ರಿಂದ

ಅಂತರರಾಷ್ಟ್ರೀಯ ವಿಚಾರಸಂಕಿರಣ ಹಾಗೂ ಪುಸ್ತಕ ಬಿಡುಗಡೆ: ಉದ್ಘಾಟನೆ: ಎಸ್‌.ಜಿ. ಸಿದ್ಧರಾಮಯ್ಯ, ಡಿ.ಕೆ. ಚಿತ್ತಯ್ಯಪೂಜಾರ್ ಅವರ ‘ಅಲಕ್ಷಿತ ದ್ರಾವಿಡ ಸಾಹಿತ್ಯ ಪ್ರಕಾರಗಳು’ ಪುಸ್ತಕ ಬಿಡುಗಡೆ: ಮನು ಬಳಿಗಾರ್, ಅಧ್ಯಕ್ಷತೆ: ಜಯಕರ ಎಸ್‌.ಎಂ., ಅತಿಥಿಗಳು: ಡಿ.ವಿ. ಪರಮಶಿವಮೂರ್ತಿ, ಮುನಿಯಪ್ಪ, ಉಪಸ್ಥಿತಿ: ವಿ. ಹರೀಶ್ ಕುಮಾರ್, ಆಯೋಜನೆ: ಸಂಚಲನ ಸಂಸ್ಕೃತಿ ವೇದಿಕೆ, ಕನ್ನಡ ಅಧ್ಯಯನ ಕೇಂದ್ರ, ಸ್ಥಳ: ಜಿ.ಎಸ್‌.ಎಸ್. ಸಭಾಂಗಣ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 11ರಿಂದ

‘ಎಚ್‌.ಎಸ್. ವೆಂಕಟೇಶಮೂರ್ತಿ’ ಅವರಿಗೆ ಗೀತ ಗೌರವ: ಅತಿಥಿಗಳು: ದೊಡ್ಡರಂಗೇಗೌಡ, ನರಹಳ್ಳಿ ಬಾಲಸುಬ್ರಹ್ಮಣ್ಯ, ಟಿ.ಎನ್. ಸೀತಾರಾಂ, ಟಿ.ಎಸ್. ನಾಗಾಭರಣ, ಬಿ.ಆರ್. ಲಕ್ಷ್ಮಣರಾವ್, ಗಾಯನ: ವೈ.ಕೆ. ಮುದ್ದುಕೃಷ್ಣ, ಮುದ್ದುಮೋಹನ್, ಸಂಗೀತ ಕಟ್ಟಿ, ಎಂ.ಡಿ. ಪಲ್ಲವಿ, ಕಿಕ್ಕೇರಿ ಕೃಷ್ಣಮೂರ್ತಿ, ಕೆ.ಎಸ್. ಸುರೇಖಾ, ಅರ್ಚನಾ ಉಡುಪ, ಆಯೋಜನೆ: ಕರ್ನಾಟಕ ಸುಗಮ ಸಂಗೀತ ಪರಿಷತ್ತು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4ರಿಂದ

ವೆಂಕಟೇಶ ಮೂರ್ತಿ

‘ಆದಿ ಅಷ್ಟಕಂ’ ಒಡಿಸ್ಸಿ ನೃತ್ಯ ಪ್ರದರ್ಶನ: ಸಹನಾ ಮಯ್ಯ, ಮಧುರ ಗುಪ್ತಾ, ನಮ್ರತಾ ಮೆಹ್ತಾ, ರಸಿಕಾ ಗುಮಾಸ್ತೆ, ಸೌರವ್ ಮೋಹಾಂತಿ, ಮಧುಲತಾ ಮಹಪಾತ್ರ, ಆಯೋಜನೆ: ನೃತ್ಯಾಂತರ ಅಕಾಡೆಮಿ ಆಫ್ ಪರ್ಫಾರ್ಮಿಂಗ್ ಆರ್ಟ್ಸ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 6ರಿಂದ

ಪ್ರವಚನ ವಾಹಿನಿ: ‘ಅರಣ್ಯ ಪರ್ವದ ಸ್ವಾರಸ್ಯಕರ ಪ್ರಸಂಗಗಳು’ ಕುರಿತ ಉಪನ್ಯಾಸ: ರಂಗನಾಥ ಕಟ್ಟಾಯ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30ರಿಂದ

‘ಬೈ ಟು ಕಾಫಿ’ ನಾಟಕ ಪ್ರದರ್ಶನ: ರಚನೆ, ನಿರ್ದೇಶನ: ಅಭಿಷೇಕ್ ಅಯ್ಯಂಗಾರ್, ಆಯೋಜನೆ: ವಿಮೂವ್ ಥಿಯೇಟರ್, ಸ್ಥಳ: ರಂಗಶಂಕರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ nagaradalli_indu@prajavani.co.in

ವಿಟಿಯು 23ನೇ ಘಟಿಕೋತ್ಸವ: ಅಭಿಷೇಕಗೆ 7 ಚಿನ್ನದ ಪದಕ

ಕಾಲೇಜಿಗೆ ನಿತ್ಯ ಬಸ್‌ನಲ್ಲಿ 140 ಕಿ.ಮೀ ಪಯಣ...

● ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ‘ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ತಳಗವಾರದಿಂದ ನಿತ್ಯ ಬಸ್‌ನಲ್ಲಿ ಬೆಂಗಳೂರಿನ ಕಾಲೇಜಿಗೆ ಹೋಗುತ್ತಿದ್ದೆ. ನಸುಕಿನ 5.30ಕ್ಕೆ ಮನೆಯಿಂದ ಹೊರಟು, ರಾತ್ರಿ ಮನೆಗೆ ಮರಳುತ್ತಿದ್ದೆ. ಹೋಗಿ ಬರಲು ಒಟ್ಟು 140 ಕಿ.ಮೀ. ಪ್ರಯಾಣ ಆಗುತಿತ್ತು. ಸಿಕ್ಕ ಸಮಯದಲ್ಲೇ ಶ್ರಮ ವಹಿಸಿ ಓದಿದ ಫಲವಾಗಿ ಕನಸು ನನಸಾಗಿದೆ’

–ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ (ವಿಟಿಯು) ಮಂಗಳವಾರ ನಡೆದ 23ನೇ ಘಟಿಕೋತ್ಸವದಲ್ಲಿ 7 ಚಿನ್ನದ ಪದಕ ಗಳಿಸಿದ ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿ ಅಭಿಷೇಕ ಜಿ. ‘ಪ್ರಜಾವಾಣಿ’ ಜೊತೆ ಸಂತಸ ಹಂಚಿಕೊಂಡರು.

ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಮಂಗಳವಾರ ನಡೆದ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಾದ ಗುಡಿಕಲ್ ಸಾಯಿವಂಶಿ, ಮಡಕಶಿರಾ ಚಿನ್ಮಯ ವಿಕಾಸ್, ಅಭಿಷೇಕ ಜಿ. ಮತ್ತು ಕೆ.ಆರ್. ಸಂಪತಕುಮಾರ್ ಚಿನ್ನದ ಪದಕಗಳನ್ನು ಪ್ರದರ್ಶಿಸಿದರು —ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

ಬೆಂಗಳೂರಿನ ಸರ್ ಎಂ.ವಿಶ್ವೇಶ್ವರಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ವಿಭಾಗದ ವಿದ್ಯಾರ್ಥಿ, ಆಂಧ್ರಪ್ರದೇಶದ ನೆಲ್ಲೂರಿನ ಗುಡಿಕಲ್ ಸಾಯಿವಂಶಿ 7 ಚಿನ್ನದ ಪದಕ ಪಡೆದಿದ್ದಾರೆ. ಅವರ ಸರ್ಕಾರಿ ಶಾಲಾ ಶಿಕ್ಷಕರಾಗಿರುವ ಮುರಳಿ–ಸುರೇಖಾ ದಂಪತಿ ಪುತ್ರ.

ಯುಪಿಎಸ್‌ಸಿಗೆ ತಯಾರಿ: ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದಲ್ಲಿ ಸಾಧನೆ ಮಾಡಿದ ಬಳ್ಳಾರಿಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಕೆ.ಆರ್.ಸಂಪತಕುಮಾರ್, ‘ನನಗೆ ರ್‍ಯಾಂಕ್ ನಿರೀಕ್ಷೆಯಿತ್ತು. 7 ಚಿನ್ನದ ಪದಕ ಸಿಕ್ಕಿದ್ದು ಸಂತಸ ಹೆಚ್ಚಿಸಿದೆ. ಯುಪಿಎಸ್‌ಸಿ ಪರೀಕ್ಷೆಗೆ ತಯಾರಿ ನಡೆಸಿದ್ದೇನೆ’ ಎಂದರು.

ಮಡಕಶಿರಾ ಚಿನ್ನದ ಹುಡುಗ: ಬೆಂಗಳೂರಿನ ಸರ್ ಎಂ.ವಿಶ್ವೇಶ್ವರಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸಿವಿಲ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿ, ಆಂಧ್ರಪ್ರದೇಶದ ಅನಂತಪುರದ ಮಡಕಶಿರಾ ಚಿನ್ಮಯ ವಿಕಾಸ್ 13 ಚಿನ್ನದ ಪದಕಗಳನ್ನು ಪಡೆದಿದ್ದಾರೆ. ‘13 ಚಿನ್ನದ ಪದಕ ಸಿಕ್ಕಿರುವುದು ಖುಷಿ ತಂದಿದೆ. ಶಿಸ್ತುಬದ್ಧ ಅಧ್ಯಯನದಿಂದ ಈ ಸಾಧನೆ ಸಾಧ್ಯವಾಗಿದೆ’ ಎಂದು ಅವರು ತಿಳಿಸಿದರು.

ಅಧ್ಯಾತ್ಮ ಕ್ಷೇತ್ರದಲ್ಲಿನ ಸಾಧನೆಗೆ ಮಂಡ್ಯ ಜಿಲ್ಲೆಯ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ನಿರ್ಮಲಾನಂದನಾಥ ಸ್ವಾಮೀಜಿ (ಅನುಪಸ್ಥಿತಿ), ಶಿಕ್ಷಣ ಕ್ಷೇತ್ರದ ಸಾಧನೆಗೆ ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್‌ನ ಗೌರವ ಕಾರ್ಯದರ್ಶಿ ಎ.ವಿ.ಎಸ್. ಮೂರ್ತಿ ಮತ್ತು ಉದ್ಯಮ ಕ್ಷೇತ್ರದ ಸಾಧನೆಗೆ ಮೈಸೂರಿನ ಮರ್ಕಂಟೈಲ್ ಕಂಪನಿ ಅಧ್ಯಕ್ಷ ಎಚ್.ಎಸ್.ಶೆಟ್ಟಿ ಅವರಿಗೆ ‘ಡಾಕ್ಟರ್ ಆಫ್ ಸೈನ್ಸ್’ ಪದವಿ ಪ್ರದಾನ ಮಾಡಲಾಯಿತು.

ಈ ಘಟಿಕೋತ್ಸವದಲ್ಲಿ ಬಿಇ, ಬಿ.ಟೆಕ್ ಸೇರಿ 42,545 ಪದವಿ, ಬಿ.ಪ್ಲ್ಯಾನ್- 6, ಬಿ.ಆರ್ಕ್ 1,003, 578 ಪಿಎಚ್.ಡಿ, 4 ಎಂ.ಎಸ್ಸಿ ಬೈ ರಿಸರ್ಚ್ ಹಾಗೂ 2 ಇಂಟಿಗ್ರೇಟೆಡ್ ಡ್ಯುಯಲ್ ಪದವಿಗಳನ್ನು ಪ್ರದಾನ ಮಾಡಲಾಯಿತು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಸಂತೋಷ ಲಭ್ಯವಿದೆ. ದಯಮಾಡಿ ಸ್ವಸಹಾಯ ಪದ್ಧತಿಯ ಮೂಲಕ ಪಡೆದುಕೊಳ್ಳಿ.

–ನಾಟ್ ಹಾನ್

ಅರಣ್ಯ ಸಂರಕ್ಷಣೆ ಮಸೂದೆ ಅರಣ್ಯ ನಾಶದ ಅಪಾಯವೇ ಹೆಚ್ಚು

ಅರಣ್ಯ ಸಂರಕ್ಷಣೆ (ತಿದ್ದುಪಡಿ) ಮಸೂದೆಗೆ ಲೋಕಸಭೆ ಕಳೆದ ವಾರ ಅಂಗೀಕಾರ ನೀಡಿದೆ. ಅರಣ್ಯದ ಸಂರಕ್ಷಣೆಯೇ ಇದರ ಉದ್ದೇಶ ಎಂಬುದು ಈ ಮಸೂದೆಯ ಹೆಸರಿನಲ್ಲಿಯೇ ಇದ್ದರೂ ವಾಸ್ತವದಲ್ಲಿ ಇದು ಅರಣ್ಯಕ್ಕೆ ಹಾನಿಯನ್ನೇ ಮಾಡಲಿದೆ ಎಂಬ ಕಳವಳ ವ್ಯಕ್ತವಾಗಿದೆ. ಪರಿಕಲ್ಪನಾತ್ಮಕ ಮತ್ತು ವಾಸ್ತವಿಕ ಎರಡು ನೆಲೆಯಲ್ಲಿಯೂ ಇಂತಹ ಕಳವಳ ಇದೆ. ಸರ್ಕಾರದ ದಾಖಲೆಗಳಲ್ಲಿ ಅರಣ್ಯ ಎಂದು ಪರಿಗಣಿಸಲಾಗಿರುವ ಎಲ್ಲ ಪ್ರದೇಶಕ್ಕೂ ಸಂರಕ್ಷಣೆಯನ್ನು ವಿಸ್ತರಿಸುವುದಕ್ಕಾಗಿ 1980ರಲ್ಲಿ ಅರಣ್ಯ ಸಂರಕ್ಷಣೆ ಕಾಯ್ದೆಯನ್ನು (ಎಫ್‌ಸಿಎ) ತರಲಾಯಿತು. 'ಅರಣ್ಯ ಎಂಬ ಪದಕ್ಕೆ ಶಬ್ದಕೋಶದಲ್ಲಿರುವ ವ್ಯಾಖ್ಯಾನ'ಕ್ಕೆ ಹೊಂದುವ ಎಲ್ಲ ಪ್ರದೇಶಕ್ಕೂ ಈ ಕಾಯ್ದೆಯನ್ನು ವಿಸ್ತರಿಸಿ ಸುಪ್ರೀಂ ಕೋರ್ಟ್ 1996ರಲ್ಲಿ ಆದೇಶ ನೀಡಿತು. ಸಂರಕ್ಷಿಸಬೇಕಾದ ಅರಣ್ಯ ಎಂದು ಸರ್ಕಾರಿ ದಾಖಲೆಗಳಲ್ಲಿ ಇಲ್ಲದ ಪ್ರದೇಶಗಳಲ್ಲಿರುವ ಮರಗಳನ್ನೂ ರಕ್ಷಿಸಲು ಇದು ನೆರವಾಯಿತು. ತಿದ್ದುಪಡಿಯಲ್ಲಿ ಅರಣ್ಯ ಎಂಬುದರ ಮೂಲ ವ್ಯಾಖ್ಯೆಯನ್ನೇ ಉಳಿಸಿಕೊಳ್ಳಲಾಗಿದೆ. ಇದರಿಂದಾಗಿ ಭಾರಿ ಪ್ರಮಾಣದ ಪ್ರದೇಶಕ್ಕೆ ಇದ್ದ ರಕ್ಷಣೆಯು ನಷ್ಟವಾಗುತ್ತದೆ. ಭಾರತೀಯ ಅರಣ್ಯ ಸರ್ವೇಕ್ಷಣೆಯ ಅಂದಾಜು ಪ್ರಕಾರ, ಶೇಕಡ 28ರಷ್ಟು ಅರಣ್ಯ ಪ್ರದೇಶವು ಈ ಕಾನೂನಿನ ವ್ಯಾಪ್ತಿಯಿಂದ ಹೊರಗೆ ಹೋಗುತ್ತದೆ. ನಷ್ಟವಾದ ಅರಣ್ಯ ಪ್ರದೇಶಕ್ಕೆ ಪರಿಹಾರವಾಗಿ ಅರಣ್ಯೀಕರಣದ ಪ್ರಸ್ತಾವ ಇದೆ. ಆದರೆ, ಎಲ್ಲರಿಗೂ ತಿಳಿದಿರುವಂತೆ, ವಾಸ್ತವದಲ್ಲಿ ಇದು ಜಾರಿಗೆ ಬರುವುದೇ ಇಲ್ಲ.

ದೇಶದಲ್ಲಿ ಅರಣ್ಯ ಪ್ರದೇಶವನ್ನು ಹೆಚ್ಚಿಸುವುದು ಈ ಮಸೂದೆಯ ಉದ್ದೇಶ ಎಂದು ಹೇಳಲಾಗಿದ್ದರೂ ಅದರಲ್ಲಿರುವ ಅಂಶಗಳು ಅದಕ್ಕೆ ವ್ಯತಿರಿಕ್ತವಾಗಿವೆ

ಅಂತರರಾಷ್ಟ್ರೀಯ ಗಡಿ, ಗಡಿ ನಿಯಂತ್ರಣ ರೇಖೆ ಅಥವಾ ನೈಜ ನಿಯಂತ್ರಣ ರೇಖೆಯ ನೂರು ಕಿ.ಮೀ. ವ್ಯಾಪ್ತಿಯಲ್ಲಿರುವ ಅರಣ್ಯ ಪ್ರದೇಶದಲ್ಲಿ ರಕ್ಷಣಾ ಉದ್ದೇಶದ ರಸ್ತೆ ಮತ್ತು ರೈಲು ಮಾರ್ಗ ನಿರ್ಮಾಣಕ್ಕೆ ಪೂರ್ವಾನುಮತಿ ಪಡೆದುಕೊಳ್ಳಬೇಕು ಎಂಬ ನಿಯಮವನ್ನು ಈ ಮಸೂದೆಯು ರದ್ದುಪಡಿಸಿದೆ. ಈಶಾನ್ಯ ಭಾರತದ, ಪರಿಸರದ ದೃಷ್ಟಿಯಿಂದ ಅತ್ಯಂತ ನಾಜೂಕಾಗಿರುವ ಭಾರಿ ಪ್ರಮಾಣದ ಪ್ರದೇಶ ಈ ವರ್ಗಕ್ಕೆ ಬರುತ್ತದೆ. ಎಡಪಂಥೀಯ ಉಗ್ರವಾದದಿಂದ ಬಾಧಿತವಾಗಿರುವ ಪ್ರದೇಶಕ್ಕೂ ವಿನಾಯಿತಿ ಅನ್ವಯ ಆಗಲಿದೆ. ದೇಶದ ಭದ್ರತೆಯು ಬಹಳ ಮುಖ್ಯವಾದ ವಿಚಾರವೇ ಸರಿ. ಆದರೆ, ನಿರ್ಮಾಣ ಚಟುವಟಿಕೆಗಳಿಗೆ ಯಾವುದೇ ನಿಯಂತ್ರಣ ಇಲ್ಲ ಎಂದು ಬಿಡುಬೀಸಾಗಿ ನೀಡುವ ವಿನಾಯಿತಿಯು ದುರ್ಬಳಕೆ ಆಗುವ ಅಪಾಯ ಇದೆ. ಪರಿಸರವು ಅತ್ಯಂತ ಸೂಕ್ಷ್ಮವಾಗಿರುವ ಇಂತಹ ಪ್ರದೇಶಗಳಲ್ಲಿ ನಿರ್ಮಾಣ ಚಟುವಟಿಕೆ ಆರಂಭಿಸುವ ಮುನ್ನ ಆ ಕುರಿತು ಸಮಗ್ರವಾದ ಸಮಾಲೋಚನೆ ಅಗತ್ಯವಾಗಿದೆ. ನಕ್ಸಲ್‌ಬಾಧಿತ ಪ್ರದೇಶಗಳು ದೇಶದಲ್ಲಿಯೇ ಅತ್ಯಂತ ಸಮೃದ್ಧವಾಗಿ ಅದಿರು ನಿಕ್ಷೇಪಗಳು ಇರುವ ಸ್ಥಳಗಳಾಗಿವೆ. ಈ ಪ್ರದೇಶಕ್ಕೆ ನೀಡುವ ವಿನಾಯಿತಿಯು ಅರಣ್ಯ ನಾಶ, ಗಣಿಗಾರಿಕೆ ಮತ್ತು ಕೈಗಾರಿಕಾ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ಬಳಕೆ ಆಗಬಹುದು.

ಇತರ ಕಳವಳಗಳೂ ಇವೆ. ಲೋಕಸಭೆಯಲ್ಲಿ ಮಾರ್ಚ್‌ನಲ್ಲಿ ಮಂಡನೆಯಾದ ಬಳಿಕ ಮಸೂದೆಯನ್ನು ಜಂಟಿ ಆಯ್ಕೆ ಸಮಿತಿಗೆ ಒಪ್ಪಿಸಲಾಗಿತ್ತು. ಸಮಿತಿಯು ಯಾವುದೇ ಬದಲಾವಣೆಯನ್ನು ಸೂಚಿಸಿರಲಿಲ್ಲ. ಆದರೆ, ವಿರೋಧ ಪಕ್ಷಗಳ ಆರು ಸದಸ್ಯರು ಪರಿಸರ ಪರಿಶೋಧನೆ ಮತ್ತು ಪರಿಸರ ಸೂಕ್ಷ್ಮ ಪ್ರದೇಶಗಳ ಅರಣ್ಯ ಪ್ರದೇಶ ಬಳಕೆ ಕುರಿತು ರಾಜ್ಯ ಸರ್ಕಾರಗಳ ಜೊತೆಗೆ ಸಮಾಲೋಚನೆ ಅಗತ್ಯ ಎಂದು ಪ್ರತಿಪಾದಿಸಿದ್ದರು. ಪರಿಸರ ತಜ್ಞರು, ವಿಜ್ಞಾನಿಗಳು ಮತ್ತು ಪರಿಸರಪರ ಹೋರಾಟಗಾರರು ಸೇರಿದಂತೆ 400 ಮಂದಿ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಈ ಮಸೂದೆಯು ಕಾಯ್ದೆಯಾಗಿ ಜಾರಿಯಾದರೆ ದೇಶದ ಅರಣ್ಯ ಪ್ರಮಾಣದ ಕುಸಿಯುವಿಕೆಗೆ ವೇಗ ತುಂಬಲಿದೆ ಎಂಬ ಕಳವಳವನ್ನು ಅವರು ವ್ಯಕ್ತಪಡಿಸಿದ್ದಾರೆ. ಹವಾಮಾನ ಬದಲಾವಣೆಯ ಅಪಾಯ ಎದುರಿಸುತ್ತಿರುವ ಈ ಸಂದರ್ಭದಲ್ಲಿ ಅರಣ್ಯದ ಸಂರಕ್ಷಣೆ ಬಹಳ ಮುಖ್ಯವಾದುದಾಗಿದೆ. ಸಂಸತ್ತಿನಲ್ಲಿ ಚರ್ಚೆಯೇ ಇಲ್ಲದೆ ಈ ಮಸೂದೆ ಅಂಗೀಕಾರವಾಗಿದೆ. ದೇಶದಲ್ಲಿ ಅರಣ್ಯ ಪ್ರದೇಶವನ್ನು ಹೆಚ್ಚಿಸುವುದು ಈ ಮಸೂದೆಯ ಉದ್ದೇಶ ಎಂದು ಹೇಳಲಾಗಿದೆ. ಆದರೆ, ಮಸೂದೆಯಲ್ಲಿ ಇರುವ ಅಂಶಗಳು ಅದಕ್ಕೆ ವ್ಯತಿರಿಕ್ತವಾಗಿವೆ.

ದಿನದ ಟ್ವೀಟ್

ಅತಿಯಾದ ಕಾರ್ಯಭಾರ

ನಮ್ಮ ಸರ್ಕಾರಿ ನೌಕರರು ಅತಿಯಾದ ಕಾರ್ಯಭಾರ ಹೊಂದಿರುತ್ತಾರೆ ಮತ್ತು ಅವರ ಕಾರ್ಯಕ್ಕೆ ಮೆಚ್ಚುಗೆ ದೊರೆಯುವುದೇ ವಿರಳ. ಐಎಎಸ್ ಅಧಿಕಾರಿಗಳಷ್ಟೇ ಅಲ್ಲ, ವಾರ್ಡ್ ಎಂಜಿನಿಯರುಗಳು ಸೇರಿದಂತೆ ಎಲ್ಲ ಹಂತಗಳಲ್ಲೂ ಅವರು ಹಲವು ಪಾತ್ರಗಳನ್ನು ನಿರ್ವಹಿಸಬೇಕಾಗಿರುವುದು, ಕರ್ತವ್ಯ ನಿರ್ವಹಣೆಯನ್ನು ಅವರಿಗೆ ಕ್ಲಿಷ್ಟವಾಗಿಸುತ್ತಿದೆ. ಸರ್ಕಾರಿ ನೌಕರರ ತಲಾವಾರು ಪ್ರಮಾಣದಲ್ಲಿ ಅತ್ಯಂತ ಕಡಿಮೆ ನೌಕರರನ್ನು ಹೊಂದಿರುವ ದೇಶಗಳಲ್ಲಿ ಭಾರತವೂ ಒಂದಾಗಿದೆ. ಸರ್ಕಾರದ ವ್ಯಾಪ್ತಿಯನ್ನು ನಾವು ವಿಸ್ತರಿಸಬೇಕಾಗಿದೆ.

ಶ್ರೀನಿವಾಸ್ ಅಲವಿಲ್ಲಿ, ಸಹಸಂಸ್ಥಾಪಕ, ಸಿಟಿಜನ್ಸ್ ಫಾರ್ ಬೆಂಗಳೂರು

ಕಿಡಿನುಡಿ

ಪ್ರೇಮವಿವಾಹಗಳಿಗೆ ಪೋಷಕರ ಒಪ್ಪಿಗೆಯನ್ನು ಕಡ್ಡಾಯಗೊಳಿಸಲು ಗುಜರಾತ್ ಸರ್ಕಾರ ಚಿಂತನೆ ನಡೆಸಿರುವುದು ಕಳವಳಕಾರಿ. ಪ್ರೀತಿ ಮತ್ತು ಮದುವೆ ಅತ್ಯಂತ ವೈಯಕ್ತಿಕ ಆಯ್ಕೆಗಳಾಗಿದ್ದು, ಜೀವನ ಸಂಗಾತಿಯನ್ನು ಆಯ್ದುಕೊಳ್ಳುವ ಹಕ್ಕನ್ನು ಪ್ರತಿಯೊಬ್ಬರೂ ಹೊಂದಿರುತ್ತಾರೆ. ಸರ್ಕಾರದ ಕ್ರಮವು ಅವಸರದ ನಿರ್ಧಾರಗಳನ್ನು ತಡೆಗಟ್ಟಬಹುದು ಮತ್ತು ಹೆಣ್ಣುಮಕ್ಕಳು ಓಡಿಹೋಗಿ, ಬಳಿಕ ಪಶ್ಚಾತ್ತಾಪ ಪಡದಂತೆ ಅವರಿಗೆ ರಕ್ಷಣೆ ನೀಡಬಹುದು ಎಂದು ಕೆಲವರು ವಾದಿಸುತ್ತಾರೆ. ಆದರೆ, ಯಾವುದೇ ಬಗೆಯ ವಿವಾಹದಲ್ಲಿ ವಿಷಾದದ ಅನುಭವ ಎದುರಾಗಬಹುದು ಎಂಬುದನ್ನು ನಾವು ನೆನಪಿಡಬೇಕು.

ಮೇಘಾ ಜೈನ್, ವಕೀಲೆ

25 ವರ್ಷಗಳ ಹಿಂದೆ

ಭಾನುವಾರ, 2-8-1998

• ಇನ್ನಷ್ಟು ಹದಗೆಟ್ಟ ಭಾರತ– ಪಾಕ್ ಸಂಬಂಧ

ಪುಣೆ, ಆ. 1 (ಪಿಟಿಐ)– ಕೊಲಂಬೊದಲ್ಲಿ ನಡೆದ ಸಾರ್ಕ್ ದೇಶಗಳ ಸಮಾವೇಶದ ನಂತರ ಭಾರತ ಮತ್ತು ಪಾಕಿಸ್ತಾನದ ಸಂಬಂಧ ಇನ್ನಷ್ಟು ಬಿಗಡಾಯಿಸಿದೆ ಎಂದು ಕೇಂದ್ರ ಗೃಹ ಸಚಿವ ಎಲ್.ಕೆ.ಅಡ್ವಾಣಿ ಅವರು ಅಭಿಪ್ರಾಯಪಟ್ಟಿದ್ದಾರೆ.

ಪಾಕಿಸ್ತಾನವು ಕಾಶ್ಮೀರದ ವಿಷಯದಲ್ಲಿ ಪಟ್ಟು ಹಿಡಿದಿರುವುದರಿಂದ ಎರಡೂ ದೇಶಗಳ ಕಾರ್ಯದರ್ಶಿ ಮಟ್ಟದ ಸಭೆ ವಿಫಲವಾಯಿತು. ಇದರಿಂದ ಎರಡೂ ದೇಶಗಳ ನಾಗರಿಕರಿಗೆ ನಿರಾಸೆಯಾಗಿದೆ ಎಂದಿದ್ದಾರೆ.

• ವರ್ಷಕ್ಕೆ 25 ಕನ್ನಡ ಚಿತ್ರಗಳಿಗೆ ಮಾತ್ರ ಸಹಾಯಧನ

ಬೆಂಗಳೂರು, ಆ. 1– ಗುಣಮಟ್ಟ ಆಧರಿಸಿ ಸಹಾಯಧನ ವಿತರಣೆಯೂ ಸೇರಿದಂತೆ, ಕನ್ನಡ ಚಲನಚಿತ್ರರಂಗಕ್ಕೆ ಪುನಶ್ಚೇತನ ನೀಡುವ ಉದ್ದೇಶದ ಸಮಗ್ರ 'ಚಲನಚಿತ್ರ ನೀತಿ'ಯೊಂದನ್ನು ರಾಜ್ಯ ಸರ್ಕಾರ ರೂಪಿಸಿದೆ; ಅದು ಒಪ್ಪಿಗೆಗಾಗಿ ಶೀಘ್ರವೇ ಸಚಿವ ಸಂಪುಟದ ಮುಂದೆ ಬರಲಿದೆ.

ಹೊಸ ನೀತಿಯನ್ವಯ, ರಾಜ್ಯದಲ್ಲಿ ತಯಾರಾಗುವ ಎಲ್ಲ ಕನ್ನಡ ಚಿತ್ರಗಳಿಗೂ ಈ ಮೊದಲು ಸಿಗುತ್ತಿದ್ದ ತಲಾ ನಾಲ್ಕು ಲಕ್ಷ ರೂಪಾಯಿಗಳ ಸಬ್ಸಿಡಿಯ ಬದಲು ವರ್ಷದಲ್ಲಿ ಉತ್ತಮ ಗುಣಮಟ್ಟದ 25 ಕನ್ನಡ ಚಿತ್ರಗಳಿಗೆ ಮಾತ್ರ ಅದು ಲಭಿಸಲಿದೆ. ಸಬ್ಸಿಡಿಯ ಮೊತ್ತ ಈಗಿನ ನಾಲ್ಕು ಲಕ್ಷ ರೂಪಾಯಿಗಳಿಂದ 10 ಲಕ್ಷ ರೂಪಾಯಿಗಳಿಗೆ ಏರಲಿದೆ. 1996ರ ಮಾರ್ಚ್ 31ರ ಒಳಗೆ ಬಿಡುಗಡೆಯಾದ ಚಿತ್ರಗಳು ಮಾತ್ರ ಹಳೆಯ ನೀತಿಯನ್ವಯ ನಾಲ್ಕು ಲಕ್ಷ ರೂಪಾಯಿಗಳ ಸಬ್ಸಿಡಿಗೆ ಅರ್ಹವಾಗಲಿದ್ದು, 1996ರ ಏಪ್ರಿಲ್‌ನಿಂದ ಬಿಡುಗಡೆಯಾಗಿರುವ ಚಿತ್ರಗಳಿಗೆ ಈ ಸಬ್ಸಿಡಿ ನೀತಿ ಪೂರ್ವಾನ್ವಯವಾಗಿ ಜಾರಿಗೆ ಬರಲಿದೆ.

50 ವರ್ಷಗಳ ಹಿಂದೆ

ಗುರುವಾರ, 2-8-1973

• ಪರಿಹಾರ ಕಾಮಗಾರಿ ನಿಲುಗಡೆ ಸೂಚನೆಗೆ ರಾಜ್ಯದ ಸ್ಪಷ್ಟ ತಿರಸ್ಕಾರ

ಬೆಂಗಳೂರು, ಆ. 1– ಅಭಾವ ಪರಿಹಾರ ಕಾಮಗಾರಿಗಳಿಗೆ ಖರ್ಚಾಗುವ ಹಣವನ್ನೆಲ್ಲ ತಾನೇ ಕೊಡುವುದಾಗಿ ಮೂರು ತಿಂಗಳ ಹಿಂದೆ ಭರವಸೆ ಕೊಟ್ಟ ಕೇಂದ್ರ ಸರ್ಕಾರ, ಈಗ ಆ ಹಣ ಕೊಡಲು ವಿಳಂಬ ಹಾಗೂ ಚೌಕಾಶಿ ಮಾಡುತ್ತಿರುವುದರ ಬಗ್ಗೆ ರಾಜ್ಯ ಸಚಿವ ಸಂಪುಟ ತೀವ್ರ ಕಳವಳ ವ್ಯಕ್ತಪಡಿಸಿದೆ.

ಮಳೆ ಬಂದಿರುವುದರಿಂದ ಇನ್ನು ಪರಿಹಾರ ಕಾಮಗಾರಿಗಳನ್ನು ನಿಲ್ಲಿಸಬಹುದು ಎಂಬ ಕೇಂದ್ರದ ಸೂಚನೆಯನ್ನು ಸರ್ಕಾರ ತಿರಸ್ಕರಿಸಿದೆ. 8 ಲಕ್ಷ ಮಂದಿ ಇನ್ನೂ ಕಾಮಗಾರಿಗಳಲ್ಲಿ ನಿರತರಾಗಿರುವಾಗ ಅವರನ್ನು ತಕ್ಷಣ ಮನೆಗೆ ಹೋಗಿ ಎಂದು ಹೇಳಲು ಸಾಧ್ಯವಿಲ್ಲ ಎಂದು ಕೇಂದ್ರಕ್ಕೆ ಸ್ಪಷ್ಟಪಡಿಸಿದೆ.

• ಭದ್ರಾವತಿ ಕಾರ್ಖಾನೆ ಬಗೆಗೆ ಸಮಗ್ರ ತನಿಖೆ: ಆರ್.ಸಿ.ದತ್ ಸಲಹೆ

ಬೆಂಗಳೂರು, ಆ. 1– ಭದ್ರಾವತಿಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯ ವ್ಯವಹಾರಗಳ ಬಗ್ಗೆ ತನಿಖೆ ನಡೆಸಲು ನೇಮಕವಾಗಿದ್ದ ಶ್ರೀ ಆರ್.ಸಿ.ದತ್ ಏಕ ಸದಸ್ಯ ಆಯೋಗವು, 'ಈ ಕಾರ್ಖಾನೆಯ ವಿಸ್ತರಣೆ ಕಾರ್ಯ ಮತ್ತು ಕೆಲವು ವ್ಯವಹಾರ'ಗಳ ಬಗ್ಗೆ ಸಮಗ್ರ ತನಿಖೆ ನಡೆಸಬೇಕೆಂದು ಸರ್ಕಾರಕ್ಕೆ ಸಲಹೆ ಮಾಡಿದೆ.

1965-66 ಮತ್ತು 1970-71ರ ಅವಧಿಯಲ್ಲಿ ಕಾರ್ಖಾನೆಯು ತಪ್ಪಿಸಬಹುದಾಗಿದ್ದ ಸುಮಾರು ಎಂಟು ಕೋಟಿ ರೂಪಾಯಿಗಳ ನಷ್ಟ ಅನುಭವಿಸಿತು ಎಂದು ಕೇಂದ್ರ ಉಕ್ಕು ಇಲಾಖೆಯ ಮಾಜಿ ಕಾರ್ಯದರ್ಶಿ ಶ್ರೀ ದತ್ ಮೇ ತಿಂಗಳಲ್ಲಿ ಸಲ್ಲಿಸಿದ ವರದಿಯಲ್ಲಿ ಹೇಳಿದ್ದಾರೆ ಎಂದು ತಿಳಿದುಬಂದಿದೆ.

ವಿರೋಧ ಪಕ್ಷಗಳ ನಾಯಕರಲ್ಲಿ ಹೆಚ್ಚಿನವರಿಗೆ ಅಖಿಲ ಭಾರತ ಮಟ್ಟದಲ್ಲಿ ಜನಪ್ರಿಯತೆ ಇಲ್ಲ

ಲಿಂಕನ್ ಮಾತು, ಪ್ರತಿಪಕ್ಷಗಳ ಒಕ್ಕೂಟ



ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್.ಗೋಪಿನಾಥ್

ಐಎನ್‌ಡಿಐಎ ಒಕ್ಕೂಟವು ಭಿನ್ನ ನಿಲುವುಗಳನ್ನು ಹೊಂದಿರುವ, ಹತಾಶಗೊಂಡಿರುವ ಪಕ್ಷಗಳ ಮೈತ್ರಿಕೂಟವೇ? ಈ ಒಕ್ಕೂಟವು ಬಹುಕಾಲ ಬಾಳಬಲ್ಲದೇ? ಈ ಪಕ್ಷಗಳು ಬಲಶಾಲಿ ನರೇಂದ್ರ ಮೋದಿ ಅವರನ್ನು ಸೋಲಿಸಲು ತಮ್ಮ ಅಹಂ ಮೀರಿ, ಒಟ್ಟಾಗಿ ಉಳಿಯಬಲ್ಲವೇ? ಈ ಪಕ್ಷಗಳು ಸರ್ವಸಮ್ಮತ ನಾಯಕನೊಬ್ಬನನ್ನು ಆಯ್ಕೆ ಮಾಡಿಕೊಳ್ಳಬಲ್ಲವೇ?

ವಿರೋಧ ಪಕ್ಷಗಳು ಕಳೆದ ತಿಂಗಳು ಬೆಂಗಳೂರಿನಲ್ಲಿ ಒಟ್ಟು ಸೇರಿದ್ದವು. ತಮ್ಮ ರಾಜಕೀಯ ಎದುರಾಳಿ ಮೋದಿ ಅವರನ್ನು 2024ರ ಲೋಕಸಭಾ ಚುನಾವಣೆಯಲ್ಲಿ ಸೋಲಿಸುವುದು ಹೇಗೆ ಎಂಬ ಬಗ್ಗೆ ಚರ್ಚಿಸಿದವು. ಬಿಜೆಪಿಯು ಅದೇ ದಿನ ನವದೆಹಲಿಯಲ್ಲಿ 38 ರಾಜಕೀಯ ಪಕ್ಷಗಳ ಸಭೆ ನಡೆಸಿತು. ನವದೆಹಲಿಯಲ್ಲಿ ಒಟ್ಟಾಗಿದ್ದ ಪಕ್ಷಗಳು ಮೋದಿ ಅವರ ಬಗ್ಗೆ ಭರಪೂರ ಮೆಚ್ಚುಗೆ ವ್ಯಕ್ತಪಡಿಸಿದವು, ಅವರ ನಾಯಕತ್ವದ ಅಡಿಯಲ್ಲಿ ಮುಂದಿನ ಚುನಾವಣೆ ಎದುರಿಸುವುದಾಗಿ ಹೇಳಿದವು.

ವಿರೋಧ ಪಕ್ಷಗಳ ಒಗ್ಗಟ್ಟಿಗೆ ಸಿಕ್ಕಿದ್ದ ಪ್ರಚಾರದ ಹಿನ್ನೆಲೆಯಲ್ಲಿ, ನವದೆಹಲಿಯ ಈ ಸಭೆಯು ಒಂದು ಸಂದೇಶವನ್ನು ಸಾರುವ ಉದ್ದೇಶ ಹೊಂದಿತ್ತು. ಮೋದಿ ಅವರು ಬಿಜೆಪಿಯ ಪ್ರಶ್ನಾತೀತ ನಾಯಕ; ಅಷ್ಟೇ ಅಲ್ಲ, ಅವರು ಈಗಲೂ ವಿರೋಧ ಪಕ್ಷಗಳಿಗೆ ಸಾಧ್ಯವಾಗುವುದಕ್ಕಿಂತ ಹೆಚ್ಚಿನ ಸಂಖ್ಯೆಯ ಪಕ್ಷಗಳನ್ನು ತಮ್ಮತ್ತ ಸೆಳೆದು ಮೈತ್ರಿಕೂಟ ರಚಿಸಬಲ್ಲರು ಎಂಬುದು ಆ ಸಂದೇಶ. ವಿರೋಧ ಪಕ್ಷಗಳ ಒಕ್ಕೂಟವು ನಕಾರಾತ್ಮಕತೆಯ ಮೈತ್ರಿಕೂಟ ಎಂದು ಮೋದಿ ಅವರು ಜರಿದರು. ಆ ಒಕ್ಕೂಟವು ಅವಕಾಶವಾದಿತನದಿಂದ ಕೂಡಿದೆ ಎಂದು ದೂರಿದರು. ವಾಸ್ತವದಲ್ಲಿ, ಎನ್‌ಡಿಎ ಬಗ್ಗೆಯೂ ಇದೇ ಮಾತು ಹೇಳಬಹುದು!

ಮೋದಿ ಅವರ ವಿರುದ್ಧ ನಿಲುವು ತಳೆದ ಮಾತ್ರಕ್ಕೆ ಜನರು ವಿರೋಧ ಪಕ್ಷಗಳ ಪರವಾಗಿ ಮತ ಚಲಾಯಿಸುವರೇ? ವಿರೋಧ ಪಕ್ಷಗಳ ಒಕ್ಕೂಟವು ಚುನಾವಣೆಯಲ್ಲಿ ಗೆಲುವು ಸಾಧಿಸಬಹುದು, ಮೋದಿ ಅವರನ್ನು ಪದಚ್ಯುತಗೊಳಿಸಬಹುದು – ಹಿಂದೆ ಜನತಾ ಪಕ್ಷವು ಇಂದಿರಾ ಗಾಂಧಿ ಅವರನ್ನು ತುರ್ತು ಪರಿಸ್ಥಿತಿಯ ನಂತರದಲ್ಲಿ ಸೋಲಿಸಿ, ನಂತರ ತಾನೇ ಕುಸಿದುಬಿತ್ತು. ಬಿಜೆಪಿ ಯಾವುದನ್ನು ಪ್ರತಿನಿಧಿಸುತ್ತದೆ ಎಂಬುದು ಎಲ್ಲರಿಗೂ ಗೊತ್ತಿದೆ. ಶಕ್ತಿಶಾಲಿ ಹಿಂದೂರಾಷ್ಟ್ರ ನಿರ್ಮಾಣ ಅದರ ಉದ್ದೇಶ. ಆದರೆ ವಿರೋಧ ಪಕ್ಷಗಳಿಗೆ ದೇಶದ ವಿಚಾರವಾಗಿ ಸಮಾನವಾದ ದೂರದೃಷ್ಟಿಯೊಂದು ಇದೆಯೇ? ಅವರು ಅಧಿಕಾರಕ್ಕೆ ಬಂದಲ್ಲಿ, ಒಂದಾಗಿ ಉಳಿದುಕೊಳ್ಳುತ್ತಾರೆಯೇ?

ನಿತೀಶ್ ಕುಮಾರ್ ಯಾವುದರ ಪರವಿದ್ದಾರೆ ಎಂಬುದನ್ನು ಯಾರಾದರೂ ಹೇಳಲು ಸಾಧ್ಯವೇ? ಅವರು ತಮ್ಮ ಬಟ್ಟೆ ಬದಲಿಸಿದಷ್ಟೇ ಸುಲಭವಾಗಿ ಸಿದ್ಧಾಂತವನ್ನೂ ಬದಲಿಸಬಲ್ಲರು. ಅಧಿಕಾರದಲ್ಲಿ ಉಳಿದುಕೊಳ್ಳಲು ಕೇಸರಿ ಪಾಳಯದ ಜೊತೆ ಒಂದಕ್ಕಿಂತ ಹೆಚ್ಚು ಬಾರಿ ನಂಟು ಬೆಳೆಸಿದ್ದಾರೆ. ಅವರು ಈ ಒಕ್ಕೂಟಕ್ಕೆ ಯಾವ ಬಗೆಯಲ್ಲಿ ವಿಶ್ವಾಸಾರ್ಹತೆ, ಸ್ಥಿರತೆಯನ್ನು ತಂದುಕೊಡಬಲ್ಲರು? ಲಾಲು ಪ್ರಸಾದ್ ಅವರ ಕಥೆ ಏನು? ಸಮಾಜವಾದಿ ಆಗಿದ್ದ ಅವರು, ಬಿಹಾರದ ಮುಖ್ಯಮಂತ್ರಿ ಆದ ನಂತರದಲ್ಲಿ ಅಲ್ಲಿನ ರಾಜಕಾರಣವನ್ನೇ ಬದಲಾಯಿಸಿದರು. ಮೇವು ಹಗರಣದಲ್ಲಿ ಶಿಕ್ಷೆಗೆ ಗುರಿಯಾದರು. ಒಕ್ಕೂಟದ ಭಾಗವಾಗಿರುವ ಇಂತಹ ನಾಯಕರು ಮೋದಿ ಅವರ ವಿರುದ್ಧ ರಫೇಲ್ ಒಪ್ಪಂದ ಉಲ್ಲೇಖಿಸಿ ಅಥವಾ ಅದಾನಿ ಸಮೂಹದ ಬಗ್ಗೆ ಉಲ್ಲೇಖಿಸಿ ಮಾಡುವ ಆರೋಪಗಳು ಜನರಿಗೆ ಒಪ್ಪಿತವಾಗಬಹುದೇ?

ಪಶ್ಚಿಮ ಬಂಗಾಳದಲ್ಲಿ ಎಡಪಕ್ಷಗಳ ಸರ್ಕಾರವನ್ನು ಏಕಾಂಗಿಯಾಗಿ ಕಿತ್ತೊಗೆದವರು ಮಮತಾ ಬ್ಯಾನರ್ಜಿ. ಅಲ್ಲಿ ಕಮ್ಯುನಿಸ್ಟ್ ಕಾರ್ಯಕರ್ತರು ತಮ್ಮ ಪಕ್ಷವನ್ನು ಗೂಂಡಾಗಳ ಪಕ್ಷವನ್ನಾಗಿಸಿದ್ದರು. ರಾಜ್ಯದ ಅರ್ಥವ್ಯವಸ್ಥೆ ಹಾಳಾಗಿತ್ತು. ಆದರೆ ಅಧಿಕಾರಕ್ಕೆ ಬಂದ ನಂತರದಲ್ಲಿ ಮಮತಾ ಅವರ ಟಿಎಂಸಿ, ಕಮ್ಯುನಿಸ್ಟ್ ಪಕ್ಷದ ಹಲವರನ್ನು ತನ್ನಲ್ಲಿ ಸೇರಿಸಿಕೊಂಡಿತು. ಮಮತಾ ಅವರು ಮೋದಿ ಅವರಷ್ಟೇ ಸರ್ವಾಧಿಕಾರಿ ಎಂಬ ಭಾವನೆ ಇದೆ. ಟಾಟಾ ಮೋಟರ್ಸ್‌ನ 'ನ್ಯಾನೊ ಕಾರು' ಯೋಜನೆಯನ್ನು ರಾಜ್ಯದಿಂದ ಹೊರದಬ್ಬಿದ ನಂತರದಲ್ಲಿ ಹೂಡಿಕೆದಾರರನ್ನು ಆಕರ್ಷಿಸುವಲ್ಲಿ ಮಮತಾ ವಿಫಲರಾಗಿದ್ದಾರೆ. ಅಲ್ಲಿನ ಅರ್ಥವ್ಯವಸ್ಥೆ ಕುಸಿದಿದೆ. ಕುಟುಂಬದ ಸದಸ್ಯರನ್ನು ಅಧಿಕಾರ ಕೇಂದ್ರದಲ್ಲಿ ಇರಿಸಿಕೊಂಡ ಆರೋಪ ಮಮತಾ ಅವರ ವಿರುದ್ಧ ಇದೆ. ಬಿಜೆಪಿ ನಡೆಸಿದ ಕೋಮು ಸಂಘರ್ಷಗಳ ವಿರುದ್ಧ ನಿಂತ ಮಮತಾ ಅವರು ಚುನಾವಣೆಗಳಲ್ಲಿ ಗೆಲುವು ಸಾಧಿಸಿದರು. ಆದರೆ ಅವರ ಪಕ್ಷವು ಭ್ರಷ್ಟಾಚಾರದ ಪ್ರಕರಣಗಳಲ್ಲಿ ಮುಳುಗಿದೆ. ರಾಜ್ಯದಲ್ಲಿ ಸಂಘರ್ಷ ನಿರಂತರವಾಗಿದೆ. ಅವರು ವಿರೋಧ ಪಕ್ಷಗಳಲ್ಲಿ ಸ್ಫೂರ್ತಿ ತುಂಬಬಲ್ಲರು ಎಂದು ನಂಬಬಹುದೇ? ಅವರು ಮೋದಿ ಅವರಿಗೆ ರಾಷ್ಟ್ರ ಮಟ್ಟದಲ್ಲಿ ವಿಶ್ವಾಸಾರ್ಹ ಸವಾಲು ಒಡ್ಡಬಲ್ಲರೇ?

ಒಳ್ಳೆಯ ಆಡಳಿತ, ಉತ್ತಮ ಶಾಲಾ ಶಿಕ್ಷಣ, ಕೈಗೆಟಕುವ ದರದಲ್ಲಿ ಆರೋಗ್ಯಸೇವೆ, ವಿದ್ಯುತ್ ಮತ್ತು ನೀರು ಪೂರೈಕೆ ವಿಚಾರದಲ್ಲಿ ತಮ್ಮ ಸಾಮರ್ಥ್ಯ ಏನು ಎಂಬುದನ್ನು ದೆಹಲಿ ಮುಖ್ಯಮಂತ್ರಿ ಆಗಿ ಅರವಿಂದ ಕೇಜ್ರಿವಾಲ್ ಅವರು ತೋರಿಸಿಕೊಟ್ಟಿದ್ದಾರೆ. ಆದರೆ ಅವರ ಅಹಂ ದೊಡ್ಡ ಸಮಸ್ಯೆ. ಅವರು ಸೌಹಾರ್ದದಲ್ಲಿ ಕೆಲಸ ಮಾಡುವ ವ್ಯಕ್ತಿಯಾಗಿ ಕಾಣುವುದಿಲ್ಲ. ಅವರು ಒಕ್ಕೂಟವನ್ನು ಒಂದಾಗಿಸಬಲ್ಲರೇ? ಅಲ್ಲದೆ, ಶರದ್ ಪವಾರ್ ಅವರ ಪಕ್ಷ ಒಡೆದಿದೆ, ಪವಾರ್ ಅವರು ಕುಸಿದಿದ್ದಾರೆ. ಪವಾರ್ ಸೇರಿದಂತೆ ಇವರಲ್ಲಿ ಯಾರಿಗೂ ಅಖಿಲ ಭಾರತ ಮಟ್ಟದಲ್ಲಿ ಜನಪ್ರಿಯತೆ ಇಲ್ಲ.

ಇನ್ನು ಉಳಿಯುವುದು ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್. ಈ ಎರಡೂ ಹೆಸರು ದೇಶದಾದ್ಯಂತ ಪರಿಚಿತ. ರಾಹುಲ್ ಅವರು ಯುವಕ, ಅವರಿಗೆ ದೊಡ್ಡ ಕುಟುಂಬವೊಂದರ ಹೆಸರಿದೆ. ಅವರು ಪಕ್ಷವನ್ನು ಮುನ್ನಡೆಸಿ, ಕರ್ನಾಟಕದಲ್ಲಿ ಜಯ ಸಿಗುವಂತೆ ಮಾಡಿದ್ದಾರೆ. ಅವರು ಮಾಗಿದ್ದಾರೆ. 'ವಂಶಪಾರಂಪರ್ಯ ರಾಜಕಾರಣ' ಎಂಬ ಆರೋಪವು ಜನಸಮೂಹಕ್ಕೆ ಅಷ್ಟೊಂದು ದೊಡ್ಡ ವಿಷಯವಾಗಲಿಕ್ಕಿಲ್ಲ. ಒಕ್ಕೂಟದ ನಾಯಕ ರಾಹುಲ್ ಎಂದು ಘೋಷಿಸಿದರೆ, ಅವರು ಪ್ರಬುದ್ಧ ನಾಯಕತ್ವವೊಂದನ್ನು ನೀಡಬಲ್ಲರೇ? ಮೋದಿ ಮತ್ತು ರಾಹುಲ್ ನಡುವಿನ ಹಣಾಹಣಿಯಲ್ಲಿ, ಒಕ್ಕೂಟವನ್ನು ಜಯದ ದಡ ಸೇರಿಸುವ ಅವಕಾಶ ರಾಹುಲ್ ಅವರಿಗಿದೆಯೇ?

ವಿರೋಧ ಪಕ್ಷಗಳು ತಮ್ಮ ನಡುವಿನ ಭಿನ್ನಾಭಿಪ್ರಾಯಗಳನ್ನು ತೊರೆದು, ಮೋದಿ ಅವರ ನಾಯಕತ್ವದಲ್ಲಿ ಶಿಸ್ತಿನಿಂದ ನಡೆದುಕೊಳ್ಳುವ ಬಿಜೆಪಿಗೆ ಸ್ಪರ್ಧೆ ಒಡ್ಡಬಲ್ಲವೇ? ಮೋದಿ ಮತ್ತು ಬಿಜೆಪಿಯವರು ಕೋಮು ಸಂಘರ್ಷಕ್ಕೆ ಇಂಬು ಕೊಡುತ್ತಿದ್ದಾರೆ, ಹಿಂದೂಗಳು ಹಾಗೂ ಮುಸ್ಲಿಮರನ್ನು ವಿಭಜಿಸುತ್ತಿದ್ದಾರೆ ಎಂದು ಆರೋಪಿಸುವ ವಿರೋಧ ಪಕ್ಷಗಳು ತಮ್ಮ ಜಾತಿ ಆಧಾರಿತ ರಾಜಕಾರಣವನ್ನು ಕೈಬಿಡುವವೇ? ತಮ್ಮ ಪೊಳ್ಳು ಧರ್ಮನಿರಪೇಕ್ಷ ನಿಲುವನ್ನು ಹಾಗೂ ಅಲ್ಪಸಂಖ್ಯಾತರನ್ನು ಅತಿಯಾಗಿ ಓಲೈಸುವ ರಾಜಕಾರಣವನ್ನು ಕೈಬಿಡುವವೇ? ಇಸ್ಲಾಮಿಕ್ ಮೂಲಭೂತವಾದ ಹಾಗೂ ಹಿಂದುತ್ವ ಆಧಾರಿತ ಅಂಧಾಭಿಮಾನವನ್ನು ಸಮಾನವಾಗಿ ನಿರ್ಮೂಲಗೊಳಿಸುವ ಭರವಸೆಯನ್ನು ಈ ಪಕ್ಷಗಳು ನೀಡಬಹುದೇ? ಹಿಂದೂಗಳು ಹಾಗೂ ಮುಸ್ಲಿಮರ ನಡುವೆ ತಾರತಮ್ಯ ಎಸಗದ, ಖಾಪ್ ಪಂಚಾಯಿತಿಗಳು ಮತ್ತು ಷರಿಯಾ ಕಾನೂನಿನ ಬಿಗಿ ಹಿಡಿತಕ್ಕೆ ಸಿಲುಕಿರುವ ಮಹಿಳೆಯರನ್ನು ಅಲ್ಲಿಂದ ಬಿಡುಗಡೆ ಮಾಡುವ ಏಕರೂಪ ನಾಗರಿಕ ಸಂಹಿತೆಯನ್ನು ಬೆಂಬಲಿಸುವುದಾಗಿ ಈ ಪಕ್ಷಗಳು ಘೋಷಿಸಬಲ್ಲವೇ? ದೇಶದ ತನಿಖಾ ಸಂಸ್ಥೆಗಳನ್ನು ಹಾಗೂ ನ್ಯಾಯಾಂಗ ಇಲಾಖೆಯನ್ನು ಆಡಳಿತ ಪಕ್ಷಗಳ ಹಿಡಿತದಿಂದ ಸ್ವತಂತ್ರಗೊಳಿಸಲಾಗುತ್ತದೆ ಎಂಬ ಭರವಸೆಯನ್ನು ನೀಡಬಲ್ಲವೇ?

ಬಿಜೆಪಿಗೆ ಆಡಳಿತ ವಿರೋಧಿ ಅಲೆಯ ಸವಾಲು ಎದುರಾಗಬಹುದು. ಆದರೆ ಬಹಳ ಆಕರ್ಷಕವಾಗಿ ಕಾಣಿಸುವ 'ಇಂಡಿಯಾ' ಎಂಬ ಹೆಸರು (ವಿರೋಧ ಪಕ್ಷಗಳ ಒಕ್ಕೂಟಕ್ಕೆ ನೀಡಿರುವ ಸಂಕ್ಷಿಪ್ತ ಹೆಸರು) ಮಾತ್ರವೇ ವಿರೋಧ ಪಕ್ಷಗಳಿಗೆ ಚುನಾವಣೆ ಗೆಲ್ಲಲು ಸಾಕಾಗುವುದಿಲ್ಲ. ಈ ಪಕ್ಷಗಳಿಗೆ ಜನರ ವಿಶ್ವಾಸವನ್ನು ಗಳಿಸಬೇಕಾದ ಅಗತ್ಯವೂ ಇದೆ. ಆದರೆ ಅದನ್ನು ಸಂಪಾದಿಸುವುದು ಸುಲಭದ ಕೆಲಸವಲ್ಲ. ವಿರೋಧ ಪಕ್ಷಗಳ ನಾಯಕರು ಬೆಂಗಳೂರಿಗೆ ಬಂದಿದ್ದಾಗ ನಗರದ ತುಂಬೆಲ್ಲ ಆ ನಾಯಕರ ಕಟೌಟ್‌ಗಳು ಕಾಣುತ್ತಿದ್ದವು. ಅವರ ಚಿತ್ರಗಳ ಕೆಳಗೆ ಒಂದು ಘೋಷವಾಕ್ಯ ಕೂಡ ಇತ್ತು. ಒಂದಾಗಿದ್ದರೆ ಯಶಸ್ಸು ಎಂಬ ಅರ್ಥದ ಘೋಷವಾಕ್ಯ ಅದು. ಆ ಘೋಷವಾಕ್ಯದ ಕೆಳಗಡೆ ಅಬ್ರಹಾಂ ಲಿಂಕನ್ ಅವರ ಜನಪ್ರಿಯ ಮಾತೊಂದನ್ನು ಸೇರಿಸಿದ್ದಿದ್ದರೆ ಇನ್ನೂ ಸೂಕ್ತವಾಗುತ್ತಿತ್ತು. 'ತನ್ನಲ್ಲೇ ಒಮ್ಮತವಿಲ್ಲದ ಕುಟುಂಬವೊಂದು ಯಶಸ್ಸು ಕಾಣಲು ಸಾಧ್ಯವಿಲ್ಲ' ಎಂಬುದು ಆ ಮಾತು!

ಚುರುಮುರಿ

ಸುಳ್ಳು ಶುದ್ಧಿ

• ಮಣ್ಣೆ ರಾಜು

'ಸುಳ್ಳು ಸುದ್ದಿ ಹರಡಿ ಸಮಾಜದ ಸ್ವಾಸ್ಥ್ಯ, ಸರ್ಕಾರದ ನೆಮ್ಮದಿ ಹಾಳು ಮಾಡುವವರು ಹೆಚ್ಚಾಗುತ್ತಿದ್ದಾರಂತೆ...' ಸುದ್ದಿ ಓದಿದಳು ಸುಮಿ.

'ಅಂಥಾ ಸುಳ್ಳುಕೋರರ ಸೊಲ್ಲು ಅಡಗಿಸಲು ಕಠಿಣ ಕಾನೂನು ಜಾರಿಗೆ ತರುತ್ತೇವೆ ಎಂದು ಗೃಹ ಮಂತ್ರಿ ಹೇಳಿದ್ದಾರೆ' ಅಂದ ಶಂಕ್ರಿ.

'ಛೇ, ಸತ್ಯವಂತರಿಗೆ ಇದು ಕಾಲವಲ್ಲ... ಕಾನೂನು ಮೂಲಕ ಸತ್ಯ ಕಾಪಾಡುವ ಪರಿಸ್ಥಿತಿ ಬಂದಿದೆ. ಇನ್ಮೇಲೆ ನೀವು ಸತ್ಯವನ್ನೇ ಹೇಳಿ, ಸತ್ಯವನ್ನಲ್ಲದೆ ಬೇರೆ ಏನನ್ನೂ ಹೇಳಬೇಡಿ...'

'ಸುಳ್ಳು ಸುದ್ದಿಗಳು ಸಾಮಾಜಿಕ ಪಿಡುಗಾಗಿ ಕಾಡುತ್ತಿವೆಯಂತೆ. ಅಂಥಾ ಸುಳ್ಳನ್ನು ಶುದ್ಧಿ ಮಾಡಿದರೆ ಸತ್ಯವಂತರ ಸಮಾಜ ನಿರ್ಮಾಣವಾಗುವುದಂತೆ'.

'ಸತ್ಯವನ್ನು ಸಾರಿ ಹೇಳಿದ ಪುಣ್ಯಕೋಟಿ, ಸತ್ಯ ಹರಿಶ್ಚಂದ್ರನ ಕಥೆ ಹೇಳಿ ಜನರಲ್ಲಿ ಸತ್ಯಜಾಗೃತಿ ಮೂಡಿಸಬಹುದಲ್ಲವೇ?'

'ಪುಣ್ಯಕಥೆ, ನೀತಿಕಥೆಯಿಂದ ಜನರನ್ನು ಸತ್ಯದಾರಿಗೆ ತರಲು ಸಾಧ್ಯವಿಲ್ಲ ಎಂದೇ ಸರ್ಕಾರ ಕಾನೂನು ದಾರಿ ಹಿಡಿಯಲು ಹೊರಟಿದೆ. ಟೂ ವ್ಹೀಲರ್‌ನವರಿಗೆ ಹೆಲ್ಮೆಟ್ ಕಡ್ಡಾಯ ಮಾಡಿದಂತೆ ಸತ್ಯವನ್ನು ಕಡ್ಡಾಯ ಮಾಡಿ, ಸುಳ್ಳಿಗೆ ದಂಡ ವಿಧಿಸಬಹುದೇನೊ'.

'ಸುಳ್ಳನ್ನೇ ಸತ್ಯ ಎಂದು ವಾದಿಸುವವರ ನಡುವೆ ಸುಳ್ಳಿನ ಸತ್ಯಾಸತ್ಯತೆಯನ್ನು ಕಂಡುಹಿಡಿಯಲು ಸತ್ಯವಂತರ ಸಮಿತಿ ರಚಿಸಬೇಕಾಗುತ್ತದೆ'.

'ಆಡಳಿತ ಪಕ್ಷ ನೇಮಕ ಮಾಡುವ ಸತ್ಯವಂತರ ಸಮಿತಿ ಬಗ್ಗೆ ವಿರೋಧ ಪಕ್ಷದವರು ತಕರಾರು ತೆಗೆಯಬಹುದು. ಸಮಸ್ತರೂ ಒಪ್ಪುವ ಸಮರ್ಥರು ಬೇಕು'.

'ಸಮಾಜವೇ ಒಪ್ಪುವ ಸುಳ್ಳು ಪತ್ತೆಯ ಸಮರ್ಥರು ನಮ್ಮಲ್ಲೂ ಇದ್ದಾರೆ...'

'ಅಂಥಾ ಪತ್ತೆದಾರರು ಯಾರಿದ್ದಾರೆ?'

'ಇನ್ಯಾರು? ಹೆಂಡತಿ ಕಣ್ರೀ! ಸತ್ಯದ ತಲೆ ಮೇಲೆ ಹೊಡೆದಂತೆ ಸುಳ್ಳು ಹೇಳಿ ಯಾಮಾರಿಸುವ ಗಂಡನ ಸುಳ್ಳನ್ನು ಪತ್ತೆ ಮಾಡುವ ಚಾಲಾಕಿತನ ಹೆಂಡತಿಗೆ ಇದೆ. ನಿಮಗೂ ಅದರ ಅನುಭವ ಆಗಿದೆಯಲ್ರೀ...' ಎಂದು ಸುಮಿ ಕಿಸಕ್ಕನೆ ನಕ್ಕಳು.

ಚರ್ಚೆ

ಇಂಗ್ಲಿಷ್ ಕಲಿಕೆ: ಹೊಣೆ ಅರಿಯಬೇಕಿದೆ

ಐಷಾರಾಮಿ ಜೀವನದ ಕನಸಿನ ಸಾಕಾರಕ್ಕೆ ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ಪಡೆಯುವುದೊಂದೇ ದಾರಿ ಎಂಬ ಗಾಢವಾದ ನಂಬಿಕೆ ಸಮಾಜದಲ್ಲಿದೆ. ಆದರೆ ವಾಸ್ತವ ಸಂಗತಿ ಸಂಪೂರ್ಣ ಭಿನ್ನವಾಗಿದೆ

• ಪು.ಸೂ.ಲಕ್ಷ್ಮೀನಾರಾಯಣ ರಾವ್

'ಹಿಗ್ಗಿತ್ತು ಕನ್ನಡ, ಕುಗ್ಗುತ್ತಿದೆ ಕನ್ನಡ' ಎಂಬ ವಸಂತ ಶೆಟ್ಟಿ ಅವರ ಲೇಖನ (ಪ್ರ.ವಾ., ಜುಲೈ 26) ಚಿಂತನಾರ್ಹವಾಗಿದೆ. 'ಕನ್ನಡವು ಶಾಲಾ ಶಿಕ್ಷಣ ಮಾಧ್ಯಮ ಆಗಿರುವ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದ ಮೂರೂ ಪ್ರಮುಖ ಪಕ್ಷಗಳ ಜನಪ್ರತಿನಿಧಿಗಳಲ್ಲಿ ಯಾವ ಅಭಿಪ್ರಾಯಭೇದವೂ ಇದ್ದಂತಿಲ್ಲ. ಎಡ-ನಡು-ಬಲ ಪಂಥದ ಒಲವಿನ ಎಲ್ಲ ನಾಯಕರಲ್ಲೂ ಇದೊಂದು ವಿಷಯದಲ್ಲಿ 'ಇಂಗ್ಲಿಷೇ ಪರಿಹಾರ' ಅನ್ನುವ ಕುರುಡು ನಂಬಿಕೆ ಆಳವಾಗಿ ಬೇರೂರಿದೆ' ಎಂಬ ಮಾತೂ ಸತ್ಯವಾದುದಾಗಿದೆ. ಅಷ್ಟೇ ಅಲ್ಲದೆ, ಮೇಲ್ವರ್ಗದವರು ಶಾಲಾ ಹಂತದಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿ, ನಂತರ ಬರಲಿರುವ ಸಮಸ್ಯೆಗಳನ್ನು ಎದುರಿಸಲು ಸಾಧ್ಯವಾಗಬಹುದು, ಆದರೆ ತಳಸಮುದಾಯಗಳಿಂದ ಬರುವ ಮಕ್ಕಳಿಗೆ ಅದು ಸಾಧ್ಯವಾಗದೆ ಹಿಂದುಳಿದುಬಿಡುತ್ತಾರೆ ಎಂಬ ಭಯವೂ ಬಹುಮಂದಿಯಲ್ಲಿದೆ.

ಒಟ್ಟಿನಲ್ಲಿ, ಇಂಗ್ಲಿಷ್ ಮಾಧ್ಯಮದಿಂದ ಮಾತ್ರ ಬದುಕು ಬಂಧುರ ಎಂಬ ಭ್ರಮೆ ಒಂದು ಸಮೂಹ ಸನ್ನಿಯಾಗಿ ನಮ್ಮ ಸಮಾಜವನ್ನು ಕಾಡುತ್ತಿದೆ ಎನ್ನಬಹುದು. ಜನರ ಈ ಹುಚ್ಚನ್ನು ತಮ್ಮ ಲಾಭಕ್ಕಾಗಿ ಮತ್ತಷ್ಟು ಹೆಚ್ಚು ಮಾಡುವ ಎಲ್ಲ ತಂತ್ರಗಳೂ ಬೇರೆ ಬೇರೆ ನೆಲೆಗಳಲ್ಲಿ ಪರಿಣಾಮಕಾರಿಯಾಗಿ ಬಳಕೆಯಾಗುತ್ತಿವೆ.

ವಾಸ್ತವದಲ್ಲಿ ಶಿಕ್ಷಣ ಹಾಗೂ ಬದುಕಿನ ಬಗೆಗಿನ ಪರಿಕಲ್ಪನೆಯ ಕಾರಣವಾಗಿ ಈ ಮಾಧ್ಯಮದ ಆಯ್ಕೆ ಒಡಮೂಡುತ್ತದೆ ಎಂದು ಹೇಳಬಹುದು. ಗರಿಷ್ಠ ಅಂಕ ಗಳಿಸಿ, ಆ ಮೂಲಕ ಒಳ್ಳೆಯ ಸಂಬಳವನ್ನು ತಂದುಕೊಡುವ ಉದ್ಯೋಗವನ್ನು ಪಡೆಯುವುದೇ ಶಿಕ್ಷಣದ ಗುರಿ ಎಂದು ಅನೇಕರು ಭಾವಿಸಿದ್ದಾರೆ. ಕಾರು, ಬಂಗಲೆಗಳನ್ನು ಸಂಪಾದಿಸಿ ಐಷಾರಾಮಿ ಜೀವನ ನಡೆಸುವುದು ಬದುಕಿನ ಗಂತವ್ಯ ಎಂದು ಕನಸಿನ ಗೋಪುರಗಳನ್ನು ಕಟ್ಟಿಕೊಳ್ಳುತ್ತಾರೆ. ಇದೆಲ್ಲ ಇಂಗ್ಲಿಷ್ ಮಾಧ್ಯಮದಿಂದ ಮಾತ್ರ ಸಾಧ್ಯವಾಗಬಲ್ಲದು ಎಂಬ ಗಾಢವಾದ ನಂಬಿಕೆ ಇಡೀ ಸಮಾಜವನ್ನು ಆವರಿಸಿಬಿಟ್ಟಿದೆ. ವಾಸ್ತವ ಸಂಗತಿ ಸಂಪೂರ್ಣ ಭಿನ್ನವಾಗಿದ್ದರೂ ಅದನ್ನು ಅರಿತುಕೊಳ್ಳಲು ಬುದ್ಧಿ ಪ್ರಯತ್ನಿಸುವುದೇ ಇಲ್ಲ. ಇಂದು, ಶಿಶುವಿಹಾರದಿಂದ ಪದವಿಯವರೆಗೆ ಇಂಗ್ಲಿಷ್ ಮಾಧ್ಯಮದಲ್ಲಿ ಅಭ್ಯಾಸ ಮಾಡಿರುವವರಲ್ಲಿ ಅನೇಕರು ಯಾವುದೇ ಕ್ಷೇತ್ರದಲ್ಲಿ ಉದ್ಯೋಗಕ್ಕೆ ಬೇಕಾದ ಕೌಶಲವನ್ನೇ ಹೊಂದಿಲ್ಲದಿರುವುದನ್ನು ನೋಡುತ್ತಿದ್ದೇವೆ.

ಬಿ.ಕಾಂ., ಎಂ.ಕಾಂ., ಎಂ.ಬಿ.ಎ. ಮಾಡಿದ್ದರೂ ಕ್ರೆಡಿಟ್, ಡೆಬಿಟ್‌ಗಳ ಬಗ್ಗೆ ನಿಖರವಾದ ಅರಿವಿಲ್ಲದಿರುವುದು ಸಂದರ್ಶಕರ ಅನುಭವಕ್ಕೆ ಬರುತ್ತಿದೆ. ಎಲ್ಲ ಕ್ಷೇತ್ರಗಳಲ್ಲಿಯೂ ಇದೇ ಸ್ಥಿತಿ ಇದೆ. ಕೆಲಸಕ್ಕೆ ಅರ್ಜಿ ಸಲ್ಲಿಸುವವರಲ್ಲಿ ಶೇ 20ರಷ್ಟು ಮಂದಿ ಕೂಡ ಕೆಲಸಕ್ಕೆ ಬೇಕಾದ ಕೌಶಲ ಹೊಂದಿರುವುದಿಲ್ಲವಂತೆ. ಶಿಕ್ಷಕರ ನೇಮಕಾತಿ ಪರೀಕ್ಷೆಗಳಲ್ಲಿ ಸಹ ಶೇ 20ರಿಂದ ಶೇ 30ರಷ್ಟು ಮಂದಿ ಮಾತ್ರ ಅರ್ಹತೆ ಪಡೆದಿರುವುದಕ್ಕೆ ಸಂಬಂಧಿಸಿದ ವಿವರಗಳು ವರದಿಯಾಗಿವೆ. ಕನಿಷ್ಠ ಇಂಗ್ಲಿಷ್ ಭಾಷಾ ಪ್ರೌಢಿಮೆಯೂ ಇರುವುದಿಲ್ಲ ಎಂಬುದು ಕಟು ವಾಸ್ತವ.

ಐಐಟಿಯಂತಹ ಪ್ರತಿಷ್ಠಿತ ವಿದ್ಯಾಸಂಸ್ಥೆಗಳ ಪ್ರವೇಶ ಪರೀಕ್ಷೆಯಲ್ಲಿ ಶೇ 2ರಷ್ಟು ಮಂದಿ ಮಾತ್ರ ಅರ್ಹರಾಗುತ್ತಾರಂತೆ. ಹೀಗಾಗಿ ಇಂಗ್ಲಿಷ್ ಮಾಧ್ಯಮವು ವಿಫಲವಾಗಿದೆ. ಆದರೆ ಅದರ ಬಗ್ಗೆ ಸರಿಯಾದ ಚರ್ಚೆ ಆಗುತ್ತಿಲ್ಲ. ಶಿಕ್ಷಣದ ಸಾಫಲ್ಯದ ಮೂಲ ಕಾರಣ ಇಂಗ್ಲಿಷ್ ಮಾಧ್ಯಮ ಅಲ್ಲ. ಪ್ರಾಥಮಿಕ ಶಿಕ್ಷಣದಿಂದ ಮೊದಲ್ಗೊಂಡು ಸಮರ್ಥ ಶಿಕ್ಷಕರಿಂದ ಬೋಧನೆ ನಡೆಯಬೇಕಾಗಿದೆ. ಎಲ್ಲ ಶಾಲೆ-ಕಾಲೇಜುಗಳಲ್ಲಿ ಅಗತ್ಯ ಪ್ರಮಾಣದಲ್ಲಿ ಬೋಧಕರು ಇರಬೇಕು. ಪ್ರಯೋಗಶಾಲೆ, ಗ್ರಂಥಾಲಯ, ಕೊಠಡಿಗಳು, ಪೀಠೋಪಕರಣದಂತಹ ನಾನಾ ಅಂಶಗಳಲ್ಲಿ ಯಾವ ಕೊರತೆಯೂ ಇರಬಾರದು. ಜೊತೆಗೆ ಪೋಷಕರೂ ತಮ್ಮ ಯಥೋಚಿತ ಜವಾಬ್ದಾರಿಯನ್ನು ನಿರ್ವಹಿಸಲೇಬೇಕು. ಎಲ್ಲಕ್ಕಿಂತ ಮಿಗಿಲಾಗಿ ಎಲ್ಲರೂ ಸೇರಿ ಮಕ್ಕಳಲ್ಲಿ ಜ್ಞಾನದ ದಾಹವನ್ನು ಬೆಳೆಸಬೇಕು. ಇಂತಹ ಪೂರಕ ವಾತಾವರಣ ನಿರ್ಮಾಣವಾದರೆ ಕನ್ನಡ ಮಾಧ್ಯಮವು ಇಂಗ್ಲಿಷ್ ಮಾಧ್ಯಮಕ್ಕಿಂತ ಉತ್ತಮ ಫಲವನ್ನು ನೀಡುತ್ತದೆ. ಒಂದು ಭಾಷೆಯಾಗಿ ಇಂಗ್ಲಿಷ್ ಅನ್ನು ಕಲಿಸುವುದನ್ನು ಸಹ ಅಷ್ಟೇ ಜವಾಬ್ದಾರಿಯಿಂದ ಮಾಡಬೇಕಾಗುತ್ತದೆ.

ಶಿಕ್ಷಣದಲ್ಲಿ ಗರಿಷ್ಠ ಅಂಕ ಗಳಿಕೆಗಿಂತ ವಿಷಯ ಜ್ಞಾನ ಚೆನ್ನಾಗಿ ಮನದಟ್ಟಾಗಬೇಕು. ಪಠ್ಯಪುಸ್ತಕಗಳಲ್ಲಿರುವ ವಿಷಯ ಮಕ್ಕಳ ಮನಸ್ಸನ್ನು ಮುಟ್ಟಬೇಕು ಮತ್ತು ತಟ್ಟಬೇಕು ಎಂಬ ಸತ್ಯ ಗೊತ್ತಿರುವವರು ಕನ್ನಡ ಮಾಧ್ಯಮವನ್ನೇ ಆರಿಸುತ್ತಾರೆ. ಆದರೆ ನಮ್ಮ ರಾಜ್ಯದಲ್ಲಿ ಕನ್ನಡ ಮಾಧ್ಯಮ ಶಾಲೆಗಳೇ ಹೆಚ್ಚಿನ ಮಟ್ಟಿಗೆ ಗುಣಮಟ್ಟದಲ್ಲಿ ಕಳಪೆ ದರ್ಜೆಯ ಶಾಲೆಗಳಾಗಿವೆ. ಇವುಗಳನ್ನು ಉತ್ತಮಗೊಳಿಸುವುದು ಸರ್ಕಾರ ಹಾಗೂ ಸಮಾಜದ ಜವಾಬ್ದಾರಿ. ಈ ದೋಷವನ್ನು ಕನ್ನಡ ಮಾಧ್ಯಮದ ಮೇಲೆ ಹಾಕಿರುವುದು ಸಹ ಒಂದು ರೀತಿಯ ಸಂಚೇ ಇರಬೇಕು.

ಮನುಷ್ಯನ ಬದುಕು ಸಾರ್ಥಕವಾಗುವುದು ಅವನು ರಾಶಿ ಹಾಕುವ ದುಡ್ಡಿನಿಂದ ಅಲ್ಲ. ಐಷಾರಾಮಿ ಜೀವನದಿಂದಲ್ಲ. ಕಾರು– ಬಂಗಲೆಗಳಿಂದಲ್ಲ. ಅವನ ಒಳ್ಳೆಯತನದಿಂದ, ಜ್ಞಾನಾರ್ಜನೆಯಿಂದ, ದಕ್ಷತೆಯನ್ನು ಹೆಚ್ಚಿಸಿಕೊಳ್ಳುವುದರಿಂದ, ಪ್ರಾಮಾಣಿಕವಾಗಿ ಬದುಕುವುದರಿಂದ. ಪರೋಪಕಾರ, ಸಮಾಜಸೇವೆ, ನ್ಯಾಯವಾದ ಮತ್ತು ಸತ್ಯವಾದ ರೀತಿಯಲ್ಲಿನ ಕರ್ತವ್ಯಪಾಲನೆಯಿಂದ. ಸತ್ಯ ಹಾಗೂ ಸರಳ ಬದುಕಿನ ಶ್ರೇಷ್ಠತೆಯನ್ನು ಜೀವನಮೌಲ್ಯಗಳೆಂದು ಅರಿತವರು ಕನ್ನಡ ಮಾಧ್ಯಮವನ್ನು ಆರಿಸಿಕೊಳ್ಳಲು ಹೆದರುವುದಿಲ್ಲ. ಆದರೆ ಈ ಆದರ್ಶ ಸಮಾಜದ ನಿರೀಕ್ಷೆ ತಿರುಕನ ಕನಸು. ಆದ್ದರಿಂದ ಎಸ್‌ಎಸ್‌ಎಲ್‌ಸಿವರೆಗೆ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಣವನ್ನು ರಾಷ್ಟ್ರೀಕರಣಗೊಳಿಸುವುದೊಂದೇ ದಾರಿ. ಇಂದಿನ ರಾಜಕೀಯ ವಾತಾವರಣದಲ್ಲಿ ಅದೂ ಗಗನಕುಸುಮವೇ ಆದೀತು!

ವಾಚಕರ ವಾಣಿ

ಸಾಂಸ್ಕೃತಿಕ ಚಟುವಟಿಕೆಗೆ ಇರಲಿ ಪ್ರಾಯೋಗಿಕ ಪ್ರೇರಣೆ

ವಿಜಯಪುರದಲ್ಲಿ ಇತ್ತೀಚೆಗೆ ನಡೆದ 10ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದಲ್ಲಿ ಪ್ರೊ. ಎಚ್.ಟಿ.ಪೋತೆ ಅವರು, ವಿದ್ಯಾರ್ಥಿಗಳು ಸಂವಿಧಾನ ಓದಬೇಕು, ಶಾಲಾ ಕಾಲೇಜುಗಳಲ್ಲಿ ಅಂಬೇಡ್ಕರ್ ಆಶಯ ಬಿಂಬಿಸಬೇಕು ಎಂದು ಪ್ರತಿಪಾದಿಸಿರುವುದು ಸ್ವಾಗತಾರ್ಹ. ಇದರ ಜೊತೆಗೆ 'ಸಂವಿಧಾನ ಓದು, ಧರಿಸು ಅಂಬೇಡ್ಕರ್ ದಿರಿಸು' ಎಂಬ ಪ್ರಾಯೋಗಿಕ ಸಾಂಸ್ಕೃತಿಕ ಚಟುವಟಿಕೆಯನ್ನು ನಡೆಸಲು ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಬೇಕಿದೆ. ಉದಾಹರಣೆಗೆ, ದಲಿತನಲ್ಲದ ನಾನು ಎಲ್.ಹನುಮಂತಯ್ಯ ಅವರ ರಚನೆಯ ನಾಟಕವೊಂದರಲ್ಲಿ ಅಂಬೇಡ್ಕರ್ ಪಾತ್ರ ಮಾಡಿದೆ. ಆಗ ಅಂಬೇಡ್ಕರ್ ಅವರ ಮಾದರಿಯಲ್ಲಿಯೇ ಸೂಟು, ಬೂಟು ತೊಟ್ಟಿದ್ದು ಅಂಬೇಡ್ಕರ್ ಅವರ ವ್ಯಕ್ತಿತ್ವವನ್ನು ಅರಿಯಲು ಹೆಚ್ಚು ನೆರವಾಯಿತು.

ಶೋಷಿತ ವ್ಯಕ್ತಿಯೊಬ್ಬರ ಸ್ವಾಭಿಮಾನ ಬರೀ ಓದಿನ ತಿಳಿವಳಿಕೆಯಲ್ಲಿ ಇರುವುದಿಲ್ಲ, ಬಟ್ಟೆಯೂ ಮುಖ್ಯವಾಗುತ್ತದೆ ಎಂಬುದು ವೇದ್ಯವಾಯಿತು. ಈ ಪರಿಕಲ್ಪನೆಯ ಹಿನ್ನೆಲೆಯಲ್ಲಿ, ಬೆಳೆಯುವ ಮಕ್ಕಳಿಗೆ ಸಾಂಸ್ಕೃತಿಕ ಶಿಕ್ಷಣ ಒದಗಿಸಬೇಕಾಗಿದೆ.

ಆರ್.ವೆಂಕಟರಾಜು, ಬೆಂಗಳೂರು

ಪ್ರಧಾನಿ ಮೌನ: ಏನಿದ್ದೀತು ಚಿದಂಬರ ರಹಸ್ಯ?

ಇಡೀ ದೇಶವನ್ನು ತಲ್ಲಣಗೊಳಿಸಿರುವ ಮಣಿಪುರ ಬೆಳವಣಿಗೆಗಳ ಕುರಿತು ಪ್ರಧಾನಿ ಏಕೆ ಮೌನವಾಗಿದ್ದಾರೆ ಎನ್ನುವುದು ಯಾರಿಗೂ ತಿಳಿಯುತ್ತಿಲ್ಲ! ಅಲ್ಲಿನ ಪರಿಸ್ಥಿತಿಯ ಬಗ್ಗೆ ಪ್ರಧಾನಿ ಸ್ವತಃ ನಿಗಾ ವಹಿಸಿದ್ದಾರೆ ಎಂಬ ಸುದ್ದಿಯು ಮಾಧ್ಯಮದಲ್ಲಿ ಬಂದಿತು. ಆದರೇನು? ಗಾಣಗಿತ್ತಿ ಅಯ್ಯೋ ಎಂದರೆ ನೆತ್ತಿ ತಂಪಾದೀತೇ? ಪ್ರಧಾನಿ ಸದನಕ್ಕೆ ಬರುವುದೇ ಅಪರೂಪ. ಇನ್ನು ಹೇಳಿಕೆಯ ಮಾತೆಲ್ಲಿ? ಇದಕ್ಕೆ ಆಡಳಿತ ಪಕ್ಷದ ಸಮಜಾಯಿಷಿ ಏನು?

ಮಣಿಪುರದಲ್ಲಿನ ಸ್ಥಿತಿ ಬಗ್ಗೆ ಗೃಹ ಸಚಿವರು ಹಾಗೂ ರಕ್ಷಣಾ ಸಚಿವರು ಸದನದಲ್ಲಿ ಮಾತನಾಡಿದರೆ ಪ್ರಧಾನಿ ಮಾತನಾಡಿದಂತೆ ಆದೀತೇ? ಮಣಿಪುರದ ಬೆಳವಣಿಗೆಗಳು ತಾವು ಸದನದಲ್ಲಿ ಹೇಳಿಕೆ ನೀಡಲೇಬೇಕಾದಂಥ ಗಂಭೀರ ಸಮಸ್ಯೆಯನ್ನು ಉಂಟುಮಾಡಿಲ್ಲ ಎಂದು ಪ್ರಧಾನಿ ಭಾವಿಸಿದ್ದಾರೆ ಎಂದು ಅರ್ಥೈಸುವುದು ಸರಿಯಲ್ಲ. ಸಮಸ್ಯೆಯ ತೀವ್ರತೆ ಪ್ರಧಾನಿಗೆ ಗೊತ್ತಿಲ್ಲವೆಂದಲ್ಲ. ಆ ಕುರಿತು ಅವರಿಗೆ ಆತಂಕವಿಲ್ಲ ಎಂದೂ ಅಲ್ಲ. ಆದರೂ ಅವರು ವಹಿಸಿರುವ ಮೌನದ ಹಿಂದಿನ ಚಿದಂಬರ ರಹಸ್ಯ ಏನೋ!

ಸಾಮಗ ದತ್ತಾತ್ರಿ, ಬೆಂಗಳೂರು

ಮುಂದುವರಿಯಲಿ ರೈತ ವಿದ್ಯಾನಿಧಿ ಯೋಜನೆ

ಬಿಜೆಪಿ ನೇತೃತ್ವದ ಈ ಹಿಂದಿನ ರಾಜ್ಯ ಸರ್ಕಾರ ರೈತರ ಮಕ್ಕಳ ವ್ಯಾಸಂಗಕ್ಕೆ ಅನುಕೂಲವಾಗುವಂತೆ ಜಾರಿಗೆ ತಂದಿದ್ದ ಬಹು ಮಹತ್ವಾಕಾಂಕ್ಷೆಯ 'ಮುಖ್ಯಮಂತ್ರಿ ರೈತ ವಿದ್ಯಾನಿಧಿ' ಯೋಜನೆಯನ್ನು ಈಗಿನ ಸರ್ಕಾರ ಯಾವುದೇ ಕಾರಣಕ್ಕೂ ನಿಲ್ಲಿಸಬಾರದು. ಕೃಷಿಯಲ್ಲಿ ಹೆಚ್ಚಾಗಿ ಸಂಕಷ್ಟವನ್ನೇ ಎದುರಿಸುತ್ತಿರುವ ರೈತರ ಮಕ್ಕಳ ವಿದ್ಯಾಭ್ಯಾಸಕ್ಕೆ ಈ ಯೋಜನೆಯಿಂದ ನೆರವಾಗುತ್ತದೆ. ಹೀಗಾಗಿ, ಸರ್ಕಾರವು ಸದರಿ ಯೋಜನೆಯನ್ನು ಮುಂದುವರಿಸಬೇಕು.

ಯಲುವಹಳ್ಳಿ ಸೊಣ್ಣೇಗೌಡ, ಚಿಕ್ಕಬಳ್ಳಾಪುರ

ಘೋಷಣೆಯನ್ನು ನೋಡುವ ಸೀಳುನೋಟ ಇರಲಿ

'ಎನ್‌ಡಿಎಯ ಮುಂದಿನ ಅಧಿಕಾರಾವಧಿಯಲ್ಲಿ ಭಾರತವು ಜಗತ್ತಿನ ಅತಿ ದೊಡ್ಡ ಆರ್ಥಿಕತೆಗಳಲ್ಲಿ ಮೂರನೇ ಸ್ಥಾನ ತಲುಪುವುದು. ಇದಕ್ಕೆ ನಾನೇ ಗ್ಯಾರಂಟಿ' ಎಂಬುದು ಪ್ರಧಾನಿಯವರ ಇತ್ತೀಚಿನ ಘೋಷಣೆ. ಅವರ ಸಂಪುಟದ ಸಹೋದ್ಯೋಗಿಗಳು ಇದನ್ನೇ ಪುನರುಚ್ಚರಿಸತೊಡಗಿದ್ದಾರೆ. ಜಪಾನ್, ಜರ್ಮನಿಯನ್ನು ಹಿಂದಿಕ್ಕುತ್ತೇವೆ ಎಂಬ ಒಗ್ಗರಣೆ ಬೇರೆ. ಅಂಕಿಅಂಶಗಳ ಬಗ್ಗೆ ಅಷ್ಟಾಗಿ ನಂಬಿಕೆ ಇಲ್ಲದಿರುವವರೂ ಒಪ್ಪಬಹುದಾದ ಅಂಶ- ಆ ಎಣಿಕೆ ಸಾಕಾರವಾಗಲು ಶೇ 10ರ ಅಭಿವೃದ್ಧಿ ದರವು ಸತತವಾಗಿ ಸಾಧಿತವಾಗಬೇಕು. 2024ರ ಅಂದಾಜು ಗರಿಷ್ಠ ಶೇ 6.3. ಎರಡು ಬ್ಯಾಂಕ್‌ಗಳ (ಎಸ್‌ಬಿಐ, ಸ್ಟ್ಯಾನ್‌ಚಾರ್ಟ್) ವರದಿಗಳು 2028, 2030ರ ಸಂಭಾವ್ಯ ಸ್ಥಿತಿಯನ್ನು ನೀಡಿವೆ. ಆದರೆ ಅತಿ ಮುಖ್ಯ ಅಗತ್ಯವೆಂದರೆ ಉದ್ಯೋಗ ಸೃಷ್ಟಿಯ ಪ್ರಮಾಣ ಏರಬೇಕಾಗಿರುವುದು.

ತಲಾ ಆದಾಯ ಶೇ 70ರಷ್ಟು ಹೆಚ್ಚುವುದು, ಭಾರತದ್ದು ಜಾಗತಿಕ ಜಿಡಿಪಿಯ ಶೇ 4ರಷ್ಟಾಗುವುದು ಎಂಬ ಭವಿಷ್ಯ ನುಡಿಗಳು ನಿಜವಾಗಬೇಕಾದರೆ, ಬಹುಸಂಖ್ಯಾತರ ಆದಾಯದಲ್ಲಿ ಹೆಚ್ಚಳ ಕಾಣಬೇಕು. ಹಣಕಾಸು ಸಚಿವರು ಹೇಳಿರುವ ನಾಲ್ಕು 'ಐ' ಗಳಲ್ಲಿ ಒಂದು 'ಐ' (ಇನ್‌ಕ್ಲೂಸಿವಿಟಿ– ಎಲ್ಲರನ್ನೂ ಒಳಗೊಳ್ಳುವಿಕೆ) ದುರ್ಬಲವಾಗಿದೆ. ರಫ್ತು ಯಾವ ವಸ್ತುಗಳದ್ದು, ಕೌಟುಂಬಿಕ ಖರ್ಚು ಯಾರದು ಏರಬೇಕು ಎಂಬ ಸೀಳುನೋಟ ಇರದಿದ್ದರೆ ಇದೆಲ್ಲ ಮಾತಿನ ಮೇಲಾಟ ಆದೀತು. 'ಗ್ಯಾರಂಟಿ' ಡೈಲಾಗ್ ಕರ್ನಾಟಕದಲ್ಲಿ ನಡೆಯಿತೆಂದು ಇತರ ರಾಜ್ಯ, ಇಡೀ ದೇಶದಲ್ಲಿ ಪ್ರಯೋಗಿಸುವ ಇರಾದೆ ಕಾಣುತ್ತಿದೆ ಅಷ್ಟೇ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಬೆಲೆ ಏರಿಕೆ: ರೈತಹಿತದ ಸೋಗಿನಲ್ಲಿ ಗ್ರಾಹಕನಿಗೆ ಬರೆ

ಸರ್ಕಾರವು ರೈತಹಿತದ ನೆಪ ಹೇಳಿಕೊಂಡು ಲೀಟರಿಗೆ ₹ 3ರಂತೆ ನಂದಿನಿ ಹಾಲಿನ ಬೆಲೆ ಏರಿಸಿದೆ. ನಾನು ಕೂಡ ಕರಾವು ಕೊಡುವ ಹಸು, ಎಮ್ಮೆಗಳನ್ನು ಸಾಕಿದ್ದ ಕುಟುಂಬದಿಂದಲೇ ಬಂದಿರುವವನು. ಹೈನುಗಾರಿಕೆಯನ್ನೇ ಆದಾಯದ ಮುಖ್ಯ ಮೂಲವಾಗಿ ನಂಬಿಕೊಂಡಿರುವ ನೂರಾರು ಜನರನ್ನು ಬಲ್ಲೆ. ತಮಗೆ ಕೊಡುತ್ತಿರುವ ಹಾಲಿನ ದರದ ಬಗ್ಗೆ ಅವರಿಗೆಲ್ಲ ತೃಪ್ತಿ, ಸಮಾಧಾನ ಇರುವುದು ಅವರನ್ನು ಮಾತನಾಡಿಸಿದಾಗ ತಿಳಿದುಬರುತ್ತದೆ. ಆದರೂ 'ನಂದಿನಿ'ಯನ್ನು ತಮ್ಮ ರಾಜಕೀಯ ಚಿಮ್ಮುಹಲಗೆಯಾಗಿ ಮಾಡಿಕೊಂಡಿರುವ ರಾಜಕಾರಣಿಗಳೆಲ್ಲ, 'ಈಗ ಕೊಡುತ್ತಿರುವ ಬೆಲೆಯಿಂದ ರೈತರಿಗೆ ನಷ್ಟವಾಗುತ್ತಿದೆ' ಎನ್ನುವ ಸಿದ್ಧ ಕಾರಣ ಮುಂದೊಡ್ಡಿ ಆಗಿಂದಾಗ್ಗೆ ಬೆಲೆ ಏರಿಸಿಬಿಡುತ್ತಾರೆ. ರೈತರ ಹಿತ, ಬೆಳೆಗಾರರ ಹಿತ, ಕಾರ್ಮಿಕರ ಹಿತ, ಉದ್ಯೋಗಿಗಳ ಹಿತ ಎಂದೆಲ್ಲ ಹೇಳಿಬಿಡುವುದು ಈಗ ಜಾಣತನದ ಹಾಗೂ ಭಾವುಕ ಹತಾರವಾಗಿದೆ.

ಹೈನು ನೆಚ್ಚಿಕೊಂಡಿರುವ ರೈತರಿಗೆ ಈಗ ನಿಜಕ್ಕೂ ನಷ್ಟವಾಗುತ್ತಿಲ್ಲ. ಆದರೆ ಅವರ ಹೆಸರಿನಲ್ಲಿ ಗ್ರಾಹಕರಿಗೆ ಬರೆ ಬೀಳುತ್ತಿದೆ. ರೈತರ ಹಿತದಷ್ಟೇ ಗ್ರಾಹಕರ ಹಿತವೂ ಮುಖ್ಯವಲ್ಲವೇ?

ಬಿ.ಎಸ್.ಜಯಪ್ರಕಾಶ ನಾರಾಯಣ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದೇಶದಲ್ಲಿನ ಹುಲಿಗಳ ಸಂಖ್ಯೆಯಲ್ಲಿ ಏರಿಕೆಯಾಗಿದೆ ಎಂಬುದನ್ನು 2022ನೇ ಸಾಲಿನ ಹುಲಿ ಸ್ಥಿತಿಗತಿ ವರದಿ ಹೇಳುತ್ತದೆ. ದೇಶದ ಕೆಲವೇ ರಾಜ್ಯಗಳಲ್ಲಿ ಹುಲಿಗಳ ಸಂಖ್ಯೆ ಏರಿಕೆಯಾಗಿದ್ದರೆ, ಹಲವು ರಾಜ್ಯಗಳಲ್ಲಿ ಹುಲಿಗಳ ಸಂಖ್ಯೆ ಇಳಿಕೆಯಾಗಿದೆ. ಮಧ್ಯಪ್ರದೇಶ ಮತ್ತು ಉತ್ತರಾಖಂಡದಲ್ಲಿ ಹುಲಿಗಳ ಸಂಖ್ಯೆಯಲ್ಲಿ ಭಾರಿ ಪ್ರಮಾಣದ ಏರಿಕೆಯಾಗಿದ್ದರೆ, ಕರ್ನಾಟಕದಲ್ಲಿ ಹುಲಿಗಳ ಸಂಖ್ಯೆ ಸ್ವಲ್ಪ ಏರಿಕೆಯಾಗಿದೆ. ಒಡಿಶಾ, ತೆಲಂಗಾಣ, ಜಾರ್ಖಂಡ್, ಛತ್ತೀಸಗಢದಲ್ಲಿ ಹುಲಿಗಳ ಸಂಖ್ಯೆ ಕಡಿಮೆಯಾಗಿದೆ. ಹೀಗೆ ಪ್ರತಿ ರಾಜ್ಯದಲ್ಲೂ ಹುಲಿಗಳ ಸ್ಥಿತಿಗತಿ ಸಂಪೂರ್ಣ ಭಿನ್ನವಾಗಿದೆ.

ಕೇಂದ್ರ ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ವಿಶ್ವ ಹುಲಿ ದಿನದಂದು (ಜುಲೈ 28) ಬಿಡುಗಡೆ ಮಾಡಿದ ಹುಲಿ ಸ್ಥಿತಿಗತಿ ವರದಿಯಲ್ಲಿ ಈ ಮಾಹಿತಿ ಇದೆ. ದೇಶದಲ್ಲಿನ ಹುಲಿಗಳ ಅಂದಾಜು ಸಂಖ್ಯೆ 2,967ರಿಂದ (2018) 2022ರ ವೇಳೆಗೆ 3,682ಕ್ಕೆ ಏರಿಕೆಯಾಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ. ಹೀಗಿದ್ದೂ ಕೆಲವೆಡೆ ಹುಲಿಗಳ ಸಂಖ್ಯೆ ಏರಿಕೆಯಾಗಿದ್ದು ಏಕೆ ಮತ್ತು ಕೆಲವೆಡೆ ಹುಲಿಗಳ ಸಂಖ್ಯೆ ಕಡಿಮೆಯಾಗಿದ್ದು ಏಕೆ ಎಂಬುದನ್ನು ವಿವರಿಸಲು ವರದಿಯಲ್ಲಿ ಯತ್ನಿಸಲಾಗಿದೆ.

ಹುಲಿ ಸಂಖ್ಯೆ ಏರಿಕೆ–ಇಳಿಕೆಯ ಸುತ್ತ

ಮಧ್ಯಪ್ರದೇಶ

ವರ್ಷ	ಹುಲಿಗಳ ಸಂಖ್ಯೆ
2014	308
2018	526
2022	785

ಮಧ್ಯಪ್ರದೇಶವು ಈಗ ದೇಶದಲ್ಲೇ ಅತಿಹೆಚ್ಚು ಹುಲಿಗಳಿರುವ ರಾಜ್ಯ ಎನಿಸಿದೆ. 2014ಕ್ಕೆ ಹೋಲಿಸಿದರೆ 2022ರ ವೇಳೆಗೆ ರಾಜ್ಯದಲ್ಲಿನ ಹುಲಿಗಳ ಸಂಖ್ಯೆ ದುಪ್ಪಟ್ಟಿಗಿಂತಲೂ ಹೆಚ್ಚು ಏರಿಕೆಯಾಗಿದೆ. ಪ್ರತಿ ನಾಲ್ಕು ವರ್ಷಗಳಿಗೆ ಒಮ್ಮೆ ಹುಲಿಗಳ ಸಂಖ್ಯೆಯಲ್ಲಿ 200ಕ್ಕಿಂತಲೂ ಹೆಚ್ಚು ಏರಿಕೆ ಕಂಡುಬಂದಿದೆ. ಈ ಏರಿಕೆ ಪ್ರಮಾಣದಲ್ಲಿ ಮಧ್ಯಪ್ರದೇಶವು ಸ್ಥಿರತೆ ಕಾಯ್ದುಕೊಂಡಿದೆ.

- ರಾಜ್ಯದಲ್ಲಿ ಹುಲಿ ಸಂರಕ್ಷಣೆಗೆ ಆದ್ಯತೆ ನೀಡಲಾಗುತ್ತಿದೆ ಮತ್ತು ಹುಲಿ ಸಂರಕ್ಷಣಾ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲಾಗುತ್ತಿದೆ. ಈ ಕಾರಣದಿಂದಲೇ ಹುಲಿಗಳ ಸಂಖ್ಯೆ ಏರಿಕೆಯಾಗಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ
- ರಾಜ್ಯದಲ್ಲಿ ಹುಲಿ ಆವಾಸಸ್ಥಾನಗಳು, ಹುಲಿ ಸಂರಕ್ಷಿತ ಪ್ರದೇಶಗಳ ಮಧ್ಯೆ ವನ್ಯಜೀವಿ ಕಾರಿಡಾರ್‌ಗಳನ್ನು ಕಾಯ್ದುಕೊಳ್ಳಲಾಗಿದೆ. ಇದರಿಂದ ಹುಲಿಗಳು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸಂಚರಿಸಲು ಮತ್ತು ವಲಸೆ ಹೋಗುವಲ್ಲಿ ಯಾವುದೇ ತೊಡಕುಗಳಿಲ್ಲ. ಹೀಗಾಗಿ ಹುಲಿಗಳು ರಾಜ್ಯದ ಹಲವು ಪ್ರದೇಶಗಳಿಗೆ ತಮ್ಮ ಆವಾಸಸ್ಥಾನವನ್ನು ವಿಸ್ತರಿಸಿಕೊಳ್ಳುತ್ತಿವೆ ಎಂದು ವರದಿಯಲ್ಲಿ ವಿವರಿಸಲಾಗಿದೆ
- ರಾಜ್ಯದ ಹುಲಿ ಸಂರಕ್ಷಿತ ಪ್ರದೇಶ, ಅವುಗಳ ಹೊರವಲಯದಲ್ಲಿ ಇರುವ ಜನವಸತಿ ಪ್ರದೇಶಗಳನ್ನು ತೆರವು ಮಾಡಲಾಗುತ್ತಿದೆ. ಆ ಜನರಿಗೆ ಪುನರ್ವಸತಿ ಕಲ್ಪಿಸಲಾಗುತ್ತಿದೆ. ಇದರಿಂದ ಹುಲಿ–ಮಾನವ ಸಂಘರ್ಷವನ್ನು ತಡೆಹಿಡಿಯಲು ಸಾಧ್ಯವಾಗಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ

ಉತ್ತರಾಖಂಡ

ವರ್ಷ	ಹುಲಿಗಳ ಸಂಖ್ಯೆ
2014	340
2018	442
2022	560

2018ರಿಂದ 2022ರ ಮಧ್ಯೆ ಹುಲಿ ಸಂಖ್ಯೆಯಲ್ಲಿ ಭಾರಿ ಪ್ರಮಾಣದ ಏರಿಕೆ ಕಂಡ ರಾಜ್ಯಗಳಲ್ಲಿ ಉತ್ತರಾಖಂಡವೂ ಒಂದು. ಈ ಅವಧಿಯಲ್ಲಿ ರಾಜ್ಯದಲ್ಲಿನ ಹುಲಿಗಳ ಸಂಖ್ಯೆಯು 118ರಷ್ಟು ಏರಿಕೆ ಕಂಡಿವೆ. ಈಗ ಅಂದಾಜು 560 ಹುಲಿಗಳಿರುವ ಉತ್ತರಾಖಂಡವು, ಅತಿಹೆಚ್ಚು ಹುಲಿಗಳಿರುವ ರಾಜ್ಯಗಳಲ್ಲಿ ಮೂರನೇ ಸ್ಥಾನದಲ್ಲಿದೆ. ಅತಿಹೆಚ್ಚು ಹುಲಿಗಳಿರುವ ಕರ್ನಾಟಕಕ್ಕಿಂತ ಉತ್ತರಾಖಂಡದಲ್ಲಿ 3 ಹುಲಿಗಳಷ್ಟೇ ಕಡಿಮೆ ಇವೆ ಎಂದು ಅಂದಾಜಿಸಲಾಗಿದೆ.

- ಉತ್ತರಾಖಂಡದ ಕೆಲವು ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಪ್ರತಿ 100 ಚದರ ಕಿ.ಮೀ.ಗಳಲ್ಲಿ ಇರುವ ಹುಲಿ ಸಾಂದ್ರತೆ 15ರಷ್ಟಿದೆ. ಇದು ದೇಶದಲ್ಲಿಯೇ ಹೆಚ್ಚು
- ರಾಜ್ಯದಲ್ಲಿ ಹುಲಿ ಸಂರಕ್ಷಿತ ಪ್ರದೇಶಗಳು ಮತ್ತು ಹುಲಿ ಆವಾಸಸ್ಥಾನಗಳ ನಡುವಣ ವನ್ಯಜೀವಿ ಕಾರಿಡಾರ್‌ಗಳನ್ನು ಉತ್ಕೃಷ್ಟಮಟ್ಟದಲ್ಲಿ ಸಂರಕ್ಷಿಸಲಾಗಿದೆ. ಇದರಿಂದ ಹುಲಿಗಳ ಸಂಚಾರ ಮತ್ತು ವಲಸೆಗೆ ಅಡೆತಡೆಗಳು ಇಲ್ಲ. ಇದೂ ಹುಲಿಗಳ ಸಂಖ್ಯೆ ಏರಿಕೆಯಾಗಲು ಕಾರಣವಾಗಿದೆ
- ಹುಲಿ ಆವಾಸಸ್ಥಾನದಲ್ಲಿ ಮಾನವ ಚಟುವಟಿಕೆಗಳನ್ನು ಗಣನೀಯ ಪ್ರಮಾಣದಲ್ಲಿ ಕಡಿಮೆ ಮಾಡಲಾಗಿದೆ. ಇದರಿಂದ ಈ ಪ್ರದೇಶಗಳಲ್ಲಿ ಬಲಿ ಪ್ರಾಣಿಗಳ ಸಾಂದ್ರತೆ ಹೆಚ್ಚಾಗಿದೆ. ಪರಿಣಾಮವಾಗಿ ಹುಲಿಗಳ ಸಂಖ್ಯೆಯೂ ಹೆಚ್ಚಾಗಿದೆ
- ಯೋಜಿತವಲ್ಲದ ನಗರಾಭಿವೃದ್ಧಿಯನ್ನು ತಡೆಗಟ್ಟಿದರೆ ರಾಜ್ಯದಲ್ಲಿನ ಹುಲಿಗಳ ಸಂಖ್ಯೆ ಇನ್ನಷ್ಟು ಹೆಚ್ಚಾಗಲಿದೆ



ರಾಜಸ್ಥಾನ, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಬಿಹಾರ, ತಮಿಳುನಾಡು, ಅಸ್ಸಾಂ, ಕೇರಳ, ಗೋವಾದಲ್ಲಿ ಹುಲಿಗಳ ಸಂಖ್ಯೆಯಲ್ಲಿ ಏರಿಕೆಯಾಗಿದೆ. ಹುಲಿ ಸಂಖ್ಯೆ ಏರಿಕೆಯಲ್ಲಿ ಈ ರಾಜ್ಯಗಳು ಸ್ಥಿರತೆ ಕಾಯ್ದುಕೊಂಡಿವೆ

ಮಹಾರಾಷ್ಟ್ರ

ವರ್ಷ	ಹುಲಿಗಳ ಸಂಖ್ಯೆ
2014	190
2018	312
2022	444

ಈ ನಾಲ್ಕು ವರ್ಷಗಳ ಅವಧಿಯಲ್ಲಿ ಹುಲಿಗಳ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿರುವ ರಾಜ್ಯಗಳಲ್ಲಿ ಮಹಾರಾಷ್ಟ್ರವೂ ಒಂದು. 2018ರಿಂದ 2022ರ ಮಧ್ಯೆ ಮಹಾರಾಷ್ಟ್ರದಲ್ಲಿ ಹುಲಿಗಳ ಸಂಖ್ಯೆಯಲ್ಲಿ 132ರಷ್ಟು ಏರಿಕೆಯಾಗಿದೆ. ಹುಲಿಗಳ ಸಂಖ್ಯೆಯಲ್ಲಿನ ಏರಿಕೆಯಲ್ಲಿ ಮಹಾರಾಷ್ಟ್ರ ಸ್ಥಿರತೆ ಕಾಯ್ದುಕೊಂಡಿದೆ. ಯೋಜಿತವಲ್ಲದ ಅಭಿವೃದ್ಧಿ ಚಟುವಟಿಕೆಗಳು, ಅರಣ್ಯ ಪ್ರದೇಶದಲ್ಲಿ ಹೆದ್ದಾರಿ, ವಿದ್ಯುತ್‌ಲೇನ್, ಗಣಿಗಾರಿಕೆಯನ್ನು ನಿಯಂತ್ರಿಸಿದರೆ ಮತ್ತು ಅರಣ್ಯ ಪ್ರದೇಶಗಳಲ್ಲಿನ ಜನವಸತಿಗಳ ತೆರವು ಮಾಡಿದರೆ ಹುಲಿಗಳ ಸಂಖ್ಯೆ ಇನ್ನಷ್ಟು ಏರಿಕೆಯಾಗಲಿದೆ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

ಕರ್ನಾಟಕ

ವರ್ಷ	ಹುಲಿಗಳ ಸಂಖ್ಯೆ
2010	300
2014	406
2018	524
2022	563

ಅತಿಹೆಚ್ಚು ಹುಲಿಗಳಿರುವ ರಾಜ್ಯಗಳಲ್ಲಿ ಎರಡನೇ ಸ್ಥಾನದಲ್ಲಿರುವ ಕರ್ನಾಟಕವು, ಹುಲಿಗಳ ಸಂಖ್ಯೆಯಲ್ಲಿನ ಏರಿಕೆಯಲ್ಲಿ ತೀರಾ ದೊಡ್ಡಮಟ್ಟದ ಪ್ರಗತಿಯನ್ನು ಸಾಧಿಸಿಲ್ಲ. ಹುಲಿಗಳ ಸಂಖ್ಯೆ ಏರಿಕೆಯಲ್ಲಿ ಕರ್ನಾಟಕವು ಸ್ಥಿರತೆ ಕಾಯ್ದುಕೊಂಡಿಲ್ಲ ಎಂಬುದರತ್ತ ಹುಲಿಗಣತಿ ವರದಿಗಳ ದತ್ತಾಂಶಗಳು ಬೊಟ್ಟು ಮಾಡುತ್ತವೆ

- ರಾಜ್ಯದಲ್ಲಿ 2014ರಲ್ಲಿ 406 ಹುಲಿಗಳಿದ್ದವು ಎಂದು ಅಂದಾಜಿಸಲಾಗಿತ್ತು. 2018ರ ವೇಳೆಗೆ, ನಾಲ್ಕು ವರ್ಷಗಳಲ್ಲಿ ಹುಲಿಗಳ ಸಂಖ್ಯೆಯಲ್ಲಿ 118ರಷ್ಟು ಏರಿಕೆ ಕಂಡುಬಂದಿತ್ತು. 2010ಕ್ಕೆ ಹೋಲಿಸಿದರೆ 2014ರಲ್ಲಿ ಹುಲಿಗಳ ಸಂಖ್ಯೆಯಲ್ಲಿ 106ರಷ್ಟು ಏರಿಕೆಯಾಗಿತ್ತು
- 2010–2018ರ ಮಧ್ಯೆ ಹುಲಿಗಳ ಸಂಖ್ಯೆಯ ಏರಿಕೆಯಲ್ಲಿ ಸಾಧ್ಯವಾಗಿದ್ದ ಪ್ರಗತಿಯನ್ನು, 2018–2022ರ ಅವಧಿಯಲ್ಲಿ ಕಾಯ್ದುಕೊಳ್ಳುವಲ್ಲಿ ಕರ್ನಾಟಕ ವಿಫಲವಾಗಿದೆ. ಹುಲಿಗಳ ಸಂಖ್ಯೆಯಲ್ಲಿ ಏರಿಕೆಯಾಗಿದ್ದರೂ, ನಾಲ್ಕು ವರ್ಷಗಳಲ್ಲಿ ಹುಲಿಗಳ ಸಂಖ್ಯೆ ಹೆಚ್ಚಾಗಿದ್ದು 39 ಮಾತ್ರ
- ಹುಲಿ ಸಂರಕ್ಷಿತ ಪ್ರದೇಶಗಳ ನಡುವಣ ವನ್ಯಜೀವಿ ಕಾರಿಡಾರ್‌ಗಳನ್ನು ಕಾಯ್ದುಕೊಳ್ಳದೇ ಇರುವುದು, ಹುಲಿ ಸಂರಕ್ಷಿತ ಪ್ರದೇಶಗಳನ್ನು ಹಾದುಹೋಗುವ ಹೆದ್ದಾರಿಗಳ ವಿಸ್ತರಣೆ, ಹುಲಿ ಸಂರಕ್ಷಿತ ಪ್ರದೇಶಗಳ ಸುತ್ತಲಿನ ಪ್ರದೇಶಗಳಲ್ಲಿ ಅನಿಯಂತ್ರಿತ ಅಭಿವೃದ್ಧಿ ಚಟುವಟಿಕೆಗಳು ಹುಲಿಗಳ ಸಂಖ್ಯೆ ಏರಿಕೆಗೆ ತಡೆಯಾಗಿದೆ ಎಂದು ವರದಿಯಲ್ಲಿ ಕಳವಳ ವ್ಯಕ್ತಪಡಿಸಲಾಗಿದೆ

ತೆಲಂಗಾಣ — 26;2018 21;2022
- ಅಭಿವೃದ್ಧಿ ಚಟುವಟಿಕೆಗಳ ಕಾರಣದಿಂದ ಹುಲಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಪಕ್ಕದ ಮಹಾರಾಷ್ಟ್ರದತ್ತ ಹುಲಿಗಳು ವಲಸೆ ಹೋಗಿರುವ ಸಾಧ್ಯತೆ ಇದೆ

ಛತ್ತೀಸಗಢ — 19;2018 17;2022
- ಅಭಿವೃದ್ಧಿ ಚಟುವಟಿಕೆಗಳ ಕಾರಣದಿಂದ ಹುಲಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಪಕ್ಕದ ಮಹಾರಾಷ್ಟ್ರ, ಮಧ್ಯಪ್ರದೇಶದತ್ತ ಹುಲಿಗಳು ವಲಸೆ ಹೋಗಿರುವ ಸಾಧ್ಯತೆ ಇದೆ

ಜಾರ್ಖಂಡ್ — 5;2018 1;2022
- ಜಾರ್ಖಂಡ್‌ನಲ್ಲಿ ಹುಲಿ ಆವಾಸಸ್ಥಾನ ವಿಸ್ತೃತವಾಗಿದ್ದರೂ, ಅತಿಯಾದ ಅಭಿವೃದ್ಧಿ ಚಟುವಟಿಕೆಗಳ ಕಾರಣದಿಂದ ಹುಲಿಗಳ ಸಂಖ್ಯೆ ಅಪಾಯಕಾರಿ ಮಟ್ಟಕ್ಕೆ ಇಳಿಕೆಯಾಗಿದೆ. ಅಗತ್ಯ ಕ್ರಮ ತೆಗೆದುಕೊಳ್ಳದೇ ಇದ್ದರೆ, ರಾಜ್ಯದಲ್ಲಿ ಹುಲಿಗಳೇ ಇಲ್ಲದಂತಾಗುತ್ತದೆ ಎಂದು ವರದಿಯಲ್ಲಿ ಕಳವಳ ವ್ಯಕ್ತಪಡಿಸಲಾಗಿದೆ

ಒಡಿಶಾ — 28;2018 21;2022
- ಅಭಿವೃದ್ಧಿ ಚಟುವಟಿಕೆಗಳ ಕಾರಣದಿಂದ ಹುಲಿಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗುತ್ತಿದೆ. ಪಕ್ಕದ ಮಧ್ಯಪ್ರದೇಶದತ್ತ ಹುಲಿಗಳು ವಲಸೆ ಹೋಗಿರುವ ಸಾಧ್ಯತೆ ಇದೆ

ಆಧಾರ: ಹುಲಿಗಳ ಸ್ಥಿತಿಗತಿ ವರದಿ–2022 ಪ್ರಜಾವಾಣಿ ಗ್ರಾಫಿಕ್ಸ್

‘ಫೀನಿಕ್ಸ್’ ಹಿಂದೆ ಬಿದ್ದ ಓಂಪ್ರಕಾಶ್ ರಾವ್

ನಿಮಿಕಾ ರತ್ನಾಕರ್

‘ಲಾಕಪ್ ಡೆತ್’, ‘ಎ.ಕೆ–47’ ನಂತಹ ಚಿತ್ರಗಳನ್ನು ನೀಡಿದ್ದ ಹಿರಿಯ ನಿರ್ದೇಶಕ ಓಂಪ್ರಕಾಶ್ ರಾವ್ ಈಗ ‘ಫೀನಿಕ್ಸ್’ ಹಿಂದೆ ಬಿದ್ದಿದ್ದಾರೆ. ಇದೊಂದು ಮಹಿಳಾ ಪ್ರಧಾನ ಚಿತ್ರವಾಗಿದ್ದು, ಮೂವರು ನಾಯಕಿಯರ ಕಥೆ ಎಂದಿದೆ ಚಿತ್ರತಂಡ.

ಶ್ರೀಗುರು ಚಿತ್ರಾಲಯದ ಲಾಂಛನದಲ್ಲಿ ತ್ರಿಶಾ ಪ್ರಕಾಶ್ ನಿರ್ಮಾಣ ಮಾಡುತ್ತಿರುವ ಚಿತ್ರದ ಚಿತ್ರೀಕರಣ ಇದೇ ತಿಂಗಳಿನಿಂದ ಆರಂಭವಾಗಲಿದೆಯಂತೆ. ‘ನನ್ನ ನಿರ್ದೇಶನದ 49ನೇ ಚಿತ್ರ. ಆ್ಯಕ್ಷನ್, ಥ್ರಿಲ್ಲರ್ ಕಥಾಹಂದರ ಹೊಂದಿದೆ. ಕಮರ್ಷಿಯಲ್ ಚಿತ್ರವೊಂದಕ್ಕೆ ಬೇಕಾದ ಎಲ್ಲಾ ಅಂಶಗಳು ಈ ಚಿತ್ರದಲ್ಲಿವೆ’ ಎಂದು ಓಂಪ್ರಕಾಶ್ ರಾವ್ ಹೇಳಿದ್ದಾರೆ.

‘ಶೇಕ್ ಇಟ್ ಪುಷ್ಪವತಿ’ ಖ್ಯಾತಿಯ ನಟಿ ನಿಮಿಕಾ ರತ್ನಾಕರ್, ಶಿಲ್ಪ ಶೆಟ್ಟಿ ಹಾಗೂ ಕೃತಿಕಾ ಲೋಬೊ ಈ ಮೂವರೂ ನಾಯಕಿಯರು. ಜಗದೀಶ್, ಭಾಸ್ಕರ್ ಶೆಟ್ಟಿ ಮತ್ತು ಪ್ರತಾಪ್ ನಾಯಕರಾಗಿ ಕಾಣಿಸಿಕೊಳ್ಳಲಿದ್ದಾರೆ. ಬೆಂಗಳೂರು, ಜರ್ಮನ್ ಹಾಗೂ ಆಸ್ಟ್ರಿಯಾದಲ್ಲಿ ಚಿತ್ರೀಕರಣ ನಡೆಯಲಿದೆ ಎಂದು ಚಿತ್ರತಂಡ ಹೇಳಿದೆ.

ಸಾಧುಕೋಕಿಲ ಸಂಗೀತ ನಿರ್ದೇಶನ, ರವಿಕುಮಾರ್ ಛಾಯಾಗ್ರಹಣ, ಲಕ್ಷ್ಮಣ್ ರೆಡ್ಡಿ ಸಂಕಲನ ಚಿತ್ರಕ್ಕಿದೆ.

ಮಹಿಳಾ ಪ್ರಧಾನ ಚಿತ್ರ ‘ಶೀಲ’

ನಟಿ ರಾಗಿಣಿ ದ್ವಿವೇದಿ ನಟನೆಯ ಶೀಲ ಸಿನಿಮಾ ಆಗಸ್ಟ್ 4ರಂದು ಬಿಡುಗಡೆಯಾಗಲಿದೆ. ನಟಿ ಪ್ರಿಯಾಂಕಾ ಉಪೇಂದ್ರ ಇತ್ತೀಚೆಗೆ ಸಿನಿಮಾದ ಟ್ರೈಲರ್ ಬಿಡುಗಡೆಗೊಳಿಸಿದರು.

ಈ ಸಿನಿಮಾ ಕನ್ನಡ ಹಾಗೂ ಮಲಯಾಳಂನಲ್ಲಿ ನಿರ್ಮಾಣವಾಗಿದೆ. ಮಲಯಾಳಂನಲ್ಲಿ ಈಗಾಗಲೇ ಸಿನಿಮಾ ಬಿಡುಗಡೆಯಾಗಿದೆ. ‘ಇದೊಂದು ಮಹಿಳಾ ಪ್ರಧಾನ ಚಿತ್ರವಾಗಿದ್ದು, ಹೆಣ್ಣುಮಕ್ಕಳು ದಿನನಿತ್ಯ ಸಮಾಜದಲ್ಲಿ ಎದುರಿಸುತ್ತಿರುವ ಹಲವು ಸಮಸ್ಯೆಗಳ ಸುತ್ತ ಈ ಚಿತ್ರದ ಕಥೆ ಹೆಣೆಯಲಾಗಿದೆ. ಹೆಣ್ಣು ಮನಸ್ಸು ಮಾಡಿದರೆ, ತನಗೆದುರಾಗುವ ಸಮಸ್ಯೆಯನ್ನು ತಾನೇ ಹೇಗೆ ಬಗೆಹರಿಸಿಕೊಳ್ಳಬಹುದು ಎಂಬುದನ್ನು ಕೂಡ ಈ ಚಿತ್ರದಲ್ಲಿ ತೋರಿಸಿದ್ದೇವೆ. ಆಗಸ್ಟ್ 4 ರಂದು ಚಿತ್ರವು ರಾಜ್ಯದ 100ಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿದೆ’ ಎಂದರು ರಾಗಿಣಿ.

ಚಿತ್ರಕ್ಕೆ ಬಾಲು ನಾರಾಯಣನ್ ಆ್ಯಕ್ಷನ್ ಕಟ್ ಹೇಳಿದ್ದು, ಕೇರಳ ಹಾಗೂ ಬೆಂಗಳೂರಿನಲ್ಲಿ ಚಿತ್ರದ ಚಿತ್ರೀಕರಣ ನಡೆದಿದೆ. ಚಿತ್ರದ ತಾರಾಬಳಗದಲ್ಲಿ ರಾಗಿಣಿ ದ್ವಿವೇದಿ, ಅವಿನಾಶ್, ಶೋಭರಾಜ್, ಚಿತ್ರಾ ಶೆಣೈ, ಮಹೇಶ್ ನಾಯರ್, ಶ್ರೀಪತಿ, ರಿಯಾಜ್ ಖಾನ್, ಅಬೆ ಡೇವಿಡ್, ಆರತಿ ಗೋಪಾಲ್ ಮುಂತಾದವರಿದ್ದಾರೆ.

ರಾಗಿಣಿ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **ರಾಹುಲ್ ಗಾಂಧಿ** ಅವರು ರೆಸ್ಟೋರೆಂಟ್ ಒಂದಕ್ಕೆ ಪ್ರವೇಶಿಸುವ ಮತ್ತು ಅಲ್ಲಿ ಮಾಂಸಾಹಾರ ತಿನ್ನುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿದೆ. ವಿಡಿಯೊ ಜತೆಗೆ, ‘ನೋಡಿ, ಶ್ರಾವಣ ಮಾಸದಲ್ಲಿ ರಾಹುಲ್ ಗಾಂಧಿ ಮಾಂಸ ತಿನ್ನುತ್ತಿದ್ದಾರೆ. ಈ ಕಾರಣದಿಂದಲೇ ಜನರು ರಾಹುಲ್ ಅವರನ್ನು ಕುರಿತು ‘ಆಗಾಗ ಹಿಂದೂ ಆಗುತ್ತಾರೆ’ ಎಂದು ಹೇಳುವುದು’ ಎಂಬ ಸಂದೇಶವನ್ನು ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಹಳೆಯ ವಿಡಿಯೊ.

✓ **ಶ್ರಾವಣ ಮಾಸ** ಜುಲೈ 4ರಿಂದ ಆರಂಭವಾಗಿತ್ತು. ಆದರೆ ಈ ವಿಡಿಯೊ 2023ರ ಏಪ್ರಿಲ್ 22ರಂದು ಚಿತ್ರೀಕರಿಸಿದ್ದು. ಪತ್ರಕರ್ತ ಕುನಾಲ್ ವಿಜಯ್‌ಕರ್ ಅವರಿಗೆ ಸಂದರ್ಶನ ನೀಡುವ ವೇಳೆ ಈ ವಿಡಿಯೊವನ್ನು ಚಿತ್ರೀಕರಿಸಲಾಗಿತ್ತು. ಸಂದರ್ಶನದ ವೇಳೆ ರಾಹುಲ್ ಅವರು ದೆಹಲಿಯ ಅಲ್ ಜವಾಹರ್ ರೆಸ್ಟೋರೆಂಟ್‌ನಲ್ಲಿ ಊಟ ಮಾಡಿದ್ದರು. ಅಲ್ಲಿ ರಾಹುಲ್ ಮಾಂಸ ತಿಂದಿದ್ದರು. ರಾಹುಲ್ ಗಾಂಧಿ ಅವರು ಆ ವಿಡಿಯೊವನ್ನು ತಮ್ಮ ಯೂಟ್ಯೂಬ್ ವಾಹಿನಿಯಲ್ಲಿ ಪ್ರಸಾರ ಮಾಡಿದ್ದರು. ಅದೇ ವಿಡಿಯೊವನ್ನು ಬಳಸಿಕೊಂಡು, ರಾಹುಲ್ ಶ್ರಾವಣ ಮಾಸದಲ್ಲಿ ಮಾಂಸ ತಿನ್ನುತ್ತಿದ್ದಾರೆ ಎಂದು ಸುಳ್ಳು ಸುದ್ದಿ ಸೃಷ್ಟಿಸಿದ್ದಾರೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ನಂಬಿಕೆಯ ಹೆಣಿಕೆ

ವ್ಯಾಕರಣ ಕಾವ್ಯಲಕ್ಷಣಗಳನು ಗಣಿಸದೆಯೆ |
ಲೋಕತಾಪದಿ ಬೆಂದು ತಣಿಪನೆಳಸಿದವಂ ||
ಈ ಕಂತೆಯಲಿ ತನ್ನ ನಂಬಿಕೆಯ ನೆಯ್ದಿಹನು |
ಸ್ವೀಕರಿಕೆ ಬೇಳ್ಪವರು – ಮಂಕುತಿಮ್ಮ || 940 ||

ಪದ-ಅರ್ಥ: ಗಣಿಸದೆಯೆ = ಗಣನೆಗೆ ತೆಗೆದುಕೊಳ್ಳದೆ, ಲೋಕತಾಪದಿ = ಬದುಕಿನ ಬೇಗೆಯಲ್ಲಿ, ತಣಿಪನೆಳಸಿದವಂ = ತಣಿಪನ್ (ತಂಪನ್ನು) + ಎಳಸಿದವಂ(ಬಯಸಿದವನು), ಕಂತೆಯಲ್ಲಿ = ಗಂಟಿನಲ್ಲಿ, ನೆಯ್ದಿಹನು = ಹೆಣೆದಿಹನು, ಸ್ವೀಕರಿಕೆ = ಸ್ವೀಕರಿಸಲಿ, ಬೇಳ್ಪವರು = ಬೇಕಾದವರು.

ವಾಚ್ಯಾರ್ಥ: ವ್ಯಾಕರಣ, ಕಾವ್ಯದ ಲಕ್ಷಣಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ, ಲೋಕದ ಬೆಂಕಿಯಲ್ಲಿ ಬೆಂದು ತಂಪನ್ನು ಬಯಸಿದವನು, ಈ ಗಂಟಿನಲ್ಲಿ ತನ್ನ ನಂಬಿಕೆಯನ್ನೇ ಹೆಣೆದಿದ್ದಾನೆ. ಬೇಕಾದವರು ಅದನ್ನು ಸ್ವೀಕರಿಸಬಹುದು.

ವಿವರಣೆ: ಈ ಕಗ್ಗದಲ್ಲಿ ನಾಲ್ಕು ವಿಚಾರಗಳಿವೆ. 1. ಇದನ್ನು ಬರೆದವರು ಯಾರು? 2. ಏನು ಬರೆದಿದ್ದಾರೆ? 3. ಹೇಗೆ ಬರೆದಿದ್ದಾರೆ? 4. ಇದು ಯಾರಿಗೆ ಪ್ರಯೋಜನ? ಮೊದಲಿಗೆ, ಇದನ್ನು ಬರೆದವನು ಲೋಕದ ಬೇಗೆಯಲ್ಲಿ ಬೆಂದವನು. ಅವನು ಕಷ್ಟ, ಸುಖಗಳ ಬೆಂಕಿಯಲ್ಲಿ ಹಾಯ್ದು ಬಂದವನು. ಬಸವಳಿದು ತಂಪನ್ನು ಬಯಸುತ್ತಿದ್ದಾನೆ. ಆ ತಂಪು ಎಲ್ಲಿ ದೊರೆತೀತೋ ಎಂದು ನೋಡುತ್ತಿದ್ದಾನೆ. ಆತನೇ ತನ್ನ ಜೀವನಾನುಭವದಿಂದ, ತಿಳಿವಳಿಕೆಯಿಂದ ಒಂದಿಷ್ಟನ್ನು ಬರೆದು ಕಂತೆಯಲ್ಲಿ ಕಟ್ಟಿ ಇಟ್ಟಿದ್ದಾನೆ. ಆ ಕಂತೆಯಲ್ಲಿ ಇರುವುದು ತಾನು ಹೊಂದಿದ ನಂಬಿಕೆಯ ಮಾತುಗಳು. ಯಾಕೆಂದರೆ ಪ್ರತಿಯೊಬ್ಬ ಮನುಷ್ಯನನ್ನು ಪೋಷಿಸುವುದು, ಧೈರ್ಯ ನೀಡುವುದು ಅವನ ನಂಬಿಕೆಯೇ. ನಂಬಿಕೆ ಪರ್ವತವನ್ನೇ ಕದಲಿಸಬಹುದು ಎಂಬ ಮಾತಿದೆ. ಅದು ಪರ್ವತವನ್ನು ಕದಲಿಸದಿದ್ದರೂ, ಬದುಕನ್ನು ಖಂಡಿತವಾಗಿ ಬದಲಿಸುತ್ತದೆ. ನಂಬಿಕೆ ಕಷ್ಟಗಳನ್ನು ಕಡಿಮೆ ಮಾಡದಿದ್ದರೂ, ಅಸಾಧ್ಯವನ್ನು ಸಾಧ್ಯವಾಗಿಸುತ್ತದೆ. ಆದರೆ ಆ ನಂಬಿಕೆ ಸಕಾರಾತ್ಮಕವಾಗಿರಬೇಕು, ಪರಿಶುದ್ಧವಾಗಿರಬೇಕು. ಲೋಕತಾಪದಲ್ಲಿ ಬೆಂದ ಮನುಷ್ಯ ಪ್ರಪಂಚವನ್ನು, ಅಲ್ಲಿಯ ವ್ಯವಹಾರಗಳನ್ನು ಧನಾತ್ಮಕವಾಗಿ, ಸಾಕ್ಷಿಪ್ರಜ್ಞೆಯಿಂದ ನೋಡಿರುವುದರಿಂದ ಅವನ ನಂಬಿಕೆ ಅನೇಕರಿಗೆ ಪ್ರಯೋಜನವಾದೀತು ಎಂದು ಬರೆದು ಕಂತೆಯಲ್ಲಿ ಕಟ್ಟಿ ಇಟ್ಟಿದ್ದಾನೆ. ಮೂರನೆಯದಾಗಿ, ಆತ ತನಗೆ ತೋಚಿದಂತೆ, ಕಾವ್ಯದ ಲಕ್ಷಣಗಳನ್ನು ಗಮನಿಸದೆ, ವ್ಯಾಕರಣದ ಬಗ್ಗೆ ಚಿಂತಿಸದೆ ಬರೆದಿದ್ದಾನೆ. ಇದರಲ್ಲಿ ವ್ಯಾಕರಣ ದೋಷಗಳಿರಬಹುದು. ಕಾವ್ಯಾಂಗದ ಬಾಹ್ಯಲಕ್ಷಣಗಳಾದ ಅಲಂಕಾರ, ಗುಣ, ನೀತಿಗಳಾಗಲೀ, ಅಂತರಂಗದ ಲಕ್ಷಣಗಳಾದ ರಸ, ಧ್ವನಿ, ತತ್ವಗಳಾಗಲೀ ಈ ಕಗ್ಗದಲ್ಲಿ ಇರಲಿಕ್ಕಿಲ್ಲ ಎನ್ನುತ್ತಾರೆ ಕವಿ. ಕೊನೆಯದಾಗಿ, ಕಗ್ಗದ ಪ್ರಯೋಜನ ಇರುವುದು ಎಲ್ಲರಂತೆ ಪ್ರಪಂಚದ ಬೇಗೆಯಲ್ಲಿ ಬೆಂದು ತಂಪನ್ನು ಬಯಸುವವರಿಗೆ. ಇಲ್ಲಿ ಒತ್ತಾಯವೇನೂ ಇಲ್ಲ. ಯಾರಿಗೆ ಇದು ಬೇಕೆನ್ನಿಸುತ್ತದೆಯೋ ಅವರು ಅದನ್ನು ಸ್ವೀಕರಿಸಬಹುದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಆಗಸ್ಟ್ 2, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಕೃಷ್ಣ ಪ್ರತಿಪದ್ ಗಂ. 20-06 ನಕ್ಷತ್ರ: ಶ್ರವಣ ಗಂ. 12-58 ಯೋಗ: ಆಯುಷ್ಮಾನ್ ಗಂ. 14-33 ಕರಣ: ಬಾಲವ ಗಂ. 10-04, ಕರ್ಕಾಟಕ ಮಾಸದ 16 ನೇ ದಿನ, ಮಳೆನಕ್ಷತ್ರ: ಪುಷ್ಯ 4.
ರಾಹುಕಾಲ : ಮಧ್ಯಾಹ್ನ 12-00 - 01-30
ಸೂರ್ಯೋದಯ : 06-19 ಸೂರ್ಯಾಸ್ತ : 06-54, ಮುಸ್ಲಿಂ ದಿನಾಂಕ : 14 ಮೊಹರಮ್
ಅದೃಷ್ಟ ಸಂಖ್ಯೆ : 1, 6

ಮೇಷ: ಆತ್ಮೀಯರೊಂದಿಗೆ ಭಾವನೆಗಳನ್ನು ಹಂಚಿಕೊಳ್ಳುವಿರಿ. ಬದುಕಿನಲ್ಲಿ ನೆಮ್ಮದಿ ಸಿಗಲಿದೆ. ಕುಟುಂಬದ ಇತಿಹಾಸದ ಬಗ್ಗೆ ಹಿರಿಯರಿಂದ ತಿಳಿದುಕೊಂಡಿದ್ದ ಕೆಲ ವಿಷಯಗಳು ಈಗ ಉಪಯೋಗಕ್ಕೆ ಬರಲಿದೆ.

ವೃಷಭ: ಜರುಗಲಿರುವ ಸಂಗತಿಯೊಂದು ಗಾಢ ಪರಿಣಾಮ ಬೀರಿ ವೃತ್ತಿಗೆ ಸಂಬಂಧಿಸಿದ ವಿಷಯದಲ್ಲಿ ಉತ್ತಮ ನಿರ್ಧಾರ ಕೈಗೊಳ್ಳಲು ಸಹಾಯವಾಗಲಿದೆ. ಉತ್ಪಾದನಾ ಕೆಲಸ ಚುರುಕುಗತಿಯಿಂದ ಸಾಗುವುದು ಲಾಭ ತರಲಿದೆ.

ಮಿಥುನ: ಪದೇ ಪದೇ ನಂಬಿಕೆಗಳು ಹುಸಿಯಾದ ಕಾರಣ ಮಾನಸಿಕ ದೌರ್ಬಲ್ಯ ಉಂಟಾಗಬಹುದು. ಕುಟುಂಬದ ಸದಸ್ಯರೊಂದಿಗೆ ನಿಮ್ಮ ಮನಸ್ಸಿನಲ್ಲಿ ನಡೆಯುತ್ತಿರುವ ವಾಗ್ಸರಣಿಗಳ ಬಗ್ಗೆ ಹೇಳಿಕೊಳ್ಳುವುದರಿಂದ ಹಗುರಾಗುವಿರಿ.

ಕರ್ಕಾಟಕ: ಯೋಚನೆಯಷ್ಟು ಖರ್ಚು ಸಂಭವಿಸದ ಕಾರಣ ಹಣದ ಕೊರತೆ ಕಂಡು ಬರುವುದಿಲ್ಲ. ಸ್ವಂತ ವ್ಯವಹಾರಗಳು ಇದ್ದಲ್ಲಿ ಲಾಭ ತಂದುಕೊಡುತ್ತವೆ. ಅಧಿಕ ಒತ್ತಡ ವಿದ್ಯಾರ್ಥಿಗಳನ್ನು ಚುರುಕುಗೊಳಿಸುವುದು.

ಸಿಂಹ: ಕೋಪವನ್ನು ಹೊಂದಿದ ಸಮಯದಲ್ಲಿ ಇತರರೊಂದಿಗೆ ಮಾತನಾಡುವುದಾಗಲಿ ಅಥವಾ ಏನಾದರೂ ಕೆಲಸ ಮಾಡುವುದನ್ನು ಮಾಡಬೇಡಿ. ಅನವಶ್ಯಕವಾಗಿ ಯಾರನ್ನೂ ಯಾವ ವಿಷಯಕ್ಕೂ ಟೀಕಿಸಬೇಡಿ.

ಕನ್ಯಾ: ತಪ್ಪುಗಳಿಗೆ ನೀವೇ ಪಶ್ಚಾತಾಪ ಪಟ್ಟು ಸರಿ ಮಾಡಲು ಯತ್ನಿಸಿಕೊಳ್ಳುವ ಗುಣ ಇಂದು ಬೇಕಾಗುತ್ತದೆ. ಕಲಾವಿದರಿಗೆ ನೂತನ ಅವಕಾಶಗಳು ಅಧಿಕ ಮಟ್ಟದಲ್ಲಿ ಸಿಗಲಿದೆ. ಸಿಹಿ ತಿಂಡಿ ತಿನ್ನುವ ಯೋಗವಿದೆ.

ತುಲಾ: ವಂಶಕ್ಕೆ ಸಂಬಂಧಿಸಿದ ಆದರೆ ಈವರೆಗೂ ನಿಮಗೆ ದಕ್ಕಿರದ ಆಸ್ತಿಯು ನಿಮಗೆ ಸಿಗಲಿದೆ. ಹೊಸ ಒಪ್ಪಂದಗಳನ್ನು ಒಪ್ಪಿಕೊಳ್ಳುವ ಮುನ್ನ ಅದರ ಸಾಧಕ ಬಾಧಕಗಳನ್ನು ಯೋಚಿಸಿದ ನಂತರ ಮುಂದುವರೆಯಿರಿ.

ವೃಶ್ಚಿಕ: ಗುತ್ತಿಗೆಯನ್ನು ಪಡೆದು ವ್ಯವಹಾರವನ್ನು ಮಾಡುವವರಿಗೆ ಅಧಿಕ ಲಾಭ ಉಂಟಾಗುವುದು. ಗಾಯಕರು, ಹಿನ್ನೆಲೆ ಗಾಯಕರು ಹಾಗು ಸಂಗೀತ ನಿರ್ದೇಶಕರಿಗೆ ಹೊಸ ಅವಕಾಶಗಳು ದೊರೆಯಲಿವೆ.

ಧನು: ಕೆಲಸವನ್ನು ಬೇಗ ಮುಗಿಸಬೇಕೆಂಬ ಆತುರ ಅಚಾತುರ್ಯ ಉಂಟುಮಾಡುವುದು. ಹಣಕಾಸಿನ ಅವಶ್ಯಕತೆ ಪೂರೈಸುವ ಕಾರಣದಿಂದ ಅಧಿಕ ಸಮಯ ಕೆಲಸ ಮಾಡುವಿರಿ. ಸ್ತ್ರೀ ಸಂಬಂಧಿ ವ್ಯಾಜ್ಯಗಳು ಕಾಡಬಹುದು.

ಮಕರ: ಸ್ವಗ್ರಾಮ ಬಿಟ್ಟು ಬೇರೆ ಎಲ್ಲಿಯಾದರೂ ಆಸ್ತಿಯನ್ನು ಖರೀದಿಸುವ ಯೋಚನೆ ಇದ್ದಲ್ಲಿ ಸರಿಯಾದ ವ್ಯಕ್ತಿಯಲ್ಲಿ ವಿಚಾರವನ್ನು ನಡೆಸಿ. ಉದ್ಯೋಗದಲ್ಲಿ ಸೋಲಿನ ದಿನ ಮರೆಯುವಂಥ ಗೆಲುವು ದೊರೆಯಲಿದೆ.

ಕುಂಭ: ಪತಿ ಪತ್ನಿಯರ ನಡುವೆ ಪರಸ್ಪರ ಸಮರ್ಪಣಾ ಭಾವವಿದ್ದಲ್ಲಿ ನಿಮ್ಮ ಈ ದಿನ ಉತ್ತಮವಾಗಿ ಇರುತ್ತದೆ. ಬೇಸರವಾದಲ್ಲಿ ಅದರ ನಿವಾರಣೆಗಾಗಿ ಸಂಗೀತ ಆಲೈಸಿ. ಬೇಳೆ ಕಾಳುಗಳ ವ್ಯಾಪಾರ ಲಾಭವನ್ನು ತರಲಿದೆ.

ಮೀನ: ಪ್ರೀತಿ ,ನಂಬಿಕೆಯ ಪದಗಳಿಗೆ ಅರ್ಥವಿಲ್ಲ ಎಂದು ಒಂದು ಕ್ಷಣ ಎನಿಸಿದರೂ ಆ ನಿರ್ಧಾರಕ್ಕೆ ಬರಬೇಡಿ. ನಯವಾದವರಿಗೆ ನಯಮಾತುಗಳಾದರೆ ಒರಟು ಜನರಿಗೆ ಒರಟು ಮಾತುಗಳಿಂದ ಕಾರ್ಯ ಸಾಧಿಸುವಿರಿ.

ಪದಬಂಧ 5398

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಸಂದೇಹವೇಕೆ? ಇದೇ ಕಾಯ!(2)
5.ಯಾವುದೇ ಉಪಯೋಗವಿಲ್ಲದ್ದು(5)
6.ಮಿತಿ ಮೀರಿದ ಕೋಪ (3)
7.ಗುಣಿಯಲ್ಲಿರುವ ಥಾಲು (3)
8.ಸಂಸ್ಥೆಗಳ ಹಕ್ಕಿನ ಮೇಲೆ ಸರ್ಕಾರದ ಸ್ವಾಮ್ಯ (5)
9.ಒಳ್ಳೆಯ ಅವಕಾಶವಿದು (3)
10.ಅರ್ಧ ಚಂದ್ರಾಕೃತಿಯ ರಚನೆ(3)
13.ಮಾನವನ್ನು ಹೊಂದಿರುವ ಒಣ ಹೆಮ್ಮೆ (5)
14.ತರಲೆಯ ಶಿರ! (2)

ಮೇಲಿಂದ ಕೆಳಕ್ಕೆ
1.ಅನುಭವವನ್ನು ಉಳ್ಳವನು (4)
2.ಪಥದಲ್ಲಿ ಸಾಗುತ್ತಿರುವಾಗ ಮಾಡಿದ ಪ್ರತಿಜ್ಞೆ (3)
4.ಉಗ್ರವಾದ ಹೊಡೆದಾಟ (4)
5.ಯಾವುದೇ ಅಪರಾಧವನ್ನು ಮಾಡದಿರುವವನು (5)
7.ಗುಣವನ್ನು ಹೊಗಳುವುದು (5)
9.ಒಳ್ಳೆಯ ಮಾತು (4)
11.ತರಗುಟ್ಟುತ್ತಾ ಹೇಳಿದ ಗಾದೆ! (4)
12.ಸಭೆಯಲ್ಲಿ ಕುಳಿತಿರುವವನು (3)



5397ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಉರಗ 3.ಗಡಿಗೆ 5.ಅಲೆ 6.ತರಾಟೆ 7.ತಲ 9.ಮದ 11.ಒನಪು 13.ಶಠಕೆ 14.ಜವಾರಿ 15.ಗಹ್ವರ

ಮೇಲಿಂದ ಕೆಳಕ್ಕೆ: 1.ಉಯ್ಯಾಲೆ 2.ಗಣಿತ 3.ಗಲಾಟೆ 4.ಗೆಳತಿ 5.ಅನ್ವರ್ಥನಾಮ 8.ಲವಲವಿಕೆ 10.ದನುಜ 11.ಒಯ್ಯಾರಿ 12.ಪುಲ್ಲಿಂಗ 13.ಶಂಕರ

ಸುಡೊಕು 5784

	9				5		6	
2			4			8		5
	4				9		3	
4	6				7			
				4		1		6
8		7	5				4	
		4			2		1	7
7			1			6		
	8		7			2		4

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5783 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

ಷೇರುಪೇಟೆ ವಹಿವಾಟು

68



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19753
ಇಂದಿನ ಅಂತ್ಯ	19733
▼	20
ದಿನದ ಗರಿಷ್ಠ	19795

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹455
12 ಮೊಟ್ಟೆಗೆ	₹63

ಮೈಸೂರು

100 ಮೊಟ್ಟೆಗೆ	₹457

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1840(1840)
ಸೋಯಾ (ರಿಫೈನ್ಡ್)	₹965(965)
ಸೂರ್ಯಕಾಂತಿ (ರಿಫೈನ್ಡ್)	₹975(975)
ಪಾಮೋಲಿನ್	₹875(877)

ಕೊಬ್ಬರಿ ಧಾರಣೆ

ಅರಸೀಕೆರೆ	₹8300-9250
ತಿಪಟೂರು	₹8500-9400

ತಯಾರಿಕಾ ವಲಯದಲ್ಲಿ ಅಲ್ಪ ಇಳಿಕೆ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಚಟುವಟಿಕೆಗಳು ಜುಲೈ ತಿಂಗಳಲ್ಲಿ ತುಸು ತಗ್ಗಿವೆ. ಎಸ್‌ಆ್ಯಂಡ್‌ಪಿ ಗ್ಲೋಬಲ್ ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕವು (ಪಿಎಂಐ) ಜೂನ್‌ನಲ್ಲಿ 57.8 ಇದ್ದಿದ್ದು, ಜುಲೈನಲ್ಲಿ 57.7ಕ್ಕೆ ತಗ್ಗಿದೆ.

ಸೂಚ್ಯಂಕವು 50ಕ್ಕಿಂತ ಹೆಚ್ಚಿದ್ದರೆ ಅದನ್ನು ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ.

ಜುಲೈನ ಅಂಕಿ–ಅಂಶವನ್ನು ಪರಿಗಣನೆಗೆ ತೆಗೆದುಕೊಂಡರೆ, ತಯಾರಿಕಾ ವಲಯದ ಚಟುವಟಿಕೆಗಳು ಸತತ 25 ತಿಂಗಳುಗಳಿಂದ ಬೆಳವಣಿಗೆಯ ಹಾದಿಯಲ್ಲಿವೆ.

ಒಟ್ಟಾರೆಯಾಗಿ ಹೇಳುವುದಾದರೆ ಭಾರತದ ತಯಾರಿಕಾ ವಲಯವು ಜಾಗತಿಕವಾಗಿ ಒಳ್ಳೆಯ ಸಾಧನೆ ತೋರಿದೆ ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್ ಮಾರ್ಕೆಟ್ ಇಂಟೆಲಿಜೆನ್ಸ್ ಹೇಳಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

23ನೇ ವರ್ಷದ ಸವಿನೆನಪು

ವೈ. ನಂಜಪ್ಪ ರೆಡ್ಡಿ

(ಪಾಳ್ಯದ ಕೃಷ್ಣಪ್ಪ, ಕೋರಮಂಗಲ)

ನೀವು ನಮ್ಮನ್ನು ಅಗಲಿ ಇಪ್ಪತ್ತಮೂರು ವರ್ಷ ಕಳೆದರೂ ನಿಮ್ಮ ಸವಿನೆನಪು ನಮ್ಮಲ್ಲಿ ಚಿರಸ್ಮರಣೀಯವಾಗಿ ಉಳಿದಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲೆಂದು ಭಗವಂತನಲ್ಲಿ ಸದಾ ಪ್ರಾರ್ಥಿಸುವ.

ಮಕ್ಕಳು, ಮೊಮ್ಮಕ್ಕಳು ಮತ್ತು ಕುಟುಂಬ ವರ್ಗದವರು

3ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಆರ್. ರಮೇಶ್‌ರೆಡ್ಡಿ

ಶ್ರೀರಾಮರೆಡ್ಡಿರವರ ಮಗ, ಕೈಕೊಂಡ್ರಹಳ್ಳಿ, ಬೆಂ.

ನಿಧನ: 02.08.2020

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳು ಕಳೆದರೂ ನಮ್ಮ ಹೃದಯಗಳಲ್ಲಿ ಪ್ರೀತಿ ಚೇತನವಾಗಿದ್ದೀರಿ. ನಿಮ್ಮ ಮಾರ್ಗದರ್ಶನವೇ ನಮಗೆ ನಿತ್ಯ ದಾರಿದೀಪವಾಗಿದೆ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಸದಾ ನಿಮ್ಮ ನೆನಪಿನಲ್ಲಿರುವವರು:

ಶ್ರೀಮತಿ ಜಯಮ್ಮ ಮತ್ತು ಶ್ರೀ ರಾಮರೆಡ್ಡಿರವರು, ಮಕ್ಕಳು ಹಾಗೂ ಮೊಮ್ಮಕ್ಕಳು, ಶ್ರೀಮತಿ ನೀಲಮ್ಮ, ಮಕ್ಕಳು, ಸೊಸೆ, ಅಳಿಯ, ಮತ್ತು ಮೊಮ್ಮಕ್ಕಳು ಹಾಗೂ ಕುಟುಂಬದವರು ಶ್ರೀ ರಾಜಶೇಖರ್‌ರೆಡ್ಡಿರವರ ಕುಟುಂಬದವರು ಹಾಗೂ ಬಂಧು–ಮಿತ್ರರು

NAME CHANGE ANNOUNCEMENT

Log on to :
dhclassifieds.com

ಕ್ಲಾಸಿಫೈಡ್ಸ್
ADMISSION CORNER

ನಮ್ಮ ವಿದ್ಯಾರ್ಥಿಗಳ ಬಗ್ಗೆ ನಮಗೆ ಹೆಮ್ಮೆ ಇದೆ

ನಮ್ಮ ವಿದ್ಯಾರ್ಥಿಗಳು ತಮ್ಮ ಅಂತಿಮ ವರ್ಷದ (ಜುಲೈ 2023) ಅಂತಿಮ ಸೆಮಿಸ್ಟರ್ ಫಲಿತಾಂಶಗಳಲ್ಲಿ ಒಟ್ಟಾರೆ 86% ಡಿಸ್ಟಿಂಕ್ಷನ್ ಮತ್ತು 14% ಪ್ರಥಮ ದರ್ಜೆಯೊಂದಿಗೆ
100% ಯಶಸ್ಸನ್ನು ಸಾಧಿಸಿದ್ದಾರೆ.
ಏರೊನಾಟಿಕಲ್ ಸ್ಟ್ರೀಮ್
100% ಡಿಸ್ಟಿಂಕ್ಷನ್‌ನೊಂದಿಗೆ ಅತ್ಯುತ್ತಮವಾಗಿದೆ.
HEAಯ ಮ್ಯಾನೇಜ್‌ಮೆಂಟ್, ಎಲ್ಲಾ ವಿದ್ಯಾರ್ಥಿಗಳಿಗೆ ಅವರ ಅಸಾಧಾರಣ ಕಾರ್ಯಕ್ಷಮತೆಗಾಗಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ ಮತ್ತು ಅವರ ಮುಂದಿನ ಪ್ರಯತ್ನಗಳಿಗೆ ಶುಭ ಹಾರೈಸುತ್ತದೆ.



ಡಿಪ್ಲೋಮಾ ಇಂಜಿನಿಯರಿಂಗ್
- ಏರೊನಾಟಿಕಲ್ ಇಂಜಿನಿಯರಿಂಗ್
- ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್
- ಮೆಕಾನಿಕಲ್ ಇಂಜಿನಿಯರಿಂಗ್
- ಆಟೊಮೊಬೈಲ್ ಇಂಜಿನಿಯರಿಂಗ್

Continuing a legacy of Academic Excellence

ವಿದ್ಯಾರ್ಹತೆ: 10ನೇ ತರಗತಿ ಉತ್ತೀರ್ಣ

ಡಿಪ್ಲೋಮಾ ತರಗತಿಗಳು ಆರಂಭವಾಗಿವೆ. ಕೆಲವೇ ಸೀಟುಗಳು ಲಭ್ಯ. ಪ್ರವೇಶಕ್ಕೆ 5ನೇ ಆಗಸ್ಟ್ ಕೊನೆಯ ದಿನ. ಇಂದೇ ತ್ವರೆಮಾಡಿ.

ADMISSIONS ARE OPEN for 2023-24

Aircraft Maintenance Engineeringಗೆ ಕೆಲವು ಸೀಟುಗಳು ಮಾತ್ರ ಉಳಿದಿವೆ. ತರಗತಿಗಳು ಆರಂಭಗೊಂಡಿವೆ.

8050461016
9740037853
8971404357

HEA ಪಾಲಿಟೆಕ್ನಿಕ್ ಬೆಂಗಳೂರು
(Approved by DTE & AICTE)
P. B.No. 3776, Ashwathanagar, Marathahalli, Bengaluru-560037
Email: admissions@hindustanacademy.edu.in
www.hindustanacademy.edu.in

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

Drivers

ನಾವು ಆಟೋ ಡ್ರೈವರ್‌ಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದೇವೆ. ಫುಲ್ ಟೈಮ್ ಮತ್ತು ಪಾರ್ಟ್ ಟೈಮ್ ಗಳ ಸಂಬಳ ರೂ. 25000/-. ರೆಫರಲ್ ಬೋನಸ್ ರೂ. 10000/-. ಸೇರುವ ಬೋನಸ್ ರೂ.6000/-. ಆಸಕ್ತಿಯುಳ್ಳವರು ನಮ್ಮನ್ನು ಸಂಪರ್ಕಿಸಿ: 080-68960971

General

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600-65.000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

Domestic Helpers / Housekeeping

"ಬೆಂಗಳೂರಿನ ಇಂದಿರಾನಗರದಲ್ಲಿರುವ ಮನೆಗೆ ಮಹಿಳಾ ಮನೆಗೆಲಸದ ಹೆಂಗಸು ಬೇಕಾಗಿದ್ದಾರೆ. ಗಂಡ ಮತ್ತು ಹೆಂಡತಿಗೆ ವಸತಿ ಸೌಲಭ್ಯ ನೀಡಲಾಗುವುದು. ಸಂಪರ್ಕಿಸಿ: 9845058243"

Marketing & Sales

WANTED SALES Executives with good industrial knowledge (Bike Must) Contact 9343381877, 9986781877

ಪ್ರವಾಸ

Travel Agencies

ವಿಮಾನದಲ್ಲಿ 27/8/23ರಿಂದ ನೇಪಾಳ ಕಾಶಿ ಅಯೋಧ್ಯೆ ಎಲ್ಲಾಸೇರಿ 45000/ ಮತ್ತು 20/10/23ರಿಂದ ಗುಜರಾತ್ ಪ್ರವಾಸ 34000/ ಶ್ರೀರಾಮ್ ಟೂರ್ 9108933383

Travel

12.8.2023 ರಿಂದ ರಾಮೇಶ್ವರ-ಕನ್ಯಾಕುಮಾರಿ, ತಿವೇಂದ್ರಂ-ಅಲಪಿ ಭೋಟಿಂಗ್, ಕೊವಲಂಬೀಚ್-ಗುರುವಾಯೂರು. 12.8.2023 ರಿಂದ 9ನವಗ್ರಹ ದೇವಾಲಯಗಳ ದರ್ಶನ ಮತ್ತು ಶ್ರೀರಂಗ-ತಾಜಾವೂರು ಕುಂಭಕೋಣಂ-ಚಿದಂಬರಂ. 14.8.2023ರಿಂದ ಕಾಶಿ-ಗಯಾ, ಅಲಹಾಬಾದ್-ಅಯೋಧ್ಯ, ಬುದ್ಧಗಯಾ. 25.9.2023 ರಿಂದ ಚಾರ್ದಾಮ್ ಪ್ರವಾಸ ಕೇದಾರನಾಥ- ಗಂಗೋತ್ರಿ-ಬದರಿನಾಥ-ಯಮನೋತ್ರಿ, ದೆಹಲಿ, ಹರಿದ್ವಾರ. 8.10.2023 ರಿಂದ ವೈಷ್ಣೋದೇವಿ. ವಾಘಬಾರ್ಡರ್, ದೆಹಲಿ, ಅಮೃತ್ಸರ್, ಧರ್ಮಶಾಲಾ, ಹರಿದ್ವಾರ-ಆಗ್ರಾ.ಶ್ರೀಗುರುರಾಜ ಟ್ರಾವಲ್ಸ್, ಕೋಲಾರ್-9449652555, 9611082432, 8123099913

ಪ್ರಜಾವಾಣಿ ಕ್ಲಾಸಿಫೈಡ್ಸ್ ಕೆಲಸ ಹುಡುಕಾಟ
ಪ್ರತಿಯೊಬ್ಬರಿಗೂ ಉಪಯುಕ್ತ
ನಿಮ್ಮ ನೇಮಕಾತಿ ಅಗತ್ಯಗಳಿಗೆ ಪೂರಕ ವೇದಿಕೆ
ನಿಮ್ಮ ಕಂಪನಿಗೆ ಸೂಕ್ತವಾದ ಅಭ್ಯರ್ಥಿಗಳನ್ನು ಪಡೆಯಿರಿ...
ಈಗಲೇ ನಿಮ್ಮ ಜಾಹೀರಾತು ಬುಕ್ ಮಾಡಿರಿ!
ಬುಕ್ ಮಾಡಿ
www.dhclassifieds.com
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331
+91 9845114560
+91 9731810277
+91 9901641752
+91 9900428036
080- 45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಜಿಎಸ್‌ಟಿ: ಹಬ್ಬಗಳ ಋತುವಿನಲ್ಲಿ ವರಮಾನ ಸಂಗ್ರಹ ಇನ್ನಷ್ಟು ಏರುವ ನಿರೀಕ್ಷೆ

ಜುಲೈನಲ್ಲಿ ₹1.65 ಲಕ್ಷ ಕೋಟಿ ಸಂಗ್ರಹ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಅಡಿಯಲ್ಲಿ ಜುಲೈ ತಿಂಗಳಲ್ಲಿ ₹1.65 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ. ವರಮಾನದ ಮೊತ್ತದಲ್ಲಿ ಶೇಕಡ 11ರಷ್ಟು ಹೆಚ್ಚಳ ಆಗಿದೆ. ತೆರಿಗೆ ವಂಚನೆಯನ್ನು ತಡೆಯಲು ಕೈಗೊಂಡಿರುವ ಕ್ರಮಗಳು ಹಾಗೂ ಗ್ರಾಹಕರು ಖರ್ಚನ್ನು ಹೆಚ್ಚಿಸಿದ್ದು ತೆರಿಗೆ ಸಂಗ್ರಹ ಹೆಚ್ಚಾಗುವುದಕ್ಕೆ ಪ್ರಮುಖ ಕಾರಣಗಳು.

ಜಿಎಸ್‌ಟಿ ವ್ಯವಸ್ಥೆ ಜಾರಿಗೆ ಬಂದ ನಂತರದಲ್ಲಿ ತಿಂಗಳ ವರಮಾನ ಸಂಗ್ರಹವು ₹1.60 ಲಕ್ಷ ಕೋಟಿಗಿಂತ ಹೆಚ್ಚಾಗಿರುವುದು ಇದು ಐದನೆಯ ಬಾರಿ. 'ಜಿಎಸ್‌ಟಿ ವರಮಾನದಲ್ಲಿ ಕೇಂದ್ರ ಜಿಎಸ್‌ಟಿ ಪಾಲು ₹29,773 ಕೋಟಿ, ರಾಜ್ಯ ಜಿಎಸ್‌ಟಿ ಪಾಲು ₹37,623 ಕೋಟಿ, ಏಕೀಕೃತ ಜಿಎಸ್‌ಟಿ ಪಾಲು ₹85,930 ಕೋಟಿ ಆಗಿದೆ. ಸೆಸ್ ಮೂಲಕ ಸಂಗ್ರಹವಾಗಿರುವ ಮೊತ್ತವು ₹11,779 ಕೋಟಿ' ಎಂದು ಕೇಂದ್ರ ಹಣಕಾಸು ಸಚಿವಾಲಯದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಹಿಂದಿನ ವರ್ಷದ ಜುಲೈನಲ್ಲಿ ಜಿಎಸ್‌ಟಿ ಮೂಲಕ ₹1.49 ಲಕ್ಷ ಕೋಟಿ ಸಂಗ್ರಹ ಆಗಿತ್ತು. ಈ ವರ್ಷದ ಜೂನ್ ತಿಂಗಳಲ್ಲಿ ವರಮಾನವು ₹1.61 ಲಕ್ಷ ಕೋಟಿ ಆಗಿತ್ತು. ಈ ವರ್ಷದ ಏಪ್ರಿಲ್‌ನಲ್ಲಿ ₹1.87 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದ್ದುದು ಈವರೆಗಿನ ಗರಿಷ್ಠ ಮೊತ್ತ.

ಮನೆಗಳಿಗೆ, ಕಾರು ಖರೀದಿಗೆ, ರಜಾ ಪ್ರವಾಸಗಳಿಗೆ ಮತ್ತು ಇತರ ಉತ್ಪನ್ನಗಳಿಗಾಗಿ ಗ್ರಾಹಕರು ಹೆಚ್ಚು ವೆಚ್ಚ ಮಾಡಿರುವುದು ಕೂಡ ಜಿಎಸ್‌ಟಿ ವರಮಾನ ಸಂಗ್ರಹದಲ್ಲಿ ಏರಿಕೆಗೆ ಕಾರಣ ಎಂದು ಎನ್.ಎ. ಶಾ ಅಸೋಸಿಯೇಟ್ಸ್‌ನ ಪಾಲುದಾರ ಪರಾಗ್ ಮೆಹ್ತಾ ಅಭಿಪ್ರಾಯಪಟ್ಟಿದ್ದಾರೆ.

ಮುಂದಿನ ತಿಂಗಳುಗಳಲ್ಲಿ ದೇಶದಲ್ಲಿ ಸಾಲು ಸಾಲು ಹಬ್ಬಗಳು ಎದುರಾಗಲಿವೆ. ಹೀಗಾಗಿ, ಜಿಎಸ್‌ಟಿ ವರಮಾನ ಸಂಗ್ರಹವು ಇನ್ನಷ್ಟು ಹೆಚ್ಚಾಗುವ ನಿರೀಕ್ಷೆ ಇದೆ ಎಂದು ಕೆಪಿಎಂಜಿ ಸಂಸ್ಥೆಯ ಪರೋಕ್ಷ ತೆರಿಗೆಗಳ ವಿಭಾಗದ ರಾಷ್ಟ್ರೀಯ ಮುಖ್ಯಸ್ಥ ಅಭಿಷೇಕ್ ಜೈನ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ರಾಜ್ಯದಲ್ಲಿ ₹11,505 ಕೋಟಿ ಸಂಗ್ರಹ

ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ಜುಲೈ ತಿಂಗಳಲ್ಲಿ ಕರ್ನಾಟಕದಲ್ಲಿ ₹11,505 ಕೋಟಿ ವರಮಾನ ಸಂಗ್ರಹವಾಗಿದೆ.

ಕಳೆದ ವರ್ಷ ಜುಲೈ ತಿಂಗಳಲ್ಲಿ ₹9,795 ಕೋಟಿ ವರಮಾನ ಸಂಗ್ರಹವಾಗಿತ್ತು. ಈ ವರ್ಷ ಶೇ 17ರಷ್ಟು ಹೆಚ್ಚಳ ಆಗಿದೆ. ಜಿಎಸ್‌ಟಿ ಸಂಗ್ರಹದಲ್ಲಿ ಮಹಾರಾಷ್ಟ್ರ ಮೊದಲನೇ ಸ್ಥಾನದಲ್ಲಿದ್ದರೆ, ಕರ್ನಾಟಕ ಎರಡನೇ ಸ್ಥಾನದಲ್ಲಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	500-550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	900-950
ಜರಡಿ	1000 - 1050
ಹೆರಕಿದ್ದು	1300-1400
ಹಸಿರು ಸಾಧಾರಣ	1000-1100
ಹಸಿರು ಉತ್ತಮ	1250-1350
ಹಸಿರು ಅತಿ ಉತ್ತಮ	1600-1800
ಕಾಳುಮೆಣಸು -	600
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-44200
ಹಳತು	46000-48000
ಕಾರ್ಕಳ	
ಹೊಸತು	30000-44200
ಹಳತು	40000-48000
ಕುಂದಾಪುರ	
ಹಳೆಚಾಲಿ	43500-47000
ಹೊಸಚಾಲಿ	37000-41500
ಪುತ್ತೂರು	
ಹೊಸತು	34000-44200
ಸಾಗರ	
ಬಿಳಿಗೋಟು	34061-34409
ಚಾಲಿ	38899-40616
ಕೋಕ	35989-36989
ಕೆಂಪುಗೋಟು	41099-41099
ರಾಶಿ	51409-52459
ಸಿಪ್ಪೆಗೋಟು	11899-23719
ಶಿವಮೊಗ್ಗ	
ಬೆಟ್ಟೆ	48828-54199
ಗೊರಬಲು	17106-43259
ರಾಶಿ	43069-56099
ಸರಕು	50030-80800
ಸಿದ್ದಾಪುರ	
ಬಿಳಿಗೋಟು	32609-36399
ಚಾಲಿ	38619-43009
ಕೋಕ	30800-35589
ಕೆಂಪುಗೋಟು	33019-35869
ರಾಶಿ	49109-51809
ತಟ್ಟಿಬೆಟ್ಟೆ	39919-50769
ಶಿರಸಿ	
ಬೆಟ್ಟೆ	43699-47609
ಬಿಳಿಗೋಟು	27180-37899
ಚಾಲಿ	38508-44001
ಕೆಂಪುಗೋಟು	30099-37989
ರಾಶಿ	47799-52500
ಯಲ್ಲಾಪುರ	
ಆಪಿ	56899-63395
ಬಿಳಿಗೋಟು	26899-37611
ಚಾಲಿ	37719-43329
ಕೋಕ	23212-35299
ಕೆಂಪುಗೋಟು	30689-38666
ರಾಶಿ	49239-55219
ತಟ್ಟಿಬೆಟ್ಟೆ	38725-47666

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14000	14200	14000	164.65ಸೆಂಟ್ಸ್
ಎಸಿ	7140	7100	7000	
ಆರ್‌ಪಿ	10200	10300	10200	ಲಂಡನ್
ಆರ್‌ಸಿ	6230	250	5900	2621ಡಾಲರ್ಸ್

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹185;520
ದ್ವಿತಳಿ (ಬಿ.ವಿ)	₹180;602

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1,400-1,600
ಮಧ್ಯಮ	₹1,000-1,200
ಸಣ್ಣ	₹800-1,000

ಕಲುಷಿತ ನೀರು ಕುಡಿದು ಮಹಿಳೆ ಸಾವು

ಒಂದನೇ ಪುಟದಿಂದ...

ಆರೋಗ್ಯ ತಪಾಸಣೆ: ಸ್ಥಳಕ್ಕೆ ಭೇಟಿ ನೀಡಿದ ಆರೋಗ್ಯ ಇಲಾಖೆ ಸಿಬ್ಬಂದಿ, ಸಂಚಾರಿ ಆಸ್ಪತ್ರೆ ಮೂಲಕ ಆರೋಗ್ಯ ತಪಾಸಣೆ ನಡೆಸಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ತಾತ್ಕಾಲಿಕವಾಗಿ ಆರೋಗ್ಯ ಕೇಂದ್ರ ಆರಂಭಿಸಿ, 15ಕ್ಕೂ ಅಧಿಕ ಜನರಿಗೆ ಚಿಕಿತ್ಸೆ ನೀಡಲಾಗಿದೆ. ಈ ಪ್ರದೇಶದಲ್ಲಿರುವ ಚಿಕ್ಕಮಕ್ಕಳ ಆರೋಗ್ಯ ತಪಾಸಣೆ ನಡೆಸಲಾಗಿದೆ. ನಗರಸಭೆ ಪೂರೈಕೆ ಮಾಡಿದ ನೀರು ಸೇವಿಸದಂತೆ ಜಾಗೃತಿ ಮೂಡಿಸಿರುವ ಜಿಲ್ಲಾಡಳಿತ, ಶುದ್ಧ ಕುಡಿಯುವ ನೀರು ಪೂರೈಕೆಗೆ ಪರ್ಯಾಯ ವ್ಯವಸ್ಥೆ ಮಾಡಿದೆ.

> ಶುದ್ಧ ಕುಡಿಯುವ ನೀರಿನ ಘಟಕ ಹಾಗೂ ಓವರ್ ಹೆಡ್ ಟ್ಯಾಂಕ್ ನೀರನ್ನು ಜನರು ಕುಡಿಯಲು ಬಳಸುತ್ತಿದ್ದರು. ಈ ನೀರನ್ನು ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳಿಸಲಾಗಿದೆ.
>
> **ದಿವ್ಯ ಪ್ರಭು ಜಿ.ಆರ್.ಜೆ.,** ಜಿಲ್ಲಾಧಿಕಾರಿ

'ಸಾಮಾನ್ಯವಾಗಿ ಕಲುಷಿತ ನೀರು ಮತ್ತು ಆಹಾರ ಸೇವನೆಯಿಂದ ವಾಂತಿ–ಭೇದಿ ಕಾಣಿಸಿಕೊಳ್ಳುತ್ತದೆ. ಘಟನೆಗೆ ಕಲುಷಿತ ನೀರು ಕಾರಣ ಎಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ. ರೋಗಿಗಳ ಮಲ-ಮೂತ್ರದ ಮಾದರಿಯನ್ನು ಪರೀಕ್ಷೆಗೆ ಒಳಪಡಿಸಿದ್ದು, ನಿಖರ ಕಾರಣ ಗೊತ್ತಾಗಲಿದೆ' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಆರ್.ರಂಗನಾಥ್ ತಿಳಿಸಿದರು.

ಕೊಪ್ಪಳ, ರಾಯಚೂರು, ಕಲಬುರಗಿ, ಬೀದರ್, ಯಾದಗಿರಿ, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಈಚೆಗೆ ಕಲುಷಿತ ನೀರು ಪೂರೈಕೆ ಪ್ರಕರಣಗಳು ವರದಿಯಾಗಿದ್ದವು. ಕೊಪ್ಪಳ, ರಾಯಚೂರು ಜಿಲ್ಲೆಗಳಲ್ಲಿ ತಲಾ ನಾಲ್ವರು, ಯಾದಗಿರಿ ಜಿಲ್ಲೆಯಲ್ಲಿ ಮೂವರು, ಕಲಬುರಗಿ ಜಿಲ್ಲೆಯಲ್ಲಿ ಇಬ್ಬರು ಮೃತಪಟ್ಟಿದ್ದರು. ಈ ಕುರಿತು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದ ಮುಖ್ಯಮಂತ್ರಿ, 'ಇಂಥ ಪ್ರಕರಣಗಳು ಮರುಕಳಿಸಿದರೆ ಜಿಲ್ಲಾ ಪಂಚಾಯಿತಿ ಸಿಇಒ ಅವರನ್ನೇ ಹೊಣೆ ಮಾಡಲಾಗುವುದು' ಎಂದು ಎಚ್ಚರಿಕೆ ನೀಡಿದ್ದರು.

ಬೂಕರ್ ಪ್ರಶಸ್ತಿ ಅಂತಿಮ ಸ್ಪರ್ಧೆಗೆ ಭಾರತ ಮೂಲದ ಲೇಖಕಿಯ ಕೃತಿ

ಲಂಡನ್ (ಪಿಟಿಐ): ಭಾರತ ಮೂಲದ, ಲಂಡನ್‌ನ ಲೇಖಕಿ ಚೇತನಾ ಮಾರೂ ಅವರ ಪ್ರಥಮ ಕಾದಂಬರಿ 'ವೆಸ್ಟರ್ನ್ ಲೇನ್', 2023ನೇ ಸಾಲಿನ ಬೂಕರ್ ಪ್ರಶಸ್ತಿ ಸ್ಪರ್ಧೆಯಲ್ಲಿರುವ 13 ಕೃತಿಗಳ ಪಟ್ಟಿಗೆ ಸೇರ್ಪಡೆಯಾಗಿದೆ.

ಅಂತಿಮ ಸ್ಪರ್ಧೆಯಲ್ಲಿರುವ 13 ಕೃತಿಗಳ ಪಟ್ಟಿಯನ್ನು ಮಂಗಳವಾರ ಬಿಡುಗಡೆ ಮಾಡಲಾಗಿದೆ. 11 ವರ್ಷ ವಯಸ್ಸಿನ ಬಾಲಕಿ ಗೋಪಿ ಮತ್ತು ಕುಟುಂಬದ ಜೊತೆಗೆ ಆಕೆಯ ಕುಟುಂಬದ ಒಡನಾಟ, ಸಂಬಂಧ ಕಾದಂಬರಿಯ ವಸ್ತು.

'ಬ್ರಿಟಿಷ್ ಗುಜರಾತಿ ಸಾಮಾಜಿಕ ಪರಿಸರದ ಹಿನ್ನೆಲೆಯ ಚಿತ್ರಣವುಳ್ಳ ಈ ಕಾದಂಬರಿಯಲ್ಲಿ ಭಾವನೆಗಳ ತಾಕಲಾಟದ ಅಭಿವ್ಯಕ್ತಿಗೆ ರೂಪಕವಾಗಿ ಸ್ಕ್ವಾಶ್ ಕ್ರೀಡೆಯು ಬಳಕೆಯಾಗಿದೆ' ಎಂದು ಬೂಕರ್ ಪ್ರಶಸ್ತಿಯ ತೀರ್ಪುಗಾರರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಪ್ರಶಸ್ತಿ ವಿಜೇತ ಕೃತಿಯ ವಿವರವನ್ನು ನವೆಂಬರ್ 26ರಂದು ಲಂಡನ್‌ನಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಕಟಿಸಲಾಗುತ್ತದೆ. ಪ್ರಶಸ್ತಿಯು 'ಐರಿಸ್' ಫಲಕ, 50 ಸಾವಿರ ಪೌಂಡ್ ಸ್ಟರ್ಲಿಂಗ್ (ಸುಮಾರು ₹ 52.59 ಲಕ್ಷ) ಒಳಗೊಂಡಿದೆ.

ಸೂಕಿ ಶಿಕ್ಷೆಯ ಅವಧಿ ಕಡಿತ

ಬ್ಯಾಂಕಾಕ್ (ಎಪಿ): ಮ್ಯಾನ್ಮಾರ್‌ನ ಪದಚ್ಯುತ ನಾಯಕಿ ಆಂಗ್ ಸಾನ್ ಸೂಕಿ ಅವರ ಶಿಕ್ಷೆ ಅವಧಿಯನ್ನು ಸೇನೆ ನಿಯಂತ್ರಣದಲ್ಲಿರುವ ಸರ್ಕಾರ ಕಡಿತಗೊಳಿಸಿದೆ. ಧಾರ್ಮಿಕ ರಜೆ ಅವಧಿಯ ಹಿನ್ನೆಲೆಯಲ್ಲಿ ಸೇನೆಯ ಆಡಳಿತವು ತನ್ನ ನಿಲುವನ್ನು ಸಡಿಲಗೊಳಿಸಿದೆ.

ಸೂಕಿ ಅವರಿಗೆ 33 ವರ್ಷ ಶಿಕ್ಷೆ ವಿಧಿಸಲಾಗಿತ್ತು. ಕಡಿತದ ಬಳಿಕ ಅವರು ಇನ್ನೂ 27 ವರ್ಷ ಸೆರೆಮನೆ ವಾಸವನ್ನು ಅನುಭವಿಸಬೇಕಾಗಿದೆ.

ಮಾಜಿ ಅಧ್ಯಕ್ಷ ಮಿಯಿಂಟ್ ಅವರೂ ಸೇರಿದಂತೆ ಒಟ್ಟು 7,749 ಕೈದಿಗಳ ಶಿಕ್ಷೆಯ ಅವಧಿಯನ್ನು ಸರ್ಕಾರವು ಕ್ಷಮಾದಾನದ ಭಾಗವಾಗಿ ಕಡಿತಗೊಳಿಸಿದೆ ಎಂದು ವರದಿ ತಿಳಿಸಿದೆ. ಮ್ಯಾನ್ಮಾರ್ ಸೇನಾ ಕೌನ್ಸಿಲ್‌ನ ಮುಖ್ಯಸ್ಥ ಸೀನಿಯರ್ ಜನರಲ್ ಮಿನ್ ಆಂಗ್ ಲೈಂಗ್ ಈ ಆದೇಶ ಹೊರಡಿಸಿದರು ಎನ್ನಲಾಗಿದೆ.

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹149
ಆರ್‌ಎಸ್‌ಎಸ್-5	₹144
ಗುಡ್ ಲಾಟ್	₹127

ಮುಂಬೈ ಧಾರಣೆ

ಶೇಂಗಾ

1-8-2023

ಜಾವಾ 70/80(ಹೊಸ)	13400-13500
ಜಾವಾ 80/90(ಹೊಸ)	12000-12100
ದಪ್ಪ ಮಧ್ಯಪ್ರದೇಶ(ಹೊಸ)	13000-13100
ದಪ್ಪ ಗುಜರಾತ್(ಹೊಸ)	14300-14400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1850(1850)
ಒಂದು ವಾರದ ಡೆಲಿವರಿ	1845(1845)
ಸೋಯಾ ಕಚ್ಚಾ	920(915)
ಪಾಮ್ ವಾರದ ಡೆಲಿವರಿ	873(875)
ಸೂರ್ಯಕಾಂತಿ ಎಣ್ಣೆ ಕಚ್ಚಾ	920(920)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59100(59500)
ಬೆಳ್ಳಿ ಕೆ.ಜಿ 74000(74050)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮುಂದಿನ ವರ್ಷ ಹೈಡ್ರೋಜನ್ ಚಾಲಿತ ಟ್ರಕ್: ಬಾಷ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಡ್ರೋಜನ್ ಚಾಲಿತ, ಬಿಎಸ್‌–6 ಎರಡನೆಯ ಹಂತದ ಮಾನದಂಡವನ್ನು ಒಳಗೊಂಡಿರುವ ಟ್ರಕ್‌ಅನ್ನು ಬಾಷ್ ಲಿಮಿಟೆಡ್ ಮುಂದಿನ ವರ್ಷದ ಆರಂಭದಲ್ಲಿ ಗ್ರಾಹಕರ ಮುಂದೆ ತರಲಿದೆ ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಗುರುಪ್ರಸಾದ್ ಮುದ್ಲಾಪುರ ತಿಳಿಸಿದರು.

ಕಂಪನಿಯ ಬೆಂಗಳೂರಿನ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹೈಡ್ರೋಜನ್ ಚಾಲಿತ ಟ್ರಕ್‌ಗಳು ಮುಂದಿನ ದಿನಗಳಲ್ಲಿ ಹೆಚ್ಚು ಸ್ವೀಕಾರಾರ್ಹವಾಗುವ ನಿರೀಕ್ಷೆ ಇದೆ. 2030ರ ವೇಳೆಗೆ ದೇಶದ ಒಟ್ಟು ಟ್ರಕ್‌ಗಳಲ್ಲಿ ಹೈಡ್ರೋಜನ್ ಚಾಲಿತ ಟ್ರಕ್‌ಗಳ ಪಾಲು ಶೇಕಡ 10ರಷ್ಟು ಆಗುವ ಸಾಧ್ಯತೆ ಇದೆ' ಎಂದು ಹೇಳಿದರು.

ಕಂಪನಿಯ ಜೂನ್ ತ್ರೈಮಾಸಿಕದ ಹಣಕಾಸಿನ ಸಾಧನೆ ಕುರಿತು ವಿವರ ನೀಡಿದ ಅವರು, 'ಕಂಪನಿಯ ತೆರಿಗೆ ನಂತರದ ಲಾಭವು ₹409 ಕೋಟಿ ಆಗಿದೆ. ಕಂಪನಿಯ ಕಾರ್ಯಾಚರಣೆ ವರಮಾನವು ₹4,158 ಕೋಟಿ ಆಗಿದ್ದು, ಇದು ಹಿಂದಿನ ವರ್ಷದ ಇದೇ ತ್ರೈಮಾಸಿಕಕ್ಕೆ ಹೋಲಿಸಿದರೆ ಶೇ 17.3ರಷ್ಟು ಹೆಚ್ಚು' ಎಂದು ತಿಳಿಸಿದರು.

ಪ್ರಸಕ್ತ ಹಣಕಾಸು ವರ್ಷದಲ್ಲಿ ಕಂಪನಿಯು ತನ್ನ ಉತ್ಪನ್ನಗಳ ಮಾರಾಟವು ಶೇಕಡ 15ರಷ್ಟು ಹೆಚ್ಚಳವಾಗಲಿದೆ ಎಂಬ ನಿರೀಕ್ಷೆ ಹೊಂದಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ವಾಸುದೇವ ನಾಯಕ್, ಬೆಂಗಳೂರು

● **ಪ್ರಶ್ನೆ:** ನಾನು ಕಳೆದ ಐದಾರು ವರ್ಷಗಳಿಂದ ಉದ್ಯೋಗದಲ್ಲಿದ್ದೇನೆ. ಆದರೆ ನನ್ನ ಹೂಡಿಕೆಗೆ ಸಂಬಂಧಪಟ್ಟ ನಿರ್ಧಾರಗಳು ಇನ್ನೂ ಅಷ್ಟಾಗಿ ಖಚಿತವಾಗಿಲ್ಲ. ಕೆಲವು ಹೂಡಿಕೆಗಳು ಮನೆಯವರ ಒತ್ತಾಯಕ್ಕೆ ಮಾಡಿದವು. ಇನ್ನು ಕೆಲವು ವಿಮಾ ಏಜೆಂಟರ ಬಲವಂತಕ್ಕೆ ಮಣಿದು ಮಾಡಿದ ಹೂಡಿಕೆಗಳು. ಇವನ್ನು ಹೊರತುಪಡಿಸಿ, ಇನ್ನಾವುದೇ ಯೋಜಿತ ಹೂಡಿಕೆಗಳನ್ನು ಈತನಕ ಮಾಡಲಾಗಿಲ್ಲ. ನನಗೆ ಆ ಬಗ್ಗೆ ಸ್ವತಂತ್ರವಾಗಿ ಯೋಚಿಸಿ ಕೈಗೊಳ್ಳುವ ನಿರ್ಧಾರದ ಮೇಲೂ ತುಸು ಭಯವಿದೆ. ಹೀಗಾಗಿ ಸಹೋದ್ಯೋಗಿಗಳ ಹೂಡಿಕೆಯ ಅನುಭವ ಆಲಿಸಿ ಅವರನ್ನು ಅನುಸರಿಸುವುದು ಸೂಕ್ತವೆಂಬುದು ನನ್ನ ಭಾವನೆ. ಈ ಬಗ್ಗೆ ನನಗೆ ತಿಳಿವಳಿಕೆ ಹೇಳಿ.

ಉತ್ತರ: ಯಾವುದೇ ಹೂಡಿಕೆ ಮಾಡುವ ಅಥವಾ ಹೂಡಿಕೆ ಮಾಡದಿರುವ ನಿರ್ಧಾರ ವ್ಯಕ್ತಿಯೊಬ್ಬನ ಬದುಕಿನಲ್ಲಿ ದೀರ್ಘಾವಧಿಯಲ್ಲಿ ದೊಡ್ಡ ಮಟ್ಟದ ಅನುಕೂಲ ಅಥವಾ ಪ್ರತಿಕೂಲ ಪರಿಣಾಮ ಬೀರಬಲ್ಲದು. ಹೂಡಿಕೆಯಿಂದ ದೂರ ಉಳಿಯಲು ನಮಗೆ ಹಲವು ಕಾರಣಗಳು ಸಿಗಬಹುದು. ಆದರೆ, ಹೆಚ್ಚುವರಿ ಉಳಿತಾಯ ಮಾಡುವ ಅವಕಾಶ ಇದ್ದಾಗಲೂ ದಿನನಿತ್ಯದ ಬದುಕಿನಲ್ಲಿ ಆರ್ಥಿಕ ಸವಾಲುಗಳು ಹೆಚ್ಚು ಇಲ್ಲವಾಗಿದ್ದಾಗಲೂ ಹೂಡಿಕೆಯ ಬಗ್ಗೆ ನಾವು ಉಪೇಕ್ಷೆ ಮಾಡಿದರೆ ಕೆಲವೊಂದು ಅವಕಾಶಗಳಿಂದ ನಾವು ದೂರವೇ ಉಳಿದುಬಿಡುತ್ತೇವೆ.

ಹೀಗಾಗಿ ನಿಮ್ಮ ಪ್ರಸ್ತುತ ಆದಾಯ, ಕೈಗೆ ಸಿಗುವ ನಿವ್ವಳ ವೇತನ, ತಿಂಗಳ ಖರ್ಚು, ಸಾಲ ಮರುಪಾವತಿಗೆ ಬೇಕಿರುವ ಮೊತ್ತ, ಮುಂದಿನ 1-2 ಹಾಗೂ 4-5 ವರ್ಷಗಳ ಒಟ್ಟಾರೆ ಯೋಜನೆಯ ರೂಪುರೇಷೆಗಳನ್ನು ನೀವೇ ಪಟ್ಟಿ ಮಾಡಿ. ಇವಕ್ಕೆಲ್ಲ ನೆರವಾಗುವ ರೀತಿಯಲ್ಲಿ ಒಂದು ಹಂತದಲ್ಲಿ ನಿಗದಿತ ಮೊತ್ತವನ್ನು ಸಂಗ್ರಹಿಸಲು ಒಂದು ಯೋಜನೆ ರೂಪಿಸಿ. ಹಾಗೆಯೇ, ಇನ್ನೊಂದೆಡೆ ನಿಶ್ಚಿತ ಠೇವಣಿಗಳ ಆದಾಯ ದರ ಮೀರಿ ಲಾಭ ನೀಡುವ ಹೂಡಿಕೆ ಉತ್ಪನ್ನಗಳಾದ ಮ್ಯೂಚುವಲ್ ಫಂಡ್, ಗುಣಮಟ್ಟದ ಷೇರುಗಳು, ಚಿನ್ನದ ಬಾಂಡ್, ಇಟಿಎಫ್ ಇತ್ಯಾದಿಗಳಲ್ಲಿಯೂ ಹೂಡಿಕೆ ಮಾಡುವ ಧೈರ್ಯ ತೋರಿಸಿ.

ನೀವು ಯಾವುದೇ ಆರ್ಥಿಕ ನಿರ್ಧಾರ ಕೈಗೊಳ್ಳುವ ಮೊದಲು ಇತರರ ಸಲಹೆ ಪಡೆದರೂ, ಹೂಡಿಕೆಗಳಿಂದ ನೀವು ಹೊಂದಿರುವ ನಿರೀಕ್ಷೆ ಏನು ಎಂಬ ಬಗ್ಗೆ ನಿಮ್ಮಲ್ಲಿ ಸ್ಪಷ್ಟತೆ ಇರಲಿ. ಇದಕ್ಕಾಗಿ ಮೊದಲು ವಿವಿಧ ಬಗೆಯ ಹೂಡಿಕೆ ಉತ್ಪನ್ನಗಳಲ್ಲಿ ಸಣ್ಣ ಪ್ರಮಾಣದ ಹೂಡಿಕೆ ಮಾಡಿ ಅನುಭವ ಪಡೆಯಿರಿ. ನಿಯಮಿತವಾಗಿ ಒಂದಷ್ಟು ಮೊತ್ತವನ್ನು ಮ್ಯೂಚುವಲ್ ಫಂಡ್‌ಗಳಲ್ಲಿ ತೊಡಗಿಸಿ. ಆರ್ಥಿಕ ಅಪಾಯ ತಡೆದುಕೊಳ್ಳುವ ನಿಮ್ಮ ಸಾಮರ್ಥ್ಯ ಹಾಗೂ ಹೂಡಿಕೆಗಳಲ್ಲಿ ಯಾವೆಲ್ಲ ಸಂದರ್ಭಗಳಲ್ಲಿ ಯಾವೆಲ್ಲ ಕಾರಣಕ್ಕೆ ಲಾಭ-ನಷ್ಟ ಸಂಭವಿಸುತ್ತದೆ ಎಂಬ ಬಗ್ಗೆ ಅರಿತುಕೊಳ್ಳಿ. ತದನಂತರ ನಿಮ್ಮ ಮುಂದಿನ ಹಂತದ ಹೂಡಿಕೆಗೆ ಹೋಗಿ.

ಪ್ರಶಾಂತ್ ಚೌಗಲಾ, ಊರು ತಿಳಿಸಿಲ್ಲ

● **ಪ್ರಶ್ನೆ:** ನಾನು ಸರ್ಕಾರಿ ಉದ್ಯೋಗಿ. ಪ್ರತಿ ತಿಂಗಳು ಪಿಪಿಎಫ್‌ನಲ್ಲಿ ಎರಡು ಸಾವಿರ ಮತ್ತು ಯೂನಿಟ್ ಲಿಂಕ್ಡ್ ಪ್ಲಾನ್‌ನಲ್ಲಿ ಮೂರು ಸಾವಿರ ಹೂಡಿಕೆ ಮಾಡುತ್ತಿದ್ದೆ. ಆದರೆ ಕೆಲವರು ಯೂನಿಟ್ ಲಿಂಕ್ಡ್ ಪ್ಲಾನ್‌ನಲ್ಲಿ ಹೂಡಿಕೆ ಮಾಡುವುದಕ್ಕಿಂತ ಮ್ಯೂಚುವಲ್ ಫಂಡ್ ಮತ್ತು ಇಂಡೆಕ್ಸ್ ಫಂಡ್ ಹೂಡಿಕೆ ಉತ್ತಮ ಎಂದರು. ಹೂಡಿಕೆಗೆ ಅವರು ಸೂಚಿಸಿದ ಉಪಾಯ ಸರಿಯಿದೆಯೇ?

ಉತ್ತರ: ಯಾವುದೇ ಹೂಡಿಕೆಗೆ ಸಂಬಂಧಿಸಿ, ಯಾವುದೇ ಸ್ಪಷ್ಟ ನಿರ್ಧಾರ ಕೈಗೊಳ್ಳುವ ಮುನ್ನ ನಾವು ಆ ಹೂಡಿಕೆ ಉತ್ಪನ್ನವನ್ನು ಯಾವ ಕಾರಣಕ್ಕೆ ಆಯ್ಕೆ ಮಾಡಿಕೊಂಡಿದ್ದೇವೆ ಎನ್ನುವುದನ್ನು ತಿಳಿದಿರಬೇಕು. ನೀವು ಪ್ರಶ್ನೆಯಲ್ಲಿ ಉಲ್ಲೇಖಿಸಿರುವ ನಾಲ್ಕೂ ಹೂಡಿಕೆ ಉತ್ಪನ್ನಗಳು ಬೇರೆ ಬೇರೆ ಸನ್ನಿವೇಶಕ್ಕೆ ಸರಿಹೊಂದುತ್ತವೆ. ಹೀಗಾಗಿ ಪ್ರತಿ ಹೂಡಿಕೆಯ ಬಗೆಗಿನ ಒಂದಷ್ಟು ಮಾಹಿತಿಯನ್ನು ನಿಮಗೆ ನೀಡಿದರೆ, ನಿಮ್ಮಲ್ಲಿರುವ ಗೊಂದಲ ಪರಿಹರಿಸಿಕೊಳ್ಳಲು ನೆರವಾಗಬಹುದು.

ಪಿಪಿಎಫ್: ಹಳೆ ತೆರಿಗೆ ಪದ್ಧತಿಯ ಅನುಸಾರ ತೆರಿಗೆ ಪಾವತಿಸುವವರು, ಸೆಕ್ಷನ್ 80ಸಿ ಅಡಿ ಇಲ್ಲಿನ ಹೂಡಿಕೆಯನ್ನು ತೆರಿಗೆ ಉಳಿತಾಯಕ್ಕೆ ಬಳಸಿಕೊಳ್ಳಬಹುದು. ಇದಲ್ಲದೆ ನಿಶ್ಚಿತ ಬಡ್ಡಿದರವೂ ಹೂಡಿಕೆದಾರರ ಖಾತೆಗೆ ಜಮಾ ಆಗುತ್ತದೆ. ಹೀಗಾಗಿ ಇದೊಂದು ಅಪಾಯ ರಹಿತ ಹೂಡಿಕೆ.

ಯೂಲಿಪ್: ಇದು ನಿಮಗೆ ವಿಮಾ ಸೌಲಭ್ಯ ನೀಡುತ್ತದೆ ಹಾಗೂ ಮ್ಯೂಚುವಲ್ ಫಂಡ್ ಹೂಡಿಕೆ ಉತ್ಪನ್ನದ ರೀತಿಯಲ್ಲಿಯೂ ನೆರವಾಗುತ್ತದೆ. ನಿಮ್ಮ ಪಾವತಿಯಲ್ಲಿ ಒಂದಷ್ಟು ಮೊತ್ತ ವಿಮಾ ಕಂತಿಗೆ ಹೋಗುತ್ತದೆ. ಉಳಿದ ಮೊತ್ತವನ್ನು ಮ್ಯೂಚುವಲ್ ಫಂಡ್‌ಗೆ ವರ್ಗೀಕರಿಸಲಾಗುತ್ತದೆ. ಆದರೆ ಇದು ಸಾಮಾನ್ಯ ಪ್ರಮಾಣದ ಲಾಭ ನೀಡಬಲ್ಲುದು.

ಇಂಡೆಕ್ಸ್ ಫಂಡ್: ಮಾರುಕಟ್ಟೆಯಲ್ಲಿ ವಿವಿಧ ಫಂಡ್ ಹೌಸ್‌ಗಳು ನಿಭಾಯಿಸುವ ಅನೇಕ ಇಂಡೆಕ್ಸ್ ಫಂಡ್‌ಗಳು ಇವೆ. ಇವು ಆಯ್ಕೆ ಮಾಡಿದ ಸೂಚ್ಯಂಕದ ಏರಿಳಿತಕ್ಕೆ ಅನುಗುಣವಾಗಿ ತಮ್ಮ ಮೌಲ್ಯದಲ್ಲಿ ಏರಿಕೆ–ಇಳಿಕೆ ಕಾಣುತ್ತವೆ. ಉದಾಹರಣೆಗೆ, ಒಂದು ತಿಂಗಳಲ್ಲಿ ನೀವು ಹೂಡಿಕೆ ಮಾಡಿದ ದಿನಾಂಕದಿಂದ ಸೂಚ್ಯಂಕವು ಶೇ 5ರಷ್ಟು ಏರಿಕೆ ಕಂಡರೆ, ಇಂಡೆಕ್ಸ್ ಫಂಡ್ ಹೂಡಿಕೆ ಮೌಲ್ಯ ಕೂಡ ಅದೇ ಪ್ರಮಾಣದಲ್ಲಿ ವೃದ್ಧಿ ಕಾಣುತ್ತದೆ. ಹೀಗಾಗಿ ಇಲ್ಲಿ ಹೂಡಿಕೆದಾರ ನಿಫ್ಟಿ ಅಥವಾ ಬ್ಯಾಂಕ್ ನಿಫ್ಟಿಯಂತಹ ಪ್ರಮುಖ ಸೂಚ್ಯಂಕಗಳ ಏರಿಳಿತದ ಆಧಾರದ ಮೇಲೆ ತಮ್ಮ ಹೂಡಿಕೆಗೆ ಸರಿಯಾದ ಸಮಯ ನಿರ್ಧಾರ ಮಾಡಬೇಕು.

ಮ್ಯೂಚುವಲ್ ಫಂಡ್: ಇವು ಸಕ್ರಿಯವಾಗಿ ನಿರ್ವಹಿಸಲ್ಪಡುವ ಹೂಡಿಕೆ ಉತ್ಪನ್ನಗಳು. ಅಂದರೆ, ನಿಧಿ ವ್ಯವಸ್ಥಾಪಕರು ಅಥವಾ ನಿರ್ವಹಣಾ ತಂಡವು ಹೂಡಿಕೆಗಳ ಆಯ್ಕೆಯ ನಿರ್ಧಾರಗಳನ್ನು ಮಾಡುತ್ತದೆ. ಇವುಗಳನ್ನು ನಿರ್ವಹಿಸಲು ಪ್ರತ್ಯೇಕ ತಂಡವೇ ಇರುತ್ತದೆ ಹಾಗೂ ಹೂಡಿಕೆಯ ಹಣವನ್ನು ನಿರ್ವಹಣೆ ಮಾಡುವುದಕ್ಕೆ ಶುಲ್ಕ ಪಡೆಯಲಾಗುತ್ತದೆ. ಇವುಗಳಲ್ಲೂ ವಿವಿಧ ಬಗೆಗಳು ಇವೆ ಹಾಗೂ ಹೂಡಿಕೆದಾರರ ಲಾಭ ನಿರೀಕ್ಷೆ, ಆರ್ಥಿಕ ಅಪಾಯವನ್ನು ತಾಳಿಕೊಳ್ಳುವ ಸಾಮರ್ಥ್ಯಕ್ಕೆ ಅನುಸಾರವಾಗಿ ನಿರ್ದಿಷ್ಟ ಫಂಡ್ ಆಯ್ಕೆ ಮಾಡಿಕೊಂಡು ಹೂಡಿಕೆ ಮಾಡಬೇಕಾಗುತ್ತದೆ. ಈ ವರ್ಗದ ಹೂಡಿಕೆ ಉತ್ಪನ್ನಗಳಲ್ಲಿ ಹಣ ತೊಡಗಿ ಸುವವರು ಹೆಚ್ಚು ಅರಿತು ಮುಂದುವರಿಯಬೇಕಾಗುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001 ಇ–ಮೇಲ್: businessdesk@prajavani.co.in

'ಹಿಂದಿಯಲ್ಲಿ ಮಾತು, ಹುದ್ದೆಗೆ ಕುತ್ತು'

ವಾಷಿಂಗ್ಟನ್ (ಪಿಟಿಐ): ಭಾರತದ ಸಂಬಂಧಿಕರ ಜೊತೆಗೆ ವಿಡಿಯೊ ಕರೆಯಲ್ಲಿ ಹಿಂದಿಯಲ್ಲಿ ಮಾತನಾಡಿದ್ದ ಕಾರಣಕ್ಕೆ, ರಕ್ಷಣಾ ಕ್ಷಿಪಣಿ ಗುತ್ತಿಗೆದಾರ ಸಂಸ್ಥೆಯ ದೀರ್ಘಕಾಲದ ನೌಕರಿಯನ್ನು 78 ವರ್ಷದ, ಭಾರತ ಮೂಲದ ಎಂಜಿನಿಯರ್ ಕಳೆದುಕೊಂಡಿದ್ದಾರೆ.

ಅಮೆರಿಕದ ಅಲಬಾಮಾದಲ್ಲಿನ ಹಂಟ್ಸ್‌ವಿಲೆಮಿಸೈಲ್‌ಡಿಫೆನ್ಸ್‌ಕಂಟ್ರಾಕ್ಟರ್ ಪಾರ್ಸನ್ಸ್ ಸಂಸ್ಥೆಯಲ್ಲಿ ಸಿಸ್ಟಮ್ಸ್ ಎಂಜಿನಿಯರ್ ಆಗಿದ್ದ ಅನಿಲ್ ವಾರ್ಶ್ನೆ ಕಳೆದ ಅಕ್ಟೋಬರ್‌ನಲ್ಲಿ ಕೆಲಸ ಕಳೆದುಕೊಂಡಿದ್ದು, ತಮ್ಮ ವಿರುದ್ಧ ವ್ಯವಸ್ಥಿತ ತಾರತಮ್ಯ ನಡೆದಿದೆ ಎಂದು ಆರೋಪಿಸಿ ಈಗ ಅವರು ದಾವೆ ಹೂಡಿದ್ದಾರೆ.

ಇವರು ಹಿಂದಿಯಲ್ಲಿ ಮಾತನಾಡುವುದನ್ನು ಸಹೋದ್ಯೋಗಿ ಅಮೆರಿಕದ ನಿವಾಸಿ ಕೇಳಿಸಿಕೊಂಡಿದ್ದರು ಎಂದು ವೆಬ್‌ಸೈಟ್ ಸುದ್ದಿಸಂಸ್ಥೆಯೊಂದು ವರದಿ ಮಾಡಿದೆ.

'ಅನಾರೋಗ್ಯಪೀಡಿತರಾಗಿದ್ದ ಬಾವ ಗುಪ್ತಾ ಕಡೆಯದಾಗಿ ಮಾತನಾಡಲು ಸೆ.26, 2022ರಂದು ವಿಡಿಯೊ ಕರೆ ಮಾಡಿದ್ದರು. ಗುಪ್ತಾ ಸ್ಥಿತಿ ಅರಿತಿದ್ದರಿಂದ ಕರೆ ಸ್ವೀಕರಿಸಿ ಮಾತನಾಡಿದ್ದೆ. ವಿಡಿಯೊ ಕರೆ ಸ್ವೀಕರಿಸುವ ಮೊದಲು ಸಂಸ್ಥೆಗೆ ಸಂಬಂಧಿಸಿದ ಯಾವುದೇ ಪರಿಕರ ಆಸುಪಾಸಿನಲ್ಲಿ ಇಲ್ಲ ಎಂದೂ ಖಾತರಿಪಡಿಸಿಕೊಂಡಿದ್ದೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

'ಎರಡು ನಿಮಿಷ ಹಿಂದಿಯಲ್ಲಿ ಮಾತನಾಡಿದ್ದೆವು. ಕರೆ ಮಾಡುವಂತಿಲ್ಲ ಎಂದು ಮತ್ತೊಬ್ಬ ನೌಕರ ಎಚ್ಚರಗೊಳಿಸಿದ ಹಿಂದೆಯೇ ಕರೆ ಕಡಿತಗೊಳಿಸಿದ್ದೆ' ಎಂದೂ ವಿವರಿಸಿದ್ದಾರೆ. ಸೇವಾವಧಿಗೆ ಅನುಸಾರವಾಗಿ ಮತ್ತೆ ಹುದ್ದೆಗೆ ನಿಯೋಜಿಸಬೇಕು. ಸಮಾನವಾದ ಹುದ್ದೆಗೆ ನಿಯೋಜಿಸಲಾಗದಿದ್ದಲ್ಲಿ ಪರಿಹಾರ ಒದಗಿಸಬೇಕು ಎಂದು ವಾರ್ಶ್ನೆ ಅರ್ಜಿಯಲ್ಲಿ ಮನವಿ ಮಾಡಿದ್ದಾರೆ.

ವಾರ್ಶ್ನೆ 1968ರಲ್ಲಿ ಅಮೆರಿಕಕ್ಕೆ ವಲಸೆ ಹೋಗಿದ್ದರು. ಅವರ ಪತ್ನಿ ಶಶಿ 1989ರಿಂದ ನಾಸಾದ ಉದ್ಯೋಗಿಯಾಗಿದ್ದಾರೆ.

'ಭಾರತದೊಂದಿಗೆ ಮಾತುಕತೆಗೆ ಸಿದ್ಧ'

ಇಸ್ಲಾಮಾಬಾದ್ (ಪಿಟಿಐ): ಭಾರತ, ಪಾಕಿಸ್ತಾನ ಎರಡೂ ರಾಷ್ಟ್ರಗಳು ಬಡತನ ಮತ್ತು ನಿರುದ್ಯೋಗದ ವಿರುದ್ಧ ಹೋರಾಡುತ್ತಿದ್ದು, 'ಉಭಯ ದೇಶಗಳ ಆಯ್ಕೆ ಯುದ್ಧ ಅಲ್ಲ'. ಗಂಭೀರವಾದ ವಿಷಯಗಳ ಕುರಿತು ಭಾರತದೊಂದಿಗೆ ಮಾತನಾಡಲು ಸಿದ್ಧ ಎಂದು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಹೇಳಿದ್ದಾರೆ.

ಮಂಗಳವಾರ ಪಾಕಿಸ್ತಾನ ಖನಿಜ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, 'ನೆರೆಯ ದೇಶಗಳು ಸೇರಿದಂತೆ ಎಲ್ಲರೊಂದಿಗೂ ಮಾತುಕತೆ ನಡೆಸಲು ಸಿದ್ಧತೆ ನಡೆಸುತ್ತಿದ್ದೇವೆ' ಎಂದರು.

'ಬಡತನ, ನಿರುದ್ಯೋಗದಲ್ಲಿ ಏರಿಕೆ ಮತ್ತು ಶಿಕ್ಷಣ, ಆರೋಗ್ಯ ಅಗತ್ಯವಾದ ಆರ್ಥಿಕ ಸಂಪನ್ಮೂಲದ ಕೊರತೆ ಉಂಟಾದಾಗ ಯುದ್ಧ ಸಂಭವಿಸುತ್ತದೆ. ನಾವು ಅಣ್ವಸ್ತ್ರ ಸಾಮರ್ಥ್ಯ ಹೊಂದಿರುವುದು ಆತ್ಮರಕ್ಷಣೆಗಾಗಿಯೇ ಹೊರತು, ಆಕ್ರಮಣಕ್ಕಾಗಿ ಅಲ್ಲ' ಎಂದರು.

ತಿಲಕ್ ಪ್ರಶಸ್ತಿ ಪ್ರದಾನ ವೇದಿಕೆಯಲ್ಲಿ ಶಿಂದೆ, ಫಡಣವೀಸ್ ಅವರಿಂದ ಹಸ್ತಲಾಘವ, 'ಕೈ ಹಿಡಿಯದ' ಅಜಿತ್ ಪವಾರ್

ವೇದಿಕೆ ಹಂಚಿಕೊಂಡ ಮೋದಿ– ಪವಾರ್

ಪುಣೆ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಮತ್ತು ಎನ್‌ಸಿಪಿ ನಾಯಕ ಶರದ್ ಪವಾರ್ ಅವರು ರಾಜಕೀಯ ಭಿನ್ನಾಭಿಪ್ರಾಯ ಮರೆತು ಮಂಗಳವಾರ ಇಲ್ಲಿ ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡರು. ಪವಾರ್ ಅವರು ಮೋದಿಯವರ ಬೆನ್ನುತಟ್ಟಿ, ಅವರ ಜೊತೆ ತಮಾಷೆಯಾಗಿ ಮಾತನಾಡಿದರು.

ಉಭಯ ನಾಯಕರ ಈ ಸಂಭ್ರಮದ ಕುಶಲೋಪರಿಗೆ ಪವಾರ್ ಅವರ ಸೋದರ ಸಂಬಂಧಿ, ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಸೇರಿದಂತೆ ಹಲವು ಮುಖಂಡರು ಸಾಕ್ಷಿಯಾದರು.

ಲೋಕಮಾನ್ಯ ತಿಲಕ್ ರಾಷ್ಟ್ರೀಯ ಪ್ರಶಸ್ತಿ ಸಮಾರಂಭ ಈ ಸನ್ನಿವೇಶಕ್ಕೆ ವೇದಿಕೆಯಾಯಿತು. ಎನ್‌ಸಿಪಿ ವಿಭಜನೆಯಾದ ನಂತರ ಮೋದಿ ಮತ್ತು ಪವಾರ್ ಅವರ ಮೊದಲ ಭೇಟಿ ಇದಾಗಿದೆ.

ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿ ಏಕನಾಥ ಶಿಂಧೆ ಮತ್ತು ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಶರದ್ ಪವಾರ್ ಅವರಿಗೆ ಹಸ್ತಲಾಘವ ನೀಡಿದರು. ಆದರೆ, ಈ ಅವಕಾಶವನ್ನು ಬಳಸಿಕೊಳ್ಳಲು ಹೋಗದ ಅಜಿತ್ ಪವಾರ್, ಹಾಗೇ ಮುಂದೆ ಹೆಜ್ಜೆ ಹಾಕಿದರು.

ಪ್ರಧಾನಿ ಮೋದಿ ಮತ್ತು ಎನ್‌ಸಿಪಿ ನಾಯಕ ಶರದ್ ಪವಾರ್ ಅವರ ಆತ್ಮೀಯ ಕ್ಷಣ –ಪಿಟಿಐ ಚಿತ್ರ

'ಕರ್ನಾಟಕ, ರಾಜಸ್ಥಾನದಲ್ಲಿ ಅಭಿವೃದ್ಧಿ ಕುಂಠಿತ'

ಪುಣೆ (ಪಿಟಿಐ): 'ಕಾಂಗ್ರೆಸ್ ಆಡಳಿತ ಇರುವ ಕರ್ನಾಟಕ ಮತ್ತು ರಾಜಸ್ಥಾನದಲ್ಲಿ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡಿವೆ. ಬೆಂಗಳೂರು ಅಭಿವೃದ್ಧಿಗೆ ಹಣಕಾಸಿನ ಕೊರತೆ ಇದೆ ಎಂಬುದಾಗಿ ಸ್ವತಃ ಕರ್ನಾಟಕ ಸರ್ಕಾರವೇ ಒಪ್ಪಿಕೊಂಡಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಟೀಕಿಸಿದರು.

ನಗರದಲ್ಲಿ ಎರಡು ಮೆಟ್ರೊ ರೈಲುಗಳ ಸಂಚಾರಕ್ಕೆ ಹಸಿರು ನಿಶಾನೆ ತೋರಿದ ಬಳಿಕ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇದೇ ವೇಳೆ ₹ 15 ಸಾವಿರ ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಅವರು ಶಿಲಾನ್ಯಾಸ ನೆರವೇರಿಸಿದರು.

'ಬೆಂಗಳೂರು ಜಾಗತಿಕ ಹೂಡಿಕೆದಾರರ ನೆಚ್ಚಿನ ತಾಣ. ಐಟಿ ಕೇಂದ್ರ. ಆದರೆ, ರಾಜ್ಯ ಸರ್ಕಾರ ಮಾಡಿರುವ ಕೆಲ ಘೋಷಣೆಗಳ ಕೆಟ್ಟ ಪರಿಣಾಮ ಈಗಾಗಲೇ ಗೊತ್ತಾಗುತ್ತಿದೆ. ತಮ್ಮ ಸ್ವಾರ್ಥಕ್ಕಾಗಿ ಯಾವುದೇ ರಾಜಕೀಯ ಪಕ್ಷವು ರಾಜ್ಯದ ಬೊಕ್ಕಸವನ್ನು ಖಾಲಿ ಮಾಡಿದರೆ, ಜನರು ಸಂಕಷ್ಟ ಎದುರಿಸಬೇಕಾಗುತ್ತದೆ' ಎಂದರು.

'ರಾಜಸ್ಥಾನದಲ್ಲಿ ಕೂಡ ಇಂಥದೇ ಪರಿಸ್ಥಿತಿ ನೋಡುತ್ತಿದ್ದೇವೆ. ರಾಜ್ಯದ ಮೇಲೆ ವಿಪರೀತ ಸಾಲದ ಹೊರೆ ಇದ್ದು, ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿವೆ' ಎಂದು ಮೋದಿ ಟೀಕಿಸಿದರು.

ಮೋದಿ ಅವರ 'ಉನ್ನತ ನಾಯಕತ್ವ' ಹಾಗೂ 'ನಾಗರಿಕರಲ್ಲಿ ಅವರು ದೇಶಪ್ರೇಮದ ಭಾವನೆ ಜಾಗೃತಗೊಳಿಸಿರುವುದನ್ನು' ಪರಿಗಣಿಸಿ ಅವರಿಗೆ 'ಲೋಕಮಾನ್ಯ ತಿಲಕ್' ಪ್ರಶಸ್ತಿ ಘೋಷಿಸಲಾಗಿತ್ತು. ಬಾಲಗಂಗಾಧರ ತಿಲಕ್ ಅವರ ಪುಣ್ಯತಿಥಿ ದಿನವಾದ ಮಂಗಳವಾರ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರತಿವರ್ಷವೂ ತಿಲಕ್ ಅವರ ಪುಣ್ಯತಿಥಿಯಂದೇ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುತ್ತದೆ.

ತಮ್ಮ ಭಾಷಣದಲ್ಲಿ ಪರೋಕ್ಷವಾಗಿ ಪ್ರಧಾನಿ ಮೋದಿ ಅವರ ಕಾಲೆಳೆದ ಪವಾರ್ ಅವರು, 'ಶಿವಾಜಿ ಮಹಾರಾಜರು ಎಂದಿಗೂ ಮತ್ತೊಬ್ಬರ ನೆಲವನ್ನು ಕಸಿದುಕೊಂಡಿರಲಿಲ್ಲ' ಎಂದರು. ಮಹಾರಾಷ್ಟ್ರದಲ್ಲಿ ಶಿವಸೇನೆ ಮತ್ತು ಎನ್‌ಸಿಬಿ ವಿಭಜನೆಯಲ್ಲಿ ಬಿಜೆಪಿಯ ಪಾತ್ರವಿದೆ' ಎಂಬ ಆರೋಪದ ಹಿನ್ನೆಲೆಯಲ್ಲಿ ಅವರ ಈ ಹೇಳಿಕೆಯು ಗಮನಸೆಳೆಯಿತು.

ಮೋದಿ ಅವರೊಂದಿಗೆ ವೇದಿಕೆ ಹಂಚಿಕೊಳ್ಳುವ ಈ ಕಾರ್ಯಕ್ರಮದಿಂದ ದೂರವಿರಬೇಕು ಎಂದು 'ಇಂಡಿಯಾ' ಮುಖಂಡರು ಶರದ್ ಪವಾರ್ ಅವರನ್ನು ಈ ಹಿಂದೆ ಒತ್ತಾಯಿಸಿದ್ದರು. ಆದರೆ ಪವಾರ್ ಇದಕ್ಕೆ ಸ್ಪಂದಿಸಲಿಲ್ಲ.

ಬಿಜೆಪಿ ನೇತೃತ್ವದ ಎನ್‌ಡಿಎ ವಿರುದ್ಧ ವಿಪಕ್ಷಗಳ ಮೈತ್ರಿಕೂಟ 'ಇಂಡಿಯಾ' ಹೋರಾಟಕ್ಕೆ ಸಜ್ಜಾಗುತ್ತಿರುವ ಹೊತ್ತಿನಲ್ಲಿ ವೇದಿಕೆ ಹಂಚಿಕೊಳ್ಳುವುದು ಸರಿಯಲ್ಲ ಎಂದು ವಿವಿಧ ಮುಖಂಡರು ಪ್ರತಿಪಾದಿಸಿದ್ದರು.

ವಿವಿಧ ಕೃಷಿ ಯೋಜನೆಗಳಿಗೆ ಅನುದಾನ: ಕೇಂದ್ರಕ್ಕೆ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯದ ವಿವಿಧ ಕೃಷಿ ಯೋಜನೆಗಳಿಗೆ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ಅನುದಾನ ನೀಡುವಂತೆ ಆಗ್ರಹಿಸಿ ಕೇಂದ್ರ ಕೃಷಿ ಸಚಿವರಿಗೆ ಕರ್ನಾಟಕದ ಕೃಷಿ ಸಚಿವ ಎನ್. ಚಲುವರಾಯ ಸ್ವಾಮಿ ಮಂಗಳವಾರ ಮನವಿ ಸಲ್ಲಿಸಿದರು.

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಗೆ ಕೇಂದ್ರ ಸರ್ಕಾರವು 2023-24ನೇ ಸಾಲಿಗೆ ₹138.15 ಕೋಟಿ ಹಂಚಿಕೆಯನ್ನು ಸೂಚಿಸಿದೆ. ಹಿಂದಿನ ಎಸ್‌ಎಲ್‌ಎಸ್‌ಸಿ ಸಭೆಗಳಿಂದ ಮತ್ತು ಕೇಂದ್ರ ಸರ್ಕಾರದಿಂದ ಅನುಮೋದಿಸಲಾದ ₹405.30 ಕೋಟಿ ಮೊತ್ತದ 129 ಯೋಜನೆಗಳು ರಾಜ್ಯದಲ್ಲಿ ಇವೆ. ಇದಕ್ಕಾಗಿ ₹267 ಕೋಟಿ ಹೆಚ್ಚುವರಿ ಅನುದಾನ ನೀಡಬೇಕು ಎಂದು ಮನವಿ ಮಾಡಿದರು.

ಕೃಷಿ ಯಾಂತ್ರೀಕರಣ ಮಿಷನ್ ಅನುಷ್ಠಾನಕ್ಕೆ ಕನಿಷ್ಠ ₹450 ಕೋಟಿ ನಿಗದಿಪಡಿಸಬೇಕು ಹಾಗೂ ಅನುದಾನ ಬಿಡುಗಡೆ ಮಾಡಬೇಕು ಎಂದೂ ಆಗ್ರಹಿಸಿದರು.

ಬೆಳಗಾವಿ ಜಿಲ್ಲೆಯ ಅಥಣಿಯಲ್ಲಿ ನೂತನ ಕೃಷಿ ಮಹಾವಿದ್ಯಾಲಯ ಸ್ಥಾಪನೆಗೆ ಬೇಡಿಕೆ ಇದೆ. ಅಥಣಿಯಲ್ಲಿ ಹೊಸ ಕೃಷಿ ಕಾಲೇಜು ಸ್ಥಾಪಿಸಲು ರಾಜ್ಯ ಸರ್ಕಾರ ಭೂಮಿ ಮಂಜೂರು ಮಾಡಿದೆ. ಈ ನಿಟ್ಟಿನಲ್ಲಿ ಆಡಳಿತ ಭವನ, ವಿದ್ಯಾರ್ಥಿ ನಿಲಯ, ಕಾಲೇಜು ಗ್ರಂಥಾಲಯ, ಅತ್ಯಾಧುನಿಕ ಪ್ರಯೋಗಾಲಯ, ಸ್ಮಾರ್ಟ್ ತರಗತಿ ಕೊಠಡಿ, ಕ್ರೀಡಾ ಸಂಕೀರ್ಣ ನಿರ್ಮಾಣಕ್ಕೆ ₹400 ಕೋಟಿ ಮಂಜೂರು ಮಾಡಬೇಕು ಎಂದು ಅವರು ವಿನಂತಿಸಿದರು.

ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದಲ್ಲಿ ಅತ್ಯಾಧುನಿಕ ಪ್ರಯೋಗಾಲಯ, ಎಆರ್‌ವಿಆರ್ ತರಗತಿ ಕೊಠಡಿಗಳನ್ನು ಅಭಿವೃದ್ಧಿಪಡಿಸಲು ಮತ್ತು ಅದಕ್ಕೆ ಸಂಬಂಧಿಸಿದ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಇದಕ್ಕಾಗಿ ₹108 ಕೋಟಿ ಮಂಜೂರು ಮಾಡಬೇಕು ಎಂದು ಕೋರಿದರು.

ಯುಜಿಡಿಗೆ ₹250 ಕೋಟಿ: ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ನಿರ್ಮಾಣಕ್ಕೆ ಅಮೃತ್ ಯೋಜನೆಯಡಿ ₹250 ಕೋಟಿ ಅನುದಾನ ಒದಗಿಸುವಂತೆ ಕೇಂದ್ರ ವಸತಿ ಸಚಿವ ಹರದೀಪ್ ಸಿಂಗ್ ಪುರಿ ಅವರಿಗೆ ಸಚಿವರು ಮನವಿ ಮಾಡಿದರು.

4 ಸಾವಿರ ಶಾಸಕರ ಬಳಿ ₹54,545 ಕೋಟಿ ಸಂಪತ್ತು

ನವದೆಹಲಿ (ಪಿಟಿಐ): ದೇಶದ ವಿವಿಧ ಪಕ್ಷಗಳು ಮತ್ತು ಪಕ್ಷೇತರ 4,001 ಶಾಸಕರ ಬಳಿ ₹54,545 ಕೋಟಿ ಮೌಲ್ಯದ ಸಂಪತ್ತು ಇದೆ. ಇದು ನಾಗಾಲ್ಯಾಂಡ್, ಮಿಜೋರಾಮ್ ಮತ್ತು ಸಿಕ್ಕಿಂ ರಾಜ್ಯಗಳ ಒಟ್ಟಾರೆ ವಾರ್ಷಿಕ ಬಜೆಟ್‌ಗಿಂತಲೂ ಅಧಿಕ ಎಂದು ವರದಿಯೊಂದು ತಿಳಿಸಿದೆ.

ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೂ ಮುನ್ನ ಶಾಸಕರು ಸಲ್ಲಿಸಿದ್ದ ಅಫಿಡವಿಟ್‌ನಿಂದ ಮಾಹಿತಿಯನ್ನು ಸಂಗ್ರಹಿಸಿರುವುದಾಗಿ 'ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್' (ಎಡಿಆರ್) ಮತ್ತು 'ನ್ಯಾಷಲ್ ಎಲೆಕ್ಷನ್ ವಾಚ್' (ನ್ಯೂ) ವರದಿ ಹೇಳಿದೆ.

ದೇಶದ 84 ಪಕ್ಷಗಳು ಮತ್ತು ಪಕ್ಷೇತರರು ಸೇರಿದಂತೆ 4,033 ಶಾಸಕರ, 4,001 ಅಫಿಡವಿಟ್‌ಗಳನ್ನು ಪರಿಶೀಲಿಸಲಾಗಿದ್ದು, ಪ್ರತಿಯೊಬ್ಬ ಶಾಸಕ ಸರಾಸರಿ ಆಸ್ತಿಯು ₹13.63 ಕೋಟಿ ಎಂದು 'ಎಡಿಆರ್' ಮತ್ತು 'ನ್ಯೂ' ತಿಳಿಸಿವೆ.

ದೇಶದ 4,001 ಶಾಸಕರ ಬಳಿ ₹54,545 ಸಂಪತ್ತು ಇದೆ. ಇದು ನಾಗಾಲ್ಯಾಂಡ್, ಮಿಜೋರಾಮ್ ಮತ್ತು ಸಿಕ್ಕಿಂ ರಾಜ್ಯಗಳ 2023–24ರ ಒಟ್ಟಾರೆ ಬಜೆಟ್‌ಗಿಂತಲೂ ಅಧಿಕ. 2023–24ನೇ ಸಾಲಿನಲ್ಲಿ ನಾಗಾಲ್ಯಾಂಡ್ ₹23,086 ಕೋಟಿ, ಮಿಜೋರಾಂ ₹14,210 ಕೋಟಿ, ಸಿಕ್ಕಿಂ ₹11,807 ಕೋಟಿ ಮೌಲ್ಯದ ಬಜೆಟ್ ಮಂಡಿಸಿವೆ. ಮೂರು ರಾಜ್ಯಗಳ ಒಟ್ಟಾರೆ ಬಜೆಟ್ ₹49,103 ಕೋಟಿ ಆಗಿತ್ತು.

'ಬಿಜೆಪಿಯ 1,356 ಶಾಸಕರ ಸರಾಸರಿ ಆಸ್ತಿ ₹11.97 ಕೋಟಿ, ಕಾಂಗ್ರೆಸ್ 719 ಶಾಸಕರನ್ನು ಹೊಂದಿದ್ದು, ಪ್ರತಿಯೊಬ್ಬರ ಬಳಿ ಸರಾಸರಿ ₹21.97 ಕೋಟಿ ಆಸ್ತಿ ಇದೆ. ಟಿಎಂಸಿಯ 227 ಶಾಸಕರ ಸರಾಸರಿ ಆಸ್ತಿಯು ₹3.51 ಕೋಟಿ, ಎಎಪಿಯ 161 ಶಾಸಕರು ಸರಾಸರಿ ₹10.20 ಕೋಟಿ ಆಸ್ತಿ ಹೊಂದಿದ್ದಾರೆ. ವೈಎಸ್‌ಆರ್‌ನ 146 ಶಾಸಕರ ಸರಾಸರಿ ಆಸ್ತಿ ₹23.14 ಕೋಟಿ ಎಂದು ವರದಿಯಲ್ಲಿ ಹೇಳಲಾಗಿದೆ.

ಬಿಜೆಪಿ ಶಾಸಕರ ಒಟ್ಟಾರೆ ಸಂಪತ್ತು ₹16,234 ಕೋಟಿ ಆಗಿದ್ದರೆ, ಕಾಂಗ್ರೆಸ್ ಶಾಸಕರದ್ದು ₹15,798 ಕೋಟಿ ಆಸ್ತಿ. ಅಂದರೆ ಎರಡೂ ಪಕ್ಷಗಳ ಶಾಸಕರ ಬಳಿಯೇ ₹ 32,032 ಆಸ್ತಿ ಇದ್ದು, ಇದು ಒಟ್ಟು ಶಾಸಕರ ₹54,545 ಕೋಟಿ ಸಂಪತ್ತಿನಲ್ಲಿ ಶೇ 58.73 ಪಾಲು ಹೊಂದಿದೆ.

ಕರ್ನಾಟಕದ ಶಾಸಕರೇ ಶ್ರೀಮಂತರು

ಕರ್ನಾಟಕದ 223 ಶಾಸಕರ ಒಟ್ಟಾರೆ ಸಂಪತ್ತು 14,359 ಕೋಟಿ ಆಗಿದ್ದು, ಇದು ಮಿಜೋರಾಮ್ ಮತ್ತು ಸಿಕ್ಕಿಂ ರಾಜ್ಯಗಳ 2023-24 ಸಾಲಿನ ಬಜೆಟ್‌ಗಿಂತಲೂ ಅಧಿಕವಾಗಿದೆ. ದೇಶದ ಒಟ್ಟು ಶಾಸಕರ ಒಟ್ಟಾರೆ ಸಂಪತ್ತಿನಲ್ಲಿ ಶೇ 26ರಷ್ಟಾಗುತ್ತದೆ. ಅಷ್ಟೇ ಅಲ್ಲದೇ, ರಾಜಸ್ಥಾನ, ಪಂಜಾಬ್, ಅರುಣಾಚಲ ಪ್ರದೇಶ, ಬಿಹಾರ, ದೆಹಲಿ, ಛತ್ತೀಸಗಢ, ಹಿಮಾಚಲ ಪ್ರದೇಶ, ಪಶ್ಚಿಮ ಬಂಗಾಳ, ಗೋವಾ, ಮೇಘಾಲಯ, ಒಡಿಶಾ, ಅಸ್ಸಾಂ, ನಾಗಾಲ್ಯಾಂಡ್, ಉತ್ತರಾಖಂಡ, ಕೇರಳ, ಪುದುಚೇರಿ, ಜಾರ್ಖಂಡ್, ಸಿಕ್ಕಿಂ, ಮಣಿಪುರ, ಮಿಜೋರಾಮ್ ಮತ್ತು ತ್ರಿಪುರ ರಾಜ್ಯಗಳ ಶಾಸಕರ ಒಟ್ಟಾರೆ ಆಸ್ತಿಗಿಂತಲೂ ಹೆಚ್ಚು. ಈ ರಾಜ್ಯಗಳ ಎಲ್ಲ ಶಾಸಕರ ಒಟ್ಟು ಆಸ್ತಿ ₹13,976 ಎಂದು 'ಎಡಿಆರ್' ಮತ್ತು 'ನ್ಯೂ' ಹೇಳಿವೆ.

ನೂಹ್ ಗಲಭೆಗೆ 5 ಬಲಿ

ಒಂದನೇ ಪುಟದಿಂದ...

ತಲಾ ₹57 ಲಕ್ಷ ಪರಿಹಾರ: ಹಿಂಸಾಚಾರದಲ್ಲಿ ಮೃತಪಟ್ಟ ಗೃಹ ರಕ್ಷಕ ದಳದ ಇಬ್ಬರ ಕುಟುಂಬಕ್ಕೆ ತಲಾ ₹57 ಲಕ್ಷ ಪರಿಹಾರವನ್ನು ಹರಿಯಾಣ ಪೊಲೀಸ್ ಘೋಷಿಸಿದೆ ಎಂದು ಪ್ರಕಟಣೆ ತಿಳಿಸಿದೆ.

44 ಎಫ್‌ಐಆರ್ ದಾಖಲು: ಈ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಪೊಲೀಸರು 44 ಎಫ್‌ಐಆರ್‌ಗಳನ್ನು ದಾಖಲಿಸಿದ್ದು 70 ಜನರನ್ನು ವಶಕ್ಕೆ ಪಡೆದಿದ್ದಾರೆ. ಹಿಂಸಾಚಾರದಲ್ಲಿ ಒಟ್ಟು 120 ವಾಹನಗಳಿಗೆ ಹಾನಿಯಾಗಿದೆ. ಈ ಪೈಕಿ ಪೊಲೀಸರ ಎಂಟು ವಾಹನಗಳೂ ಸೇರಿ ಸುಮಾರು 50 ವಾಹನಗಳು ಬೆಂಕಿಗೆ ಆಹುತಿಯಾಗಿವೆ.

ಸಿ.ಎಂ ಸಭೆ: ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಅವರು ಗೃಹ ಸಚಿವ ವಿಜ್, ಸರ್ಕಾರದ ಮುಖ್ಯ ಕಾರ್ಯದರ್ಶಿ, ಅಧಿಕಾರಿಗಳು ಮತ್ತು ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ ನೂಹ್‌ನ ಪರಿಸ್ಥಿತಿ ಕುರಿತು ಮಾಹಿತಿ ಪಡೆದರು. ಹರಿಯಾಣದಲ್ಲಿ ಕೋಮು ಉದ್ವಿಗ್ನ ಸ್ಥಿತಿ ನಿರ್ಮಾಣ ಆಗಿರುವುದಕ್ಕೆ ವಿರೋಧ ಪಕ್ಷಗಳ ನಾಯಕರು ಬಿಜೆಪಿ ನೇತೃತ್ವದ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಶಾಂತಿ ಸಭೆ: ಕೋಮು ಸೌಹಾರ್ದ ಮೂಡಿಸುವ ನಿಟ್ಟಿನಲ್ಲಿ ನೂಹ್ ಮತ್ತು ಗುರುಗ್ರಾಮ ಜಿಲ್ಲೆಯ ಸೋಹಾದಲ್ಲಿ ಮಂಗಳವಾರ ಶಾಂತಿ ಸಭೆಗಳು ನಡೆದವು.

ನೂಹ್‌ನಲ್ಲಿ ಜಿಲ್ಲಾಧಿಕಾರಿ ಪ್ರಶಾಂತ್ ಪವಾರ್, ಸೋಹಾದಲ್ಲಿ ಜಿಲ್ಲಾಧಿಕಾರಿ ನಿಶಾಂತ್ ಕುಮಾರ್ ಯಾದವ್ ಅವರ ನೇತೃತ್ವದಲ್ಲಿ ಶಾಂತಿ ಸಭೆಗಳು ನಡೆದವು. ಸಭೆಯಲ್ಲಿ ಪಾಲ್ಗೊಂಡಿದ್ದ ಮುಖಂಡರು ಶಾಂತಿ ಕಾಪಾಡುವಲ್ಲಿ ಸಂಪೂರ್ಣ ಸಹಕಾರ ನೀಡುವುದಾಗಿ ಆಡಳಿತಕ್ಕೆ ಭರವಸೆ ನೀಡಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಶಾಂತಿ ಕದಡಲು ಷಡ್ಯಂತ್ರ'

ಚಂಡೀಗಢ (ಪಿಟಿಐ): ಹರಿಯಾಣದಲ್ಲಿ ಶಾಂತಿ ಕದಡಲು ಬಯಸಿದವರ ಷಡ್ಯಂತ್ರದ ಭಾಗವಾಗಿ ನೂಹ್‌ನಲ್ಲಿ ಹಿಂಸಾಚಾರ ನಡೆಸಲಾಗಿದೆ ಎಂದು ರಾಜ್ಯದ ಗೃಹ ಸಚಿವ ಅನಿಲ್ ವಿಜ್ ಮಂಗಳವಾರ ಆರೋಪಿಸಿದರು.

'ನೂಹ್‌ನ ಹಿಂಸಾಚಾರ ಏಕಾಏಕಿ ಘಟಿಸಿದಂತೆ ಕಾಣುತ್ತಿಲ್ಲ. ಬೇರೆ ಬೇರೆ ಸ್ಥಳಗಳಲ್ಲಿ ವಿವಿಧ ಹಂತಗಳಲ್ಲಿ ಸಂಭವಿಸಿದ ಹಿಂಸಾಚಾರ, ಕಲ್ಲುಗಳನ್ನು ಸಂಗ್ರಹಿಸಿದ್ದ ವಿಧಾನ, ಶಸ್ತ್ರಾಸ್ತ್ರಗಳ ಬಳಕೆ, ಗುಂಡು ಹಾರಿಸಿದ ರೀತಿಯನ್ನು ಗಮನಿಸಿದರೆ ಈ ಘಟನೆ ಇದ್ದಕ್ಕಿದ್ದಂತೆ ನಡೆದಂತೆ ತೋರುತ್ತಿಲ್ಲ' ಎಂದು ಗೃಹ ಸಚಿವರು ಹೇಳಿದರು.

ಅಂಬಾಲದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಇಲ್ಲಿ ಎರಡೂ ಸಮುದಾಯದವರು ಶಾಂತಿಯಿಂದ ಬದುಕುತ್ತಿದ್ದಾರೆ. ಆದರೆ ರಾಜ್ಯ ಮತ್ತು ದೇಶದ ಶಾಂತಿ ಕದಡುವ ಉದ್ದೇಶದಿಂದ ಯಾರೋ ಈ ಘಟನೆ ರೂಪಿಸಿದ್ದಾರೆ' ಎಂದು ಅವರು ದೂರಿದರು.

'ನಾನು ಈ ಕುರಿತು ತಕ್ಷಣ ಯಾವುದೇ ತೀರ್ಮಾನಕ್ಕೆ ಬರಲು ಬಯಸುವುದಿಲ್ಲ. ಪರಿಸ್ಥಿತಿ ನಿಯಂತ್ರಣಕ್ಕೆ ತರುವುದು ಮತ್ತು ಶಾಂತಿ ಕಾಪಾಡುವುದು ನಮ್ಮ ಪ್ರಾಥಮಿಕ ಉದ್ದೇಶ' ಎಂದು ಅವರು ಪ್ರತಿಕ್ರಿಯಿಸಿದರು.

ಈ ಘಟನೆ ಬಗ್ಗೆ ಕೂಲಂಕಷವಾಗಿ ತನಿಖೆ ನಡೆಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ತಪ್ಪಿತಸ್ಥರನ್ನು ಬಿಡುವ ಪ್ರಶ್ನೆಯೇ ಇಲ್ಲ ಎಂದು ಅವರು ಹೇಳಿದರು.

ನೂಹ್‌ನಲ್ಲಿ ಹಿಂಸಾಚಾರ ಭುಗಿಲೆದ್ದ ನಂತರ ನೆರೆಯ ಪಲ್ವಾಲ್, ಫರಿದಾಬಾದ್, ಗುರುಗ್ರಾಮ, ಝುಜ್ಜರ್ ಮತ್ತು ರೇವಾರಿ ಜಿಲ್ಲೆಗಳಿಂದ ಪಡೆಗಳನ್ನು ಕಳುಹಿಸಲಾಗಿದೆ ಎಂದು ಸಚಿವರು ಹೇಳಿದರು.

ರಾಜ್ಯದ ಪರಿಸ್ಥಿತಿ ಕುರಿತು ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಭಲ್ಲಾ ಅವರೊಂದಿಗೆ ಮಾತನಾಡಿದ್ದು, ಕೇಂದ್ರ 20 ರಕ್ಷಣಾ ಪಡೆಗಳನ್ನು ಕಳುಹಿಸಿದ್ದಾರೆ ಎಂದು ಅವರು ತಿಳಿಸಿದರು.

ಶಾಂತಿ ಸ್ಥಾಪನೆಗೆ ಕೇಜ್ರಿವಾಲ್ ಮನವಿ

ನವದೆಹಲಿ: 'ಈಶಾನ್ಯದಲ್ಲಿ ಮಣಿಪುರದ ಬಳಿಕ, ಈಗ ಹರಿಯಾಣದಲ್ಲಿ ಇಂಥ ಘಟನೆ ನಡೆದಿರುವುದು ಒಳ್ಳೆಯ ಲಕ್ಷಣವಲ್ಲ' ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ನೂಹ್ ಹಿಂಸಾಚಾರ ಕುರಿತು ಪ್ರತಿಕ್ರಿಯಿಸಿದ್ದಾರೆ.

'ಈ ಸಂದರ್ಭದಲ್ಲಿ ಶಾಂತಿ ಮತ್ತು ಪರಸ್ಪರ ಸಹೋದರತ್ವವನ್ನು ಕಾಪಾಡಿಕೊಳ್ಳುವಂತೆ ಹರಿಯಾಣದ ಜನರಲ್ಲಿ ಮನವಿ ಮಾಡುತ್ತೇನೆ. ಹಿಂಸಾಚಾರ ಮತ್ತು ಶಾಂತಿಗೆ ವಿರುದ್ಧವಾದ ರಾಜಕೀಯ ಶಕ್ತಿಗಳನ್ನು ನಾವು ಒಟ್ಟಾಗಿ ಸೋಲಿಸಬೇಕಾಗಿದೆ' ಎಂದು ಅವರು ಟ್ವೀಟ್ ಮಾಡಿದ್ದಾರೆ.

ಭೂಕಕ್ಷೆ ತೊರೆದು ಚಂದ್ರನತ್ತ ಹೊರಟ ನೌಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂಕಕ್ಷೆಯಲ್ಲಿ ಯಶಸ್ವಿಯಾಗಿ ಪರಿಭ್ರಮಣೆಯನ್ನು ಪೂರ್ಣಗೊಳಿಸಿರುವ 'ಚಂದ್ರಯಾನ 3'ರ ಬಾಹ್ಯಾಕಾಶ ನೌಕೆಯು ಮಂಗಳವಾರ ನಸುಕಿನಲ್ಲಿ ಚಂದಿರನ ಕಕ್ಷೆಯತ್ತ ಪಯಣ ಆರಂಭಿಸಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ತಿಳಿಸಿದೆ.

ನೌಕೆಯು ಭೂಕಕ್ಷೆಯಲ್ಲಿ ಪರಿಭ್ರಮಿಸಲು ಅಗತ್ಯವಿರುವ ನೂಕುಬಲ ನೀಡುವ ಕಾರ್ಯವನ್ನು ಇಲ್ಲಿನ ಟೆಲಿಮೆಟ್ರಿ, ಟ್ರ್ಯಾಕಿಂಗ್ ಮತ್ತು ಕಮಾಂಡ್ ನೆಟ್‌ವರ್ಕ್ (ಐಎಸ್‌ಟಿಆರ್‌ಎಸಿ) ಕೇಂದ್ರದಿಂದ ಯಶಸ್ವಿಯಾಗಿ ನೆರವೇರಿಸಲಾಗಿತ್ತು.

ಆಗಸ್ಟ್ 5ರಂದು ನೌಕೆಯನ್ನು ಚಂದಿರನ ನಿಗದಿತ ಕಕ್ಷೆಗೆ ಸೇರಿಸುವ ಕಾರ್ಯ ನಡೆಯಲಿದೆ. ಬಳಿಕ ಅದರ ಕಕ್ಷೆ ಬದಲಾವಣೆ ನಡೆಯಲಿದ್ದು, ಅಗತ್ಯ ನೂಕುಬಲ ನೀಡುವ ಪ್ರಕ್ರಿಯೆ ನಡೆಯಲಿದೆ.

ಬಹು ರಾಜ್ಯ ಸಹಕಾರ ಸಂಘಗಳ ಮಸೂದೆಗೆ ಸಂಸತ್ ಅಂಗೀಕಾರ

ನವದೆಹಲಿ (ಪಿಟಿಐ): ಬಹು ರಾಜ್ಯ ಸಹಕಾರ ಸಂಘಗಳ (ತಿದ್ದುಪಡಿ) ಮಸೂದೆ–2023 ಅನ್ನು ಸಂಸತ್‌ನಲ್ಲಿ ಮಂಗಳವಾರ ಅಂಗೀಕರಿಸಲಾಯಿತು.

ಕೇಂದ್ರ ಸಹಕಾರ ಖಾತೆ ರಾಜ್ಯ ಸಚಿವ ಬಿ.ಎಲ್.ವರ್ಮಾ ಅವರು ರಾಜ್ಯಸಭೆಯಲ್ಲಿ ತಿದ್ದುಪಡಿ ಮಸೂದೆಯನ್ನು ಮಂಡಿಸಿದರು. ಗದ್ದಲ ನಡೆಸಿದ್ದ ವಿರೋಧ ಪಕ್ಷಗಳ ಸದಸ್ಯರು ನಂತರ ಸಭಾತ್ಯಾಗ ಮಾಡಿದ್ದರು. ಹೀಗಾಗಿ ಧ್ವನಿಮತದ ಮೇಲೆ ರಾಜ್ಯಸಭೆಯಲ್ಲಿ ಈ ತಿದ್ದುಪಡಿ ಮಸೂದೆಯನ್ನು ಅಂಗೀಕರಿಸಲಾಯಿತು.

ಜುಲೈ 25ರಂದು ಲೋಕಸಭೆಯಲ್ಲಿ ಈ ಮಸೂದೆಗೆ ಅಂಗೀಕಾರ ನೀಡಲಾಗಿತ್ತು. ಮಸೂದೆ ಕುರಿತ ಪ್ರಶ್ನೆ ಗಳಿಗೆ ಉತ್ತರಿಸಿದ ಸಚಿವ ವರ್ಮಾ, 'ಸಹಕಾರ ಸಂಘಗಳಲ್ಲಿ ನೌಕರರ ನೇಮಕಾತಿಗೆ ನಿಯಮಗಳನ್ನು ರೂಪಿಸಲು ಈ ಮಸೂದೆ ಅವಕಾಶ ಕಲ್ಪಿಸುತ್ತದೆ. ಜೊತೆಗೆ, ಸ್ವಜನ ಪಕ್ಷಪಾತಕ್ಕೆ ಕಡಿವಾಣ ಹಾಕಲಿದೆ' ಎಂದರು.

'ಉದ್ಯೋಗ ಸೃಷ್ಟಿ ವಿಷಯಕ್ಕೆ ಬಂದಾಗ ಖಾಸಗಿ ವಲಯದಲ್ಲಿ ಮಿತಿ ಇದೆ. ಎಲ್‌ಪಿಜಿ, ಪೆಟ್ರೋಲ್ ಪಂಪ್‌ಗಳ ಡೀಲರ್‌ಶಿಪ್‌ಗಳಿಗೆ ಅವಕಾಶ ನೀಡುವ ಮೂಲಕ ಸಹಕಾರ ಕ್ಷೇತ್ರದ ಕಾರ್ಯವ್ಯಾಪ್ತಿ ಹಿಗ್ಗಿಸಿ, ಅವುಗಳನ್ನು ಬಲಪಡಿಸಲಾಗುತ್ತದೆ' ಎಂದು ಸದನದ ಗಮನಕ್ಕೆ ತಂದರು.

'ಸಹಕಾರ ಸಂಘಗಳಿಗೆ ನಡೆಯುವ ಚುನಾವಣೆಯಲ್ಲಿ ಸುಧಾರಣೆ ತರಲು ತಿದ್ದುಪಡಿ ಮಸೂದೆ ಅವಕಾಶ ನೀಡುತ್ತದೆ. ಇದಕ್ಕಾಗಿ ಸಹಕಾರ ಚುನಾ ವಣೆ ಪ್ರಾಧಿಕಾರ ಸ್ಥಾಪಿಸಲಾಗುತ್ತದೆ' ಎಂದು ವಿವರಿಸಿದರು.

ಬಿಜೆಡಿಯ ನಿರಂಜನ್ ಬಿಶಿ, ವೈಎಸ್‌ಆರ್‌ಸಿಪಿಯ ಎಸ್.ನಿರಂಜನ್ ರೆಡ್ಡಿ ಮತ್ತು ಎಐಎಡಿಎಂಕೆ ಸಂಸದ ಎಂ.ತಂಬಿದೊರೈ ಅವರು ಮಸೂದೆಯನ್ನು ಬೆಂಬಲಿಸಿ ಮಾತನಾಡಿದರು.

ಜಡತ್ವದಲ್ಲಿ ಮಣಿಪುರ ಸರ್ಕಾರ

ಒಂದನೇ ಪುಟದಿಂದ...

ಬೆತ್ತಲೆ ಮೆರವಣಿಗೆ ವಿಡಿಯೊ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದ ಪೀಠವು, ಸಂಘರ್ಷ ಆರಂಭವಾದ ದಿನದಿಂದ ಇಲ್ಲಿಯವರೆಗೆ ದಾಖಲಾಗಿರುವ ಪ್ರತಿ ಪ್ರಕರಣಗಳ ಬಗ್ಗೆ ವಿವರವಾದ ಮಾಹಿತಿ ಸಲ್ಲಿಸುವಂತೆ ಸರ್ಕಾರಕ್ಕೆ ಸೂಚಿಸಿತ್ತು.

'ಪೊಲೀಸರೇ ಗಲಭೆನಿರತ ಗುಂಪಿಗೆ ಸಂತ್ರಸ್ತೆಯರನ್ನು ಒಪ್ಪಿಸಿದ್ದಾರೆ ಎಂಬ ಆರೋಪದ ಬಗ್ಗೆ ತನಿಖೆ ನಡೆದಿದೆಯೇ' ಎಂದು ಸಿಜೆಐ ಚಂದ್ರಚೂಡ್ ಪ್ರಶ್ನಿಸಿದರು.

ಇದಕ್ಕೆ ಉತ್ತರಿಸಿದ ಮಣಿಪುರ ಸರ್ಕಾರದ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಒಂದೇ ರಾತ್ರಿಯಲ್ಲಿ ಈ ಬಗ್ಗೆ ಮಾಹಿತಿ ಪಡೆದುಕೊಳ್ಳಲು ಸಾಧ್ಯವಾಗಿಲ್ಲ' ಎಂದರು.

'ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಜೀರೊ ಎಫ್‌ಐಆರ್ ದಾಖಲಿಸಿದ್ದಾರೆ. ಒಬ್ಬ ಬಾಲಕ ಸೇರಿದಂತೆ ಏಳು ಆರೋಪಿಗಳನ್ನು ಬಂಧಿಸಲಾಗಿದೆ. ವಿಡಿಯೊ ಬಹಿರಂಗಗೊಂಡ ಬಳಿಕ ಪೊಲೀಸರು ಸಂತ್ರಸ್ತೆಯರ ಹೇಳಿಕೆಯನ್ನೂ ದಾಖಲಿಸಿದ್ದಾರೆ' ಎಂದು ಪೀಠಕ್ಕೆ ಅರುಹಿದರು.

ಡಿಜಿಪಿಗೆ ಸೂಚಿಸಿದ್ದೇನು?: ಘಟನೆ ನಡೆದ ದಿನ, ಜೀರೊ ಎಫ್‌ಐಆರ್ ದಾಖಲಾದ ದಿನ, ಅಧಿಕೃತ ಎಫ್‌ಐಆರ್ ದಾಖಲಾದ ದಿನ, ಸಾಕ್ಷಿಗಳಿಂದ ಹೇಳಿಕೆ ಪಡೆದ ದಿನ, ಸಿಆರ್‌ಪಿಸಿ ಸೆಕ್ಷನ್ 164ರ ಅಡಿ ನ್ಯಾಯಾಧೀಶರ ಮುಂದೆ ಹೇಳಿಕೆ ದಾಖಲಿಸಿರುವ ದಿನ ಹಾಗೂ ಆರೋಪಿಗಳ ಬಂಧನದ ದಿನದ ವಿವರಗಳ ಸಮೇತ ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕು ಎಂದು ಪೀಠವು ಡಿಜಿಪಿಗೆ ಸೂಚಿಸಿದೆ.

> **ಕಣಿವೆ ರಾಜ್ಯದ ಪರಿಸ್ಥಿತಿ ತೀವ್ರ ಹದಗೆಟ್ಟಿದ್ದು, ಸಂಘರ್ಷ ನಿಯಂತ್ರಣಕ್ಕೆ ಕೇಂದ್ರ ಸರ್ಕಾರ ಕ್ರಮವಹಿಸಿದೆ. ಯಥಾಸ್ಥಿತಿಗೆ ಮರಳಲು ಸ್ವಲ್ಪ ತಾಳ್ಮೆಯಿಂದ ಕಾಯಬೇಕಿದೆ**
> **ಆರ್. ವೆಂಕಟರಮಣಿ**
> ಅಟಾರ್ನಿ ಜನರಲ್

11 ಮಹಿಳಾ ದೌರ್ಜನ್ಯ ಪ್ರಕರಣ ದಾಖಲು

ಇಲ್ಲಿಯವರೆಗೆ 6,523 ಎಫ್‌ಐಆರ್‌ಗಳು ದಾಖಲಾಗಿವೆ. ಈ ಪೈಕಿ ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳಿಗೆ ಸಂಬಂಧಿಸಿದಂತೆ 11 ಎಫ್‌ಐಆರ್ ದಾಖಲಿಸಲಾಗಿವೆ ಎಂದು ಮಣಿಪುರ ಸರ್ಕಾರವು, ಸುಪ್ರೀಂ ಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಸಿದೆ.

'ಎಫ್‌ಐಆರ್ ದಾಖಲು, ಆರೋಪಿಗಳ ಬಂಧನ ಹಾಗೂ ಸಂತ್ರಸ್ತರ ಹೇಳಿಕೆ ದಾಖಲಿಸುವಲ್ಲಿ ವಿಳಂಬ ಧೋರಣೆ ತಳೆಯಲಾಗಿದೆ. ಒಟ್ಟಾರೆ ಪ್ರಕರಣಗಳ ತನಿಖೆ ಪ್ರಕ್ರಿಯೆಯು ಸಂಪೂರ್ಣ ಜಡಗೊಂಡಿದೆ' ಎಂದು ಚಂದ್ರಚೂಡ್ ಅಸಮಾಧಾನ ವ್ಯಕ್ತಪಡಿಸಿದರು.

ಆಗ ಮೆಹ್ತಾ, 'ರಾಜ್ಯ ಸರ್ಕಾರವೂ ಸುಮ್ಮನೆ ಕುಳಿತಿಲ್ಲ. ಒಟ್ಟು 252 ಆರೋಪಿಗಳನ್ನು ಬಂಧಿಸಿದ್ದು, ಸಿಬಿಐ ತನಿಖೆಗೆ 11 ಪ್ರಕರಣಗಳನ್ನು ಒಪ್ಪಿಸಿದೆ' ಎಂದು ವಿವರಿಸಿದರು.

'ನಾವು ಎಲ್ಲಾ ದೂರುಗಳ ಬಗ್ಗೆಯೂ ವಿವರ ಕೇಳುತ್ತಿಲ್ಲ. ಗಂಭೀರ ಪ್ರಕರಣಗಳ ಬಗ್ಗೆ ಮಾಹಿತಿ ಕೇಳುತ್ತಿದ್ದೇವೆ. ನೀವು ಎಲ್ಲವನ್ನೂ ಸಿಬಿಐ ತನಿಖೆಗೆ ಒಪ್ಪಿಸಲು ಸಾಧ್ಯವೇ' ಎಂದು ಸಿಜೆಐ ಮರುಪ್ರಶ್ನಿಸಿದರು.

'ನ್ಯಾಯಾಲಯಕ್ಕೆ ನೀಡಿರುವ ಮಾಹಿತಿಯೂ ಸಮರ್ಪಕವಾಗಿಲ್ಲ. ಕೊಲೆ, ಅತ್ಯಾಚಾರ, ಲೂಟಿ, ಬೆಂಕಿ ಹಚ್ಚುವುದು, ಅತಿರೇಕದ ವರ್ತನೆ, ದೇಗುಲಗಳು ಮತ್ತು ಪ್ರಾರ್ಥನಾ ಮಂದಿರಗಳ ಹಾನಿಗೆ ಸಂಬಂಧಿಸಿದ ದಾಖಲಾಗಿರುವ ದೂರುಗಳನ್ನು ಪ್ರತ್ಯೇಕಿಸಿ ಪೀಠಕ್ಕೆ ನೀಡಬೇಕು' ಎಂದು ಸೂಚಿಸಿದರು.

ಮಹಾರಾಷ್ಟ್ರ: 'ಸಮೃದ್ಧಿ ಎಕ್ಸ್‌ಪ್ರೆಸ್‌ವೇ'ದ ವಯಡಕ್ಟ್ ನಿರ್ಮಾಣ ವೇಳೆ ಅವಘಡ

ತೊಲೆ ಅಳವಡಿಸುವ ಯಂತ್ರ ಕುಸಿದು 17 ಸಾವು

ಮುಂಬೈ(ಪಿಟಿಐ): ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಶಹಾಪುರ ತಾಲ್ಲೂಕಿನ ಸರ್ಲಾಂಬೆ ಗ್ರಾಮದ ಬಳಿ 'ಸಮೃದ್ಧಿ ಎಕ್ಸ್‌ಪ್ರೆಸ್‌ವೇ' ಕಾಮಗಾರಿ ಭಾಗವಾಗಿ ಉಕ್ಕಿನ ತೊಲೆಗಳನ್ನು ಅಳವಡಿಸುತ್ತಿದ್ದ ಯಂತ್ರ ಕುಸಿದ ಪರಿಣಾಮ 10 ಕಾರ್ಮಿಕರು ಸೇರಿ 17 ಮಂದಿ ಮೃತಪಟ್ಟು, ಇತರ ಮೂವರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ವಯಡಕ್ಟ್ ನಿರ್ಮಾಣಕ್ಕಾಗಿ ಸೋಮವಾರ ತಡರಾತ್ರಿ ಉಕ್ಕಿನ ತೊಲೆಗಳನ್ನು ಅಳವಡಿಸುವ ಕಾರ್ಯ ನಡೆಯುತ್ತಿದ್ದಾಗ 700 ಟನ್ ಭಾರದ ಯಂತ್ರ (ಕ್ರೇನ್) 35 ಮೀಟರ್‌ನಷ್ಟು ಎತ್ತರದಿಂದ ಕುಸಿದು ಈ ಅವಘಡ ಸಂಭವಿಸಿದೆ ಎಂದು ಕಾಮಗಾರಿ ನಡೆಸುತ್ತಿರುವ ಮಹಾರಾಷ್ಟ್ರ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ (ಎಂಎಸ್‌ಆರ್‌ಡಿಸಿ) ತಿಳಿಸಿದೆ.

'10 ಮಂದಿ ಕಾರ್ಮಿಕರು, ಇಬ್ಬರು ಎಂಜಿನಿಯರ್‌ಗಳು ಹಾಗೂ ನಿಗಮದ ಐವರು ನೌಕರರು ಮೃತಪಟ್ಟಿದ್ದಾರೆ.

ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಶಹಾಪುರ ತಾಲ್ಲೂಕಿನ ಸರ್ಲಾಂಬೆ ಗ್ರಾಮದ ಬಳಿ 'ಸಮೃದ್ಧಿ ಎಕ್ಸ್‌ಪ್ರೆಸ್‌ವೇ'ದ ವಯಡಕ್ಟ್ ನಿರ್ಮಾಣ ವೇಳೆ ಉಕ್ಕಿನ ತೊಲೆ ಅಳವಡಿಸುವ ಯಂತ್ರ ಕುಸಿದಿದೆ –ಪಿಟಿಐ ಚಿತ್ರ

ಗಾಯಾಳುಗಳಿಗೆ ಠಾಣೆ ಜಿಲ್ಲೆಯ ಕಲ್ವಾದಲ್ಲಿರುವ ಛತ್ರಪತಿ ಶಿವಾಜಿ ಮಹಾರಾಜ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ತಿಳಿಸಿದೆ.

2.28 ಕಿ.ಮೀ. ಉದ್ದದ ವಯಡಕ್ಟ್ ನಿರ್ಮಿಸಲಾಗುತ್ತಿದೆ. 15ನೇ ಪಿಲ್ಲರ್‌ನಿಂದ 16ನೇ ಪಿಲ್ಲರ್‌ಗೆ ಉಕ್ಕಿನ ತೊಲೆಗಳನ್ನು ಸಾಗಿಸುವ ವೇಳೆ ಯಂತ್ರ ಕುಸಿದಿದೆ. ವಯಡಕ್ಟ್‌ನಲ್ಲಿ ಒಟ್ಟು 114 ವಿಭಾಗಗಳಿದ್ದು, 98 ವಿಭಾಗಗಳನ್ನು ಯಶಸ್ವಿಯಾಗಿ ನಿರ್ಮಿಸಲಾಗಿದೆ ಎಂದು ನಿಗಮ ತಿಳಿಸಿದೆ.

ಇಬ್ಬರು ಗುತ್ತಿಗೆದಾರರ ವಿರುದ್ಧ ಶಹಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಎನ್‌ಡಿಆರ್‌ಎಫ್ ಸಿಬ್ಬಂದಿ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದರು.

ಪರಿಹಾರ: ಅವಘಡದಲ್ಲಿ 17 ಮಂದಿ ಮೃತಪಟ್ಟಿದ್ದಕ್ಕೆ ಶೋಕ ವ್ಯಕ್ತಪಡಿಸಿರುವ ಪ್ರಧಾನಿ ನರೇಂದ್ರ ಮೋದಿ, ಮೃತರ ಕುಟುಂಬಕ್ಕೆ ₹ 2 ಲಕ್ಷ ಪರಿಹಾರ, ಗಾಯಾಳುಗಳಿಗೆ ₹ 50 ಸಾವಿರ ನೆರವು ಘೋಷಿಸಿದ್ದಾರೆ.

ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ, ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರೂ ಸಂತಾಪ ಸೂಚಿಸಿದ್ದಾರೆ. ಮೃತರ ಕುಟುಂಬಕ್ಕೆ ತಲಾ ₹ 5 ಲಕ್ಷ ಪರಿಹಾರ ನೀಡುವುದಾಗಿ ಮುಖ್ಯಮಂತ್ರಿ ಶಿಂದೆ ಘೋಷಿಸಿದ್ದಾರೆ.

701 ಕಿ.ಮೀ. ಉದ್ದದ 'ಸಮೃದ್ಧಿ ಎಕ್ಸ್‌ಪ್ರೆಸ್‌ವೇ' ಮುಂಬೈ ಮತ್ತು ನಾಗ್ಪುರ ನಡುವೆ ಸಂಪರ್ಕ ಕಲ್ಪಿಸುತ್ತದೆ. 10 ಜಿಲ್ಲೆಗಳ ಮೂಲಕ ಹಾಯ್ದು ಹೋಗುವ ಈ ಹೆದ್ದಾರಿ ಪೈಕಿ 600 ಕಿ.ಮೀ. ಉದ್ದದಷ್ಟು ಮಾರ್ಗದ ನಿರ್ಮಾಣ ಪೂರ್ಣಗೊಂಡಿದ್ದು, ಸಂಚಾರಕ್ಕೆ ಮುಕ್ತಗೊಂಡಿದೆ.

ಶೀಘ್ರ ಯೋಧನ ಪತ್ತೆ ಅಧಿಕಾರಿಗಳ ವಿಶ್ವಾಸ

ಶ್ರೀನಗರ (ಪಿಟಿಐ): 'ಕುಲ್ಗಾಂ ಜಿಲ್ಲೆಯಿಂದ ನಾಪತ್ತೆಯಾಗಿರುವ ಯೋಧನ ಕುರಿತು ಭದ್ರತಾ ಪಡೆಗಳಿಗೆ ಸುಳಿವು ದೊರೆತಿದೆ. ಶೀಘ್ರವೇ ಪತ್ತೆ ಮಾಡಲಾಗುವುದು' ಎಂದು ಜಮ್ಮು ಮತ್ತು ಕಾಶ್ಮೀರದ ಹಿರಿಯ ಪೊಲೀಸ್ ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ರಜೆಯ ಮೇಲಿದ್ದ ಯೋಧ ಜವೇದ್ ಅಹ್ಮದ್ ವಾನಿ ಅವರು ಶನಿವಾರ ನಾಪತ್ತೆಯಾಗಿದ್ದರು. ಅವರ ಪತ್ತೆಗೆ ಕಾರ್ಯಾಚರಣೆಯು ಮಂಗಳವಾರ ಮೂರನೇ ದಿನದಲ್ಲಿ ಮುಂದುವರಿದಿದೆ.

ತನಿಖಾ ತಂಡದ ಅಧಿಕಾರಿಗಳು, ಯೋಧ ಅಪಹರಣ ಆಗಿರಬಹುದು ಎಂಬ ಹಿನ್ನೆಲೆಯಲ್ಲಿ ಹಲವು ಶಂಕಿತರನ್ನು ತನಿಖೆಗೆ ಒಳಪಡಿಸಿದ್ದಾರೆ. ಲಡಾಖ್‌ನಲ್ಲಿ ಸೇವೆಗೆ ನಿಯೋಜಿಸಲಾಗಿದ್ದ ಯೋಧ ಭಾನುವಾರ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಬೇಕಾಗಿತ್ತು. ನಾಪತ್ತೆ ಬಳಿಕ ಅವರ ಕಾರು ಪರನ್‌ಹಾಲ್‌ನಲ್ಲಿ ಪತ್ತೆಯಾಗಿತ್ತು.

ಯೋಧನನ್ನು ಅಪಹರಿಸಿದ್ದರೆ ದಯವಿಟ್ಟು ಬಿಡುಗಡೆ ಮಾಡಿ. ಆತನೊಬ್ಬನೇ ಕುಟುಂಬಕ್ಕೆ ಆಧಾರ ಎಂದು ಯೋಧ ವಾನಿ ಅವರ ತಂದೆ ಮನವಿ ಮಾಡಿದ್ದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಮುಖ್ಯ ಅಭಿಯಂತರರವರ ಕಚೇರಿ, ಆರ್‌ಡಿಡಬ್ಲ್ಯು&ಎಸ್ ಇಲಾಖೆ, 1ನೇ ಮಹಡಿ, "ಇ" ಬ್ಲಾಕ್,ಕೆ.ಹೆಚ್.ಬಿ. ಕಾಂಪ್ಲೆಕ್ಸ್, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560009
ದೂ.ಸಂ.: 080–22533700, e-mail: cerws14@gmail.com
ಸಂಖ್ಯೆ: ಆರ್‌ಡಬ್ಲ್ಯೂಎಸ್‌ಎಸ್‌ಡಿ/2023–24/ಎಸ್‌ಇ0045 ದಿನಾಂಕ: 01-08-2023

ಅಲ್ಪಾವಧಿ ಟೆಂಡರ್ ಆಹ್ವಾನ

ರಾಜ್ಯ ಸರ್ಕಾರದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, **ಕಲಬುರಗಿ ಜಿಲ್ಲೆಯಲ್ಲಿ ಬಹು ಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಜಲ ಜೀವನ್ ಮಿಷನ್ ಅಡಿಯಲ್ಲಿ ಅನುಷ್ಠಾನಕ್ಕೆ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್ಟೆನ್ಸಿ ಸೇವೆಗಳನ್ನು ಒದಗಿಸಲು** ಅರ್ಹ ಬಿಡ್‌ದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (**https://kppp.karnataka.gov.in**) ನಲ್ಲಿ **ಅಲ್ಪಾವಧಿ ಟೆಂಡರ್** ಆಹ್ವಾನಿಸಿದೆ.
ಬಿಡ್‌ಗಳನ್ನು ಇ–ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: **16–08–2023ರ ಸಂಜೆ 4.00 ಗಂಟೆಯೊಳಗೆ.** ಇ.ಎಂ.ಡಿ ಮೊತ್ತ: **ರೂ.4,31,000/–.**
ಸಹಿ/– ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಗ್ರಾ.ಕು.ನೀ.&ನೈ.ಇಲಾಖೆ, ಬೆಂಗಳೂರು
DIPR/CP/BCPL/732/2023-24

ಬೆಳಗಾವಿ ಸ್ಮಾರ್ಟ್ ಸಿಟಿ ನಿಯಮಿತ
1 ನೇ ಮಹಡಿ, ಬುಡಾಕಚೇರಿ, ಅಶೋಕ ನಗರ, ಬೆಳಗಾವಿ–590016.
Phone: 0831-2461352, E-mail: bscltd16@gmail.com, website: www.bscl.in
ಕ್ರ. ಬಿ.ಎಸ್.ಸಿ.ಎಲ್/ಟಿ.ಎಸ್/ಟೆಂಡರ್/2023–24/376 ದಿನಾಂಕ: 31/07/2023

ದರಪಟ್ಟಿ/ಅಂದಾಜುಪಟ್ಟಿ ಆಹ್ವಾನ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಬೆಳಗಾವಿ ಸ್ಮಾರ್ಟ್ ಸಿಟಿ ನಿಯಮಿತ ಬೆಳಗಾವಿ ಇವರ ಪರವಾಗಿ ಉಪಪ್ರಧಾನ ವ್ಯವಸ್ಥಾಪಕರು (ಪ್ರೊಕ್ಯೂರಮೆಂಟ್) ಇವರು "ಬೆಳಗಾವಿ ಸ್ಮಾರ್ಟಸಿಟಿ ಯೋಜನೆಗಳಿಗೆ ಲೇಬಲಿಂಗ್ ಸ್ಟ್ರಾಟಜಿಯಡಿ ರೇಡಿಯಮ್ ಸ್ಟಿಕರಿಂಗೊಂದಿಗೆ ಫಲಕಗಳನ್ನು ಅಳವಡಿಸುವ ಕಾಮಗಾರಿಗೆ ಅರ್ಹ ಸಂಸ್ಥೆಗಳಿಂದ ದರಪಟ್ಟಿ/ಕೊಟೇಷನ್‌ಗಳನ್ನು ಆಹ್ವಾನಿಸಲಾಗಿದೆ. ಸಲ್ಲಿಸುವ ದರಗಳನ್ನು ಅಂದಾಜು ಪಟ್ಟಿ ಸಿದ್ದಪಡಿಸುವುದಕ್ಕಾಗಿ ಮಾತ್ರ ಪರಿಗಣಿಸಲಾಗುತ್ತದೆ. ಅರ್ಹಗುತ್ತಿಗೆದಾರರು/ ಎಜೆನ್ಸಿ/ಮಾರಾಟಗರರು ಸ್ಪರ್ಧಾತ್ಮಕ ದರಗಳನ್ನು ಮುಚ್ಚಿದ ಲಕೋಟೆಯಲ್ಲಿ ಉಪಪ್ರಧಾನ ವ್ಯವಸ್ಥಾಪಕರು (ಪ್ರೊಕ್ಯೂರಮೆಂಟ್) ಬೆಳಗಾವಿ ಸ್ಮಾರ್ಟಸಿಟಿ ಲಿಮಿಟೆಡ್, ಬೆಳಗಾವಿ, ಅಶೋಕ ನಗರ, ಬುಡಾ ಕಛೇರಿ, 1ನೇ ಹಂತ, ಬೆಳಗಾವಿ ಇಲ್ಲಿಗೆ ದಿನಾಂಕ: 07–08–2023 ರಂದು ಸಂಜೆ 4:00 ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು.
ರೇಡಿಯಮ್ ರೇಡಿಯಮ್ ಸ್ಟಿರಿಂಗ್ ಮತ್ತು ಫಲಕಗಳ ವಿಶಿಷ್ಟತೆ /ವಿವರಗಳು ಮತ್ತು ನಮೂನೆಗಳನ್ನು www.bscl.in ನಿಂದ ಪಡೆಯಬಹುದಾಗಿರುತ್ತದೆ.
ಸಹಿ/–ಉಪಪ್ರಧಾನ ವ್ಯವಸ್ಥಾಪಕರು (ಪ್ರೊಕ್ಯೂರಮೆಂಟ್)
ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್, ಬೆಳಗಾವಿ.
DIPR/BGM/RO-NO-225/KSMCA/2023-24

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN - UO4010KA2002SGC030438)

ಸಂಕಿಪ್ತ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಬೆವಿಕಂ ವಿಚಾರಣೆ ಸಂಖ್ಯೆ: ಮುಇಂವಿ/ಚಿವ/ಅಇಂವಿ(ಕ)/ಸಕಾನಿಇಂ–1/2023–24/ಎಫ್‌ಟಿಎನ್‌ಸಿ/004 ಕರೆ 3 ದಿನಾಂಕ: 25.07.2023 ರ ಅನ್ವಯ ಫಾಸ್ಟ್ ಟ್ರ್ಯಾಕ್ (ಎಫ್‌ಟಿಎನ್‌ಸಿ) ಹೊಸ ಸಂಪರ್ಕ ಕೋಶಕ್ಕಾಗಿ 76 ಸಂಖ್ಯೆಗಳ ತಾತ್ಕಾಲಿಕ ಮಾನವ ಸಂಪನ್ಮೂಲ ಸೇವಗಳನ್ನು ಒದಗಿಸಲು ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿದೆ. ಇ–ಪೋರ್ಟಲ್‌ನಲ್ಲಿ ಬಿಡ್ ದಾಖಲೆಗಳ ಲಭ್ಯತೆ: 04–08–2023 @ 11:00 ಗಂಟೆಯಿಂದ. ಬಿಡ್ ಪೂರ್ವ ಸಭೆ: 17–08–2023 @ 11:00 ಗಂಟೆಗೆ. ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 21–08–2023 ರ 16:00 ಗಂಟೆಯವರೆಗೆ. ಬಿಡ್ ದಾಖಲಾತಿ ಸಲ್ಲಿಸಲು ಕೊನೆಯ ದಿನಾಂಕ: 05–09–2023 ರಂದು 17: ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಹಾಗೂ ಸಮಯ: 07–09–2023 @ 11:00 ಗಂಟೆ. ಪಾವತಿಸಬೇಕಾದ ಇಎಂಡಿ: ರೂ.3,07,252/– ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ (ಪ್ರೊಕ್ಯೂರ್‌ಮೆಂಟ್) ಪೋರ್ಟಲ್ ವೆಬ್‌ಸೈಟ್ kpppusers@karnataka.gov.in ನಿಂದ 04–08–2023 ರಂದು ಅಥವಾ ನಂತರ ಪಡೆಯಬಹುದು. ಆಸಕ್ತ ಬಿಡ್‌ದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ (ಪ್ರೊಕ್ಯೂರ್‌ಮೆಂಟ್) ಪೋರ್ಟಲ್‌ನಲ್ಲಿ ನೋಂದಾಯಿಸಿ ಕೊಳ್ಳಬೇಕು. ಟೆಂಡರ್ ಪ್ರಕ್ರಿಯೆ ಶುಲ್ಕ, ಇಎಂಡಿ, ಇತ್ಯಾದಿ ಮುಂತಾದ ಎಲ್ಲಾ ಪಾವತಿಗಳನ್ನು ಇ–ಪಾವತಿ ವಿಧಾನದಲ್ಲಿ ಪಾವತಿಸತಕ್ಕದ್ದು. ಮುಂದೆ, ಯಾವುದೇ ಸ್ಪಷ್ಟತೆಗಾಗಿ ಸಹಾಯವಾಣಿ 080–68948777 ಹಾಗೂ 080–46010000 ಅಥವಾ ಇ–ಮೇಲ್: hphelpdesk.blr@rteservices.com ಮೂಲಕ ಸಂಪರ್ಕಿಸಬಹುದು.
ಸಹಿ/– ಮುಖ್ಯ ಇಂಜಿನಿಯರ್ (ವಿದ್ಯುತ್),
ಕಾ & ಪಾ ವಲಯ, ಬೆವಿಕಂ, ಚಿತ್ರದುರ್ಗ
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ : 1912
ಬೆಸ್ಕಾಂ ಮಿತ್ರ MOBILE APP ಡೌನ್‌ಲೋಡ್ ಮಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, (ಯೋಜನೆ–ಪೂರ್ವ)
21ನೇ ಮಹಡಿ, ನೇತಾಜಿ ಸುಭಾಷ್‌ಚಂದ್ರ ಬೋಸ್ ಕಟ್ಟಡ,
(ಪಿಯುಬಿ) ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560 001.
ಸಂಖ್ಯೆ: ಕಾಪಾಅ(ಯೋಪೂ)ಟೆಂಡರ್/09/2022–23 ದಿನಾಂಕ: 01.08.2023

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (2ನೇ ಕರೆ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಯೋಜನೆ–ಪೂರ್ವ) ಬೃ.ಬೆಂ.ಮ.ಪಾಲಿಕೆ ಬೆಂಗಳೂರು ಇವರು ಈ ಕೆಳಕಂಡ ಸೇವೆಗಳನ್ನು ಒದಗಿಸಲು ಅರ್ಹ ಹೆಸರಾಂತ ಸೇವಾ ಪೂರೈಕೆದಾರರನ್ನು ನೇಮಿಸಿಕೊಳ್ಳಲು ಪ್ರಸ್ತಾವನೆಗಳನ್ನು (ತಾಂತ್ರಿಕ ಮತ್ತು ಆರ್ಥಿಕ) ಆಹ್ವಾನಿಸಿದ್ದಾರೆ.

ಕ್ರ ಸಂ	ಯೋಜನೆಯ ಹೆಸರು	ಇಎಂಡಿ (₹. ಗಳಲ್ಲಿ)
1.	ಬೆಂಗಳೂರು, ಎಂ.ಜಿ ರಸ್ತೆಯಲ್ಲಿನ ನೇತಾಜಿ ಸುಭಾಷ್‌ಚಂದ್ರ ಬೋಸ್ ಕಟ್ಟಡದಲ್ಲಿ (ಪಬ್ಲಿಕ್ ಯುಟಿಲಿಟಿ ಕಟ್ಟಡ) ವಾಹನ ನಿಲುಗಡೆ ಶುಲ್ಕವನ್ನು ಸಂಗ್ರಹಿಸುವುದು (2ನೇ ಕರೆ)	80,000/-

ಟೆಂಡರ್ ವೇಳಾಪಟ್ಟಿ: (1) ಆರ್‌ಎಫ್‌ಪಿ ದಾಖಲೆಗಳು ದಿನಾಂಕ **04.08.2023** ರಿಂದ ಲಭ್ಯವಿರುತ್ತದೆ. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **10.08.2023** ರ ಮಧ್ಯಾಹ್ನ **3:00** ಗಂಟೆಗೆ ಸಹಾಯಕ ಕಂದಾಯ ಅಧಿಕಾರಿಗಳ ಕಚೇರಿ (ಮಾರುಕಟ್ಟೆ–ಪೂರ್ವ) ಇಲ್ಲಿ ನಡೆಸಲಾಗುವುದು. (3) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ **14.08.2023**ರ ಸಂಜೆ **5:30** ಗಂಟೆಯವರೆಗೆ. (4) ತಾಂತ್ರಿಕ ಪ್ರಸ್ತಾವನೆಗಳನ್ನು ದಿನಾಂಕ **16.08.2023**ರ ಬೆಳಿಗ್ಗೆ **11:00** ಗಂಟೆಯ ನಂತರ ತೆರೆಯಲಾಗುವುದು. (5) ಆರ್ಥಿಕ ಪ್ರಸ್ತಾವನೆಗಳನ್ನು ತೆರೆಯುವುದನ್ನು ಟೆಂಡರುದಾರರಿಗೆ ಮೇಲ್/ದೂರವಾಣಿ ಮೂಲಕ ತಿಳಿಸಲಾಗುವುದು. (6) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ **www.bbmp.gov.in**. ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು (ಯೋಜನೆ ಪೂರ್ವ)

ಅಂತಿಮ ಏಕದಿನ ಪಂದ್ಯ: ವಿಂಡೀಸ್‌ಗೆ ಸವಾಲಿನ ಗುರಿ ನೀಡಿದ ಭಾರತ; ಹಾರ್ದಿಕ್ ಅಬ್ಬರ

ಮಿಂಚಿದ ಶುಭಮನ್ ಗಿಲ್, ಇಶಾನ್

ತರೂಬಾ (ಪಿಟಿಐ): ಶುಭಮನ್ ಗಿಲ್ (85) ಮತ್ತು ಇಶಾನ್ ಕಿಶನ್ (77) ಅವರು ಹಾಕಿಕೊಟ್ಟ ಭದ್ರ ಬುನಾದಿಯ ನೆರವಿನಿಂದ ಭಾರತ ತಂಡ, ಮೂರನೇ ಹಾಗೂ ಅಂತಿಮ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ವೆಸ್ಟ್ ಇಂಡೀಸ್‌ಗೆ ಸವಾಲಿನ ಗುರಿ ನೀಡಿದೆ.

ಮಂಗಳವಾರ ನಡೆದ ಸರಣಿಯ ನಿರ್ಣಾಯಕ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಭಾರತ 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 351 ರನ್ ಗಳಿಸಿತು. ಸಂಜು ಸ್ಯಾಮ್ಸನ್ (51) ಮತ್ತು ಕೊನೆಯಲ್ಲಿ ಅಬ್ಬರಿಸಿದ ಹಾರ್ದಿಕ್ ಪಾಂಡ್ಯ (ಅಜೇಯ 70, 52 ಎ.) ಅವರೂ ತಂಡದ ಉತ್ತಮ ಮೊತ್ತಕ್ಕೆ ಕಾರಣರಾದರು.

ಟಾಸ್ ಗೆದ್ದ ಆತಿಥೇಯ ತಂಡದ ನಾಯಕ ಶೆಯ್ ಹೋಪ್ ಅವರು ಎದುರಾಳಿ ತಂಡವನ್ನು ಬ್ಯಾಟಿಂಗ್‌ಗೆ ಕಳುಹಿಸಿದರು. ಭಾರತದ ಆರಂಭಿಕ ಜೋಡಿ ಗಿಲ್ ಮತ್ತು ಇಶಾನ್ ಮೊದಲ ವಿಕೆಟ್‌ಗೆ 19.4 ಓವರ್‌ಗಳಲ್ಲಿ 143 ರನ್ ಸೇರಿಸಿ, ವಿಂಡೀಸ್ ನಾಯಕನ ಲೆಕ್ಕಾಚಾರವನ್ನು ತಲೆಕೆಳಗಾಗಿಸಿದರು.

ವೆಸ್ಟ್ ಇಂಡೀಸ್ ನೆಲದಲ್ಲಿ ಏಕದಿನ ಕ್ರಿಕೆಟ್‌ನಲ್ಲಿ ಭಾರತದ ಪರ ಆರಂಭಿಕ ವಿಕೆಟ್‌ಗೆ ದಾಖಲಾದ ದೊಡ್ಡ ಜತೆಯಾಟವಿದು. ಶಿಖರ್ ಧವನ್ ಮತ್ತು ಅಜಿಂಕ್ಯ ರಹಾನೆ 2017 ರಲ್ಲಿ 132 ರನ್‌ಗಳನ್ನು ಸೇರಿಸಿದ್ದು ಇದುವರೆಗಿನ ದಾಖಲೆಯಾಗಿತ್ತು.

ಎಡಗೈ ಬ್ಯಾಟರ್ ಇಶಾನ್, ಸರಣಿಯ ಮೂರು ಪಂದ್ಯಗಳಲ್ಲೂ ಅರ್ಧಶತಕ ಗಳಿಸಿದ ಸಾಧನೆ ಮಾಡಿದರು. ಗಿಲ್ ತಾಳ್ಮೆಯಿಂದ ಆಡಿದರೆ, ಪರಿಸ್ಥಿತಿಗೆ ಹೊಂದಿಕೊಂಡ ಬಳಿಕ ಇಶಾನ್ ಬೀಸಾಟವಾಡಿದರು. 64 ಎಸೆತಗಳನ್ನು ಎದುರಿಸಿದ ಅವರು ಎಂಟು ಬೌಂಡರಿ ಮತ್ತು ಮೂರು ಸಿಕ್ಸರ್‌ಗಳನ್ನು ಹೊಡೆದರು.

ಭಾರತ ತಂಡಕ್ಕೆ ಉತ್ತಮ ಆರಂಭ ನೀಡಿದ ಇಶಾನ್ (ಎಡ) ಮತ್ತು ಶುಭಮನ್ ಗಿಲ್ –ಎಎಫ್‌ಪಿ ಚಿತ್ರ

ಶತಕದತ್ತ ದಾಪುಗಾಲಿಟ್ಟಿದ್ದ ಇಶಾನ್, ಸ್ಪಿನ್ನರ್ ಯಾನಿಕ್ ಕಾರಿಯಾ ಎಸೆತದಲ್ಲಿ ಔಟಾದರು. ಕ್ರೀಸ್‌ಬಿಟ್ಟು ಮುಂದೆ ಬಂದು ಆಡುವ ಪ್ರಯತ್ನದಲ್ಲಿ ಸ್ಟಂಪ್‌ಔಟ್ ಆದರು. ಋತುರಾಜ್ ಗಾಯಕವಾಡ್ (8 ರನ್, 14 ಎ.) ಬೇಗನೇ ಮರಳಿದರು.

ಬಳಿಕ ಬಂದ ಸಂಜು ಸ್ಯಾಮ್ಸನ್ (51 ರನ್) ಅವರು ಗಿಲ್‌ಗೆ ತಕ್ಕ ಸಾಥ್ ನೀಡಿದರು. ಮೂರನೇ ವಿಕೆಟ್‌ಗೆ 69 ರನ್‌ಗಳು ಬಂದವು. 41 ಎಸೆತಗಳನ್ನು ಎದುರಿಸಿದ ಸಂಜು, 2 ಬೌಂಡರಿ ಮತ್ತು 4 ಸಿಕ್ಸರ್ ಹೊಡೆದು ರನ್‌ರೇಟ್ ಹೆಚ್ಚಿಸಲು ನೆರವಾದರು. ರೊಮಾರಿಯೊ ಶೆಫರ್ಡ್ ಎಸೆತದಲ್ಲಿ ಶಿಮ್ರೊನ್ ಹೆಟ್ಮೆಯರ್‌ಗೆ ಕ್ಯಾಚ್‌ಕೊಟ್ಟು ಅವರು ಪೆವಿಲಿಯನ್‌ಗೆ ಮರಳಿದರು.

ಗಿಲ್ ಅವರಿಗೂ ಶತಕ ಗಳಿಸುವ ಅದೃಷ್ಟ ಇರಲಿಲ್ಲ. ಗುಡಾಕೇಶ್ ಮೋತಿಗೆ ವಿಕೆಟ್ ಒಪ್ಪಿಸಿದರು. ಹಾರ್ದಿಕ್ ಮತ್ತು ಸೂರ್ಯಕುಮಾರ್ ಯಾದವ್ (35 ರನ್, 30 ಎ., 4X2, 6X2) ಐದನೇ ವಿಕೆಟ್‌ಗೆ 65 ರನ್ ಕಲೆಹಾಕಿದರು. ಕೊನೆಯ ಓವರ್‌ಗಳಲ್ಲಿ ಹಾರ್ದಿಕ್ ಅಬ್ಬರಿಸಿದ್ದರಿಂದ ತಂಡದ ಮೊತ್ತ 350ರ ಗಡಿ ದಾಟಿತು. ಅವರ ಬ್ಯಾಟ್‌ನಿಂದ ನಾಲ್ಕು ಬೌಂಡರಿ ಮತ್ತು ಐದು ಸಿಕ್ಸರ್‌ಗಳು ಸಿಡಿದವು.

ಸರಣಿಯ ಮೊದಲ ಎರಡು ಪಂದ್ಯಗಳ ಬಳಿಕ ಉಭಯ ತಂಡಗಳು 1–1 ರಿಂದ ಸಮಬಲ ಸಾಧಿಸಿವೆ. ಭಾರತ ತಂಡ ಮೊದಲ ಎರಡು ಪಂದ್ಯಗಳಲ್ಲಿ ಮಾಡಿದಂತೆ ಈ ಪಂದ್ಯದಲ್ಲೂ ಪ್ರಯೋಗ ಮುಂದುವರಿಸಿತು. ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ಕಣಕ್ಕಿಳಿಯಲಿಲ್ಲ. ಉಮ್ರಾನ್ ಮಲಿಕ್ ಮತ್ತು ಅಕ್ಷರ್ ಪಟೇಲ್ ಅವರ ಬದಲು ಋತುರಾಜ್ ಗಾಯಕವಾಡ್ ಹಾಗೂ ಜೈದೇವ್ ಉನದ್ಕತ್ ಅವರನ್ನು ಕಣಕ್ಕಿಳಿಸಿತು.

ಸಂಕ್ಷಿಪ್ತ ಸ್ಕೋರ್: ಭಾರತ 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 351 (ಇಶಾನ್ ಕಿಶನ್ 77, ಶುಭಮನ್ ಗಿಲ್ 85, ಋತುರಾಜ್ ಗಾಯಕವಾಡ್ 8, ಸಂಜು ಸ್ಯಾಮ್ಸನ್ 51, ಹಾರ್ದಿಕ್ ಪಾಂಡ್ಯ ಔಟಾಗದೆ 70, ಸೂರ್ಯಕುಮಾರ್ ಯಾದವ್ 35, ರೊಮಾರಿಯೊ ಶೆಫರ್ಡ್ 73ಕ್ಕೆ 2)

ಭಾರತದ 2ನೇ ಗರಿಷ್ಠ ಮೊತ್ತ

ಭಾರತ ತಂಡವು 351 ರನ್ ಗಳಿಸುವ ಮೂಲಕ ವೆಸ್ಟ್ ಇಂಡೀಸ್ ನೆಲದಲ್ಲಿ ಏಕದಿನ ಪಂದ್ಯದಲ್ಲಿ ತನ್ನ ಎರಡನೇ ಗರಿಷ್ಠ ಮೊತ್ತವನ್ನು ದಾಖಲಿಸಿತು. ಭಾರತವು ಬರ್ಮುಡಾ ವಿರುದ್ಧ 413 ರನ್ (2007) ಗಳಿಸಿದ್ದು, ಗರಿಷ್ಠ ಸ್ಕೋರ್ ಆಗಿದೆ. ಅಲ್ಲದೆ, ವಿಂಡೀಸ್ ನೆಲದಲ್ಲಿ ಆತಿಥೇಯರ ವಿರುದ್ಧ ಭಾರತ ದಾಖಲಿಸಿದ ಗರಿಷ್ಠ ಮೊತ್ತ ಇದಾಗಿದೆ. ಹಿಂದಿನ ದಾಖಲೆ 339 ರನ್ (2009) ಆಗಿತ್ತು.

ದಕ್ಷಿಣ ವಲಯ ಅಜೇಯ ಸಾಧನೆ

ದೇವಧರ್ ಟ್ರೋಫಿ: ಫೈನಲ್‌ನಲ್ಲಿ 'ಪೂರ್ವ' ವಿರುದ್ಧ ಸೆಣಸು

ಪುದುಚೇರಿ (ಪಿಟಿಐ): ಸಾಯಿ ಸುದರ್ಶನ್ (132) ಅವರ ಅಜೇಯ ಶತಕದ ನೆರವಿನಿಂದ ದಕ್ಷಿಣ ವಲಯ ತಂಡ ದೇವಧರ್ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಕೊನೆಯ ಲೀಗ್ ಪಂದ್ಯದಲ್ಲಿ ಮಂಗಳವಾರ 7 ವಿಕೆಟ್‌ಗಳಿಂದ ಕೇಂದ್ರ ವಲಯ ತಂಡವನ್ನು ಮಣಿಸಿತು.

ಆಡಿದ ಐದೂ ಪಂದ್ಯಗಳನ್ನು ಗೆದ್ದು ಅಜೇಯ ಸಾಧನೆಯೊಂದಿಗೆ ಫೈನಲ್ ಪ್ರವೇಶಿಸಿರುವ ದಕ್ಷಿಣ ವಲಯ ತಂಡ, ಗುರುವಾರ ನಡೆಯಲಿರುವ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಪೂರ್ವ ವಲಯದ ಸವಾಲನ್ನು ಎದುರಿಸಲಿದೆ.

ದಕ್ಷಿಣ ವಲಯ 20 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನ ಪಡೆದರೆ, 16 ಪಾಯಿಂಟ್ಸ್ ಗಳಿಸಿದ ಪೂರ್ವ ವಲಯ ಎರಡನೇ ಸ್ಥಾನ ಗಳಿಸಿತು. ಮೊದಲು ಬ್ಯಾಟ್ ಮಾಡಿದ ಕೇಂದ್ರ ವಲಯ, 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 261 ರನ್ ಗಳಿಸಿತು. ದಕ್ಷಿಣ ವಲಯ ತಂಡ 48.2 ಓವರ್‌ಗಳಲ್ಲಿ ಮೂರು ವಿಕೆಟ್ ಕಳೆದುಕೊಂಡು ಗೆಲುವಿನ ಗುರಿ ತಲುಪಿತು. 136 ಎಸೆತಗಳನ್ನು ಎದುರಿಸಿದ ಸುದರ್ಶನ್, 11 ಬೌಂಡರಿ ಮತ್ತು ಒಂದು ಸಿಕ್ಸರ್ ಹೊಡೆದರು.

ಸಾಧಾರಣ ಗುರಿ ಬೆನ್ನಟ್ಟಿದ ದಕ್ಷಿಣ ವಲಯ ತಂಡದ ನಾಯಕ ಮಯಂಕ್ ಅಗರವಾಲ್ ಖಾತೆ ತೆರೆಯುವ ಮುನ್ನವೇ ಗಾಯಗೊಂಡು ಪೆವಿಲಿಯನ್‌ಗೆ ಮರಳಿದರು. ಈ ವೇಳೆ ಜತೆಯಾದ ರೋಹನ್ ಕುನ್ನುಮ್ಮಲ್ (24) ಮತ್ತು ಸುದರ್ಶನ್ 58 ರನ್ ಸೇರಿಸಿದರು. ಎನ್.ಜಗದೀಶನ್ (19) ಬೇಗನೇ ಔಟಾದರೂ, ರೋಹಿತ್ ರಾಯುಡು (37) ಮತ್ತು ವಾಷಿಂಗ್ಟನ್ ಸುಂದರ್ (ಔಟಾಗದೆ 43) ಅವರು ಸುದರ್ಶನ್‌ಗೆ ತಕ್ಕ ಸಾಥ್ ನೀಡಿ ಗೆಲುವಿಗೆ ಕಾರಣರಾದರು.

ಫೈನಲ್‌ಗೆ ಪೂರ್ವ ವಲಯ: ರಿಯಾನ್ ಪರಾಗ್ (102 ರನ್) ಅವರ ಶತಕದ ನೆರವಿನಿಂದ ಪೂರ್ವ ವಲಯ ತಂಡ ಕೊನೆಯ ಲೀಗ್ ಪಂದ್ಯದಲ್ಲಿ 157 ರನ್‌ಗಳಿಂದ ಪಶ್ಚಿಮ ವಲಯ ತಂಡವನ್ನು ಮಣಿಸಿ ಫೈನಲ್‌ಗೆ ಪ್ರವೇಶಿಸಿತು. ದಿನದ ಮತ್ತೊಂದು ಪಂದ್ಯದಲ್ಲಿ ಉತ್ತರ ವಲಯ 9 ವಿಕೆಟ್‌ಗಳಿಂದ ಈಶಾನ್ಯ ವಲಯ ವಿರುದ್ಧ ಜಯಗಳಿಸಿತು.

ಸಾಯಿ ಸುದರ್ಶನ್ –ಬಿಸಿಸಿಐ ಟ್ವಿಟರ್ ಚಿತ್ರ

ಸಂಕ್ಷಿಪ್ತ ಸ್ಕೋರ್: ಕೇಂದ್ರ ವಲಯ: 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 261 (ಶಿವಂ ಚೌಧರಿ 34, ಯಶ್ ದುಬೆ 77, ರಿಂಕು ಸಿಂಗ್ 26, ಶಿವಂ ಮಾವಿ 38, ಮೋಹಿತ್ ರೆಡಕರ್ 51ಕ್ಕೆ 3, ವಾಸುಕಿ ಕೌಶಿಕ್ 15ಕ್ಕೆ 2, ಅರ್ಜುನ್ ತೆಂಡೂಲ್ಕರ್ 65ಕ್ಕೆ 2, ವೈಶಾಖ್ ವಿಜಯಕುಮಾರ್ 49ಕ್ಕೆ 1) ದಕ್ಷಿಣ ವಲಯ: 48.2 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 262 (ರೋಹನ್ ಕುನ್ನುಮ್ಮಲ್ 24, ಸಾಯಿ ಸುದರ್ಶನ್ ಔಟಾಗದೆ 132, ರೋಹಿತ್ ರಾಯುಡು 37, ವಾಷಿಂಗ್ಟನ್ ಸುಂದರ್ ಔಟಾಗದೆ 43)

ಫಲಿತಾಂಶ: ದಕ್ಷಿಣ ವಲಯಕ್ಕೆ 7 ವಿಕೆಟ್ ಗೆಲುವು

ಪೂರ್ವ ವಲಯ: 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 319 (ಅಭಿಮನ್ಯು ಈಶ್ವರನ್ 38, ಉತ್ಕರ್ಷ್ ಸಿಂಗ್ 50, ವಿರಾಟ್ ಸಿಂಗ್ 42, ರಿಯಾನ್ ಪರಾಗ್ 102, ಕುಮಾರ್ ಕುಶಾಗ್ರ 53, ಶಮ್ಸ್ ಮುಲಾನಿ 45ಕ್ಕೆ 3) ಪಶ್ಚಿಮ ವಲಯ: 34 ಓವರ್‌ಗಳಲ್ಲಿ 162 (ಹರ್ವಿಕ್ ದೇಸಾಯಿ 92, ಮಣಿಶಂಕರ್ ಮುರಸಿಂಗ್ 28ಕ್ಕೆ 5, ಉತ್ಕರ್ಷ್ ಸಿಂಗ್ 16ಕ್ಕೆ 3)

ಫಲಿತಾಂಶ: ಪೂರ್ವ ವಲಯಕ್ಕೆ 157 ರನ್ ಗೆಲುವು

ಮಹಿಳಾ ವಿಶ್ವಕಪ್ ಫುಟ್‌ಬಾಲ್: 16ರ ಘಟ್ಟಕ್ಕೆ ಅಮೆರಿಕ

ನೆದರ್ಲೆಂಡ್ಸ್ ಗೋಲಿನ ಮಳೆ

ಡನೆಡಿನ್ (ಎಎಫ್‌ಪಿ): ಕೊನೆಯ ಲೀಗ್ ಪಂದ್ಯದಲ್ಲಿ ಗೋಲಿನ ಮಳೆ ಸುರಿಸಿದ ನೆದರ್ಲೆಂಡ್ಸ್ ತಂಡದವರು ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ 16ರ ಘಟ್ಟ ಪ್ರವೇಶಿಸಿದರು.

ಮಂಗಳವಾರ ನಡೆದ 'ಇ' ಗುಂಪಿನ ಪಂದ್ಯದಲ್ಲಿ ನೆದರ್ಲೆಂಡ್ಸ್ 7–0 ಗೋಲುಗಳಿಂದ ವಿಯೆಟ್ನಾಂ ತಂಡವನ್ನು ಮಣಿಸಿತು. ಇದರೊಂದಿಗೆ ಏಳು ಪಾಯಿಂಟ್ಸ್ ಕಲೆಹಾಕಿ ಗುಂಪಿನಲ್ಲಿ ಅಗ್ರಸ್ಥಾನ ಪಡೆದು, ನಾಕೌಟ್‌ಗೆ ಲಗ್ಗೆಯಿಟ್ಟಿತು.

ಇದೇ ಗುಂಪಿನ ಇನ್ನೊಂದು ಪಂದ್ಯದಲ್ಲಿ ಹಾಲಿ ಚಾಂಪಿಯನ್ ಅಮೆರಿಕ ತಂಡ ಕೊನೆಯ ಲೀಗ್ ಪಂದ್ಯದಲ್ಲಿ ಪೋರ್ಚುಗಲ್ ಜತೆ ಗೋಲು ರಹಿತ ಡ್ರಾ ಮಾಡಿಕೊಂಡು, ಮುಂದಿನ ಹಂತ ಪ್ರವೇಶಿಸಿತು. ಆಕ್ಲೆಂಡ್‌ನಲ್ಲಿ ನಡೆದ ಪಂದ್ಯದಲ್ಲಿ ಪೋರ್ಚುಗಲ್ ಗೆದ್ದಿದ್ದರೆ, ಅಮೆರಿಕ ಹೊರಬೀಳುತ್ತಿತ್ತು. ಆದರೆ ಡ್ರಾ ಸಾಧಿಸಿದ ಅಮೆರಿಕ ಐದು ಪಾಯಿಂಟ್ಸ್‌ಗಳೊಂದಿಗೆ ಎರಡನೇ ಸ್ಥಾನ ಪಡೆದು 16ರ ಘಟ್ಟದಲ್ಲಿ ಸ್ಥಾನ ಪಡೆಯಿತು. ಪೋರ್ಚುಗಲ್ ನಾಲ್ಕು ಪಾಯಿಂಟ್ಸ್‌ಗಳೊಂದಿಗೆ ತನ್ನ ಲೀಗ್ ವ್ಯವಹಾರ ಕೊನೆಗೊಳಿಸಿತು.

ವಿಯೆಟ್ನಾಂ ವಿರುದ್ಧದ ಪಂದ್ಯದಲ್ಲಿ ಮೊದಲ ನಿಮಿಷದಿಂದಲೇ ಆಕ್ರಮಣಕಾರಿ ಆಟವಾಡಿದ ನೆದರ್ಲೆಂಡ್ಸ್, ಈ ವಿಶ್ವಕಪ್ ಟೂರ್ನಿಯಲ್ಲಿ ದೊಡ್ಡ ಅಂತರದ ಗೆಲುವು ತನ್ನದಾಗಿಸಿಕೊಂಡಿತು. ಎಸ್ಮೆಯು ಬ್ರೂಗ್ಟ್ಸ್ ಮತ್ತು ಜಿಲ್ ರೂರ್ಡ್ ಅವರು ತಲಾ ಎರಡು ಗೋಲುಗಳನ್ನು ಗಳಿಸಿದರು. ಜರ್ಮನಿ ತಂಡ 6–0 ಯಿಂದ ಮೊರಕ್ಕೊ ವಿರುದ್ಧ ಗೆದ್ದದ್ದು ಈ ಟೂರ್ನಿಯ ಅತಿದೊಡ್ಡ ಜಯ ಆಗಿತ್ತು.

ನೆದರ್ಲೆಂಡ್ಸ್ ತಂಡದ ಜಿಲ್ ರೂರ್ಡ್ (ಬಲ) ಅವರು ವಿಯೆಟ್ನಾಂ ವಿರುದ್ಧ ಗೋಲು ಗಳಿಸಲು ಪ್ರಯತ್ನಿಸಿದರು –ಎಎಫ್‌ಪಿ ಚಿತ್ರ

ಇಂಗ್ಲೆಂಡ್, ಡೆನ್ಮಾರ್ಕ್ ತೇರ್ಗಡೆ: ಇಂಗ್ಲೆಂಡ್ ಮತ್ತು ಡೆನ್ಮಾರ್ಕ್ ತಂಡಗಳು 'ಡಿ' ಗುಂಪಿನಲ್ಲಿ ಕ್ರಮವಾಗಿ ಮೊದಲ ಎರಡು ಸ್ಥಾನಗಳನ್ನು ಪಡೆದು ನಾಕೌಟ್‌ನಲ್ಲಿ ಸ್ಥಾನ ಗಳಿಸಿತು.

ಅಡಿಲೇಡ್‌ನಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಇಂಗ್ಲೆಂಡ್ 6–1 ಗೋಲುಗಳಿಂದ ಚೀನಾ ತಂಡವನ್ನು ಮಣಿಸಿದರೆ, ಡೆನ್ಮಾರ್ಕ್ 2–0 ಗೋಲುಗಳಿಂದ ಹೈಟಿ ವಿರುದ್ಧ ಗೆದ್ದಿತು. ಮೂರು ಪಂದ್ಯಗಳನ್ನೂ ಗೆದ್ದ ಇಂಗ್ಲೆಂಡ್ 9 ಪಾಯಿಂಟ್ಸ್ ಗಳಿಸಿತು. ಡೆನ್ಮಾರ್ಕ್ ಆರು ಪಾಯಿಂಟ್ಸ್ ಸಂಗ್ರಹಿಸಿತು.

16ರ ಘಟ್ಟದ ಪಂದ್ಯಗಳಲ್ಲಿ ಇಂಗ್ಲೆಂಡ್ ತಂಡ ನೈಜೀರಿಯಾ ವಿರುದ್ಧವೂ, ಡೆನ್ಮಾರ್ಕ್ ತಂಡ ಆತಿಥೇಯ ಆಸ್ಟ್ರೇಲಿಯಾ ಎದುರೂ ಪೈಪೋಟಿ ನಡೆಸಲಿವೆ.

ಟಿ–20 ಸರಣಿಗೆ ವಿಂಡೀಸ್ ತಂಡ:

ಮರಳಿದ ಹೋಪ್, ಥಾಮಸ್

ಪೋರ್ಟ್ ಆಫ್ ಸ್ಪೇನ್ (ಪಿಟಿಐ): ವಿಕೆಟ್ ಕೀಪರ್ ಶೆಯ್ ಹೋಪ್ ಮತ್ತು ವೇಗದ ಬೌಲರ್ ಒಶೇನ್ ಥಾಮಸ್ ಅವರು, ಭಾರತ ವಿರುದ್ಧ ಐದು ಪಂದ್ಯಗಳ ಟಿ–20 ಸರಣಿಗೆ ಪ್ರಕಟಿಸಲಾಗಿರುವ 15 ಆಟಗಾರರ 'ಪೂರ್ವಭಾವಿ' ತಂಡದಲ್ಲಿ ಮರಳಿ ಸ್ಥಾನ ಪಡೆದಿದ್ದಾರೆ. ಸರಣಿಯ ಮೊದಲ ಪಂದ್ಯ ಗುರುವಾರ ಟ್ರಿನಿಡಾಡ್‌ನ ತರೂಬಾದ ಬ್ರಯಾನ್ ಲಾರಾ ಕ್ರಿಕೆಟ್ ಅಕಾಡೆಮಿಯಲ್ಲಿ ನಡೆಯಲಿದೆ.

ರೋವ್ಮನ್ ಪಾವೆಲ್ ನಾಯಕತ್ವದ 15 ಸದಸ್ಯರ ತಂಡ ಎಲ್ಲ ಪಂದ್ಯಗಳಲ್ಲೂ ಜೊತೆಗೆ ಪಯಣಿಸಲಿದೆ. ಆಯಾ ಪಂದ್ಯಗಳಿಗೆ ಮುನ್ನ 13 ಸದಸ್ಯರ ತಂಡ ಪ್ರಕಟಿಸಲಾಗುವುದು ಎಂದು ಕ್ರಿಕೆಟ್ ವೆಸ್ಟ್ ಇಂಡೀಸ್ ಪ್ರಕಟಣೆ ತಿಳಿಸಿದೆ.

ಮೂರು ಪಂದ್ಯಗಳ ಏಕದಿನ ಸರಣಿಗೆ ವೆಸ್ಟ್ ಇಂಡೀಸ್ ನಾಯಕರಾಗಿದ್ದ ಹೋಪ್ ಅವರು ಭಾರತ ಪ್ರವಾಸದ ವೇಳೆ ಕಳೆದ ವರ್ಷದ ಫೆಬ್ರುವರಿಯಲ್ಲಿ ಕೋಲ್ಕತ್ತದಲ್ಲಿ ಕೊನೆಯ ಟಿ–20 ಪಂದ್ಯ ಆಡಿದ್ದರು. 26 ವರ್ಷದ ಥಾಮಸ್ ತಮ್ಮ ಕೊನೆಯ ಟಿ–20 ಪಂದ್ಯವನ್ನು ಕರಾಚಿಯಲ್ಲಿ 2021ರ ಡಿಸೆಂಬರ್‌ನಲ್ಲಿ ಆಡಿದ್ದರು.

ಮುಂದಿನ ವರ್ಷದ ಟಿ–20 ವಿಶ್ವಕಪ್ ಪಂದ್ಯಾವಳಿಯನ್ನು ಮನಸ್ಸಿನಲ್ಲಿಟ್ಟುಕೊಂಡು ತಂಡವನ್ನು ಆಯ್ಕೆ ಮಾಡಲಾಗಿದೆ ಎಂದು ಮುಖ್ಯ ಆಯ್ಕೆಗಾರ ಡೆಸ್ಮಂಡ್ ಹೇನ್ಸ್ ತಿಳಿಸಿದ್ದಾರೆ. ಮುಂದಿನ ವರ್ಷದ ಟಿ–20 ವಿಶ್ವಕಪ್ ಪಂದ್ಯಾವಳಿ ವೆಸ್ಟ್ ಇಂಡೀಸ್‌ನಲ್ಲೇ ನಡೆಯಲಿದೆ.

ಶೆಯ್ ಹೋಪ್

ಎರಡು ಮತ್ತು ಮೂರನೇ ಪಂದ್ಯ ಗಯಾನಾದ ನ್ಯಾಷನಲ್ ಸ್ಟೇಡಿಯಮ್‌ನಲ್ಲಿ ಆಗಸ್ಟ್ 6 ಮತ್ತು 8ರಂದು ನಡೆಯಲಿದೆ. ಅಮೆರಿಕದ ಫ್ಲಾರಿಡಾದ ಲಾಡರ್‌ಹಿಲ್‌ನ ಬ್ರೊವಾರ್ಡ್ ಕೌಂಟಿ ಕ್ರೀಡಾಂಗಣದಲ್ಲಿ ಆ. 12 ಮತ್ತು 13ರಂದು ಕೊನೆಯ ಎರಡು ಪಂದ್ಯಗಳು ನಿಗದಿಯಾಗಿವೆ.

ತಂಡ ಹೀಗಿದೆ: ರೋವ್ಮನ್ ಪಾವೆಲ್ (ನಾಯಕ), ಕೈಲ್ ಮೇಯರ್ಸ್ (ಉಪ ನಾಯಕ), ಜಾನ್ಸನ್ ಚಾರ್ಲ್ಸ್, ರೋಸ್ಟನ್ ಚೇಸ್, ಶಿಮ್ರೊನ್ ಹೆಟ್ಮೆಯರ್, ಜೇಸನ್ ಹೋಲ್ಡರ್, ಶೆಯ್ ಹೋಪ್, ಅಕೀಲ್ ಹೊಸೇನ್, ಅಲ್ಜಾರಿ ಜೋಸೆಫ್, ಬ್ರಾಂಡನ್ ಕಿಂಗ್, ಒಬೇದ್ ಮೆಕಾಯ್, ನಿಕೋಲಸ್ ಪೂರನ್, ರೊಮಾರಿಯೊ ಶೆಫರ್ಡ್, ಒಡೇನ್ ಸ್ಮಿತ್, ಒಶೇನ್ ಥಾಮಸ್.

ಭಾರತ ಸೋತಾಗ ಇಂತಹ ಪ್ರತಿಕ್ರಿಯೆ ಸಾಮಾನ್ಯ: ಜಡೇಜ

ಟರೌಬಾ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಟಗಾರರ ಬಗ್ಗೆ ಮಾಜಿ ನಾಯಕ ಕಪಿಲ್ ದೇವ್ ಮಾಡಿರುವ ಟೀಕೆಗೆ ಪ್ರತಿಕ್ರಿಯಿಸಿರುವ ಆಲ್‌ರೌಂಡರ್ ರವೀಂದ್ರ ಜಡೇಜ, 'ಭಾರತ ತಂಡ ಸೋತಾಗ ಈ ರೀತಿಯ ಪ್ರತಿಕ್ರಿಯೆಗಳು ಬರುವುದು ಸಾಮಾನ್ಯ' ಎಂದಿದ್ದಾರೆ.

ರವೀಂದ್ರ ಜಡೇಜ

'ಅಪಾರ ಹಣ ಗಳಿಸುತ್ತಿರುವ ಕ್ರಿಕೆಟಿಗರಲ್ಲಿ ದುರಹಂಕಾರ ಬೆಳೆಯುತ್ತಿದೆ. ತಮಗೆಲ್ಲವೂ ತಿಳಿದಿದೆ ಎಂದು ಧೋರಣೆ ಇದೆ' ಎಂದು ಕಪಿಲ್, ಭಾರತ ತಂಡದ ಆಟಗಾರರ ಬಗ್ಗೆ ಟೀಕಿಸಿದ್ದರು.

ವೆಸ್ಟ್ ಇಂಡೀಸ್ ವಿರುದ್ಧದ ಮೂರನೇ ಏಕದಿನ ಪಂದ್ಯಕ್ಕೆ ಮುನ್ನ ಮಾಧ್ಯಮದವರ ಜತೆ ಮಾತನಾಡಿದ ಜಡೇಜ, 'ಆಟಗಾರರು ತಂಡಕ್ಕೆ ಗೆಲುವು ತಂದುಕೊಡುವತ್ತ ಮಾತ್ರ ಗಮನಹರಿಸಿದ್ದಾರೆ. ಯಾರೂ ವೈಯಕ್ತಿಕ ಅಜೆಂಡಾ ಹೊಂದಿಲ್ಲ' ಎಂದಿದ್ದಾರೆ.

'ಮಾಜಿ ಆಟಗಾರರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕನ್ನು ಹೊಂದಿದ್ದಾರೆ. ಆದರೆ ಈಗಿನ ತಂಡದ ಆಟಗಾರರಲ್ಲಿ ದುರಹಂಕಾರವಿದೆ ಎಂಬುವುದನ್ನು ನಾನು ಒಪ್ಪಿಕೊಳ್ಳುವುದಿಲ್ಲ' ಎಂದು ಹೇಳಿದ್ದಾರೆ.

ಟ್ರೀಸಾ–ಗಾಯತ್ರಿ ಜೋಡಿಗೆ ಮುನ್ನಡೆ

ಸಿಡ್ನಿ (ಪಿಟಿಐ): ಭಾರತದ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿ, ಆಸ್ಟ್ರೇಲಿಯಾ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಡಬಲ್ಸ್‌ನಲ್ಲಿ ಎರಡನೇ ಸುತ್ತನ್ನು ತಲುಪಿದರು. ಭಾರತದ ಜೋಡಿ ಮಂಗಳವಾರ ನಡೆದ ಪಂದ್ಯದಲ್ಲಿ 21–16, 21–17 ರಲ್ಲಿ ನೇರ ಆಟಗಳಿಂದ ಜಯಗಳಿಸಿತು.

ಕಾಮನ್ವೆಲ್ತ್ ಗೇಮ್ಸ್‌ನಲ್ಲಿ ಕಂಚಿನ ಪದಕ ಗಳಿಸಿದ್ದ ಟ್ರೀಸಾ–ಗಾಯತ್ರಿ ಜೋಡಿ ವಿಶ್ವ ಕ್ರಮಾಂಕದಲ್ಲಿ 17ನೇ ಸ್ಥಾನದಲ್ಲಿದ್ದು, ಎದುರಾಳಿಗಳು 32ನೇ ಕ್ರಮಾಂಕ ಹೊಂದಿದ್ದರು.

ಭಾರತದ ಆಟಗಾರ್ತಿಯರು ಮುಂದಿನ ಸುತ್ತಿನಲ್ಲಿ ವಿಶ್ವದ ನಾಲ್ಕನೇ ಕ್ರಮಾಂಕದ ಆಟಗಾರ್ತಿಯರಾದ ಮಾಯು ಮಾತ್ಸುಮೊಟೊ– ವಕಾನಾ ನಗಾಹಾರ (ಜಪಾನ್) ಅವರನ್ನು ಎದುರಿಸಲಿದ್ದಾರೆ.

ನಾಲ್ಕು ವರ್ಷಗಳ ನಂತರ ಪುನರಾಗಮನ ಮಾಡುತ್ತಿರುವ ಅಶ್ವಿನಿ ಪೊನ್ನಪ್ಪ ಅವರು ಎಡವಿದರು. ತನಿಶಾ ಕ್ರಾಸ್ಟೊ ಅವರೊಂದಿಗೆ ಡಬಲ್ಸ್ ಮೊದಲ ಸುತ್ತಿನಲ್ಲಿ ಆಡಿ 11–21, 21–14, 17–21ರಲ್ಲಿ ಇಂಡೊನೇಷ್ಯಾದ ಫೆಬ್ರಿಯಾನಾ ಡ್ವಿಪುಜಿ ಕುಸುಮಾ– ಅಮೇಲಿಯಾ ಕಹಯಾ ಪೃಥಿವಿ ಜೋಡಿಗೆ ಮಣಿದರು.

ಭಾರತದ ಮತ್ತೊಂದು ಮಹಿಳಾ ಡಬಲ್ಸ್ ಜೋಡಿಯಾದ ಎನ್.ಸಿಕ್ಕಿ ರೆಡ್ಡಿ– ಆರತಿ ಸಹಾ 14–21, 17–21 ರಲ್ಲಿ ತೈವಾನಿನ ಹ್ಸು ಯಿನ್ ಹುಯಿ– ಲೀ ಚಿಹ ಚಿನ್ ಜೋಡಿಗೆ ಸೋತರು.

ಇದು ವಿಶ್ವ ಚಾಂಪಿಯನ್‌ಷಿಪ್‌ಗೆ ಮೊದಲಿನ ಕೊನೆಯ ಟೂರ್ನಿಯಾಗಿದೆ.

ಪ್ರಣಯ್, ಲಕ್ಷ್ಯ ಸೇನ್‌ಗೆ ಅಲ್ಪ ಬಡ್ತಿ

ನವದೆಹಲಿ (ಪಿಟಿಐ): ಭಾರತದ ಪ್ರಮುಖ ಆಟಗಾರರಾದ ಎಚ್.ಎಸ್. ಪ್ರಣಯ್ ಮತ್ತು ಲಕ್ಷ್ಯ ಸೇನ್ ಅವರು ಬ್ಯಾಡ್ಮಿಂಟನ್ ವಿಶ್ವ ರ‍್ಯಾಂಕಿಂಗ್ ಪಟ್ಟಿಯಲ್ಲಿ ಅಲ್ಪ ಬಡ್ತಿ ಪಡೆದಿದ್ದಾರೆ. ಮಂಗಳವಾರ ಪ್ರಕಟವಾದ ಪಟ್ಟಿಯಲ್ಲಿ ಪ್ರಣಯ್ 9ನೇ ಸ್ಥಾನಕ್ಕೆ ಮತ್ತು ಲಕ್ಷ್ಯ 11ನೇ ಸ್ಥಾನಕ್ಕೆ ಏರಿದ್ದಾರೆ.

ಜಪಾನ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಸೆಮಿಫೈನಲ್ ತಲುಪಿದ್ದರು. ಲಕ್ಷ್ಯ ಹಿಂದಿನ ಕ್ರಮಾಂಕಪಟ್ಟಿಯಲ್ಲಿ 13ನೇ ಸ್ಥಾನದಲ್ಲಿದ್ದರೆ, ಪ್ರಣಯ್ 19ನೇ ಸ್ಥಾನದಲ್ಲಿದ್ದರು.

ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ ಕಿದಂಬಿ ಶ್ರೀಕಾಂತ್ 19ನೇ ಸ್ಥಾನಕ್ಕೆ ಏರಿದ್ದರೆ, ರಾಷ್ಟ್ರೀಯ ಚಾಂಪಿಯನ್ ಮಿಥುನ್ ಮಂಜುನಾಥ್ ಅವರು ನಾಲ್ಕು ಸ್ಥಾನಗಳಷ್ಟು ಮೇಲೇರಿ 50ನೇ ಸ್ಥಾನದಲ್ಲಿದ್ದಾರೆ.

ಪಿ.ವಿ.ಸಿಂಧು ಅವರು 17ನೇ ಸ್ಥಾನದಲ್ಲೇ ಉಳಿದಿದ್ದಾರೆ. ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಪುರುಷರ ಡಬಲ್ಸ್‌ನಲ್ಲಿ ಎರಡನೇ ಕ್ರಮಾಂಕದಲ್ಲೇ ನೆಲೆಯೂರಿದ್ದಾರೆ.

ತ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿ ಕೂಡ ರ‍್ಯಾಂಕಿಂಗ್‌ನಲ್ಲಿ ಎರಡು ಸ್ಥಾನ ಸುಧಾರಣೆ ಕಂಡಿದ್ದು 17ನೇ ಸ್ಥಾನಕ್ಕೇರಿದ್ದಾರೆ.

ಸಂಕ್ಷಿಪ್ತ ಸುದ್ದಿ

ಶೂಟಿಂಗ್‌ನಲ್ಲಿ ಮತ್ತೊಂದು ಚಿನ್ನ

ಚೆಂಗ್ಡು (ಪಿಟಿಐ): ಭಾರತದ ಶೂಟರ್‌ಗಳು ಇಲ್ಲಿ ನಡೆಯುತ್ತಿರುವ ವಿಶ್ವ ಯೂನಿವರ್ಸಿಟಿ ಗೇಮ್ಸ್‌ನಲ್ಲಿ ಮತ್ತೊಂದು ಚಿನ್ನ ಗೆದ್ದುಕೊಂಡಿದ್ದಾರೆ.

ಆಶೀ ಚೌಕಸೆ, ಮಾನಿನಿ ಕೌಶಿಕ್ ಮತ್ತು ಸಿಫ್ಟ್ ಕೌರ್ ಸಮ್ರಾ ಅವರನ್ನೊಳಗೊಂಡ ತಂಡ ಮಹಿಳೆಯರ 50 ಮೀ. ರೈಫಲ್ ತ್ರಿ ಪೊಸಿಷನ್ ವಿಭಾಗದಲ್ಲಿ ಈ ಸಾಧನೆ ಮಾಡಿತು. ಭಾರತದ ಶೂಟರ್‌ಗಳು ಒಟ್ಟು 3,527 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನ ಪಡೆದುಕೊಂಡರು. ಚೀನಾ (3,525) ಮತ್ತು ಜೆಕ್ ರಿಪಬ್ಲಿಕ್ (3,499) ತಂಡಗಳು ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಗೆದ್ದುಕೊಂಡವು.

ಪುರುಷರ 10 ಮೀ ಏರ್ ಪಿಸ್ತೂಲ್ ತಂಡ ವಿಭಾಗದಲ್ಲಿ ಅರ್ಜುನ್ ಸಿಂಗ್ ಚೀಮಾ, ವರುಣ್ ತೋಮರ್ ಮತ್ತು ಅನ್ಮೋಲ್ ಜೈನ್ ಅವರು 1,730 ಪಾಯಿಂಟ್ಸ್‌ಗಳೊಂದಿಗೆ ಕಂಚು ಜಯಿಸಿದರು. ಕೊರಿಯಾ ಮತ್ತು ಚೀನಾ ಈ ವಿಭಾಗದಲ್ಲಿ ಕ್ರಮವಾಗಿ ಮೊದಲ ಎರಡು ಸ್ಥಾನಗಳನ್ನು ಪಡೆದುಕೊಂಡವು.

ವೇಟ್‌ಲಿಫ್ಟಿಂಗ್: 2 ಬೆಳ್ಳಿ, 1 ಕಂಚು

ಗ್ರೇಟರ್ ನೊಯ್ಡಾ (ಪಿಟಿಐ): ಭಾರತದ ಪಲ್ಲವಿ ಸನಪತಿ ಹಾಗೂ ಬಿ.ವೆಂಕಟ ಕೃಷ್ಣ ಅವರು ಏಷ್ಯನ್ ಯೂತ್ ಮತ್ತು ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಮಹಿಳೆಯರ 64 ಕೆ.ಜಿ ವಿಭಾಗ ಮತ್ತು ಪುರುಷರ 73 ಕೆ.ಜಿ ವಿಭಾಗದಲ್ಲಿ ಮಂಗಳವಾರ ಬೆಳ್ಳಿ ಪದಕ ಗೆದ್ದರು.

ಪಲ್ಲವಿ

ವೆಂಕಟಕೃಷ್ಣ

ಜೂನಿಯರ್ ವಿಭಾಗದಲ್ಲಿ ಪಲ್ಲವಿ ಅವರು 196 ಕೆಜಿ (87 + 109) ಭಾರ ಎತ್ತಿದರು. ಇರಾನ್‌ನ ಫತೇಮ್ ಕೇಶವರ್ಜ್ (197 ಕೆಜಿ) ಮತ್ತು ಉಜ್ಬೇಕಿಸ್ತಾನದ ಮದೀನಬೋನು ಜುರೇವಾ ಕ್ರಮವಾಗಿ ಚಿನ್ನ ಮತ್ತು ಕಂಚು ಗೆದ್ದರು. ಯೂತ್ ವಿಭಾಗದಲ್ಲಿ ವೆಂಕಟ ಕೃಷ್ಣ ಅವರು 271 ಕೆಜಿ (120 + 151 ಕೆಜಿ) ಭಾರ ಎತ್ತಿದರು. ಈ ಸ್ಪರ್ಧೆಯಲ್ಲಿ ಉಜ್ಬೇಕಿಸ್ತಾನದ ಖಿಕ್ಮತಿಲೊ ಖೈದರೋವ್ (287 ಕೆಜಿ) ಚಿನ್ನ ಗೆದ್ದರು.

ಭಾರತದ ಹಾರಿಕಾ ಬೆಲ್ಲಣ್ಣ ಅವರು ಮಹಿಳೆಯರ ಯೂತ್ 59 ಕೆಜಿ ಸ್ಪರ್ಧೆಯಲ್ಲಿ 176 ಕೆಜಿ (78 + 98) ಭಾರ ಎತ್ತಿ ಕಂಚು ಗೆದ್ದರು. ಉಜ್ಬೇಕಿಸ್ತಾನದ ಲ್ಯುಡ್ಮಿಲಾ ಎಲೆಫ್ಟೆರಿಯಾಡಿ (177ಕೆಜಿ) ಚಿನ್ನಕ್ಕೆ ಮುತ್ತಿಕ್ಕಿದರು.

ಎರಡನೇ ಸುತ್ತಿಗೆ ರಿಶಿ, ಸೂರಜ್

ಚೆನ್ನೈ (ಪಿಟಿಐ): ಕರ್ನಾಟಕದ ರಿಶಿ ರೆಡ್ಡಿ ಮತ್ತು ಸೂರಜ್ ಆರ್.ಪ್ರಬೋಧ್ ಅವರು ಇಲ್ಲಿ ನಡೆಯುತ್ತಿರುವ ಇಂಡಿಯಂ ಎಐಟಿಎ ರ‍್ಯಾಂಕಿಂಗ್ ಟೆನಿಸ್ ಚಾಂಪಿಯನ್‌ಷಿಪ್‌ನ ಪುರುಷರ ಸಿಂಗಲ್ಸ್‌ನಲ್ಲಿ ನೇರ ಸೆಟ್‌ಗಳ ಗೆಲುವಿನೊಡನೆ ಮಂಗಳವಾರ ಎರಡನೇ ಸುತ್ತನ್ನು ಪ್ರವೇಶಿಸಿದರು.

ಸೂರಜ್ ಮೊದಲ ಸುತ್ತಿನಲ್ಲಿ 6–2, 6–1 ರಿಂದ ಏಳನೇ ಶ್ರೇಯಾಂಕದ ಯಶ್ ಯಾದವ್ (ಮಧ್ಯಪ್ರದೇಶ) ವಿರುದ್ಧ ಜಯಗಳಿಸಿದರೆ, ರಿಶಿ ರೆಡ್ಡಿ 6–4, 7–5 ರಿಂದ ತಮಿಳುನಾಡಿನ ಭೂಪತಿ ಶಕ್ತಿವೇಲ್ ಅವರನ್ನು ಹಿಮ್ಮೆಟ್ಟಿಸಿದರು. ನಾಲ್ಕನೇ ಶ್ರೇಯಾಂಕದ ಶೇಖ್ ಇಫ್ತಿಕಾರ್ ಮೊಹಮ್ಮದ್ ಅವರೂ ಮೊದಲ ಸುತ್ತಿನಲ್ಲಿ ಹೊರಬಿದ್ದರು.

ತೆಲಂಗಾಣದ ವಿಷ್ಣುವರ್ಧನ್ 6–1, 6–3 ರಿಂದ ಕರ್ನಾಟಕದ ರಶೀನ್ ಸಾಮ್ಯುಯೆಲ್ ವಿರುದ್ಧ, ಶಿವಾಂಕ್ ಭಟ್ನಾಗರ್ (ದೆಹಲಿ) 7–5, 7–6 (5) ರಿಂದ ಕರ್ನಾಟಕದ ದೀಪಕ್ ವಿರುದ್ಧ ಜಯಗಳಿಸಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಕರ್ನಾಟಕದ ಸಾಯಿ ಜಾಹ್ನವಿ, ಶ್ರೀತನ್ವಿ ದಾಸರಿ, ಪ್ರತಿಭಾ ಪ್ರಸಾದ್ ನಾರಾಯಣ ಮೊದಲ ಸುತ್ತಿನಲ್ಲೇ ಹೊರಬಿದ್ದರು.

ಹಾಕಿ: ಕಸ್ಟಮ್ಸ್ ತಂಡಕ್ಕೆ ಜಯ

ಬೆಂಗಳೂರು: ಕಸ್ಟಮ್ಸ್ ಅಂಡ್ ಜಿಎಸ್‌ಟಿ ತಂಡವು ಇಲ್ಲಿ ನಡೆಯುತ್ತಿರುವ ಏಳನೇ ಆವೃತ್ತಿಯ ಹಾಕಿ ಕರ್ನಾಟಕ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ತಂಡವನ್ನು 5–2 ಗೋಲುಗಳಿಂದ ಮಣಿಸಿತು.

ಮತ್ತೊಂದು ಪಂದ್ಯದಲ್ಲಿ ಸಾಯ್ ತಂಡವು 3–3 ಗೋಲುಗಳಿಂದ ಡಿವೈಇಎಸ್ ತಂಡದೊಂದಿಗೆ ಡ್ರಾ ಸಾಧಿಸಿತು.

ಭಾರತ ಗಡಿ ಪ್ರವೇಶಿಸಿದ ಪಾಕ್ ಹಾಕಿ ತಂಡ

ಚೆನ್ನೈ (ಪಿಟಿಐ): ಚೆನ್ನೈನಲ್ಲಿ ನಡೆಯಲಿರುವ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಪಾಲ್ಗೊಳ್ಳಲು ಪಾಕಿಸ್ತಾನ ತಂಡದ ಸದಸ್ಯರು ಅಟ್ಟಾರಿ–ವಾಘಾ ಗಡಿಯಲ್ಲಿ ಮಂಗಳವಾರ ಭಾರತ ಪ್ರವೇಶಿಸಿದರು.

ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಹೈವೋಲ್ಟೇಜ್ ಪಂದ್ಯವು ಆ.9ರಂದು ನಡೆಯಲಿದೆ. ಪಾಕಿಸ್ತಾನ ತಂಡವು ರಸ್ತೆ ಮೂಲಕ ಅಮೃತಸರವನ್ನು ಮಂಗಳವಾರ ರಾತ್ರಿ ಪ್ರವೇಶಿಸಿ, ನಂತರ ಚೆನ್ನೈಗೆ ವಿಮಾನದ ಮೂಲಕ ತಲುಪಲಿದೆ.

ಈ ಮಧ್ಯೆ ಹರ್ಮನ್‌ಪ್ರೀತ್ ಸಿಂಗ್ ನೇತೃತ್ವದ ಭಾರತ ಹಾಕಿ ತಂಡವೂ ಮಂಗಳವಾರ ಬೆಳಿಗ್ಗೆ ಚೆನ್ನೈಗೆ ಬಂದಿಳಿದಿದೆ. ಗುರುವಾರ ನಡೆಯುವ ಚೀನಾ ವಿರುದ್ಧದ ಮೊದಲ ಪಂದ್ಯಕ್ಕೂ ಮುನ್ನ ಎಗ್ಮೋರ್‌ನಲ್ಲಿರುವ ಮೇಯರ್ ರಾಧಾಕೃಷ್ಣನ್ ಹಾಕಿ ಸ್ಟೇಡಿಯಂನಲ್ಲಿ ಭಾರತ ತಂಡವು ಬುಧವಾರ ಅಭ್ಯಾಸ ನಡೆಸಲಿದೆ. ಪಾಕಿಸ್ತಾನ ತಂಡವೂ ಅಭ್ಯಾಸ ನಡೆಸಲಿದೆ.

ಏಷ್ಯಾಡ್‌ಗೆ ಫುಟ್‌ಬಾಲ್ ತಂಡ: ಚೆಟ್ರಿ, ಸಂದೇಶ್‌ಗೆ ಅವಕಾಶ

ನವದೆಹಲಿ (ಪಿಟಿಐ): ಅಗ್ರಮಾನ್ಯ ಆಟಗಾರ ಸುನೀಲ್ ಚೆಟ್ರಿ, ರಕ್ಷಣೆ ಆಟಗಾರ ಸಂದೇಶ ಜಿಂಗನ್ ಮತ್ತು ಅಗ್ರಗಣ್ಯ ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ಸಂಧು ಅವರು ಮುಂಬರುವ ಏಷ್ಯನ್ ಕ್ರೀಡಾಕೂಟಕ್ಕೆ ಮಂಗಳವಾರ ಪ್ರಕಟಿಸಿರುವ 22 ಸದಸ್ಯರ ಫುಟ್‌ಬಾಲ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಸೀನಿಯರ್ ತಂಡದ ಮುಖ್ಯ ಕೋಚ್ ಇಗರ್ ಸ್ಟಿಮ್ಯಾಚ್ ಅವರು ತಂಡದ ಜೊತೆ ಹಾಂಗ್‌ಝೌಗೆ ತೆರಳುವರು.

ಭಾರತ ಫುಟ್‌ಬಾಲ್ ತಂಡದ ಸ್ಪರ್ಧೆಗೆ ಏಷ್ಯನ್ ಗೇಮ್ಸ್ ಸಂಘಟಕರು ಮತ್ತು ಏಷ್ಯ ಒಲಿಂಪಿಕ್ ಕೌನ್ಸಿಲ್ ಸಮ್ಮತಿ ನೀಡಿದೆ ಎಂದು ತಿಳಿದುಬಂದಿದೆ.

ಏಷ್ಯನ್ ಗೇಮ್ಸ್‌ಗೆ ಮೂವರು ಆಟಗಾರರನ್ನು ಬಿಟ್ಟು ಉಳಿದಂತೆ 23 ವರ್ಷದೊಳಗಿನವರು ಮಾತ್ರ ಪಾಲ್ಗೊಳ್ಳಬೇಕಾಗಿದೆ. ಆದರೆ ಈ ಬಾರಿ, ಕ್ರೀಡಾಕೂಟ ಒಂದು ವರ್ಷದ ಮುಂದಕ್ಕೆ ಹೋಗಿರುವುದರಿಂದ ಆಯೋಜಕರು ಜ.1, 1999ರ ನಂತರ ಜನಿಸಿದವರಿಗೆ ಪಾಲ್ಗೊಳ್ಳಲು ಅವಕಾಶ ನೀಡಿದ್ದಾರೆ. ಭಾರತದ ಫುಟ್‌ಬಾಲ್ ತಂಡ 2018ರ ಜಕಾರ್ತಾ ಕ್ರೀಡೆಗಳಲ್ಲಿ ಭಾಗವಹಿಸಿರಲಿಲ್ಲ.

ಸುನೀಲ್ ಚೆಟ್ರಿ

ತಂಡ ಹೀಗಿದೆ: ಗೋಲ್ ಕೀಪರ್ಸ್: ಗುರುಪ್ರೀತ್ ಸಿಂಗ್ ಸಂಧು, ಗುರ್ಮೀತ್ ಸಿಂಗ್, ಧೀರಜ್ ಸಿಂಗ್ ಮೊಯಿರಂಗತೆಮ್. **ಡಿಫೆಂಡರ್ಸ್:** ಸಂದೇಶ್ ಜಿಂಗನ್, ಅನ್ವರ್ ಅಲಿ, ನರೇಂದರ್ ಗೆಹಲೋತ್, ಲಾಲ್ಚುಂಗನುಂಗಾ, ಆಕಾಶ್ ಮಿಶ್ರಾ, ರೋಶನ್ ಸಿಂಗ್, ಆಶಿಶ್ ರಾಯ್. **ಮಿಡ್‌ಫೀಲ್ಡರ್ಸ್:** ಜೀಕ್ಸನ್ ಸಿಂಗ್ ಥೌನಾವೊಜಾಮ್, ಸುರೇಶ್ ಸಿಂಗ್ ವಾಂಗ್ಜಾಮ್, ಅಪುಯಿಯ ರಾಲ್ಟೆ, ಅಮರಜಿತ್ ಸಿಂಗ್ ಕಿಯಾಮ್, ರಾಹುಲ್ ಕೆ.ಪಿ., ನಾವೊರೆಮ್ ಮಹೇಶ್ ಸಿಂಗ್. **ಫಾರ್ವರ್ಡ್ಸ್:** ಶಿವಶಕ್ತಿ ನಾರಾಯಣನ್, ರಹಿಮ್ ಅಲಿ, ಸುನೀಲ್ ಚೆಟ್ರಿ, ಅನಿಕೇತ್ ಜಾಧವ್, ವಿಕ್ರಮ್ ಪ್ರತಾಪ್ ಸಿಂಗ್, ರೋಹಿತ್ ದನು.

ಭಾರತ ಕುಸ್ತಿ ಫೆಡರೇಷನ್ ಚುನಾವಣೆ

ಅಧ್ಯಕ್ಷ ಸ್ಥಾನಕ್ಕೆ ನಾಲ್ವರ ಸ್ಪರ್ಧೆ

ನವದೆಹಲಿ (ಪಿಟಿಐ): ದೆಹಲಿ ಕುಸ್ತಿ ಸಂಸ್ಥೆ ಮುಖ್ಯಸ್ಥ ಜೈ ಪ್ರಕಾಶ್ ಅವರು ಆಗಸ್ಟ್ 12ರಂದು ನಡೆಯಲಿರುವ ಭಾರತ ಕುಸ್ತಿ ಫೆಡರೇಷನ್ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನ ಸೇರಿದಂತೆ ಮೂರು ಸ್ಥಾನಗಳಿಗೆ ಸ್ಪರ್ಧಿಸಿದ್ದಾರೆ. ಅವರು ಉಪಾಧ್ಯಕ್ಷ ಮತ್ತು ಮಹಾ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೂ ನಾಮಪತ್ರ ಸಲ್ಲಿಸಿದ್ದಾರೆ.

ಚುನಾವಣಾಧಿಕಾರಿ ಆಗಿರುವ ಜಮ್ಮು ಮತ್ತು ಕಾಶ್ಮೀರ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಮಹೇಶ ಮಿತ್ತಲ್ ಕುಮಾರ್ ಅವರು ಮಂಗಳವಾರ ಅಧಿಕೃತ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿದರು. 15 ಸ್ಥಾನಗಳಿಗೆ ಚುನಾವಣೆ ನಡೆಯಬೇಕಾಗಿದೆ.

ಪ್ರಕಾಶ್ ಜೊತೆಗೆ ಇನ್ನೂ ಮೂರು ಮಂದಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದಾರೆ. ಉತ್ತರ ಪ್ರದೇಶ ಕುಸ್ತಿ ಸಂಸ್ಥೆ ಉಪಾಧ್ಯಕ್ಷ ಸಂಜಯ್ ಸಿಂಗ್, ಜಮ್ಮು ಮತ್ತು ಕಾಶ್ಮೀರದ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ದುಷ್ಯಂತ್ ಶರ್ಮಾ, 2010ರ ಕಾಮನ್‌ವೆಲ್ತ್ ಗೇಮ್ಸ್ ಚಿನ್ನದ ಪದಕ ವಿಜೇತೆ ಅನಿತಾ ಶೆವರಾನ್ ಈ ಮೂವರು. ಇವರಲ್ಲಿ ಪ್ರಕಾಶ್ ಮತ್ತು ಸಿಂಗ್ ಅವರು ಫೆಡರೇಷನ್‌ನ ನಿರ್ಗಮಿತ ಅಧ್ಯಕ್ಷ ಬ್ರಿಜ್‌ಭೂಷಣ್ ಬಣದವರು.

ಶೆವರಾನ್ ಅವರು ಬ್ರಿಜ್ ಭೂಷಣ್ ವಿರುದ್ಧದ ಲೈಂಗಿಕ ಕಿರುಕುಳ ಆರೋಪ ಪ್ರಕರಣದ ಸಾಕ್ಷಿಗಳಲ್ಲಿ ಒಬ್ಬರಾಗಿದ್ದಾರೆ. 38 ವರ್ಷದ ಅವರು ಹರಿಯಾಣದವರಾಗಿದ್ದು ರಾಜ್ಯ ಪೊಲೀಸ್ ಇಲಾಖೆಯಲ್ಲಿ ಉದ್ಯೋಗದಲ್ಲಿ ಇದ್ದರೂ, ಒಡಿಶಾವನ್ನು ಪ್ರತಿನಿಧಿಸುತ್ತಿದ್ದಾರೆ.

ಅಧ್ಯಕ್ಷ (1 ಸ್ಥಾನ), ಹಿರಿಯ ಉಪಾಧ್ಯಕ್ಷ (1), ಉಪಾಧ್ಯಕ್ಷರು (4 ಸ್ಥಾನ), ಮಹಾ ಪ್ರಧಾನ ಕಾರ್ಯದರ್ಶಿ (1), ಖಜಾಂಚಿ (1), ಜಂಟಿ ಕಾರ್ಯದರ್ಶಿ (2) ಮತ್ತು ಕಾರ್ಯಕಾರಿ ಸಮಿತಿ ಸದಸ್ಯ (5) ಸ್ಥಾನಗಳಿಗೆ ಚುನಾವಣೆ ನಡೆಯಲಿದೆ.